ಶುಕ್ರವಾರ, ಜೂನ್ 27, 2025 | ₹ 7.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶಾನ್ ಗಂಗೂಲಿ ಚಾಂಪಿಯನ್

ಒಡಿಶಾದಲ್ಲಿ ನಡೆದ 78ನೇ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ ಪುರುಷರ ವಿಭಾಗದಲ್ಲಿ ಕರ್ನಾಟಕದ ಶಾನ್ ಗಂಗೂಲಿಯವರು ಶ್ರೇಷ್ಠ ಈಜುಪಟು ಗೌರವ ಗಳಿಸಿದರು

ಗಗನಯಾನಕ್ಕೆ ಆಯ್ಕೆ

ಅಮೆರಿಕದ ಟೈಟನ್ಸ್ ಅಂತರಿಕ್ಷ ಯಾನ ಕಾರ್ಯಕ್ರಮದ ಗಗನಯಾತ್ರಿಯಾಗಿ (ಅಸ್ಕಾನ್) ಆಯ್ಕೆಯಾಗಿರುವ ಆಂಧ್ರಪ್ರದೇಶದ 23 ವರ್ಷದ ದಾಂಗೇಟಿ ಜಾಹ್ನವಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ನಾಡಪ್ರಭು ಕೆಂಪೇಗೌಡರ
516ನೇ ಜಯಂತ್ಯುತ್ಸವ

ಬೆಂಗಳೂರು ನಿರ್ಮಾತೃ
ನಾಡಪ್ರಭು
ಕೆಂಪೇಗೌಡರಿಗೆ
ಗೌರವಪೂರ್ಣ ನಮನ ಸಮರ್ಪಣೆ

ಉತ್ತಮ ಬೆಂಗಳೂರು ನಿರ್ಮಾಣಕ್ಕೆ
ಕ್ರಾಂತಿಕಾರಿ ದೂರದೃಷ್ಟಿಯ ಅನುಸರಣೆಗೆ ಸಂಕಲ್ಪ.

ಶ್ರೀ ಡಿ.ಕೆ. ಶಿವಕುಮಾರ್, ಮಾನ್ಯ ಉಪ ಮುಖ್ಯಮಂತ್ರಿಗಳು
ಶ್ರೀ ಎನ್.ಎ. ಹ್ಯಾರಿಸ್, ಮಾನ್ಯ ಶಾಸಕರು, ಶಾಂತಿನಗರ ವಿಧಾನಸಭಾ ಕ್ಷೇತ್ರ
ಮತ್ತು ಅಧ್ಯಕ್ಷರು, ಬಿಡಿಎ, ಅವರಿಗೆ ಹೂಗುಚ್ಛ ನೀಡಿ ಶುಭಕೋರುತ್ತಿರುವುದು.

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು
ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು-560 020.

ಸಿ.ಎಂಗೆ ವರದಿ ಕೊಟ್ಟಿದ್ದೇನೆ: ಜಮೀರ್

ವಸತಿ ಹಂಚಿಕೆಗೆ ಹಣ ಪಡೆದ ಆರೋಪ ಮಾಧ್ಯಮದ ಸೃಷ್ಟಿ ಎಂದ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನನ್ನ ವಿರುದ್ಧ ಕೇಳಿ ಬಂದ ಆರೋಪದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಸ್ಪಷ್ಟನೆ ನೀಡಿದ್ದೇನೆ' ಎಂದು ವಸತಿ ಸಚಿವ ಬಿ.ಝಡ್. ಜಮೀರ್ ಅಹಮದ್‌ಖಾನ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ನನ್ನ ಮೇಲೆ ಎಲ್ಲೂ ನೇರ ಆರೋಪಗಳಿಲ್ಲ. ಇದು ಮಾಧ್ಯಮದ ಸೃಷ್ಟಿ. ನನ್ನ ಮೇಲೆ ಬಿ.ಆರ್. ಪಾಟೀಲ ನೇರ ಆರೋಪ ಮಾಡಿರಲಿಲ್ಲ. ಈ ಕುರಿತು ಈಗಾಗಲೇ ಹೇಳಿದ್ದೇನೆ' ಎಂದರು.

'ಪಂಚಾಯಿತಿ ಅಧ್ಯಕ್ಷನ ಪತ್ರಕ್ಕೆ ಮನೆ ಮಂಜೂರಾತಿ ಆಗಿದೆ. ಆದರೆ, ಮಾಧ್ಯಮದಲ್ಲಿ ನನ್ನ ಹೆಸರು ಬಂತು. ಈ ಕಾರಣಕ್ಕೆ ಮುಖ್ಯಮಂತ್ರಿಗೆ ವರದಿ ಕೊಟ್ಟಿದ್ದೇನೆ' ಎಂದು ಹೇಳಿದರು.

ಜಮೀರ್

'ಬಿ.ಆರ್. ಪಾಟೀಲ ಅವರು 2 ವರ್ಷದಲ್ಲಿ ಆರು ಸಾವಿರ ಮನೆ ಕೇಳಿದ್ದರು. ಎಲ್ಲ ಪಂಚಾಯಿತಿಗಳಿಗೂ ಸೇರಿ 950 ಮನೆಗಳನ್ನು ಮಂಜೂರು ಮಾಡಲಾಗಿದೆ. ಬುಧವಾರ ಭೇಟಿ ಮಾಡುವುದಾಗಿ ಪಾಟೀಲರು ನನಗೆ ಹೇಳಿದ್ದರು. ಆದರೆ, ಅವರು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದ್ದಾರೆ' ಎಂದರು. 'ವಸತಿ ಇಲಾಖೆಯಲ್ಲಿ ಮನೆ ಹಂಚಿಕೆಗೆ ಲಂಚ ನಡೆಯುತ್ತಿದೆ' ಎಂದು ಬಿ.ಆರ್. ಪಾಟೀಲ ಅವರು ಆರೋಪಿಸಿದ್ದರು.

'ಕ್ರಮ ತೆಗೆದುಕೊಳ್ಳುವುದು ಸಿಎಂ, ಡಿಸಿಎಂಗೆ ಬಿಟ್ಟದ್ದು'

ಬಿ.ಆರ್. ಪಾಟೀಲ

'ನನ್ನದೇನೂ ಸಮಾಧಾನ, ಅಸಮಾಧಾನ ಇಲ್ಲ. ಏನೆಲ್ಲ ಹೇಳಬೇಕಾಗಿತ್ತೊ ಅದನ್ನು ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಗೆ ವಿವರವಾಗಿ ಹೇಳಿದ್ದೇನೆ. ಅವರು ಏನು ಕ್ರಮ ತೆಗೆದುಕೊಳ್ಳುತ್ತಾರೊ. ಅವರಿಗೆ ಬಿಟ್ಟದ್ದು' ಎಂದು ಆಳಂದ ಶಾಸಕ ಬಿ.ಆರ್. ಪಾಟೀಲ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ವಿಚಾರಗಳನ್ನು ಅವರು ಸಮಾಧಾನದಿಂದ ಆಲಿಸಿದ್ದಾರೆ. ಯೋಚನೆ ಮಾಡಿ ನಿರ್ಣಯ ತೆಗೆದುಕೊಳ್ಳುವುದಾಗಿ ಅವರು ತಿಳಿಸಿದ್ದಾರೆ' ಎಂದರು.

'ಸಮಸ್ಯೆ ಸರಿ ಹೋಗಬಹುದೆಂಬ ವಿಶ್ವಾಸ ಇದೆಯೇ?' ಎಂಬ ಪ್ರಶ್ನೆಗೆ, 'ಅವರಿಗೇ ಕೇಳಿ' ಎಂದಷ್ಟೆ ಪ್ರತಿಕ್ರಿಯಿಸಿದರು. ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯನ್ನು ಪಾಟೀಲರು ಬುಧವಾರ ಸಂಜೆ ಭೇಟಿ ಮಾಡಿದ ಚರ್ಚೆ ನಡೆಸಿದ್ದರು.

'ಆರೋಪ ಸುಳ್ಳು ಎನ್ನಲ್ಲ'

ಕೆ.ಎನ್. ರಾಜಣ್ಣ

'ಹಿರಿಯ ಶಾಸಕರೂ ಆಗಿರುವ ರಾಜ್ಯ ನೀತಿ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ ಅವರು ವಸತಿ ಹಂಚಿಕೆ ವಿಚಾರದಲ್ಲಿ ಸಚಿವರ ಆಪ್ತ ಕಾರ್ಯದರ್ಶಿ ಜೊತೆ ಆಡಿರುವ ಮಾತುಗಳನ್ನು ಸುಳ್ಳು ಎನ್ನುವುದಿಲ್ಲ. ಅವರ ಅನುಭವವನ್ನು ಅವರು ಹೇಳಿದ್ದಾರೆ. ಈ ವಿಚಾರದಲ್ಲಿ ನಾನು ಹೆಚ್ಚು ಪ್ರತಿಕ್ರಿಯಿಸುವುದಿಲ್ಲ' ಎಂದು ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿದರು.

'ಸಚಿವರು ಕೈಗೆ ಸಿಗುತ್ತಿಲ್ಲ ಎಂಬ ರಾಜು ಕಾಗೆ ಅವರ ಆರೋಪ ಸತ್ಯಕ್ಕೆ ದೂರವಾದದ್ದು. ಒಂದಷ್ಟು ಸಚಿವರು ಎಂದರೆ ಯಾರು ಎಂದು ನಿರ್ದಿಷ್ಟವಾಗಿ ಹೇಳಿದರೆ ತಿದ್ದಿಕೊಳ್ಳಬಹುದು. ಅದು ಯಾರೇ ಆಗಿರಲಿ, ನಾನೇ ಆಗಿರಲಿ. ಮನುಷ್ಯ ಎಂದ ಮೇಲೆ ಲೋಪ ಇರುತ್ತದೆ. ತಿದ್ದಿಕೊಳ್ಳಬಹುದು' ಎಂದರು.

ಚಟಿಕೆ ಸುದ್ದಿ

ಹಂಪಿ ಮೃಗಾಲಯ ಸೇರಿದ 'ರೇವಾ'

'ರೇವಾ' ಗಂಡು ಹುಲಿ

ಹೊಸಪೇಟೆ (ವಿಜಯನಗರ): ಕಲ್ಯಾಣ ಕರ್ನಾಟಕದಲ್ಲಿ ಸಫಾರಿ ಹೊಂದಿರುವ ಏಕೈಕ ಮೃಗಾಲಯ ಎಂಬ ಖ್ಯಾತಿ ಪಡೆದಿರುವ ಹಂಪಿ ಸಮೀಪದ ಅಟಲ್ ಬಿಹಾರಿ ವಾಜಪೇಯಿ ಜಿಯಾಲಾಜಿಕಲ್ ಪಾರ್ಕ್‌ಗೆ ಮಂಗಳೂರು ಪಿಲಿಕುಳ ಜೈವಿಕ ಉದ್ಯಾನವನದಿಂದ 'ರೇವಾ' ಎಂಬ ಗಂಡು ಹುಲಿಯನ್ನು ಗುರುವಾರ ತರಲಾಗಿದೆ.

'ಮೃಗಾಲಯಕ್ಕೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ದಿನೇ ದಿನೇ ಹೆಚ್ಚಾಗುತ್ತಿದೆ. ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಾಣಿಗಳನ್ನು ತರಿಸಲಾಗುತ್ತಿದೆ. ಪ್ರಾಣಿ ವಿನಿಮಯ ಕಾರ್ಯಕ್ರಮದಡಿ ಪಿಲಿಕುಳದಿಂದ ಒಂದು ಗಂಡು ಹುಲಿ ಮತ್ತು ಒಂದು ಗಂಡು ನೀರು ಕುದುರೆಯನ್ನು ತರಿಸಲು ನವದೆಹಲಿಯ ಕೇಂದ್ರ ಮೃಗಾಲಯ ಪ್ರಾಧಿಕಾರ ಅನುಮತಿ ನೀಡಿದೆ. ಅದರಂತೆ ಹುಲಿ ಬಂದಿದ್ದು, ಮುಂದಿನ ದಿನಗಳಲ್ಲಿ ನೀರು ಕುದುರೆ ಬರಲಿದೆ' ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕರೂ ಆಗಿರುವ ಡಿಸಿಎಫ್ ರಾಜೇಶ್ ನಾಯ್ಕ ತಿಳಿಸಿದರು.

ಕಾಡಾನೆ ಕಳೇಬರ ಪತ್ತೆ

ಹೆಣ್ಣಾನೆಯ ಕಳೇಬರ

ಸುಂಟಿಕೊಪ್ಪ (ಕೊಡಗು ಜಿಲ್ಲೆ): ಸಮೀಪದ ಕಂಬಿಬಾಣೆ ಊರುಗುಪ್ಪೆ ಪೈಸಾರಿ ಬಳಿಯ ತೋಟವೊಂದರಲ್ಲಿ 18 ವರ್ಷ ಪ್ರಾಯದ ಹೆಣ್ಣಾನೆಯ ಕಳೇಬರವು ಗುರುವಾರ ಪತ್ತೆಯಾಗಿದೆ. ಕಾಡಾನೆಗಳ ನಡುವಿನ ಕಾದಾಟದಲ್ಲಿ ಮೃತಪಟ್ಟಿರಬಹುದೆಂದು ಶಂಕಿಸಲಾಗಿದೆ. ಜೂನ್ 25ರ ರಾತ್ರಿ ಘಟನೆ ನಡೆದಿದೆ ಎನ್ನಲಾಗಿದೆ. ಮಡಿಕೇರಿ ಡಿಎಸ್ಎಫ್ ಹರ್ಷವರ್ಧನ, ಕುಶಾಲನಗರ ಎಸಿಎಫ್ ಗೋಪಾಲ್, ಆರ್‌ಎಫ್‌ಒ ರತನ್ ಭೇಟಿ ನೀಡಿದ್ದರು. ಮರಣೋತ್ತರ ಪರೀಕ್ಷೆ ನಂತರ ಆನೆಕಾಡು ಮೀಸಲು ಅರಣ್ಯಕ್ಕೆ ಮೃತದೇಹವನ್ನು ಸಾಗಿಸಲಾಯಿತು.

ಕಸಾಪ: ಗೌರವ ಕಾರ್ಯದರ್ಶಿಯಾಗಿ ಮಲ್ಲೇಶಗೌಡ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಗೌರವ ಕಾರ್ಯದರ್ಶಿ ಹುದ್ದೆಗೆ ಹಾಸನ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಚ್.ಎಲ್. ಮಲ್ಲೇಶಗೌಡ ಅವರನ್ನು ನೇಮಕ ಮಾಡಿ ಕಸಾಪ ಅಧ್ಯಕ್ಷ ಮಹೇಶ ಜೋಶಿ ಆದೇಶ ಹೊರಡಿಸಿದ್ದಾರೆ.

ಈ ಹುದ್ದೆಯಲ್ಲಿದ್ದ ಪದ್ಮಿನಿ ನಾಗರಾಜು ಅವರ ರಾಜೀನಾಮೆ ಅಂಗೀಕೃತವಾಗಿದೆ. ಇದೇ 29ರಂದು ಕಸಾಪ ಕಾರ್ಯಕಾರಿ ಸಮಿತಿ ಸಭೆಯು ಬಳ್ಳಾರಿಯ ಸಂಡೂರಿನ ಕೂಡ್ಲಿಗಿ ರಸ್ತೆಯಲ್ಲಿರುವ ಆದರ್ಶ ಕಲ್ಯಾಣ ಮಂಟಪದಲ್ಲಿ ಆಯೋಜನೆಗೊಂಡಿರುವ ಕಾರಣ, ಗೌರವ ಕಾರ್ಯದರ್ಶಿ ಹುದ್ದೆಗೆ ಮಲ್ಲೇಶಗೌಡ ಅವರನ್ನು ನೇಮಕ ಮಾಡಲಾಗಿದೆ. ಮುಂದಿನ ಆದೇಶದವರೆಗೆ ಈ ನೇಮಕಾತಿ ಜಾರಿಯಲ್ಲಿ ಇರಲಿದೆ ಎಂದರು.

ನಿಧನ ವಾರ್ತೆ

ಎನ್.ಸಿ. ಗುಂಡೂರಾವ್

ಬೆಂಗಳೂರು: ಡೆಕ್ಕನ್ ಹೆರಾಲ್ಡ್‌ನ ಮಾಜಿ ಸಹ ಸಂಪಾದಕ ಎನ್.ಸಿ. ಗುಂಡೂರಾವ್ (78) ಅವರು ಗುರುವಾರ ನಿಧನರಾದರು.

ಅವರಿಗೆ ಪತ್ನಿ ಉಷಾ, ಪುತ್ರಿಯರಾದ ಸಪ್ನಾ ಮತ್ತು ಸಹ್ಯಾದ್ರಿ ಇದ್ದಾರೆ. ಕೆಲವು ದಿನಗಳಿಂದ ಅನಾರೋಗ್ಯದಿಂದ ಅವರು ಬಳಲುತ್ತಿದ್ದರು.

ಡೆಕ್ಕನ್ ಹೆರಾಲ್ಡ್‌ನಲ್ಲಿ ಪ್ರೂಫ್ ರೀಡರ್ ಆಗಿ ವೃತ್ತಿಜೀವನ ಆರಂಭಿಸಿದ್ದ ಗುಂಡೂರಾವ್ ಅವರು, ಸುಮಾರು 35 ವರ್ಷಗಳ ಸುದೀರ್ಘ ಅವಧಿಯಲ್ಲಿ ಅವರು ಮುಖ್ಯ ವರದಿಗಾರ ಸೇರಿದಂತೆ ಹಲವು ಪ್ರಮುಖ ಹುದ್ದೆ ನಿರ್ವಹಿಸಿದ್ದರು. ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಗಳ ಕುರಿತು 15 ದಿನಗಳಿಗೊಮ್ಮೆ ಡೆಕ್ಕನ್ ಹೆರಾಲ್ಡ್‌ನಲ್ಲಿ ಬರೆಯುತ್ತಿದ್ದ ಅಂಕಣದ ಮೂಲಕ ಅವರು ಗುರುತಿಸಿಕೊಂಡಿದ್ದರು. 1992ರಿಂದ 2005ರಲ್ಲಿ ನಿವೃತ್ತರಾಗುವವರೆಗೆ ಈ ಅಂಕಣ ಬರೆದಿದ್ದರು. ಕನ್ನಡ ಸಿನಿಮಾ ರಂಗದ ಕುರಿತು ಆಳವಾದ ಜ್ಞಾನ ಹೊಂದಿದ್ದ ಮತ್ತು ತಮ್ಮ ವೃತ್ತಿಜೀವನದ ಅವಧಿಯಲ್ಲಿ ನೂರಾರು ಸಿನಿಮಾಗಳನ್ನು ಕುರಿತು ವಿಮರ್ಶೆ ಬರೆದಿದ್ದರು.

ಬೆಂಗಳೂರಿನಲ್ಲಿ ಶುಕ್ರವಾರ ಅವರ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರತಿಪಕ್ಷಗಳಿಂದ ಹುಸಿ ಆರೋಪ – ಸಚಿವ

'ಬೊಕ್ಕಸ ಖಾಲಿ ಆಗಿಲ್ಲ'

ಪ್ರಜಾವಾಣಿ ವಾರ್ತೆ



ಎನ್.ಎಸ್. ಬೋಸರಾಜು

ಮಡಿಕೇರಿ: 'ವಿಧಾನಸಭಾ ಕ್ಷೇತ್ರಗಳ ಅಭಿವೃದ್ಧಿಗೆ ₹ 8 ಸಾವಿರ ಕೋಟಿ ಮೀಸಲಿರಿಸಲಾಗಿದ್ದು, ಮಾರ್ಗಸೂಚಿಗಳನ್ನು ರಚಿಸಿ ಶಾಸಕರಿಗೆ ಹಂಚಿಕೆ ಮಾಡಲು ಸಿದ್ಧತೆ ನಡೆಯುತ್ತಿದೆ. ಸದ್ಯದಲ್ಲೇ ಮುಖ್ಯಮಂತ್ರಿ ಇದನ್ನು ಘೋಷಿಸಲಿದ್ದಾರೆ' ಎಂದು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು ತಿಳಿಸಿದರು.

'ಅನುದಾನ ಹಂಚಿಕೆಯಲ್ಲಿ ತಾರತಮ್ಯ, ಸರ್ಕಾರದಲ್ಲಿ ಹಣ ಇಲ್ಲ' ಎಂಬ ಆರೋಪಗಳನ್ನು ಕುರಿತು ಕುಶಾಲನಗರದ ಹಾರಂಗಿ ಜಲಾಶಯದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಸರ್ಕಾರದ ಬೊಕ್ಕಸ ಖಾಲಿಯಾಗಿಲ್ಲ' ಎಂದು ಸ್ಪಷ್ಟಪಡಿಸಿದರು.

'ಯಾರೋ ಒಂದಿಬ್ಬರು ಶಾಸಕರು ಹೇಳಿದ್ದನ್ನೇ ಮುಂದಿಟ್ಟುಕೊಂಡು ಕೆಲಸ ಇಲ್ಲದ ಪ್ರತಿಪಕ್ಷಗಳು ಹುಸಿ ಆರೋಪಗಳನ್ನು ಮಾಡುತ್ತಿವೆ. ಒಂದಿಬ್ಬರು ಬಿಟ್ಟರೆ ಉಳಿದೆಲ್ಲಾ ಶಾಸಕರಿಗೆ ಯಾವುದೇ ಸಮಸ್ಯೆಯಾಗುತ್ತಿಲ್ಲ. ಶಾಸಕ ಬಿ.ಆರ್. ಪಾಟೀಲ್ ಸಹ ಸಚಿವರಿಂದ ಸಮಸ್ಯೆಯಾಗಿದೆ ಎಂದು ಹೇಳಿಲ್ಲ. ಭಾವುಕ ವ್ಯಕ್ತಿಯಾಗಿರುವ ರಾಜು ಕಾಗೆ ಅವರು ಸ್ಥಳೀಯವಾಗಿ ಅಧಿಕಾರಿಗಳ ನಿರ್ಲಕ್ಷ್ಯದಿಂದ ಆಗಿರುವ ಸಮಸ್ಯೆಯನ್ನು ಹೇಳಿಕೊಂಡಿದ್ದಾರೆ. ಈ ಬಗ್ಗೆಯೂ ಅಧಿಕಾರಿಗಳಿಗೆ ಮುಖ್ಯಮಂತ್ರಿ ನಿರ್ದೇಶನಗಳನ್ನು ನೀಡಿದ್ದಾರೆ' ಎಂದರು.

ಜಾಗೃತಿ ಜಾಥಾ

ಚಿತ್ರ: ತಾಜುದ್ದೀನ್ ಆಜಾದ್

ಅಂತರರಾಷ್ಟ್ರೀಯ ಮಾದಕ ವಸ್ತು ವಿರೋಧಿ ದಿನಾಚರಣೆ ಅಂಗವಾಗಿ ಪೊಲೀಸ್ ಇಲಾಖೆ ಹಾಗೂ ಪೊಲೀಸ್ ತರಬೇತಿ ಮಹಾವಿದ್ಯಾಲಯ ಕಲಬುರಗಿಯ ಜಗತ್ ವೃತ್ತದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಜಾಗೃತಿ ಜಾಥಾದಲ್ಲಿ ಎನ್‌ಎಸ್‌ಎಸ್ ವಿದ್ಯಾರ್ಥಿನಿಯರು ಗಮನ ಸೆಳೆದರು

ಸುದ್ದಿ 2 ನಿಮಿಷ

ಸರ್ಕಾರಿ ಪದವಿ ಕಾಲೇಜು 26,900 ಸೀಟು ಹೆಚ್ಚಳ

ಬೆಂಗಳೂರು: ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿವಿಧ ಕೋರ್ಸ್‌ಗಳಲ್ಲಿ ಹೆಚ್ಚುವರಿ 26,900 ಸೀಟುಗಳನ್ನು ಸೇರ್ಪಡೆ ಮಾಡಲು ಕಾಲೇಜು ಶಿಕ್ಷಣ ಇಲಾಖೆ ಅನುಮತಿ ನೀಡಿದೆ.

ಬಿ.ಎ, ಬಿ.ಕಾಂ, ಬಿ.ಎಸ್‌ಸಿ ಮೂರೂ ಕೋರ್ಸ್‌ಗಳಲ್ಲಿ ಸೀಟುಗಳ ಸಂಖ್ಯೆ ಹೆಚ್ಚಳ ಮಾಡಿದೆ. ಕಲಾ ವಿಭಾಗ ಒಂದರಲ್ಲೇ 13,905 ಹೆಚ್ಚುವರಿ ಸೀಟುಗಳಿಗೆ ಅವಕಾಶ ನೀಡಲಾಗಿದೆ. ಯುಪಿಎಸ್‌ಸಿ ಮತ್ತಿತರ ಸ್ಪರ್ಧಾ ಪರೀಕ್ಷೆಗಳಿಗೆ ಸಿದ್ಧತೆ ನಡೆಸುವ ವಿದ್ಯಾರ್ಥಿಗಳು ಪದವಿ ಹಂತದಲ್ಲಿ ಕಲಾ ವಿಭಾಗದ ಕೆಲ ಕೋರ್ಸ್‌ಗಳಿಗೆ ಹೆಚ್ಚಿನ ಒಲವು ತೋರುತ್ತಿರುವುದು ಸೀಟುಗಳ ಸಂಖ್ಯೆ ಹೆಚ್ಚಳಕ್ಕೆ ಪ್ರಮುಖ ಕಾರಣ ಎಂದು ಇಲಾಖೆ ಹೇಳಿದೆ. ವಾಣಿಜ್ಯ ವಿಭಾಗದಲ್ಲಿ 4,130, ವಿಜ್ಞಾನ ವಿಭಾಗದಲ್ಲಿ 4,856 ಸೀಟುಗಳನ್ನು ಸೇರ್ಪಡೆ ಮಾಡಲಾಗಿದೆ.

ಶಿಷ್ಯವೇತನ ಸಹಿತ ವೃತ್ತಿ ತರಬೇತಿಗೆ ಅವಕಾಶ ಇರುವ ಕೋರ್ಸ್‌ಗಳಿಗೆ ಬೇಡಿಕೆ ಹೆಚ್ಚಿದೆ. ಇಂತಹ ಕೋರ್ಸ್‌ಗಳಲ್ಲಿ ವಿವಿಧ ಕಂಪನಿಗಳು ವಿದ್ಯಾರ್ಥಿಗಳಿಗೆ ₹8,000ದಿಂದ ₹18,000ದವರೆಗೆ ಶಿಷ್ಯವೇತನ ನೀಡುತ್ತಿವೆ. 45 ಕಾಲೇಜುಗಳಲ್ಲಿ ಇದ್ದ ಶಿಷ್ಯವೇತನ ಸಹಿತ ವೃತ್ತಿ ಶಿಕ್ಷಣ ಕೋರ್ಸ್‌ಗಳನ್ನು ಈ ಬಾರಿ 85 ಕಾಲೇಜುಗಳಿಗೆ ವಿಸ್ತರಿಸಲಾಗಿದೆ. ಬಿಬಿಎ ಮತ್ತು ಬಿಸಿಎ ಕೋರ್ಸ್‌ಗಳಿಗೆ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಅನುಮತಿ ಪಡೆಯುವಂತೆ ಇಲಾಖೆ ಷರತ್ತು ವಿಧಿಸಿದೆ.

ಸೂರಜ್ ರೇವಣ್ಣ ಪ್ರಕರಣ 'ಬಿ' ವರದಿ ಸಲ್ಲಿಕೆ

ಬೆಂಗಳೂರು: ಯುವಕನ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಜೀವ ಬೆದರಿಕೆಯೊಡ್ಡಿದ ಆರೋಪಕ್ಕೆ ಗುರಿಯಾಗಿರುವ ವಿಧಾನ ಪರಿಷತ್‌ನ ಜೆಡಿಎಸ್ ಸದಸ್ಯ ಸೂರಜ್ ರೇವಣ್ಣ ವಿರುದ್ಧದ ಎರಡನೇ ಎಫ್‌ಐಆರ್‌ಗೆ ಸಂಬಂಧಿಸಿದಂತೆ ತನಿಖಾಧಿಕಾರಿಗಳು ವಿಚಾರಣಾ ನ್ಯಾಯಾಲಯಕ್ಕೆ 'ಬಿ' ಅಂತಿಮ ವರದಿ ಸಲ್ಲಿಸಿದ್ದಾರೆ.

ಈ ಸಂಬಂಧ ಹೊಳೆನರಸೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣಕ್ಕೆ ಸಂಬಂಧಿಸಿದ ಎರಡನೇ ಎಫ್‌ಐಆರ್ ಕುರಿತಂತೆ ತನಿಖೆ ನಡೆಸಿದ್ದ ತನಿಖಾಧಿಕಾರಿಗಳು, 'ಬಿ' ಅಂತಿಮ ವರದಿಯನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ 42ನೇ ಎಸಿಎಂಎಂ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಸಲ್ಲಿಸಿದ್ದಾರೆ.

ಸೂರಜ್ ರೇವಣ್ಣ ಬ್ರಿಗೇಡ್ ಖಜಾಂಚಿ ನೀಡಿದ ದೂರಿನ ಆಧಾರದಡಿ ಸೂರಜ್ ರೇವಣ್ಣ ವಿರುದ್ಧ 2024ರ ಜೂನ್ 22ರಂದು ಪ್ರಕರಣ ದಾಖಲಾಗಿತ್ತು.

ಮನಗೂಳಿ ಕೆನರಾ ಬ್ಯಾಂಕ್‌ನಿಂದ 58.97 ಕೆ.ಜಿ ಚಿನ್ನಾಭರಣ ಕಳವು ಪ್ರಕರಣ

ವ್ಯವಸ್ಥಾಪಕ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ವಿಜಯಪುರ: ಜಿಲ್ಲೆಯ ಮನಗೂಳಿ ಕೆನರಾ ಬ್ಯಾಂಕ್‌ನ ಸೇಫ್ ಲಾಕರ್‌ನಲ್ಲಿದ್ದ 58.97 ಕೆ.ಜಿ ಚಿನ್ನಾಭರಣ ಹಾಗೂ ₹ 5.20 ಲಕ್ಷ ನಗದು ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ಅದೇ ಬ್ಯಾಂಕ್‌ನ ಹಿಂದಿನ ವ್ಯವಸ್ಥಾಪಕ ಹಾಗೂ ಹಾಲಿ ಕೊಲ್ಹಾರ ತಾಲ್ಲೂಕಿನ ರೋಣಿಹಾಳ ಕೆನರಾ ಬ್ಯಾಂಕ್‌ನ ಹಿರಿಯ ವ್ಯವಸ್ಥಾಪಕ, ಹುಬ್ಬಳ್ಳಿಯ ಗದಗ ರಸ್ತೆಯ ಕೋಠಾರಿ ನಗರದ ನಿವಾಸಿ ವಿಜಯಕುಮಾರ ಮಿರಿಯಾಲ(41), ಹುಬ್ಬಳ್ಳಿ ಜನತಾ ಕಾಲೊನಿಯ ಖಾಸಗಿ ಕಂಪನಿ ಉದ್ಯೋಗಿ ಚಂದ್ರಶೇಖರ ನೆರೆಲ್ಲಾ(38) ಮತ್ತು ಹುಬ್ಬಳ್ಳಿ ಚಾಲುಕ್ಯ ನಗರದ ಸುನೀಲ ಮೋಕಾ(40) ಎಂಬುವರನ್ನು ಬಂಧಿಸಲಾಗಿದೆ.

'ಆರೋಪಿಗಳ ಬಳಿ ಇದ್ದ ₹10.75 ಕೋಟಿ ಮೌಲ್ಯದ 10.5 ಕೆ.ಜಿ ಬಂಗಾರದ ಆಭರಣ ಹಾಗೂ ಆಭರಣ ಕರಗಿಸಿದ ಬಂಗಾರದ ಗಟ್ಟಿ ಹಾಗೂ ಕೃತ್ಯಕ್ಕೆ ಬಳಸಿದ ಎರಡು ಕಾರುಗಳನ್ನು ವಶಪಡಿಸಿಕೊಳ್ಳಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿ ಇನ್ನುಳಿದ ಆರೋಪಿಗಳ ಹಾಗೂ ಕಳುವಾದ ವಸ್ತುಗಳ ಪತ್ತೆ ಕಾರ್ಯ ಮುಂದುವರಿದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಪ್ರಕರಣದ ವಿವರ: ಕಳೆದ ಮೇ 23 ರಿಂದ 25ರ ನಡುವಿನ ಅವಧಿಯಲ್ಲಿ ಆರೋಪಿಗಳು ಮನಗೂಳಿ ಬ್ಯಾಂಕ್‌ನ ಸೇಫ್ ಲಾಕರ್‌ನಲ್ಲಿದ್ದ ಅಂದಾಜು ₹53.26 ಕೋಟಿ ಮೌಲ್ಯದ 58.97 ಕೆ.ಜಿ ಬಂಗಾರದ ಆಭರಣ ಹಾಗೂ ₹5.20 ಲಕ್ಷ ನಗದು ಸೇರಿದಂತೆ ಒಟ್ಟು ₹53,31 (₹53,31,20,450) ಕೋಟಿ ಮೌಲ್ಯದ ಬಂಗಾರದ ಆಭರಣ ಹಾಗೂ ನಗದು ಹಣ ಕಳ್ಳತನ ಮಾಡಿದ್ದರು.

ವಿಜಯಕುಮಾರ

ಚಂದ್ರಶೇಖರ

ಸುನೀಲ

'ಚಿನ್ನಾಭರಣ ಕಳವು ಸಂಬಂಧ ಆರೋಪಿಗಳು ಮೂರು ತಿಂಗಳಿಂದ ವ್ಯವಸ್ಥಿತವಾಗಿ ಸಂಚು ರೂಪಿಸಿದ್ದರು. ತನಿಖೆಯ ದಿಕ್ಕು ತಪ್ಪಿಸುವಂತಹ ಹಲವಾರು ದೃಶ್ಯಾವಳಿಗಳನ್ನು ಆರೋಪಿಗಳು ಸೃಷ್ಟಿಸಿದ್ದರು. ಕಳ್ಳರು ತಮ್ಮ ಗುರುತು ಪತ್ತೆ ಆಗದಂತೆ ಬ್ಯಾಂಕ್‌ನಲ್ಲಿರುವ ಸಿ.ಸಿ.ಟಿ.ವಿ ಕ್ಯಾಮರಾಗಳ ವಿಡಿಯೊ ಡಾಟಾ ಸಂಗ್ರಹಣೆ ಮತ್ತು ನಿರ್ವಹಣೆ ಸಾಧನ (ಎನ್.ವಿ.ಆರ್) ತೆಗೆದುಕೊಂಡು ಹೋಗಿದ್ದರು. ಪ್ರಕರಣ ಪತ್ತೆ ಹಚ್ಚಲು ಪೊಲೀಸರ ಎಂಟು ತಂಡಗಳನ್ನು ರಚಿಸಲಾಗಿತ್ತು. ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿ ವೈಜ್ಞಾನಿಕ ರೀತಿಯಿಂದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿ, ಪ್ರಕರಣದಲ್ಲಿ ಭಾಗಿಯಾಗಿದ್ದ ಮೂವರು ಆರೋಪಿಗಳನ್ನು ಬಂಧಿಸಿದ್ದಾರೆ' ಎಂದರು.

ಸಿನಿಮಾಗಳಿಂದ ಪ್ರೇರಣೆ: 'ಪ್ರಪಂಚದ ವಿವಿಧೆಡೆ ಈ ಹಿಂದೆ ನಡೆದಿರುವ ಅತಿ ದೊಡ್ಡ ಬ್ಯಾಂಕ್ ದರೋಡೆ ಪ್ರಕರಣಗಳನ್ನು ಆರೋಪಿಗಳು ತಿಳಿದುಕೊಂಡಿದ್ದರು. ಅಲ್ಲದೇ, ಬಾಲಿವುಡ್, ಹಾಲಿವುಡ್ ಸೇರಿದಂತೆ ಕಳವು ಪ್ರಕರಣಕ್ಕೆ ಸಂಬಂಧಿಸಿದ ಹಲವು ರೋಚಕ ಸಿನಿಮಾಗಳನ್ನು ನೋಡಿ ಪ್ರೇರಿತರಾಗಿ, ಅದೇ ರೀತಿ ಸಂಚು ರೂಪಿಸಿದ್ದರು ಎಂಬುದು ಆರೋಪಿಗಳ ವಿಚಾರಣೆ ವೇಳೆ ತಿಳಿದುಬಂದಿದೆ' ಎಂದು ಎಸ್.ಪಿ. ತಿಳಿಸಿದರು.

ಸಹಾಯಕ ನಿರ್ದೇಶಕಿ ಸೇರಿ ಮೂವರ ವಿರುದ್ಧ ಎಫ್‌ಐಆರ್

ಕಲಬುರಗಿ: ಅಕ್ಷರ ದಾಸೋಹ ಯೋಜನೆಯಲ್ಲಿ ಅವ್ಯವಹಾರ ಎಸಗಿ ಸರ್ಕಾರಕ್ಕೆ ₹1.38 ಕೋಟಿ ಆರ್ಥಿಕ ನಷ್ಟ ಉಂಟು ಮಾಡಿದ ಆರೋಪದಡಿ ಸಹಾಯಕ ನಿರ್ದೇಶಕಿ ಸೇರಿ ಮೂವರ ವಿರುದ್ಧ ಜೇವರ್ಗಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಅಕ್ಷರ ದಾಸೋಹ ಯೋಜನೆಯ ಶಿಕ್ಷಣ ಅಧಿಕಾರಿ ಈಶ್ವರಪ್ಪ ನೇರಡಗಿ ನೀಡಿದ ದೂರಿನ ಅನ್ವಯ, ಜೇವರ್ಗಿ ತಾಲ್ಲೂಕಿನ ಸಹಾಯಕ ನಿರ್ದೇಶಕಿ ಮಹಾದೇವಿ ಶಿವಸಿಂಪಿ, ಕೆಎಫ್‌ಸಿಎಸ್‌ಸಿಯ ಈ ಹಿಂದಿನ ವ್ಯವಸ್ಥಾಪಕ ಅಬ್ದುಲ್ ಕರಿಮುಲ್ಲಾ ಹಾಗೂ ಗುತ್ತಿಗೆದಾರನ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಬಿಸಿಯೂಟದ ಆಹಾರ ಧಾನ್ಯಗಳನ್ನು ಜೇವರ್ಗಿ ತಾಲ್ಲೂಕಿನ 163 ಶಾಲೆಗಳಿಗೆ ಸರಬರಾಜು ಮಾಡದೆ ಹಂತ–ಹಂತವಾಗಿ ಬೇರೆಡೆ ಸಾಗಿಸಿದ್ದಾರೆ. ದಾಖಲಾತಿಗಳನ್ನು ಪರಿಶೀಲಿಸಿದಾಗ ₹1.38 ಕೋಟಿಯಷ್ಟು ಅವ್ಯವಹಾರ ಎಸಗಿದ್ದು ಶಿಕ್ಷಣ ಇಲಾಖೆಯ ಜಂಟಿ ತನಿಖೆಯಲ್ಲಿ ಗೊತ್ತಾಗಿದೆ ಎಂದು ಹೇಳಿದ್ದಾರೆ.

ಕಳಪೆ ಕಟ್ಟಡ ಕಾಮಗಾರಿ ಇಬ್ಬರು ಅಧಿಕಾರಿಗಳ ಅಮಾನತು

ಕೊಪ್ಪಳ: ಜಿಲ್ಲೆಯ ಗಂಗಾವತಿಯಲ್ಲಿ ಸರ್ಕಾರಿ ಎಂಜಿನಿಯರಿಂಗ್ ಕಾಲೇಜಿನ ಕಾಮಗಾರಿಯನ್ನು ಕಳಪೆಯಾಗಿ ನಿರ್ವಹಣೆ ಮಾಡಿದ್ದಕ್ಕೆ ಪಂಚಾಯತ್ ರಾಜ್ ಎಂಜಿನಿಯರಿಂಗ್ ಇಲಾಖೆಯ ಇಬ್ಬರು ಅಧಿಕಾರಿಗಳನ್ನು ಅಮಾನತು ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಇಲಾಖೆಯ ಕೊಪ್ಪಳದ ಕಾರ್ಯಪಾಲಕ ಎಂಜಿನಿಯರ್ ಎಚ್. ಸತ್ಯಪ್ಪ ಮತ್ತು ಗಂಗಾವತಿ ಉಪವಿಭಾಗದ ಪ್ರಭಾರ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪಿ. ವಿಜಯಕುಮಾರ್ ಅಮಾನತುಗೊಂಡಿದ್ದಾರೆ. ಎಂಜಿನಿಯರಿಂಗ್ ಕಾಲೇಜಿಗೆ ಲ್ಯಾಬೊರೇಟರಿ ಉಪಕರಣಗಳು, ಡಿಜಿಟಲ್ ಗ್ರಂಥಾಲಯ, ವಾಚನಾಲಯಕ್ಕೆ ಪೀಠೋಪಕರಣಗಳು, ಐದು ಕಂಪ್ಯೂಟರ್‌ಗಳ ಸೆಟ್, ವಾಹನ ನಿಲುಗಡೆ ವ್ಯವಸ್ಥೆ ಸೇರಿದಂತೆ ಇತರ ಕಾಮಗಾರಿಗಳನ್ನು ಇಲಾಖೆ ವತಿಯಿಂದ ಮಾಡಲಾಗಿತ್ತು. ಈ ಎಲ್ಲ ಕಾಮಗಾರಿಗಳನ್ನು ₹68.40 ಲಕ್ಷ ವೆಚ್ಚದಲ್ಲಿ ನಿರ್ವಹಿಸಲು ಅನುಮೋದನೆ ನೀಡಲಾಗಿತ್ತು.

ಕಾರ್ಯಾದೇಶದ ಅನ್ವಯ ಒಟ್ಟು 90 ಸಾಮಗ್ರಿಗಳನ್ನು ಒದಗಿಸಬೇಕಿತ್ತು. ಇದರಲ್ಲಿ 82 ಸಾಮಗ್ರಿಗಳನ್ನು ಮಾತ್ರ ನೀಡಲಾಗಿದೆ. ಲ್ಯಾಬೊರೇಟರಿಗಳಿಗೆ ಒದಗಿಸಿದ 47 ಯಂತ್ರೋಪಕರಣಗಳ ಪೈಕಿ 18ರಲ್ಲಿ ಬಹಳ ನ್ಯೂನತೆಗಳು ಕಂಡುಬಂದಿವೆ. ನಿಯಮಗಳಿಗೆ ಅನುಗುಣವಾಗಿ ಅವುಗಳನ್ನು ಅಳವಡಿಸಿಲ್ಲ ಎಂದು ಸರ್ಕಾರದ ಅಧೀನ ಕಾರ್ಯದರ್ಶಿ ಚೇತನ ಎಂ. ಆದೇಶದಲ್ಲಿ ತಿಳಿಸಿದ್ದಾರೆ.

'ಅಧ್ಯಕ್ಷ ಆಯ್ಕೆ: ಗೊಂದಲವಿಲ್ಲ'

ನನಗೆ ಒಳ್ಳೆಯದಾಗಲಿದೆ: ಬಿ.ವೈ. ವಿಜಯೇಂದ್ರ ವಿಶ್ವಾಸ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಆಯ್ಕೆಯಲ್ಲಿ ಯಾವುದೇ ಗೊಂದಲಗಳಿಲ್ಲ. ಪಕ್ಷದ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ ಎಂಬುದನ್ನೂ ನಾನು ಒಪ್ಪುವುದಿಲ್ಲ. ಕರ್ನಾಟಕವೂ ಸೇರಿ ಹಲವು ರಾಜ್ಯಗಳ ಅಧ್ಯಕ್ಷ ಸ್ಥಾನಗಳಿಗೆ ಹೆಸರುಗಳು ಶೀಘ್ರವೇ ಘೋಷಣೆ ಆಗಲಿವೆ' ಎಂದು ಬಿಜೆಪಿ ರಾಜ್ಯ ಘಟಕ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಗುರುವಾರ ವಿಶ್ವಾಸ ವ್ಯಕ್ತಪಡಿಸಿದರು.

ಪಕ್ಷದ ಕಚೇರಿಯಲ್ಲಿ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಅವರು, 'ಅಧ್ಯಕ್ಷ ಸ್ಥಾನದ ಆಯ್ಕೆ ಸಂಬಂಧ ವರಿಷ್ಠರು ಎಲ್ಲರ ಅಭಿಪ್ರಾಯ ಪಡೆದಿದ್ದಾರೆ. ಒಂದೂವರೆ ವರ್ಷಗಳಿಂದ ಉತ್ತಮವಾಗಿ ಸಂಘಟನಾ ಕಾರ್ಯ ಮಾಡಿದ್ದೇನೆ. ನನಗೆ ಒಳ್ಳೆಯದಾಗಲಿದೆ ಎಂಬ ವಿಶ್ವಾಸವಿದೆ' ಎಂದರು.

'ಅಧ್ಯಕ್ಷರ ಆಯ್ಕೆಯಲ್ಲಿ ಗೊಂದಲಗಳಿದ್ದು, ಆಯ್ಕೆ ಪ್ರಕ್ರಿಯೆ ಮುಂದೂಡುತ್ತಿದ್ದಾರೆ ಎಂಬುದು ಸತ್ಯವಲ್ಲ. 14 ರಾಜ್ಯಗಳಲ್ಲಿ ಅಧ್ಯಕ್ಷರ ಘೋಷಣೆ ಆಗಿದೆ. ಅತಿ ಶೀಘ್ರದಲ್ಲೇ ಇನ್ನು ಆರೇಳು ರಾಜ್ಯ ಘಟಕಗಳ ಅಧ್ಯಕ್ಷರ ಘೋಷಣೆಯೂ ಆಗಲಿದೆ ಎಂಬ ಮಾಹಿತಿ ಇದೆ' ಎಂದರು.

'ಬಿಜೆಪಿ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ' ಎಂಬ ಡಿ.ವಿ.ಸದಾನಂದ ಗೌಡ ಅವರ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ವಿಜಯೇಂದ್ರ, 'ಸದಾನಂದಗೌಡರು ಹಿರಿಯರು. ಪಕ್ಷದ ಸ್ಥಿತಿ ಬೂದಿಮುಚ್ಚಿದ ಕೆಂಡದಂತಿದೆ ಎಂದು ಹೇಳಿರುವುದನ್ನು ಒಪ್ಪಲು ಸಾಧ್ಯವಿಲ್ಲ. ಸಣ್ಣ-ಪುಟ್ಟ ಅಭಿಪ್ರಾಯ ವ್ಯತ್ಯಾಸಗಳಿರುವುದು ಸಹಜ. ಅವರನ್ನು ಭೇಟಿ ಮಾಡಿ ಅವರ ಜತೆ ಚರ್ಚೆ ಮಾಡುತ್ತೇನೆ' ಎಂದು ಹೇಳಿದರು.

'ನಾನು ದೆಹಲಿಗೆ ಹೋಗಿದ್ದೆ, ಕೆಲವು ಹಿರಿಯ ನಾಯಕರೂ ದೆಹಲಿಗೆ ಹೋಗಿದ್ದರು. ಇಷ್ಟಕ್ಕೆ ಬಹಳ ಬೆಳವಣಿಗೆ ಆಗುತ್ತಿದೆ ಎಂದು ವ್ಯಾಖ್ಯಾನಿಸುವುದು ಕೇವಲ ಕಲ್ಪನೆ ಅಷ್ಟೆ. ನಾನು ವೈಯಕ್ತಿಕ ಕಾರಣಕ್ಕೆ ದೆಹಲಿಗೆ ಹೋಗಿದ್ದೆ. ಅಲ್ಲಿ ಪಕ್ಷದ ವರಿಷ್ಠರನ್ನಾಗಲಿ, ಯಾರನ್ನೂ ಭೇಟಿ ಮಾಡಿಲ್ಲ. ವಿರೋಧ ಪಕ್ಷದ ನಾಯಕ ಆರ್.ಅಶೋಕ ಅವರು ದೆಹಲಿಗೆ ಹೋಗಬಾರದು ಅಂತ ಏನಾದರೂ ಇದೆಯೇ' ಎಂದು ಪ್ರಶ್ನಿಸಿದರು.

'ಆರ್.ಅಶೋಕ ಅವರು ವಿಧಾನಸಭೆಯಲ್ಲಿ ಸಮರ್ಥವಾಗಿ ಕೆಲಸ ಮಾಡುತ್ತಿದ್ದಾರೆ. ಆ ಬಗ್ಗೆ ನಮ್ಮ ಶಾಸಕರಿಗೂ ತೃಪ್ತಿ ಇದೆ ಎಂದರು.

'ಎಫ್‌ಐಆರ್ ಗೊಡ್ಡು ಬೆದರಿಕೆಗೆ ಹೆದರಲ್ಲ'

'ನಮ್ಮ ಪಕ್ಷದ 'ಎಕ್ಸ್' ಖಾತೆದಾರರ ವಿರುದ್ಧ ಸರ್ಕಾರ ಎಫ್‌ಐಆರ್ ದಾಖಲಿಸಿದೆ. ಇಂಥ ಗೊಡ್ಡು ಬೆದರಿಕೆಗಳಿಗೆ ಹೆದರುವ ಪ್ರಶ್ನೆಯೇ ಇಲ್ಲ' ಎಂದು ಬಿ.ವೈ. ವಿಜಯೇಂದ್ರ ಹೇಳಿದರು. 'ಇಂಥ ನೂರು ಎಫ್‌ಐಆರ್ ದಾಖಲಿಸಲಿ. ನಾವು ಮತ್ತು ನಮ್ಮ ಕಾರ್ಯಕರ್ತರು ಅದನ್ನು ಸಮರ್ಥವಾಗಿ ಎದುರಿಸಲು ಸಿದ್ಧ. ಬಿಜೆಪಿ ಕಾರ್ಯಕರ್ತರ ಮೇಲೆ ದಬ್ಬಾಳಿಕೆ, ಗೂಂಡಾಗಿರಿ ನಡೆಸಲು ಸಾಧ್ಯವಿಲ್ಲ' ಎಂದು ಅವರು ಕಿಡಿಕಾರಿದರು.

ಎಲ್ಲವೂ ಸರಿ ಇಲ್ಲ: ಡಿವಿಎಸ್

ಬೆಂಗಳೂರು: 'ನಮ್ಮಲ್ಲಿ ಎಲ್ಲವೂ ಸರಿ ಇಲ್ಲ. ಆಂತರಿಕ ವ್ಯತ್ಯಾಸ ಒಳಗೊಳಗೇ ಕುದಿಯುತ್ತಿದೆ. ಎಲ್ಲ ಸರಿ ಇದೆ ಎಂದು ಕಂಡರೂ, ಬೂದಿ ಮುಚ್ಚಿದ ಕೆಂಡದ ಸ್ಥಿತಿ ಇದೆ' ಎಂದು ಕೇಂದ್ರದ ಮಾಜಿ ಸಚಿವ ಡಿ.ವಿ.ಸದಾನಂದಗೌಡ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಯಾರನ್ನಾದರೂ ರಾಜ್ಯ ಘಟಕದ ಅಧ್ಯಕ್ಷರನ್ನಾಗಿ ಮಾಡಿ. ಆದರೆ ಸಂಘಟನಾ ವೇಗಕ್ಕೆ ತಡೆ ಮಾಡಬಾರದು. ಇದರಿಂದ ಪಕ್ಷಕ್ಕೆ ಭಾರಿ ಹಿನ್ನಡೆ ಆಗುತ್ತದೆ' ಎಂದರು.

'ಯಾರನ್ನೇ ಅಧ್ಯಕ್ಷರನ್ನಾಗಿ ಮಾಡಿದರೂ ಪಕ್ಷದ ಕಾರ್ಯಕರ್ತರು ಕೆಲಸ ಮಾಡಲು ಸಿದ್ಧರಾಗಿದ್ದಾರೆ. ಈ ಬಗ್ಗೆ ಒಬ್ಬೊಬ್ಬರು ಒಂದು ರೀತಿಯ ಹೇಳಿಕೆ ನೀಡದಂತೆ ವರಿಷ್ಠರು ಕಡಿವಾಣ ಹಾಕಬೇಕಾಗಿದೆ' ಎಂದು ಹೇಳಿದರು.

'ನಮ್ಮಲ್ಲಿ ಪ್ರಮುಖ ನಾಯಕರ ಸಮಿತಿ ಇದೆ. ಅದು ಸಂಪ್ರದಾಯದಂತೆ ಸಭೆ ಸೇರುತ್ತದೆ. ಆದರೆ, ಅಲ್ಲಿ ವಿಷಯಾಧಾರಿತ ಚರ್ಚೆ ನಡೆಯುತ್ತಿಲ್ಲ. ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಪ್ರಮುಖ ನಾಯಕರ ಸಮಿತಿ ಸದಸ್ಯರು, ಪಕ್ಷ ಕಟ್ಟಿ ಬೆಳೆಸಿದ ಪ್ರಮುಖರ ಜತೆ ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವ ಕೆಲಸ ಆಗುತ್ತಿಲ್ಲ' ಎಂದರು.

'ಪಕ್ಷದಲ್ಲಿ ಶುದ್ಧೀಕರಣ ಆರಂಭವಾಗಿದೆ. ಈ ಕೆಲಸ ಕೇವಲ ಪ್ರೋಕ್ಷಣೆಯಿಂದ ಆಗುವುದಿಲ್ಲ. ಅದೂ ಕೂಡ ಒಳ್ಳೆಯ ರೀತಿಯಲ್ಲಿ ಆಗಬೇಕು. ಕೆಲವರನ್ನು ಹೊರಗೆ ಹಾಕುವ ಮೂಲಕ ಶುದ್ಧೀಕರಣ ಆರಂಭವಾಗಿದೆ' ಎಂದರು.

ಆಯ್ಕೆ ಪ್ರಕ್ರಿಯೆಯಲ್ಲಿ ಪಾರದರ್ಶಕತೆ: ಇಲಾಖೆಯಿಂದ ಮಾರ್ಗಸೂಚಿ ಪರಿಷ್ಕರಣೆ

ಸಂಘ–ಸಂಸ್ಥೆಗಳಿಗೆ 'ಧನಸಹಾಯ' ಪುನರಾರಂಭ

• ವರುಣ ಹೆಗಡೆ

ಬೆಂಗಳೂರು: ಸಾಂಸ್ಕೃತಿಕ ವಾತಾವರಣ ರೂಪಿಸಲು ಶ್ರಮಿಸುತ್ತಿರುವ ಸಂಘ–ಸಂಸ್ಥೆಗಳಿಗೆ ಆರ್ಥಿಕ ನೆರವು ಒದಗಿಸುವ 'ಧನಸಹಾಯ' ಯೋಜನೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪುನರಾರಂಭಿಸುತ್ತಿದ್ದು, ಸಂಘ–ಸಂಸ್ಥೆಗಳ ಆಯ್ಕೆಯಲ್ಲಿ ಪಾರದರ್ಶಕತೆ ತರಲು ಯೋಜನೆಯ ಮಾರ್ಗಸೂಚಿಯನ್ನು ಪರಿಷ್ಕರಣೆ ಮಾಡುತ್ತಿದೆ.

ಅನುದಾನದ ಕೊರತೆಯಿಂದಾಗಿ ಇಲಾಖೆಯು ಈ ಯೋಜನೆಯಡಿ 2024–25ನೇ ಸಾಲಿಗೆ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ಆರ್ಥಿಕ ನೆರವು ಒದಗಿಸಿರಲಿಲ್ಲ. ಇದರಿಂದಾಗಿ ಕಲಾವಿದರು ಹಾಗೂ ಸಂಘ–ಸಂಸ್ಥೆಗಳ ಮುಖ್ಯಸ್ಥರು ಸಂಕಷ್ಟಕ್ಕೆ ಸಿಲುಕಿದ್ದರು. ಯೋಜನೆ ಮುಂದುವರಿಯುವ ಬಗ್ಗೆಯೂ ಸಾಂಸ್ಕೃತಿಕ ವಲಯದಲ್ಲಿ ಗೊಂದಲ ಉಂಟಾಗಿತ್ತು. ಈ ಸಾಲಿಗೆ ಯೋಜನೆಯನ್ನು ಪುನರಾರಂಭಿಸಲು ಇಲಾಖೆ ಮುಂದಾಗಿದ್ದು, ನಿಯಮಿತವಾಗಿ ಕಾರ್ಯಕ್ರಮ ಮಾಡುತ್ತಿರುವ ಅರ್ಹ ಸಂಘ–ಸಂಸ್ಥೆಗಳಿಗೆ ಮಾತ್ರ ಅನುದಾನ ಒದಗಿಸಲು ಯೋಜನೆಯ ಮಾರ್ಗಸೂಚಿಯಲ್ಲಿ ಕೆಲ ಮಾರ್ಪಾಡು ಮಾಡುತ್ತಿದೆ.

ಈ ಯೋಜನೆಗೆ ₹ 5 ಕೋಟಿ ಅನುದಾನ ಮೀಸಲಿಡಲಾಗಿದೆ. ಆರ್ಥಿಕ ನೆರವಿಗೆ ಸಂಬಂಧಿಸಿದಂತೆ ಸಂಘ–ಸಂಸ್ಥೆಗಳಿಂದ ಬರುವ ಅರ್ಜಿಗಳನ್ನು ಪರಿಶೀಲಿಸಿ, ಆಯ್ಕೆಯಾದ ಸಂಘ–ಸಂಸ್ಥೆಗಳಿಗೆ ಒದಗಿಸಲು ಹೆಚ್ಚುವರಿ ಅನುದಾನ ಅಗತ್ಯವಿದ್ದಲ್ಲಿ ಆರ್ಥಿಕ ಇಲಾಖೆಗೆ ಪ್ರಸ್ತಾವ ಸಲ್ಲಿಸಲು ಇಲಾಖೆ ಕಾರ್ಯಯೋಜನೆ ರೂಪಿಸಿದೆ.

ಧನಸಹಾಯ ಯೋಜನೆಯಡಿ ಅನುದಾನ ಪಡೆಯಲು ನೋಂದಾಯಿತ ಸಂಘ–ಸಂಸ್ಥೆಗಳು ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕಾಗುತ್ತದೆ. ಯೋಜನೆಯ ಹಾಲಿ ಮಾರ್ಗಸೂಚಿ ಪ್ರಕಾರ, ಪ್ರತಿ ವರ್ಷ ಜೂನ್ ತಿಂಗಳಲ್ಲೇ ಅರ್ಜಿ ಆಹ್ವಾನಿಸಿ ಸಂಘ–ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಜಿಲ್ಲಾ ಹಂತದಲ್ಲಿ ಪರಿಶೀಲಿಸಬೇಕು. ಆದರೆ, ಮಾರ್ಗಸೂಚಿ ಪರಿಷ್ಕರಣೆ ಪ್ರಕ್ರಿಯೆ ನಡೆಯುತ್ತಿರುವುದರಿಂದ, ಈ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಅರ್ಜಿ ಆಹ್ವಾನಿಸಲು ಇಲಾಖೆ ನಿರ್ಧರಿಸಿದೆ. ಇಲಾಖೆ ಮೂಲಗಳ ಪ್ರಕಾರ ಜುಲೈನಲ್ಲಿ ಅರ್ಜಿ ಆಹ್ವಾನಿಸುವ ಸಾಧ್ಯತೆಯಿದೆ.

ರಾಜ್ಯದಲ್ಲಿ ಏಳು ಸಾವಿರಕ್ಕೂ ಅಧಿಕ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿವೆ. ಈ ಹಿಂದೆ ಯೋಜನೆಯಡಿ ಅರ್ಜಿ ಸಲ್ಲಿಸುವ 4 ಸಾವಿರಕ್ಕೂ ಹೆಚ್ಚು ಸಂಘ–ಸಂಸ್ಥೆಗಳಲ್ಲಿ, ಒಂದು ಸಾವಿರದಿಂದ ಒಂದೂವರೆ ಸಾವಿರ ಸಂಘ–ಸಂಸ್ಥೆಗಳಿಗೆ ವಾರ್ಷಿಕ ಧನಸಹಾಯ ಒದಗಿಸಲಾಗುತ್ತಿತ್ತು. ಹಾಲಿ ಮಾರ್ಗಸೂಚಿ ಪ್ರಕಾರ ಯೋಜನೆಯಡಿ ಗರಿಷ್ಠ ₹5 ಲಕ್ಷದವರೆಗೆ ಅನುದಾನ ಒದಗಿಸಲು ಅವಕಾಶವಿದೆ.

ಸಂಕಷ್ಟಕ್ಕೆ ಸಿಲುಕಿದ್ದ ಸಂಘ ಸಂಸ್ಥೆಗಳು

ಸಾಂಸ್ಕೃತಿಕ ಸಂಘ–ಸಂಸ್ಥೆಗಳಲ್ಲಿ ಹೆಚ್ಚಿನವು ಇಲಾಖೆಯ ಧನಸಹಾಯವನ್ನೇ ನಂಬಿಕೊಂಡು, ವರ್ಷಪೂರ್ತಿ ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಅಸಂಘಟಿತ ಕಲಾವಿದರಿಗೆ ವಾದ್ಯ ಪರಿಕರ ಮತ್ತು ವೇಷ ಭೂಷಣಗಳ ಖರೀದಿಗೂ ಈ ಯೋಜನೆ ಸಹಕಾರಿಯಾಗಿದೆ. ಅನುದಾನದ ಕೊರತೆಯಿಂದ ಇಲಾಖೆಯು 2023–24ನೇ ಸಾಲಿನ ಧನಸಹಾಯವನ್ನು ಮೊದಲ ಬಾರಿಗೆ ನಾಲ್ಕು ಕಂತುಗಳಲ್ಲಿ ನೀಡಿತ್ತು. 2024–25ನೇ ಸಾಲಿಗೆ ಯೋಜನೆಯನ್ನೇ ಸ್ಥಗಿತ ಮಾಡಿತ್ತು.



ಧನಸಹಾಯ ಯೋಜನೆಯಡಿ ಇನ್ನಷ್ಟು ಪಾರದರ್ಶಕತೆ ತರಲು ಮಾರ್ಗಸೂಚಿ ಪರಿಷ್ಕರಿಸಲಾಗುತ್ತಿದೆ. ಇದಕ್ಕೆ ಅನುಮೋದನೆ ದೊರೆತ ಬಳಿಕ ಅರ್ಜಿ ಆಹ್ವಾನಿಸಲಾಗುತ್ತದೆ
ಗಾಯಿತ್ರಿ ಕೆ.ಎಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ

ಸುಧಾಕರ್ ವಿರುದ್ಧದ ಪ್ರಕರಣ ರದ್ದು

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿಯಲ್ಲಿ ಯೋಜನೆ ಮತ್ತು ಸಾಂಖ್ಯಿಕ ಸಚಿವ ಡಿ.ಸುಧಾಕರ್ ವಿರುದ್ಧ ಯಲಹಂಕ ಠಾಣೆಯಲ್ಲಿ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಗೊಳಿಸಿದೆ.

ಪ್ರಕರಣ ರದ್ದು ಕೋರಿ ಡಿ.ಸುಧಾಕರ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತು ಆದೇಶಿಸಿದೆ.

ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ರವಿ ಬಿ.ನಾಯಕ್ ಅವರ ವಾದವನ್ನು ಮಾನ್ಯ ಮಾಡಿರುವ ನ್ಯಾಯಪೀಠ, 'ಪ್ರಕರಣದಲ್ಲಿ ಆರೋಪ ಸಾಬೀತುಪಡಿಸುವ ಯಾವುದೇ ಅಂಶಗಳಿಲ್ಲ' ಎಂಬ ಅಭಿಪ್ರಾಯಪಟ್ಟಿತು.

ಪ್ರಕರಣವೇನು?: ಯಲಹಂಕದ ಕೆಎಚ್‌ಬಿ ಕಾಲೋನಿಯ ಗಾಂಧಿನಗರದ ಸರ್ವೆ ನಂಬರ್ 108/1ರ ಜಾಗಕ್ಕೆ ಸಂಬಂಧಿಸಿದಂತೆ ಸುಧಾಕರ್ ಮತ್ತು ಸುಬ್ಬಮ್ಮ ಮಧ್ಯೆ ಸಿವಿಲ್ ವ್ಯಾಜ್ಯವಿತ್ತು. ಜಾತಿ ಹೆಸರಿನಲ್ಲಿ ನಿಂದಿಸಿದ್ದಾರೆ ಎಂದು ಸುಬ್ಬಮ್ಮ ದೂರು ದಾಖಲಿಸಿದ್ದರು.

'ಹೆಗಡೆ ವಿರುದ್ಧ ಬಲವಂತದ ಕ್ರಮ ಬೇಡ'

ಬೆಂಗಳೂರು-ಪುಣೆ ರಾಷ್ಟ್ರೀಯ ಹೆದ್ದಾರಿಯ ಹಳೇ ನಿಜಗಲ್ ಬಳಿ ನಡೆದಿದ್ದ ಗಲಾಟೆ ಪ್ರಕರಣದ ಆರೋಪಿ, ಮಾಜಿ ಕೇಂದ್ರ ಸಚಿವ, 'ಅನಂತ ಕುಮಾರ ಹೆಗಡೆ ವಿರುದ್ಧ ಬಲವಂತದ ಕ್ರಮ ಕೈಗೊಳ್ಳಬಾರದು. ಹೆಗಡೆ ಅವರು ತನಿಖೆಗೆ ಸಹಕರಿಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.

'ದಾಬಸ್‌ಪೇಟೆ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ರದ್ದುಪಡಿಸಲು ಕೋರಿ ಅನಂತ ಕುಮಾರ ಹೆಗಡೆ ಮತ್ತಿತರರು ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ನ್ಯಾಯಮೂರ್ತಿ ಎಸ್.ಆರ್.ಕೃಷ್ಣ ಕುಮಾರ್ ಅವರಿದ್ದ ಪೀಠ ಈ ಆದೇಶ ನೀಡಿತು.

ರೊನಾಲ್ಡೊ ಒಪ್ಪಂದ

ಫುಟ್‌ಬಾಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ 2027ರವರೆಗೆ ಸೌದಿ ಅರೇಬಿಯಾದ ಅಲ್ ನಾಸರ್ ತಂಡದಲ್ಲಿ ಮುಂದುವರಿಯಲಿದ್ದಾರೆ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ರೇಖಾ ಸಲಾಂ

ಮುಂಬೈನಲ್ಲಿ ಗುರುವಾರ ನಡೆದ 'ಉಮ್ರಾವ್ ಜಾನ್' ಸಿನಿಮಾದ ಮರು ಬಿಡುಗಡೆ ಮತ್ತು ವಿಶೇಷ ಪ್ರದರ್ಶನದಲ್ಲಿ ಬಾಲಿವುಡ್ ನಟ ರೇಖಾ ಅವರು ಸಲಾಂ ಹೇಳಿದ ಪರಿ

ಗ್ರೇಟರ್ ಬೆಂಗಳೂರು ಅಥಾರಿಟಿ (ಬಿಬಿಎಂಪಿ)
ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸರ್ವಶ್ರೇಷ್ಠ ದಾರ್ಶನಿಕ - ಅಪ್ರತಿಮ ಆಡಳಿತಗಾರ, ಬೆಂಗಳೂರು ಮಹಾನಗರ ನಿರ್ಮಾತೃ

ನಾಡಪ್ರಭು
ಶ್ರೀ ಕೆಂಪೇಗೌಡರ
516ನೇ ಜಯಂತ್ಯುತ್ಸವ

27 ಜೂನ್, 2025 ಶುಕ್ರವಾರ

ಉದ್ಘಾಟನೆ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಮಾನ್ಯ ಕಂದಾಯ ಸಚಿವರು ಮತ್ತು ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ **ಶ್ರೀ ಕೃಷ್ಣ ಭೈರೇಗೌಡ ರವರು** ಸಮಾರಂಭವೊಂದರಲ್ಲಿ ಭಾಷಣ.

ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು, ಹಾಗೂ ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ ಪದನಿಮಿತ್ತ ಸದಸ್ಯರಾದ **ಶ್ರೀ ಶಿವರಾಜ್ ಎಸ್. ತಂಗಡಗಿ ರವರು** ಸಮಾರಂಭವೊಂದರಲ್ಲಿ ಭಾಷಣ.

ಕೆಂಪೇಗೌಡ ಭವನ ನಿರ್ಮಾಣದ ಶಂಕುಸ್ಥಾಪನಾ ಸಮಾರಂಭ
ಮಧ್ಯಾಹ್ನ 12.00 ಕ್ಕೆ

ಕೆಂಪೇಗೌಡ ಜಯಂತಿ ಹಾಗೂ ಅಂತಾರಾಷ್ಟ್ರೀಯ ಕೆಂಪೇಗೌಡ ಪ್ರಶಸ್ತಿ ಪ್ರದಾನ ಕಾರ್ಯಕ್ರಮ
ಮಧ್ಯಾಹ್ನ 12.30 ಕ್ಕೆ

ಸ್ಥಳ: ಡಾ. ಬಾಬು ಜಗಜೀವನರಾಂ ಭವನ (ಸಂಶೋಧನಾ ಸಂಸ್ಥೆ)
ಹೊರವರ್ತುಲ ರಸ್ತೆ (ಮಾಗಡಿ ರಸ್ತೆ), ಸುಮನಹಳ್ಳಿ ಸರ್ಕಲ್, ಬೆಂಗಳೂರು.

ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪ್ರದಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ
ಸಂಜೆ 6.00 ಕ್ಕೆ

ಸ್ಥಳ: ಡಾ. ರಾಜಕುಮಾರ್ ಗಾಜಿನಮನೆ
ಜಿಬಿಎ (ಬಿಬಿಎಂಪಿ) ಕೇಂದ್ರ ಕಚೇರಿ ಆವರಣ, ಬೆಂಗಳೂರು.

ಗಣ್ಯರುಗಳಿಂದ **ನಾಡಪ್ರಭು ಕೆಂಪೇಗೌಡ ಪ್ರತಿಮೆ ಹಾಗೂ ಮಹಾತ್ಯಾಗಿ ಲಕ್ಷ್ಮೀದೇವಿ ಪ್ರತಿಮೆಗೆ ಮಾಲಾರ್ಪಣೆ ಮತ್ತು ಪುಷ್ಪ ನಮನ**

ಬೆಳಿಗ್ಗೆ 9.30ಕ್ಕೆ ಬೆಂಗಳೂರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಹತ್ತಿರ | ಬೆಳಿಗ್ಗೆ 10.30ಕ್ಕೆ ಜಿಬಿಎ (ಬಿಬಿಎಂಪಿ) ಕೇಂದ್ರ ಕಚೇರಿ ಮುಂಭಾಗ, ಬೆಳಿಗ್ಗೆ 10.45ಕ್ಕೆ ವಿಧಾನಸೌಧ ಮುಂಭಾಗ

ದಿವ್ಯ ಸಾನಿಧ್ಯ

ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಸುತ್ತೂರು ಮಹಾಸಂಸ್ಥಾನ ಮಠ

ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ|| ನಿರ್ಮಲಾನಂದನಾಥ ಮಹಾಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಪರಮಪೂಜ್ಯ ಜಗದ್ಗುರು
ಶ್ರೀ ಶ್ರೀ ಶ್ರೀ ಡಾ|| ನಂಜಾವಧೂತ ಮಹಾಸ್ವಾಮೀಜಿಯವರು
ಪೀಠಾಧ್ಯಕ್ಷರು, ಶ್ರೀ ಸ್ಫಟಿಕಪುರಿ ಮಹಾಸಂಸ್ಥಾನ ಮಠ, ಶ್ರೀಕ್ಷೇತ್ರ ಪಟ್ಟನಾಯಕನಹಳ್ಳಿ

ಪರಮಪೂಜ್ಯ
ಶ್ರೀ ಶ್ರೀ ಶ್ರೀ ಡಾ|| ನಿಶ್ಚಲಾನಂದನಾಥ ಸ್ವಾಮೀಜಿಯವರು, ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠ, ಕೆಂಗೇರಿ, ಬೆಂಗಳೂರು

ಗೌರವ ಉಪಸ್ಥಿತಿ

ಶ್ರೀ ಆರ್. ಅಶೋಕ
ಮಾನ್ಯ ವಿರೋಧ ಪಕ್ಷದ ನಾಯಕರು-ವಿಧಾನಸಭೆ

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ
ಮಾನ್ಯ ವಿರೋಧ ಪಕ್ಷದ ನಾಯಕರು-ವಿಧಾನ ಪರಿಷತ್

ಡಾ. ಹೆಚ್.ಸಿ. ಮಹದೇವಪ್ಪ
ಮಾನ್ಯ ಸಮಾಜ ಕಲ್ಯಾಣ ಸಚಿವರು

ಡಾ. ಸಿ.ಎನ್. ಮಂಜುನಾಥ್
ಮಾನ್ಯ ಸಂಸದರು, ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ

ಶ್ರೀ ಪಿ.ಸಿ. ಮೋಹನ್
ಮಾನ್ಯ ಸಂಸದರು, ಬೆಂಗಳೂರು ಕೇಂದ್ರ ಲೋಕಸಭಾ ಕ್ಷೇತ್ರ

ಅಧ್ಯಕ್ಷತೆ

ಶ್ರೀ ಮುನಿರತ್ನ
ಮಾನ್ಯ ಶಾಸಕರು, ರಾಜರಾಜೇಶ್ವರಿ ವಿಧಾನಸಭಾ ಕ್ಷೇತ್ರ

ಶ್ರೀ ರಿಜ್ವಾನ್ ಹರ್ಷದ್
ಮಾನ್ಯ ಶಾಸಕರು, ಶಿವಾಜಿನಗರ ವಿಧಾನಸಭಾ ಕ್ಷೇತ್ರ

3 ಐತಿಹಾಸಿಕ ಸ್ಥಳಗಳು ಮತ್ತು 4 ಗಡಿ ಗೋಪುರಗಳಿಂದ ಆಗಮಿಸುವ

ಪುರಜ್ಯೋತಿಗೆ ಚಾಲನೆ

ಬೆಳಿಗ್ಗೆ 7.00 ರಿಂದ

ಹುತ್ರಿದುರ್ಗ, ಕುಣಿಗಲ್ ತಾಲ್ಲೂಕು	**ಡಾ. ಜಿ. ಪರಮೇಶ್ವರ** ಮಾನ್ಯ ಗೃಹ ಸಚಿವರು ಕರ್ನಾಟಕ ಸರ್ಕಾರ
ಆವತಿ, ದೇವನಹಳ್ಳಿ ತಾಲ್ಲೂಕು	**ಶ್ರೀ ಕೆ.ಹೆಚ್. ಮುನಿಯಪ್ಪ** ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು, ಕರ್ನಾಟಕ ಸರ್ಕಾರ
ಕೆಂಪಾಪುರ, ಮಾಗಡಿ ತಾಲ್ಲೂಕು	**ಶ್ರೀ ರಾಮಲಿಂಗಾರೆಡ್ಡಿ** ಮಾನ್ಯ ಸಾರಿಗೆ ಹಾಗೂ ಮುಜರಾಯಿ ಸಚಿವರು ಕರ್ನಾಟಕ ಸರ್ಕಾರ ಮತ್ತು ಉಪಾಧ್ಯಕ್ಷರು, ನಾಡಪ್ರಭು ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರ
ಹಲಸೂರು ಕೆರೆ ಗಡಿ ಗೋಪುರ	**ಶ್ರೀ ಕೆ.ಜೆ. ಜಾರ್ಜ್** ಮಾನ್ಯ ಇಂಧನ ಸಚಿವರು ಕರ್ನಾಟಕ ಸರ್ಕಾರ
ಲಾಲ್‌ಬಾಗ್ ಗಡಿ ಗೋಪುರ	**ಶ್ರೀ ದಿನೇಶ್ ಗುಂಡೂರಾವ್** ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ
ಮೇಖ್ರಿ ವೃತ್ತ ಗಡಿ ಗೋಪುರ	**ಶ್ರೀ ಸುರೇಶ್. ಬಿ.ಎಸ್.** ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು, ಕರ್ನಾಟಕ ಸರ್ಕಾರ
ಕೆಂಪಾಂಬುಧಿ ಕೆರೆ ಗಡಿ ಗೋಪುರ	**ಶ್ರೀ ಬಿ.ಜಡ್. ಜಮೀರ್ ಅಹ್ಮದ್ ಖಾನ್** ಮಾನ್ಯ ವಸತಿ, ವಕ್ಫ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು, ಕರ್ನಾಟಕ ಸರ್ಕಾರ

ಈ ಸಮಾರಂಭದಲ್ಲಿ ಮಾನ್ಯ ಸಚಿವರುಗಳು, ಮಾನ್ಯ ಸಂಸದರು (ಲೋಕಸಭೆ/ರಾಜ್ಯಸಭೆ), ಮಾನ್ಯ ಶಾಸಕರುಗಳು (ವಿಧಾನಸಭೆ / ವಿಧಾನ ಪರಿಷತ್), ನಿಗಮ ಮಂಡಳಿಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ಸ್ಥಳೀಯ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳು ವಿಶೇಷ ಆಹ್ವಾನಿತರಾಗಿ ಉಪಸ್ಥಿತರಿರುವರು.

ಸರ್ವಜನರ ಒಳಿತಿಗಾಗಿ ನಾಡುಕಟ್ಟಿದ ನಾಡಪ್ರಭು ಕೆಂಪೇಗೌಡರು - ನಾಡ ಪ್ರಭುವಿಗೆ ನಮನ, ಬನ್ನಿ, ಪಾಲ್ಗೊಳ್ಳಿ.

ತಮಗೆ ಆದರದ ಸ್ವಾಗತ

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿ ಸಾಧಿಸಲು ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಭೂಸ್ವಾಧೀನ ವಿರೋಧಿಸಿ ಇಂದಿನಿಂದ ಅಹೋರಾತ್ರಿ ಧರಣಿ

ವಾರದೊಳಗೆ ಅಧಿಸೂಚನೆ ಕೈಬಿಡಿ
ಸಂಯುಕ್ತ ಹೋರಾಟ–ಕರ್ನಾಟಕ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿ ವ್ಯಾಪ್ತಿಯಲ್ಲಿ ಭೂಸ್ವಾಧೀನಕ್ಕೆ ಸಂಬಂಧಿಸಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಹೊರಡಿಸಿರುವ ಅಂತಿಮ ಅಧಿಸೂಚನೆ ರದ್ದುಪಡಿಸುವಂತೆ ಆಗ್ರಹಿಸಿ ಜೂನ್ 27ರಿಂದ ಸ್ವಾತಂತ್ರ್ಯ ಉದ್ಯಾನದಲ್ಲಿ ಅಹೋರಾತ್ರಿ ಧರಣಿ ಹಮ್ಮಿಕೊಳ್ಳಲಾಗುವುದು ಎಂದು ಸಂಯುಕ್ತ ಹೋರಾಟ–ಕರ್ನಾಟಕ ತಿಳಿಸಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಭೇಟಿಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಯುಕ್ತ ಹೋರಾಟ–ಕರ್ನಾಟಕದ ಸಂಚಾಲಕ ಬಡಗಲಪುರ ನಾಗೇಂದ್ರ, 'ಭೂಸ್ವಾಧೀನ ಪ್ರಕ್ರಿಯೆಯನ್ನು ವಿರೋಧಿಸಿ ಜೂನ್ 25ರಂದು ನಡೆದ ದೇವನಹಳ್ಳಿ ಚಲೋ ಹೋರಾಟವನ್ನು ರಾಜ್ಯ ಸರ್ಕಾರ ಹತ್ತಿಕ್ಕುವ ಪ್ರಯತ್ನ ಮಾಡಿತು. ಪ್ರತಿಭಟನಾ ಸ್ಥಳದಲ್ಲಿ ನೂರಾರು ಜನ ಪೊಲೀಸರನ್ನು ನಿಯೋಜಿಸಲಾಗಿತ್ತು. ವಾಹನಗಳು ತೆರಳದಂತೆ ಬ್ಯಾರಿಕೇಡ್‌ಗಳನ್ನು ಹಾಕಲಾಗಿತ್ತು. ಪ್ರತಿಭಟನಾ ಸ್ಥಳಕ್ಕೆ ನುಗ್ಗಿದ ಪೊಲೀಸರು, ಸಂಯುಕ್ತ ಹೋರಾಟ ಕರ್ನಾಟಕದ ಪದಾಧಿಕಾರಿಗಳು ಸೇರಿದಂತೆ ರೈತರ ಮೇಲೆ ಲಾಠಿ ಚಾರ್ಜ್ ಮಾಡಿದರು' ಎಂದು ಆರೋಪಿಸಿದರು.

ಚನ್ನರಾಯಪಟ್ಟಣ ಸೇರಿದಂತೆ 13 ಹಳ್ಳಿಗಳ 1,777 ಫಲವತ್ತಾದ ಜಮೀನನ್ನು ಕೈಗಾರಿಕಾ ಪ್ರದೇಶಾಭಿವೃದ್ಧಿ ಹೆಸರಿನಲ್ಲಿ ಭೂಸ್ವಾಧೀನಕ್ಕೆ ಬಿಜೆಪಿ ಸರ್ಕಾರ ಮುಂದಾಗಿತ್ತು. ಈ ಭೂಸ್ವಾಧೀನ ವಿರೋಧಿಸಿ ನಡೆದ ಹೋರಾಟದಲ್ಲಿ ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಭಾಗವಹಿಸಿ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಈ ಭೂಸ್ವಾಧೀನ ಪ್ರಕ್ರಿಯೆಯನ್ನು ರದ್ದುಪಡಿಸುವ ಭರವಸೆ ನೀಡಿದ್ದರು. ಆದರೆ, ಈಗ ಈ ಭೂಸ್ವಾಧೀನ ಪ್ರಕ್ರಿಯೆಗೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರವೇ ಅಂತಿಮ ಅಧಿಸೂಚನೆ ಹೊರಡಿಸಿರುವುದು ಖಂಡನೀಯ. ಒಂದು ವಾರದೊಳಗೆ ಈ ಭೂಸ್ವಾಧೀನ ಪ್ರಕ್ರಿಯೆಯ ಅಂತಿಮ ಅಧಿಸೂಚನೆಯನ್ನು ರದ್ದುಪಡಿಸಬೇಕು' ಎಂದು ಆಗ್ರಹಿಸಿದರು.

ಸಂಯುಕ್ತ ಹೋರಾಟ–ಕರ್ನಾಟಕದ ವಿ. ನಾಗರಾಜ್, ದೇವಿ, ಮಹೇಶ್ ಪ್ರಭು, ಟಿ. ಯಶವಂತ, ನೂರ್ ಶ್ರೀಧರ್ ಸುದ್ದಿಗೋಷ್ಠಿಯಲ್ಲಿದ್ದರು.

ಕೆಐಎಡಿಬಿ ಎಂಬ ದುಷ್ಟರ ಕೂಟ: ಚುಕ್ಕಿ ನಂಜುಂಡಸ್ವಾಮಿ

ಕೆಐಎಡಿಬಿ ಎಂಬ ದುಷ್ಟರ ಕೂಟದಲ್ಲಿ ರಿಯಲ್ ಎಸ್ಟೇಟ್ ಏಜೆಂಟರೇ ತುಂಬಿದ್ದಾರೆ. ಕೆಐಎಡಿಬಿ ಹೆಸರಿನಲ್ಲಿ ಎಷ್ಟು ಕೃಷಿ ಜಮೀನು ಇದೆ? ಬಳಕೆಯಾಗಿರುವ ಜಮೀನಿನ ವಿವರಗಳು, ಬಳಕೆಯಾದ ಜಮೀನಿನ ವಿವರಗಳನ್ನು ಬಹಿರಂಗಪಡಿಸಲು ರಾಜ್ಯ ಸರ್ಕಾರ ಶ್ವೇತಪತ್ರವನ್ನು ಹೊರಡಿಸಬೇಕು' ಎಂದು ರೈತ ನಾಯಕಿ ಚುಕ್ಕಿ ನಂಜುಂಡಸ್ವಾಮಿ ಆಗ್ರಹಿಸಿದರು. 'ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರ ಖಾತೆಯನ್ನು ಕಾರ್ಪೊರೇಟ್ ಕಾಂಟ್ರ್ಯಾಕ್ಟರ್ ಸಚಿವರೆಂದು ಬದಲಿಸಿಕೊಳ್ಳಬೇಕು. 'ರಾಜ್ಯದಲ್ಲಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಅನೇಕ ದೇಶಗಳಿಗೆ ಹೋಗಿ ಒಪ್ಪಂದಗಳನ್ನು ಮಾಡಿಕೊಂಡು ಬಂದಿದ್ದೇನೆ. ಈಗ ನೀವು ಭೂಮಿ ನೀಡುವುದಿಲ್ಲ ಎಂದರೆ ಹೇಗೆ' ಎಂದು ಎಂ.ಬಿ. ಪಾಟೀಲರು ರೈತರಿಗೆ ಪ್ರಶ್ನೆ ಮಾಡುತ್ತಿದ್ದಾರೆ' ಎಂದು ದೂರಿದರು.

ಜುಲೈ 4ರಂದು ರೈತರ ಜತೆ ಮುಖ್ಯಮಂತ್ರಿ ಸಭೆ

ಜುಲೈ 4ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ದೇವನಹಳ್ಳಿ ಚನ್ನರಾಯಪಟ್ಟಣ ರೈತರ ಹೋರಾಟಗಾರರು ಮತ್ತು ಸಂಯುಕ್ತ ಹೋರಾಟ ವೇದಿಕೆ ಮುಖಂಡರ ಜತೆ ಸಭೆ ನಡೆಸಲಿದ್ದಾರೆ ಎಂದು ಮುಖ್ಯಮಂತ್ರಿ ಸಚಿವಾಲಯದ ಪ್ರಕಟಣೆ ತಿಳಿಸಿದೆ. ತಮ್ಮನ್ನು ಭೇಟಿ ಮಾಡಿದ ರೈತ ಮುಖಂಡರ ಜತೆ ಚರ್ಚಿಸಿದ ಮುಖ್ಯಮಂತ್ರಿಯವರು ಜುಲೈ 4ರ ಬೆಳಿಗ್ಗೆ 11 ಗಂಟೆಗೆ ರೈತರ ಬೇಡಿಕೆ ಮತ್ತು ಸಮಸ್ಯೆಗಳ ಕುರಿತು ಸಮಗ್ರ ಸಭೆ ನಡೆಸುವುದಾಗಿ ಭರವಸೆ ನೀಡಿದರು.

ಭೂ ಸ್ವಾಧೀನ ಪ್ರಕ್ರಿಯೆ ಕೈಬಿಡಬೇಕು. ಹೋರಾಟಗಾರರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಸಿಪಿಐ (ಎಂ) ಸದಸ್ಯರು ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು. ಪ್ರಜಾವಾಣಿ ಚಿತ್ರ.

ಹೋರಾಟಗಾರರ ಬಂಧನ ವಿರೋಧಿಸಿ ಸಿಪಿಎಂ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯಲ್ಲಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಬೇಕು. ಬಂಧಿಸಿರುವ ಹೋರಾಟಗಾರರನ್ನು ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಸಿಪಿಐ (ಎಂ) ಬೆಂಗಳೂರು ಉತ್ತರ ಮತ್ತು ದಕ್ಷಿಣ ಘಟಕಗಳು ಗುರುವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದವು.

ಬಲವಂತದ ಭೂಸ್ವಾಧೀನವನ್ನು ವಿರೋಧಿಸಿ ದೇವನಹಳ್ಳಿಯ 13 ಗ್ರಾಮಗಳ ರೈತರು 1177 ದಿನಗಳಿಂದ ವಿವಿಧ ಮಾದರಿಯಲ್ಲಿ ಶಾಂತಿಯುತವಾಗಿ ಹೋರಾಟ ಮಾಡುತ್ತಿದ್ದರು. ಸರ್ಕಾರ ಕಿವಿಕೊಡದ ಕಾರಣ ಬುಧವಾರ ದೇವನಹಳ್ಳಿ ಸಂತೇ ಮೈದಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಸರ್ಕಾರವು ಪೊಲೀಸರ ಮೂಲಕ ಪ್ರತಿಭಟನಕಾರರನ್ನು ಹತ್ತಿಕ್ಕುತ್ತಿದೆ ಎಂದು ಸಿಪಿಐ(ಎಂ) ಮುಖಂಡರು ಆರೋಪಿಸಿದರು.

ರೈತರ ಪ್ರತಿಭಟನೆ ಬೆಂಬಲಿಸಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಸಾವಿರಾರು ಜನರು ಸೇರಿದ್ದರು. ಇಡೀ ದಿನ ಶಾಂತಿಯುತವಾಗಿ ಹೋರಾಟ ನಡೆಯುತ್ತಿತ್ತು. ಅನಿರ್ದಿಷ್ಟಾವಧಿ ಹೋರಾಟ ಮಾಡಲು ನಿರ್ಧರಿಸಲಾಗಿತ್ತು. ಸಂಜೆ ಏಕಾಏಕಿ ನುಗ್ಗಿದ ಪೊಲೀಸರು ಪ್ರತಿಭಟನಕಾರರನ್ನು ಎಳೆದಾಡಿ ಬಂಧಿಸಿದ್ದಾರೆ ಎಂದು ತಿಳಿಸಿದರು.

ಪ್ರತಿಭಟನೆಯಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು. ಬಸವರಾಜ್, ಕೆ. ಮಹಾಂತೇಶ್, ಗೋಪಾಲಕೃಷ್ಣ ಅರಳಹಳ್ಳಿ, ರಾಜ್ಯ ಸಮಿತಿ ಸದಸ್ಯರಾದ ಪ್ರತಾಪ್ ಸಿಂಹ, ಬಾಲಕೃಷ್ಣ ಶೆಟ್ಟಿ, ಗೌರಮ್ಮ, ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯದರ್ಶಿ ಟಿ. ಯಶವಂತ ಸಹಿತ ಅನೇಕರು ಮಾತನಾಡಿದರು.

ಹೋರಾಟಗಾರರ ಬಂಧನ: ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಯುಕ್ತ ಹೋರಾಟ ಕರ್ನಾಟಕ ಸಂಘಟನೆ ನೇತೃತ್ವದಲ್ಲಿ ದೇವನಹಳ್ಳಿ ತಾಲ್ಲೂಕು, ಚನ್ನರಾಯಪಟ್ಟಣ ಹೋಬಳಿಯಲ್ಲಿ ಭೂ ಸ್ವಾಧೀನದ ವಿರುದ್ಧ ನಡೆಯುತ್ತಿದ್ದ ಶಾಂತಿಯುತ ಪ್ರತಿಭಟನೆಯನ್ನು ಹತ್ತಿಕ್ಕಿ ಹೋರಾಟಗಾರರನ್ನು ಬಂಧಿಸಿರುವುದನ್ನು 'ಜಾಗೃತ ನಾಗರಿಕರು, ಕರ್ನಾಟಕ' ಖಂಡಿಸಿದೆ.

ಕೆ. ಮರುಳಸಿದ್ದಪ್ಪ, ಎಸ್. ಜಿ.ಸಿದ್ದರಾಮಯ್ಯ, ಜಿ ರಾಮಕೃಷ್ಣ, ವಿಜಯಾ, ವಿಮಲಾ.ಕೆ.ಎಸ್., ಬಿ.ಶ್ರೀಪಾದ ಭಟ್, ಟಿ.ಸುರೇಂದ್ರ ರಾವ್, ಮೀನಾಕ್ಷಿ ಬಾಳಿ, ವಸುಂಧರಾ ಭೂಪತಿ, ಎನ್.ಗಾಯತ್ರಿ, ಬಂಜಗೆರೆ ಜಯಪ್ರಕಾಶ್, ಜಾಣಗೆರೆ ವೆಂಕಟರಾಮಯ್ಯ, ಮಾವಳ್ಳಿ ಶಂಕರ್ ಈ ಬಗ್ಗೆ ಹೇಳಿಕೆ ನೀಡಿದ್ದು, 'ಹೋರಾಟಗಾರರನ್ನು ಕೂಡಲೇ ಬಿಡುಗಡೆ ಮಾಡಬೇಕು' ಎಂದು ಆಗ್ರಹಿಸಿದ್ದಾರೆ. ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1,177 ಎಕರೆ ಜಮೀನು ಉಳಿಸಿಕೊಳ್ಳಲು 1,181 ದಿನಗಳಿಂದ ಪ್ರಜಾತಾಂತ್ರಿಕ ಹೋರಾಟ ಮಾಡುತ್ತಿದ್ದರು. ಈ ಹೋರಾಟವನ್ನು ಬೆಂಬಲಿಸಿ ಬುಧವಾರ ರಾಜ್ಯದ ವಿವಿಧೆಡೆಯ ಸಾಮಾಜಿಕ ಕಾರ್ಯಕರ್ತರು ಪಾಲ್ಗೊಂಡಿದ್ದರು.

ಸಿಪಿಎಂ ಖಂಡನೆ: ಭೂ ಸ್ವಾಧೀನ ವಿರೋಧಿ ಹೋರಾಟಗಾರರನ್ನು ಬಂಧಿಸಿರುವುದನ್ನು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಖಂಡಿಸಿದೆ. ಜೂನ್ 26ರಂದು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಿದೆ.

ಭೂಸ್ವಾಧೀನ ನೀತಿಗಳನ್ನು ಮುಂದುವರಿಸಬಾರದು ಎಂದು ಸಿಪಿಎಂ ರಾಜ್ಯ ಕಾರ್ಯದರ್ಶಿ ಪ್ರಕಾಶ್ ಕೆ. ಒತ್ತಾಯಿಸಿದ್ದಾರೆ.



ಗ್ರಾಹಕ ಸ್ನೇಹಿ, ಪ್ರಗತಿಯ ದ್ಯೋತಕ ಹಾಗೂ ಶತಮಾನ ಕಂಡ ಬ್ಯಾಂಕ್

ದಿ ಬೆಂಗಳೂರು ಸಿಟಿ ಕೊ ಆಪರೇಟಿವ್ ಬ್ಯಾಂಕ್

20ನೇ ಶತಮಾನದಲ್ಲಿ ಭಾರತ ದೇಶ ಎರಡು ಮಹಾನ್ ಚಳುವಳಿಗಳನ್ನು ಕಂಡಿದೆ. ಒಂದು ಚಳುವಳಿಯು ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಸಾಗಿ ಅದು ದೇಶವನ್ನು ಪರತಂತ್ರ ವ್ಯವಸ್ಥೆಯಿಂದ ಮುಕ್ತಿಗೊಳಿಸಿದ ಸ್ವಾತಂತ್ರ್ಯ ಸಂಗ್ರಾಮ ಚಳುವಳಿಯಾದರೆ, ಮತ್ತೊಂದು ಬಂಡವಾಳಶಾಯಿಗಳ ಹಿಡಿತದಿಂದ ಸಾಮಾನ್ಯ ಜನರನ್ನು ಮುಕ್ತಿಗೊಳಿಸಿದ ಸಹಕಾರ ಚಳುವಳಿಯಾಗಿದೆ.

ಭಾರತ ದೇಶದಲ್ಲಿ ಸಹಕಾರ ಚಳುವಳಿಯು ಸಹಕಾರ ಸಂಘಗಳ ಕಾಯಿದೆ 1904, ಜಾರಿಯಾಗುವುದರ ಮೂಲಕ ಪ್ರಾರಂಭವಾಗಿದ್ದು, ಸಹಕಾರ ಚಳುವಳಿಯ ಆರಂಭದ ವರ್ಷದಲ್ಲಿ ಅಂದರೆ 1905 ರಲ್ಲಿ ನಮ್ಮ ಬ್ಯಾಂಕು 'ಪತ್ತಿನ ಸಹಕಾರ ಸಂಘ'ವಾಗಿ ಆರಂಭಗೊಂಡು ನಂತರ ದಿನಾಂಕ 06.04.1907 ರಂದು 'ಪಟ್ಟಣ ಸಹಕಾರ ಬ್ಯಾಂಕ್' ಆಗಿ ರೂಪಾಂತರಗೊಂಡಿದೆ. ಅಂದಿನ ಮೈಸೂರು ಸಂಸ್ಥಾನದ ಪ್ರಪ್ರಥಮ ಪಟ್ಟಣ ಸಹಕಾರ ಬ್ಯಾಂಕ್ ಎಂಬ ಕೀರ್ತಿ ಗಳಿಸಿದೆ.

ಸಮಾಜದ ಎಲ್ಲ ವರ್ಗಗಳ ಜನರಲ್ಲಿ ಮಿತವ್ಯಯ ಮತ್ತು ಉಳಿತಾಯ ಮನೋಭಾವವನ್ನು ಉತ್ತೇಜಿಸಲು ಮತ್ತು ಅವರ ಆರ್ಥಿಕ ಅವಶ್ಯಕತೆಗಳಿಗೆ ಸ್ಪಂದಿಸಲು ಹಾಗೂ ಲೇವಾದೇವಿಗಾರರ ಬಿಗಿಮುಷ್ಟಿಯಿಂದ ಸಾಮಾನ್ಯ ಜನರನ್ನು ಪಾರು ಮಾಡಲು ಸಹಕಾರ ತತ್ವಗಳ ಆಧಾರದ ಮೇಲೆ 'ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್' ಅನ್ನು ಸ್ಥಾಪಿಸಲಾಗಿದೆ.

ಸಂಸ್ಥಾಪಕ ಅಧ್ಯಕ್ಷ ಕೆ. ರಾಮಸ್ವಾಮಯ್ಯ: ಸನ್ಮಾನ್ಯ ಶ್ರೀ. ಕೆ. ರಾಮಸ್ವಾಮಯ್ಯ ನವರು ಸಂಸ್ಥಾಪಕ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕು 1907ರಲ್ಲಿ 150 ಸದಸ್ಯರುಗಳಿಂದ ಷೇರು ಬಂಡವಾಳ ₹ 2,727 ಮತ್ತು ಠೇವಣಿ ₹ 2,265 ಸಂಗ್ರಹಿಸುವುದರ ಮೂಲಕ ₹ 4,036 ಸಾಲ ನೀಡಿದೆ. ಪ್ರಾರಂಭಿಕ ವರ್ಷದಲ್ಲಿ ₹ 156 ನಿವ್ವಳ ಲಾಭ ಗಳಿಸಿ, ಸದಸ್ಯರಿಗೆ ಶೇಕಡ 13.02 ರಂತೆ ಡಿವಿಡೆಂಡ್ ಹಂಚಿದೆ.

ಗ್ರಾಹಕ ಸ್ನೇಹಿ: ಬ್ಯಾಂಕ್ ಆರಂಭಿಕ ದಿನದಿಂದಲೂ ಜನಸಾಮಾನ್ಯರನ್ನು ಗಮನದಲ್ಲಿರಿಸಿಕೊಂಡು ವ್ಯವಹಾರ ನಡೆಸುತ್ತಿದ್ದು, ಪ್ರಾರಂಭಿಕ ವರ್ಷಗಳಲ್ಲಿ ಸದಸ್ಯರ ಅನುಕೂಲಕ್ಕಾಗಿ ಪ್ರತಿ ಮಾಸ 1 ರೂ.ನಂತೆ ಕಂತುಗಳಲ್ಲಿ ಷೇರು ಸಂಗ್ರಹಿಸಿದೆ. ಸೇವೆಯೇ ಗುರಿಯಾಗಿಸಿಕೊಂಡು ಬ್ಯಾಂಕ್ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುವ ಮೂಲಕ ಗ್ರಾಹಕ ಸ್ನೇಹಿಯಾಗಿ ಷೇರು ಸಂಗ್ರಹಣೆ, ನಿಧಿ ಸಂಗ್ರಹಣೆ, ಠೇವಣಿ ಸಂಗ್ರಹಣೆ, ಸಾಲ ನೀಡಿಕೆ ಮತ್ತು ಲಾಭ ಗಳಿಕೆಯಲ್ಲಿ ಉತ್ತಮ ಸಾಧನೆ ಮಾಡಿದೆ. 2024-25ನೇ ಸಾಲಿನಲ್ಲೂ ಕರ್ನಾಟಕ ರಾಜ್ಯದ 'ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕಾಗಿ' ಮುಂದುವರಿದಿದೆ.

ಶಾಖೆಗಳು: ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಸದಸ್ಯರುಗಳಿಗೆ, ಠೇವಣಿದಾರರುಗಳಿಗೆ ಮತ್ತು ಗ್ರಾಹಕರುಗಳಿಗೆ ಅವರ ವಾಸಸ್ಥಳದ ಸಮೀಪದಲ್ಲಿ ಬ್ಯಾಂಕಿಂಗ್ ಸೌಲಭ್ಯ ಒದಗಿಸುವ ಉದ್ದೇಶದಿಂದ ಬೆಂಗಳೂರು ನಗರದ ಪ್ರತಿಷ್ಠಿತ ಬಡಾವಣೆಗಳಾದ ಚಾಮರಾಜಪೇಟೆ, ವಿಜಯನಗರ, ಜಯನಗರ, ಇಂದಿರಾನಗರ, ಚಾಮರಾಜಪೇಟೆ ಪಶ್ಚಿಮ, ಶಾಂತಿನಗರ, ಮಹಾಲಕ್ಷ್ಮೀಪುರ, ಸಂಜಯನಗರ, ಪದ್ಮನಾಭನಗರ, ಕೋರಮಂಗಲ, ಆವಲಹಳ್ಳಿ, ಆರ್.ಟಿ.ನಗರ, ಜ್ಞಾನಜ್ಯೋತಿನಗರ, ಹೆಚ್.ಆರ್.ಬಿ.ಆರ್ ಲೇಔಟ್, ಕೃಷ್ಣರಾಜಪುರ, ಟಿ.ದಾಸರಹಳ್ಳಿ, ಹೊಸೂರು ರಸ್ತೆಯ ಎಲೆಕ್ಟ್ರಾನಿಕ್ ಸಿಟಿ, ಯಲಹಂಕ, ಅಂಜನಾನಗರ ಮತ್ತು ಕೋಣನಕುಂಟೆಯಲ್ಲಿ ಶಾಖೆಗಳನ್ನು ಹೊಂದಿದೆ. ಬೆಂಗಳೂರು ನಗರದಲ್ಲಿ ಒಟ್ಟು 20 ಶಾಖೆಗಳನ್ನು ಹೊಂದಿರುವ ಬ್ಯಾಂಕ್ ರೇಷ್ಮೆನಗರ ರಾಮನಗರದಲ್ಲಿ ಒಂದು ಶಾಖೆ ಮತ್ತು ಸಾಂಸ್ಕೃತಿಕನಗರ ಮೈಸೂರಿನ ಕುವೆಂಪು ನಗರದಲ್ಲಿ ಒಂದು ಶಾಖೆಯನ್ನು ಸ್ಥಾಪಿಸಿ ಉತ್ತಮ ಬ್ಯಾಂಕಿಂಗ್ ಸೌಲಭ್ಯವನ್ನು ನೀಡುತ್ತಾ ಬಂದಿದೆ.

ಬ್ಯಾಂಕ್ ಗ್ರಾಹಕರಿಗೆ ಉತ್ತಮ ಬ್ಯಾಂಕಿಂಗ್ ಸೌಲಭ್ಯ ನೀಡುವುದರೊಂದಿಗೆ ಸಮಾಜದ ಒಳತಿಗಾಗಿ ದಾನ, ಧರ್ಮ, ನೀತಿಯನ್ನು ಎಂದಿಗೂ ಬಿಡದಂತೆ ಪಾಲಿಸುತ್ತಾ ಬಂದಿದೆ.

ಸಾಧನೆಗೆ ಸಂದ ಗೌರವಗಳು

- 1926, 1927 ಮತ್ತು 1928ರ ಸತತ ಮೂರು ವರ್ಷ ಬ್ಯಾಂಕಿನ ಸಾಧನೆ ಗುರುತಿಸಿದ ಅಂದಿನ ಮೈಸೂರು ಸಂಸ್ಥಾನದ ಯುವರಾಜ ಶ್ರೀ ಕಂಠೀರವ ನರಸಿಂಹರಾಜ ಒಡೆಯರ್ ಬಹದ್ದೂರ್ ರವರು, ಮೈಸೂರು ಸಂಸ್ಥಾನದ 'ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್' ಪ್ರಶಸ್ತಿ ಹಾಗೂ ಪರ್ಯಾಯ ಪಾರಿತೋಷಕ ಪ್ರಧಾನ ಮಾಡಿರುತ್ತಾರೆ.
- 2001-2002 ಸಾಲಿನಿಂದಲೂ ಸತತವಾಗಿ ರಾಜ್ಯದ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕೆಂಬ ಹಿರಿಮೆಗೆ ಪಾತ್ರವಾಗಿದೆ.
- ಕರ್ನಾಟಕ ಸರ್ಕಾರ ಸಹ ರಾಜ್ಯದ 'ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್' ಎಂಬ ಪ್ರಶಸ್ತಿ ಪತ್ರ ಮತ್ತು ನೆನಪಿನ ಕಾಣಿಕೆ ನೀಡಿ ಗೌರವಿಸಿದೆ.
- ರಾಷ್ಟ್ರೀಯ ಪಟ್ಟಣ ಬ್ಯಾಂಕುಗಳ ಮಹಾಮಂಡಳಿ ಮತ್ತು ಕರ್ನಾಟಕ ರಾಜ್ಯ ಪಟ್ಟಣ ಸಹಕಾರ ಬ್ಯಾಂಕುಗಳ ಮಹಾಮಂಡಳಿ ಶತಮಾನ ಸೇವೆ ಸಲ್ಲಿಸಿದ ಬ್ಯಾಂಕೆಂದು 'ಅಂತರಾಷ್ಟ್ರೀಯ ಸಹಕಾರ ವರ್ಷ 2012' ರಲ್ಲಿ ಸನ್ಮಾನಿಸಿವೆ.

'ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್' ಪ್ರಗತಿಯ ವಿವರ

ಹಣಕಾಸು ವರ್ಷಾಂತ್ಯ	ಸದಸ್ಯರ ಸಂಖ್ಯೆ	ಹಂಚಿಕೆ ಬಂಡವಾಳ	ಮೀಸಲು ಮತ್ತು ಇತರ ನಿಧಿಗಳು	ಠೇವಣಿಗಳು	ಸಾಲಗಳು ಮತ್ತು ಮುಂಗಡಗಳು	ನಿವ್ವಳ ಲಾಭ
1907	156	2,727	2,265	2,265	2,265	156
2017	69759	82,33,72,992	124,80,59,361	1755,06,82,964	1233,27,86,123	18,64,75,179
2024	80048	95,07,66,852	495,80,64,782	2096,22,55,136	1333,43,22,257	28,50,29,761
2025	81330	95,94,58,332	525,48,99,645	2158,88,87,918	1381,51,62,689	28,77,68,538

ಬ್ಯಾಂಕಿನ ಬಗ್ಗೆ ಇನ್ನಿತರ ಅಂಶಗಳು

- ಬ್ಯಾಂಕು ಪ್ರಾರಂಭಿಕ ವರ್ಷದಿಂದಲೂ 'A' ಆಡಿಟ್ ವರ್ಗೀಕರಣದಲ್ಲಿ ಮುಂದುವರಿದಿದೆ.
- ದಿನಾಂಕ 31.03.2025 ಕ್ಕೆ ಬ್ಯಾಂಕಿನ CRAR (Capital to Risk Assets Ratio) ಶೇಕಡ 24.72 ರಷ್ಟಿದೆ.
- ದಿನಾಂಕ 31.03.2025 ಕ್ಕೆ ಬ್ಯಾಂಕಿನ ನಿವ್ವಳ ಅನುತ್ಪಾದಕ ಆಸ್ತಿಗಳು ಶೇಕಡ ಶೂನ್ಯ ಇರುತ್ತದೆ.
- ಬ್ಯಾಂಕು ತನ್ನ ಕಾರ್ಯ ಕ್ಷೇತ್ರವನ್ನು ರಾಜ್ಯಾದ್ಯಂತ ವಿಸ್ತರಿಸಿ ಭಾರತೀಯ ರಿಸರ್ವ್ ಬ್ಯಾಂಕ್‌ನವರ ಮತ್ತು ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯಿಂದ ಅನುಮೋದನೆ ಪಡೆದಿದೆ.
- ಮುಂಬರುವ ವರ್ಷಗಳಲ್ಲಿ ರಾಜ್ಯದ ಎಲ್ಲ ಜಿಲ್ಲಾ ಮಟ್ಟದಲ್ಲಿ ಬ್ಯಾಂಕಿನ ಶಾಖೆಗಳನ್ನು ಪ್ರಾರಂಭಿಸಲು ಯೋಜನೆ ಹಾಕಿಕೊಂಡಿದೆ.
- ಬ್ಯಾಂಕಿನ ವ್ಯವಹಾರಗಳನ್ನು ಕೋರ್ ಬ್ಯಾಂಕಿಂಗ್ ವ್ಯವಸ್ಥೆ, Any Branch Banking ಸೇವೆ, SMS ಬ್ಯಾಂಕಿಂಗ್ ಸೇವೆ, ವ್ಯಾಪಾರಸ್ಥ ಗ್ರಾಹಕರಿಗೆ POS ಸೌಲಭ್ಯ, RTGS ಮೂಲಕ ಹಣ ವರ್ಗಾವಣೆ ಸೌಲಭ್ಯ, ಕನಿಷ್ಠ ಕಮಿಷನ್ ದರದಲ್ಲಿ DD/Pay Order ಸೌಲಭ್ಯ, ಹಿರಿಯ ನಾಗರೀಕರಿಗೆ ಉಚಿತ ಚೆಕ್ಕು ಪುಸ್ತಕ ಮತ್ತು DD ಸೌಲಭ್ಯ, Rupay ATM ಕಾರ್ಡ್ ಸೌಲಭ್ಯ, Mobile Banking, UPI ಪಾವತಿ ಸೌಲಭ್ಯ ಒದಗಿಸಿದೆ.



'ಪ್ರಾರಂಭದಿಂದಲೂ ಜನ ಸಾಮಾನ್ಯರ ಆಶೋತ್ತರಗಳನ್ನು ಗಮನಿಸಿ ನಿವೇಶನ ಖರೀದಿ, ಗೃಹ ನಿರ್ಮಾಣ, ಉನ್ನತ ವಿದ್ಯಾಭ್ಯಾಸ, ಸಣ್ಣ ಕೈಗಾರಿಕೆ, ವ್ಯಾಪಾರ ಅಭಿವೃದ್ಧಿ ಉದ್ದೇಶಗಳಿಗೆ ಬ್ಯಾಂಕು ಸಾಲ ಸೌಲಭ್ಯ ನೀಡುವ ಮೂಲಕ ಸದಸ್ಯರುಗಳ ಆರ್ಥಿಕ ಅಭಿವೃದ್ಧಿಗೆ ಕಾರಣವಾಗಿದೆ.

ಆವಲಹಳ್ಳಿ ಚಂದ್ರಪ್ಪ.ಆರ್, ಅಧ್ಯಕ್ಷರು

'ಉತ್ತಮ ಗ್ರಾಹಕ ಸೇವೆ, ಠೇವಣಿದಾರರ ಹಿತಾಸಕ್ತಿಗೆ ಭಂಗವಾಗದಂತೆ ಕಾರ್ಯವೆಸಗುವ ಮೂಲಕ ಪ್ರಗತಿ ಕಾಯ್ದುಕೊಳ್ಳುವುದು ನಮ್ಮ ಧ್ಯೇಯ.

ಡಾ. ದೇವರಾಜ್ ಟಿ.ಎಂ., ಉಪಾಧ್ಯಕ್ಷರು

ಷೆಡ್ಯೂಲ್ಡ್ ಬ್ಯಾಂಕ್ ಸ್ಥಾನಮಾನ ಪಡೆಯಲು ಯೋಜನೆ



ಬ್ಯಾಂಕು ಮುಂಬರುವ ಐದು ವರ್ಷಗಳಲ್ಲಿ ತನ್ನ ಷೇರು ಮತ್ತು ನಿಧಿಗಳನ್ನು ₹ 900 ಕೋಟಿಗೆ, ಠೇವಣಿಯನ್ನು ₹ 4,000 ಕೋಟಿಗೆ ಹಾಗೂ ಸಾಲ ಮತ್ತು ಮುಂಗಡಗಳನ್ನು ₹ 3,000 ಕೋಟಿಗೆ ಹೆಚ್ಚಿಸಲು ನಿರ್ಧರಿಸಿದೆ. ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಶಾಖೆ ತೆರೆಯಲು ಮತ್ತು ಷೆಡ್ಯೂಲ್ಡ್ ಬ್ಯಾಂಕಿನ ಸ್ಥಾನಮಾನ ಪಡೆಯಲು ಯೋಜನೆ ಹಾಕಿಕೊಂಡಿದೆ ಎಂದು ಪ್ರಧಾನ ವ್ಯವಸ್ಥಾಪಕರು ಮಂಜುನಾಥ. ಪಿ ಹೇಳಿದ್ದಾರೆ.

ದಿ ಬೆಂಗಳೂರು ಸಿಟಿ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್
ಆಡಳಿತ ಕಛೇರಿ: ನಂ. 3, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18
ಕಛೇರಿ ಫೋ: 26678572; 26600512; 26609066
ಟೆಲಿಫ್ಯಾಕ್ಸ್: (080)26617980
ಇ-ಮೇಲ್: accounts@bccbl.co.in;
ವೆಬ್‌ಸೈಟ್: www.bccbl.co.in

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಟಾಟ್

ಬ್ಯಾಂಕಿನ ಸಾಮಾಜಿಕ ಹೊಣೆಗಾರಿಕೆ ಕಾರ್ಯಗಳು

- ಲಯನ್ಸ್ ಕಣ್ಣಾಸ್ಪತ್ರೆ, ಬೆಂಗಳೂರು ರವರ ಸಹಯೋಗದಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರ ಏರ್ಪಡಿಸಿದೆ.
- ರಾಷ್ಟ್ರೋತ್ಥಾನ ಪರಿಷತ್, ಬೆಂಗಳೂರು ಸಹಯೋಗದಲ್ಲಿ ರಕ್ತದಾನ ಶಿಬಿರ ಆಯೋಜಿಸಿದೆ.
- ಮರಣ ಹೊಂದಿದ ಸದಸ್ಯರುಗಳ ಅಂತಿಮ ಸಂಸ್ಕಾರ ವೆಚ್ಚ ಭರಿಸಲು ₹ 10,000 ವರೆಗೆ 'ಮರಣ ಪರಿಹಾರ ಪಾವತಿ ಯೋಜನೆ' ಅಳವಡಿಸಿದೆ.
- ತೀವ್ರತರ ಕಾಯಿಲೆಗೆ ತುತ್ತಾದ ಸದಸ್ಯರಿಗೆ ₹ 5,000 ವರೆಗೆ ಧನಸಹಾಯ ನೀಡುತ್ತಲಿದೆ.
- ಪ್ರತಿ ವರ್ಷ ಎಸ್ಎಸ್ಎಲ್‌ಸಿ ಮತ್ತು ಮೇಲ್ಪಟ್ಟ ಪಬ್ಲಿಕ್ ಪರೀಕ್ಷೆಗಳಲ್ಲಿ ತೇರ್ಗಡೆಯಾದ ಸದಸ್ಯರ ಮಕ್ಕಳಿಗೆ ಪ್ರೋತ್ಸಾಹ ಧನ (ಪ್ರತಿಭಾ ಪುರಸ್ಕಾರ) ನೀಡಿ ಗೌರವಿಸಲಾಗುತ್ತಿದೆ.
- 1992ರಲ್ಲಿ: ರಾಜ್ಯ ಪಟ್ಟಣ ಸಹಕಾರ ಮಹಾಮಂಡಳದವರು ಸ್ವಂತ ಕಟ್ಟಡ ಹೊಂದಲು ₹ 1.0 ಲಕ್ಷ ದಾನ ನೀಡಿದೆ.
- 1992ರಲ್ಲಿ: ಬಡ ರೋಗಿಗಳ ಚಿಕಿತ್ಸೆಗಾಗಿ ಕಿದ್ವಾಯಿ ಕ್ಯಾನ್ಸರ್ ಆಸ್ಪತ್ರೆಯಲ್ಲಿ ವಾರ್ಡ್ ನಿರ್ಮಿಸಲು ₹ 1.0 ಲಕ್ಷ ದಾನ ನೀಡಿದೆ.
- 2003ರಲ್ಲಿ: ರಾಜೀವ್ ಗಾಂಧಿ ಕುಡಿಯುವ ನೀರು ಯೋಜನೆಯಡಿ ಮೈಸೂರು ಜಿಲ್ಲೆ, ಕೆ.ಆರ್. ನಗರ ತಾಲ್ಲೂಕು, ಚೀರನಹಳ್ಳಿ ಗ್ರಾಮಕ್ಕೆ ಕುಡಿಯುವ ನೀರು ಪೂರೈಸಲು ₹ 60,000 ಸಹಾಯಧನ ನೀಡಿದೆ.
- 2010ರಲ್ಲಿ: ಉತ್ತರ ಕರ್ನಾಟಕದಲ್ಲಿ ಉಂಟಾದ ಪ್ರವಾಹ ಸಂತ್ರಸ್ತರಿಗೆ ನೆರವಾಗಲು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ₹ 10 ಲಕ್ಷ ದೇಣಿಗೆ ನೀಡಿದೆ.
- 2013ರಲ್ಲಿ: ಬಡವರ ಹೃದ್ರೋಗ ಚಿಕಿತ್ಸೆಗೆ ನೆರವಾಗಲು ಜಯದೇವ ಹೃದಯ ಆಸ್ಪತ್ರೆಗೆ ₹ 10 ಲಕ್ಷ ದಾನ ನೀಡಿದೆ.
- 2015ರಲ್ಲಿ: ನೇಪಾಳ ಸಂತ್ರಸ್ತರಿಗೆ ನೆರವಾಗಲು ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ₹ 5 ಲಕ್ಷ ದಾನ ನೀಡಿದೆ.
- 2018ರಲ್ಲಿ: ಬೆಂಗಳೂರು ನಗರದ ಹಿಂದುಳಿದ ಪ್ರದೇಶ ಚಲುವಪ್ಪ ಗಾರ್ಡನ್‌ನಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಸ್ಥಾಪನೆಗೆ ಧನಸಹಾಯ.
- 2019ರಲ್ಲಿ: ಕೊಡಗು ಜಿಲ್ಲಾ ಪ್ರವಾಹ ಸಂತ್ರಸ್ತರಿಗೆ ನೆರವಾಗಲು ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ₹ 10 ಲಕ್ಷ ದಾನ.
- 2019ರಲ್ಲಿ: ಕೇರಳ ಪ್ರವಾಹ ಸಂತ್ರಸ್ತರ ನೆರವಿಗಾಗಿ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ₹ 5 ಲಕ್ಷ ದೇಣಿಗೆ.
- 2019ರಲ್ಲಿ: ಬಡಮಕ್ಕಳಿಗೆ ಊಟ ಸರಬರಾಜು ಮಾಡುವ ವಾಹನ ಖರೀದಿಸಲು ಇಸ್ಕಾನ್ ಸಂಸ್ಥೆಗೆ ₹ 15.34 ಲಕ್ಷ ಸಹಾಯ.
- 2020ರಲ್ಲಿ: ಉತ್ತರ ಕರ್ನಾಟಕ ಪ್ರವಾಹ ಸಂತ್ರಸ್ತರಿಗೆ ನೆರವಾಗಲು ಮುಖ್ಯಮಂತ್ರಿಗಳ ಪರಹಾರ ನಿಧಿಗೆ ₹ 15 ಲಕ್ಷ ದಾನ.
- 2021ರಲ್ಲಿ: ಕೋವಿಡ್-19 ಸಂಬಂಧ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ₹ 10 ಲಕ್ಷ ಸಹಾಯಧನ ಮತ್ತು ರಾಜ್ಯದಲ್ಲಿ ಆಹಾರ ಕಿಟ್ ವಿತರಿಸಲು ₹ 7. 50 ಲಕ್ಷ ದೇಣಿಗೆ

ಶುಕ್ರವಾರ, ಜೂನ್ 27, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 177 | ಪುಟ 18

prajavani.net prajavani ● www.prajavani.net

‘ದ್ವಿಚಕ್ರ ವಾಹನಗಳ ಮೇಲೆ ಟೋಲ್ ವಿಧಿಸುವ ಯಾವುದೇ ಪ್ರಸ್ತಾವ ಇಲ್ಲ’ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಸ್ಪಷ್ಟಪಡಿಸಿದ್ದಾರೆ. ದ್ವಿಚಕ್ರ ವಾಹನಗಳಿಗೆ ಈಗಿರುವ ವಿನಾಯಿತಿ ಮುಂದುವರಿಯಲಿದೆ ಎಂದು ತಿಳಿಸಿದ್ದಾರೆ.

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಮೈಸೂರಿನಲ್ಲಿ ಪೊಲೀಸ್ ಇಲಾಖೆ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಾದಕ ದ್ರವ್ಯ ಬಳಕೆ ವಿರೋಧಿ ದಿನ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಜಾಗೃತಿ ಜಾಥಾದಲ್ಲಿ ಭಾಗವಹಿಸಿದ್ದರು.

ಸೆನ್ಸೆಕ್ಸ್ 83,755 | ನಿಫ್ಟಿ 25,549 | $/₹ 85.72 | ಚಿನ್ನ (Std. 10g) ₹1.02ಲಕ್ಷ (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1.13ಲಕ್ಷ (ಬೆಂಗಳೂರು)

ಸಿನಿ ಸಮ್ಮಾನ ಇಂದು ಪ್ರದಾನ

ಚಂದನವನದ ಚಂದದ ಘಮಲನ್ನು ಪಸರಿಸುವ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಮೂರನೇ ಆವೃತ್ತಿ ಶುಕ್ರವಾರ (ಜೂನ್ 27) ನಡೆಯಲಿದೆ.

ಈ ವರ್ಣರಂಜಿತ, ಅರ್ಥಗರ್ಭಿತ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ನಟ ಶಿವರಾಜ್‌ಕುಮಾರ್ ಸೇರಿದಂತೆ ಕನ್ನಡ ಚಿತ್ರರಂಗದ ಹಲವು ತಾರೆಯರು–ತಂತ್ರಜ್ಞರು, ರಾಜಕೀಯ, ಸಾಹಿತ್ಯ ವಲಯದ ಗಣ್ಯರು ಭಾಗಿಯಾಗಲಿದ್ದಾರೆ. ‘ಪ್ರಜಾವಾಣಿ’ಯು ತನ್ನ 75ನೇ ವರ್ಷದ ಸಂದರ್ಭದಲ್ಲಿ ಪ್ರಾರಂಭಿಸಿದ್ದ ಈ ಕಾರ್ಯಕ್ರಮವು ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆಯಾಗಿ ಇದೀಗ ಚಂದನವನದಲ್ಲಿ ಗುರುತಿಸಿಕೊಂಡಿದೆ. 2024ರಲ್ಲಿ ತೆರೆಕಂಡ ಸಿನಿಮಾಗಳನ್ನು ಮೂರನೇ ಆವೃತ್ತಿಗೆ ಪರಿಗಣಿಸಲಾಗಿದ್ದು, ಒಟ್ಟು 25 ವಿಭಾಗಗಳಲ್ಲಿ 115ಕ್ಕೂ ಅಧಿಕ ಜನರು ನಾಮನಿರ್ದೇಶನ ಗೊಂಡಿದ್ದರು. ಈ ಪೈಕಿ ಪ್ರಶಸ್ತಿ ಯಾರ ಮುಡಿಗೆ ಎನ್ನುವ ಕುತೂಹಲಕ್ಕೆ ಇಂದು ತೆರೆಬೀಳಲಿದೆ.

ತುಂಬಿ ಹರಿದ ನದಿ, ತೊರೆ

ಮಳೆ– ಸೇತುವೆ, ಗದ್ದೆಗಳು ಮುಳುಗಡೆ
ಭಾಗಮಂಡಲದ ತ್ರಿವೇಣಿ ಸಂಗಮ ಜಲಾವೃತ

ಪ್ರಮುಖ ಅಂಶಗಳು

- ಶಿರಾಡಿ ಘಾಟ್‌ನ ಮಾರನಹಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಭೂಕುಸಿತ: ವಾಹನ ಸಂಚಾರ ಸ್ಥಗಿತ
- ಕೆಲವೆಡೆ ಶಾಲೆ-ಕಾಲೇಜುಗಳಿಗೆ ರಜೆ

ಪ್ರಜಾವಾಣಿ ವಾರ್ತೆ

ಮೈಸೂರು/ಶಿವಮೊಗ್ಗ: ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಧಾರಾಕಾರ ಮಳೆ ಗುರುವಾರವೂ ಮುಂದುವರಿದಿದ್ದು, ಕಾವೇರಿ, ಕನ್ನಿಕಾ, ಲಕ್ಷ್ಮಣತೀರ್ಥ, ಬರಪೊಳೆ, ಕೊಂಗಣ ಹೊಳೆ ಸೇರಿದಂತೆ ಕೊಡಗಿನ ಎಲ್ಲ ನದಿ, ಹೊಳೆ, ತೊರೆಗಳು ಅಪಾಯದಮಟ್ಟ ಮೀರಿ ಹರಿಯುತ್ತಿವೆ. ಸೇತುವೆ, ಸಂಪರ್ಕ ರಸ್ತೆಗಳು, ಗದ್ದೆಗಳು ಮುಳುಗಡೆಯಾಗಿವೆ.

ಮಳೆ ಬಿಡುವು ನೀಡದಿರುವುದರಿಂದ ಕೊಡಗಿನಲ್ಲಿ ಅಂತ್ಯಸಂಸ್ಕಾರವೂ ಕಷ್ಟಕರವಾಗಿದೆ. ಗುಂಡಿ ತೆಗೆದ ಕಡೆಯಲ್ಲೆಲ್ಲ ನೀರು ಉಕ್ಕುತ್ತಿದೆ. ಭಾಗಮಂಡಲದ ತ್ರಿವೇಣಿ ಸಂಗಮ ಒಂದು ತಿಂಗಳಿನಲ್ಲಿ 3ನೇ ಬಾರಿಗೆ ಜಲಾವೃತಗೊಂಡಿದೆ. ಪುಷ್ಪೋದ್ಯಾನ, ರಸ್ತೆಗಳಿಗೆ ನೀರು ನುಗ್ಗಿದೆ.

ಜೂನ್ 27ರ ಬೆಳಿಗ್ಗೆ 8.30ರವರೆಗೂ ಭಾರಿ ಮಳೆ ಬೀಳುವ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ ರೆಡ್ ಅಲರ್ಟ್ ಘೋಷಿಸಿದೆ. ಅಂದು ಅಂಗನವಾಡಿ, ಶಾಲೆ, ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ವಿರಾಜಪೇಟೆ, ಕುಶಾಲನಗರದಲ್ಲಿ ಮಾತ್ರ ಮಳೆ ಅಬ್ಬರ ತಗ್ಗಿದೆ.

ಮಡಿಕೇರಿ ತಾಲ್ಲೂಕಿನ ನಾಪೋಕ್ಲು ಹೋಬಳಿಯಲ್ಲಿ 15 ಸೆಂ.ಮೀ ಮಳೆ ಆಗಿದ್ದು, ಕಕ್ಕಬ್ಬೆ ಹೊಳೆ ಮೈದುಂಬಿ ಹರಿಯುತ್ತಿದೆ.

▶7

ಕೊಡಗು ಜಿಲ್ಲೆಯ ಭಾಗಮಂಡಲದ ತ್ರಿವೇಣಿ ಸಂಗಮವು ಕಳೆದ ಒಂದು ತಿಂಗಳಿನಲ್ಲಿ 3ನೇ ಬಾರಿ ಜಲಾವೃತಗೊಂಡಿದೆ

ಶಿರಾಡಿ ಘಾಟ್‌ನಲ್ಲಿ ರಾತ್ರಿ ಕಳೆದ ಪ್ರಯಾಣಿಕರು

ಹಾಸನ: ಸಕಲೇಶಪುರ ತಾಲ್ಲೂಕಿನ ಮಾರನಹಳ್ಳಿ ಬಳಿ ಬುಧವಾರ ತಡರಾತ್ರಿ ಭೂಕುಸಿತವಾಗಿದ್ದು, ಶಿರಾಡಿ ಮಾರ್ಗದಲ್ಲಿ ವಾಹನಗಳ ಸಂಚಾರ ಗುರುವಾರ ಬೆಳಿಗ್ಗೆ 10 ಗಂಟೆಯವರೆಗೆ ಸ್ಥಗಿತವಾಗಿತ್ತು. ಮಧ್ಯಾಹ್ನದ ನಂತರ ವಾಹನಗಳ ಓಡಾಟ ಸಹಜವಾಗಿದೆ.

ಭಾರಿ ಮಳೆಯಿಂದ ಗುಡ್ಡದ ಮಣ್ಣು ಹಾಗೂ ಗಿಡಗಳು ಕೊಚ್ಚಿಕೊಂಡು ಹೆದ್ದಾರಿಯ ಮಧ್ಯದಲ್ಲಿ ಬಿದ್ದಿದ್ದರಿಂದ ವಾಹನಗಳ ಸಂಚಾರ ಸಂಪೂರ್ಣ ಸ್ಥಗಿತವಾಗಿತ್ತು. ಬೆಳಿಗ್ಗೆಯೇ ಶಿರಾಡಿ ಘಾಟ್ ರಸ್ತೆಯಲ್ಲಿ ವಾಹನ ಸಂಚಾರ ನಿರ್ಬಂಧಿಸಿ ಜಿಲ್ಲಾಧಿಕಾರಿ ಲತಾಕುಮಾರಿ ಆದೇಶ ಹೊರಡಿಸಿದ್ದರು.

ರಾತ್ರಿಯಿಡೀ ಹೆದ್ದಾರಿಯಲ್ಲಿಯೇ ಕಳೆದ ಪ್ರಯಾಣಿಕರ ಗೋಳು ಹೇಳತೀರದಾಗಿತ್ತು. ಮಾರನಹಳ್ಳಿಯಿಂದ ಸಕಲೇಶಪುರದವರೆಗೆ ವಾಹನಗಳು ಸಾಲುಗಟ್ಟಿದ್ದವು. ಬೆಳಿಗ್ಗೆ 9.40ಕ್ಕೆ ಮಣ್ಣು ತೆರವುಗೊಳಿಸಿ, ವಾಹನ ಸಂಚಾರ ಆರಂಭಿಸಲಾಯಿತು.

ಗುಡ್ಡ ಕುಸಿತ ತಡೆಗೆ ₹400 ಕೋಟಿ ಮೊತ್ತದ ಕಾಮಗಾರಿ

ಚಿಕ್ಕಮಗಳೂರು: ಮಲೆನಾಡು ಹಾಗೂ ಕರಾವಳಿ ಪ್ರದೇಶಗಳ ಆರು ಜಿಲ್ಲೆಗಳಲ್ಲಿ ಗುಡ್ಡ ಕುಸಿತ ತಡೆಯಲು ₹400 ಕೋಟಿ ಮೊತ್ತದ ಕಾಮಗಾರಿ ಕೈಗೆತ್ತಿಕೊಳ್ಳಲು ಶೀಘ್ರವೇ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

▶7

ಇತಿಹಾಸ ಸೃಷ್ಟಿಸಿದ ಗಗನಯಾನಿ ಶುಭಾಂಶು ಶುಕ್ಲಾ
ಐಎಸ್‌ಎಸ್ ಅಂಗಳದಲ್ಲಿ ಭಾರತದ ಹೆಜ್ಜೆ

ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರು ಅಂತರ ರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣವನ್ನು (ಐಎಸ್‌ಎಸ್) ಯಶಸ್ವಿಯಾಗಿ ಪ್ರವೇಶಿಸುವ ಮೂಲಕ ಗುರುವಾರ ಇತಿಹಾಸ ಸೃಷ್ಟಿಸಿದರು. ಈ ಮೂಲಕ ಅವರು ಐಎಸ್‌ಎಸ್ ಅಂಗಳದಲ್ಲಿ ಭಾರತದ ಹೆಜ್ಜೆ ಮೂಡುವಂತೆ ಮಾಡಿದರು.

ಐಎಸ್‌ಎಸ್ ಪ್ರವೇಶಿಸಿದ ಭಾರತದ ಮೊದಲ ಗಗನಯಾನಿ ಎಂಬ ಕೀರ್ತಿಗೂ ಶುಕ್ಲಾ ಭಾಜನರಾದರು. ಭಾರತದ ರಾಕೇಶ್ ಶರ್ಮಾ ಅವರು ಗಗನಯಾನ ಕೈಗೊಂಡ 41 ವರ್ಷಗಳ ಬಳಿಕ ಅಂತರಿಕ್ಷ ಯಾನ ಕೈಗೊಂಡ ಎರಡನೇ ಗಗನಯಾನಿ ಅವರಾಗಿದ್ದಾರೆ.

ನಾಲ್ವರು ಗಗನಯಾನಿಗಳನ್ನು ಹೊಂದಿದ್ದ ‘ಡ್ರ್ಯಾಗನ್’ ಬಾಹ್ಯಾಕಾಶ ಕೋಶವು (ಗ್ರೇಸ್) ಉಡ್ಡಯನವಾದ 28 ಗಂಟೆಗಳಲ್ಲಿ (ನಿಗದಿಗಿಂತ 30 ನಿಮಿಷ ಮೊದಲು) ಐಎಸ್‌ಎಸ್ ಜತೆ ಜೋಡಣೆ ಸಾಧಿಸಿದೆ. ಭಾರತೀಯ ಕಾಲಮಾನದ ಪ್ರಕಾರ ಗುರುವಾರ ಸಂಜೆ 4.01ಕ್ಕೆ ಜೋಡಣೆ ಪ್ರಕ್ರಿಯೆ ಆರಂಭವಾಗಿ 4.15ಕ್ಕೆ ಪೂರ್ಣಗೊಂಡಿತು ಎಂದು ‘ನಾಸಾ’ ಪ್ರಕಟಣೆಯಲ್ಲಿ ತಿಳಿಸಿದೆ.

▶11

ಗಗನಯಾನಿ ಶುಭಾಂಶು ಶುಕ್ಲಾ ಅವರು ಗುರುವಾರ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ಪ್ರವೇಶಿಸಿದ ಐತಿಹಾಸಿಕ ಕ್ಷಣ —ಪಿಟಿಐ ಚಿತ್ರ

ಜಂಟಿ ಹೇಳಿಕೆಗೆ ಸಹಿ ಹಾಕದ ಭಾರತ

ಎಸ್‌ಸಿಒ ಶೃಂಗಸಭೆ ● ಪಾಕಿಸ್ತಾನಕ್ಕೆ ಮಣೆ: ಆರೋಪ

ಪ್ರಜಾವಾಣಿ ವಾರ್ತೆ/ಪಿಟಿಐ

ಬೀಜಿಂಗ್/ನವದೆಹಲಿ: ಪಾಕಿಸ್ತಾನ ಬೆಂಬಲಿತ ಪಹಲ್ಗಾಮ್ ದಾಳಿಯನ್ನು ಉಲ್ಲೇಖಿಸದೆ, ಪಾಕಿಸ್ತಾನದ ಬಲೂಚಿಸ್ತಾನದಲ್ಲಿ ನಡೆದ ಪ್ರತ್ಯೇಕತಾವಾದಿಗಳ ದಾಳಿಯನ್ನು ಮಾತ್ರ ಉಲ್ಲೇಖಿಸಿದ ಕಾರಣಕ್ಕೆ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಶಾಂಘೈ ಸಹಕಾರ ಒಕ್ಕೂಟದ (ಎಸ್‌ಸಿಒ) ಶೃಂಗಸಭೆಯ ಜಂಟಿ ಹೇಳಿಕೆಗೆ ಸಹಿ ಹಾಕಲು ನಿರಾಕರಿಸಿದರು.

ಶಾಂಘೈ ಸಹಕಾರ ಒಕ್ಕೂಟದ ಶೃಂಗಸಭೆಯು ಚೀನಾದ ಚಿಂಗ್‌ಡಾವ್‌ನಲ್ಲಿ ಬುಧವಾರ ಮತ್ತು ಗುರುವಾರ ನಡೆಯಿತು. ಒಕ್ಕೂಟದ ಸದಸ್ಯ ದೇಶಗಳ ರಕ್ಷಣಾ ಸಚಿವರು ಶೃಂಗಸಭೆಯಲ್ಲಿ ಭಾಗವಹಿಸಿದ್ದರು. ಭಾರತವು ಜಂಟಿ ಹೇಳಿಕೆಗೆ ಸಹಿ ಹಾಕದ ಕಾರಣಕ್ಕೆ ಜಂಟಿ ಹೇಳಿಕೆ ಬಿಡುಗಡೆ ಆಗದೆಯೇ ಶೃಂಗಸಭೆ ಅಂತ್ಯಗೊಂಡಿತು. ‘ಬಲೂಚಿಸ್ತಾನದಲ್ಲಿ ಪ್ರತ್ಯೇಕತಾವಾದಿಗಳು ಜಾಫರ್ ಎಕ್ಸ್‌ಪ್ರೆಸ್ ಅಪಹರಣ ಮಾಡಿದ್ದರ ಹಿಂದೆ ಭಾರತ ಇದೆ ಎಂಬ ಆರೋಪವುಳ್ಳ ಟಿಪ್ಪಣಿಯನ್ನು ಪಾಕಿಸ್ತಾನ ರವಾನಿಸಿತ್ತು.

▶10

ರಾಜನಾಥ್ ಹೇಳಿದ್ದು

- ಭಯೋತ್ಪಾದನೆ ಇರುವಲ್ಲಿ ಶಾಂತಿ ಮತ್ತು ಸಮೃದ್ಧಿಯು ಒಟ್ಟೊಟ್ಟಿಗೆ ಇರಲು ಸಾಧ್ಯವಿಲ್ಲ. ಭಯೋತ್ಪಾದನಾ ಚಟುವಟಿಕೆಗಳನ್ನು ಯಾರು ಪ್ರಾಯೋಜಿಸುತ್ತಾರೊ, ಪೋಷಿಸುತ್ತಾರೊ ಮತ್ತು ತಮ್ಮ ಸ್ವಾರ್ಥ ಸಾಧನೆಗಾಗಿ ಯಾರು ಭಯೋತ್ಪಾದನೆಯನ್ನು ಬಳಸಿಕೊಳ್ಳುತ್ತಾರೊ ಅವರು ಖಂಡಿತವಾಗಿಯೂ ಪರಿಣಾಮಗಳನ್ನು ಎದುರಿಸಬೇಕು
- ಕೆಲವು ದೇಶಗಳು ಗಡಿಯಾಚೆಗಿನ ಭಯೋತ್ಪಾದನೆಯನ್ನು ತಮ್ಮ ನೀತಿಯನ್ನಾಗಿಸಿಕೊಳ್ಳುತ್ತವೆ. ಉಗ್ರರಿಗೆ ಆಶ್ರಯ ನೀಡುತ್ತವೆ. ಇಬ್ಬಗೆಯ ನೀತಿಗೆ ಮನ್ನಣೆ ಸಿಗಬಾರದು. ಶಾಂಘೈ ಸಹಕಾರ ಒಕ್ಕೂಟವು ಇಂಥ ದೇಶಗಳನ್ನು ಟೀಕಿಸುವಲ್ಲಿ ಹಿಂಜರಿಯಬಾರದು

ವರ್ಗಾವಣೆ ಪ್ರಶ್ನಿಸಿದ್ದ ವೈದ್ಯರ ಅರ್ಜಿ ಪರಿಗಣನೆಗೆ ನಕಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಸರ್ಕಾರಿ ವೈದ್ಯರನ್ನು ನಗರದಿಂದ ಹೊರಗೆ ವರ್ಗಾವಣೆ ಮಾಡುವುದರ ವಿರುದ್ಧ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಲು ನಿರಾಕರಿಸಿರುವ ಸುಪ್ರೀಂ ಕೋರ್ಟ್, ‘ಬೆಂಗಳೂರಿನ ಕಾಸ್ಮೊಪಾಲಿಟನ್ ಜೀವನವು ಅತ್ಯಾಕರ್ಷಕ’ ಎಂದು ಬಣ್ಣಿಸಿದೆ.

ಯಾವುದೇ ಪೂರ್ವಗ್ರಹದಿಂದ ವೈದ್ಯರನ್ನು ಬೆಂಗಳೂರಿನಿಂದ ಹೊರಗೆ ವರ್ಗಾಯಿಸುತ್ತಿಲ್ಲ ಎಂಬುದನ್ನು ನ್ಯಾಯಮೂರ್ತಿಗಳಾದ ಉಜ್ಜಲ್ ಭುಯಾನ್ ಮತ್ತು ಕೆ. ವಿನೋದ್ ಚಂದ್ರನ್ ಅವರ ಪೀಠ ಗಮನಿಸಿದೆ.

‘ಬೆಂಗಳೂರಿನ ಕಾಸ್ಮೊಪಾಲಿಟನ್ ಜೀವನವು ತುಂಬಾ ಆಕರ್ಷಕವಾಗಿದೆ. ಕರ್ನಾಟಕದ ಇತರ ಪ್ರದೇಶಗಳು ಸಹ ಅಭಿವೃದ್ಧಿ ಹೊಂದಿವೆ. ನೀವು ವರ್ಗಾವಣೆ ವಿರೋಧಿಸಿದರೆ ಇತರರ ಕಥೆ ಏನು. ನಾವು ಮೇಲ್ಮನವಿ ಸ್ವೀಕರಿಸಲು ಒಲವು ತೋರುವುದಿಲ್ಲ’ ಎಂದು ಪೀಠ ಹೇಳಿದೆ.

ರಾಜ್ಯದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯೊಳಗಿನ ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಯ ವರ್ಗಾವಣೆ ನಿಯಂತ್ರಿಸುವ ಕರ್ನಾಟಕ ರಾಜ್ಯ ನಾಗರಿಕ ಸೇವೆಗಳು (ವೈದ್ಯಾಧಿಕಾರಿಗಳು ಮತ್ತು ಇತರ ಸಿಬ್ಬಂದಿಗಳ ವರ್ಗಾವಣೆ ನಿಯಂತ್ರಣ) ನಿಯಮ– 2025 ಪ್ರಶ್ನಿಸಿ ವೈದ್ಯರ ಗುಂಪೊಂದು ಸಲ್ಲಿಸಿದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ. ಈ ನಿಯಮಗಳಿಗೆ ತಡೆ ನೀಡಲು ಕರ್ನಾಟಕ ಹೈಕೋರ್ಟ್ ನಿರಾಕರಿಸಿತ್ತು.

ಕರಡು ನಿಯಮಗಳಿಗೆ ಆಕ್ಷೇಪಣೆಗಳನ್ನು ಸಲ್ಲಿಸಲು ಒಂದು ವಾರದ ಕಾಲಾವಕಾಶ ನೀಡಲಾಗಿದೆ ಎಂದು ಅರ್ಜಿದಾರರು ಅರ್ಜಿಯಲ್ಲಿ ದೂರಿದ್ದಾರೆ.

ರಾಮಲಿಂಗ ಶೆಟ್ಟಿ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಅವರ ಆಡಳಿತ ವೈಖರಿ ವಿರೋಧಿಸಿ ಕಸಾಪ ಗೌರವ ಕಾರ್ಯದರ್ಶಿ ಸ್ಥಾನಕ್ಕೆ ನೇ.ಭ. ರಾಮಲಿಂಗ ಶೆಟ್ಟಿ ರಾಜೀನಾಮೆ ನೀಡಿದ್ದಾರೆ.

ಗೌರವ ಕಾರ್ಯದರ್ಶಿಯಾಗಿದ್ದ ಪದ್ಮಿನಿ ನಾಗರಾಜು ಅವರು ಕಳೆದ ವಾರ ರಾಜೀನಾಮೆ ನೀಡಿದ್ದರು.

ರಾಮಲಿಂಗ ಶೆಟ್ಟಿ

‘ಮಹೇಶ ಜೋಶಿ ಅವರ ಜತೆಗೆ ಕೆಲಸ ಮಾಡಿದ್ದು ಕಹಿ ಘಟನೆ. ಅವರು ಸರ್ವಾಧಿಕಾರಿಯಂತೆ ವರ್ತಿಸುತ್ತಾರೆ’ ಎಂದು ರಾಜೀನಾಮೆ ಪತ್ರದಲ್ಲಿ ಹೇಳಿದ್ದಾರೆ.

‘ಸಮಾಜವಾದ’, ‘ಜಾತ್ಯತೀತ’ ಕೈಬಿಡಿ’

ನವದೆಹಲಿ (ಪಿಟಿಐ): ಸಂವಿಧಾನದ ಪೀಠಿಕೆಯಿಂದ ‘ಸಮಾಜವಾದ’ ಮತ್ತು ‘ಜಾತ್ಯತೀತ’ ಪದಗಳನ್ನು ತೆಗೆಯಬೇಕು ಎಂದು ಆರ್‌ಎಸ್‌ಎಸ್ ಪ್ರಧಾನ ಕಾರ್ಯದರ್ಶಿ ದತ್ತಾತ್ರೇಯ ಹೊಸಬಾಳೆ ಒತ್ತಾಯಿಸಿದ್ದಾರೆ.

ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಈ ಒತ್ತಾಯ ಮಂಡಿಸಿದ ಅವರು, ತುರ್ತು-ಪರಿಸ್ಥಿತಿ ಅವಧಿಯಲ್ಲಿ ಆಗಿನ ಕಾಂಗ್ರೆಸ್ ಸರ್ಕಾರ ಈ ಪದಗಳನ್ನು ಸೇರ್ಪಡೆಗೊಳಿಸಿತ್ತು ಎಂದು ಪ್ರತಿಪಾದಿಸಿದರು.

ಚಿನಕುರುಳಿ ಪ್ರಕಾಶ್ ಶೆಟ್ಟಿ

‘ಸೆಪ್ಟೆಂಬರ್ ನಂತರ ಕ್ರಾಂತಿ’

ರಾಜ್ಯ ರಾಜಕೀಯದಲ್ಲಿ ಬದಲಾವಣೆ: ಸಚಿವ ಕೆ.ಎನ್.ರಾಜಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ರಾಜಕೀಯದಲ್ಲಿ ಸೆಪ್ಟೆಂಬರ್ ನಂತರ ಕ್ರಾಂತಿ ಆಗಲಿದೆ. ಅದು ಪಕ್ಷದ ವಿಚಾರದಲ್ಲಿಯೊ, ಸರ್ಕಾರದ ವಿಚಾರದಲ್ಲಿಯೊ ಎಂಬುದನ್ನು ಕಾದು ನೋಡಿ’ ಎಂಬ ಸಹಕಾರ ಸಚಿವ ಕೆ.ಎನ್. ರಾಜಣ್ಣ ಹೇಳಿಕೆ ಕಾಂಗ್ರೆಸ್ ವಲಯದಲ್ಲಿ ಭಾರಿ ಚರ್ಚೆಗೆ ಗ್ರಾಸವಾಗಿದೆ.

ಕೆ.ಎನ್.ರಾಜಣ್ಣ

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, ‘ಮೇ ಕ್ರಾಂತಿ, ಆಗಸ್ಟ್ ಕ್ರಾಂತಿ ಎಂದೆಲ್ಲ ಕೇಳಿಲ್ಲವೇ? ಅದೇ ರೀತಿ ಇದು ಸೆಪ್ಟೆಂಬರ್ ಕ್ರಾಂತಿ. ಏನಾಗಲಿದೆ ಎಂಬುದನ್ನು ಈಗಲೇ ಹೇಳಿದರೆ ಆಸಕ್ತಿ ಹೋಗಿಬಿಡುತ್ತದೆ. ಏನು ಬೇಕಿದ್ದರೂ ಊಹೆ ಮಾಡಿಕೊಳ್ಳಿ’ ಎಂದರು.

‘ರಾಜಕಾರಣ ಎಂದೂ ನಿಂತ ನೀರಲ್ಲ, ಹರಿಯುವ ನೀರು. ಅದು ಎತ್ತರಕ್ಕೆ ಏರಲ್ಲ. ಹಳ್ಳ ಇದ್ದ ಕಡೆಗೆ ಹರಿಯುತ್ತದೆ. ಯಾವ್ಯಾವ ಘಟನಾವಳಿಗಳು ಯಾವ್ಯಾವ ಸಂದರ್ಭದಲ್ಲಿ ಆಗುತ್ತವೆಯೋ ಅದನ್ನು ಆಧರಿಸಿ ಮುಂದಿನ ಕಾರ್ಯಚಟುವಟಿಕೆಗಳು ರಾಜಕಾರಣದಲ್ಲಿ ನಡೆಯುತ್ತವೆ’ ಎಂದರು.

‘ದೆಹಲಿಗೆ ತೆರಳಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಪಕ್ಷದ ನಾಯಕರಾದ ಕೆ.ಸಿ. ವೇಣುಗೋಪಾಲ್, ರಣದೀಪ್ ಸಿಂಗ್ ಸುರ್ಜೇವಾಲಾ ಅವರನ್ನೂ ಭೇಟಿ ಮಾಡಿ ರಾಜ್ಯ ರಾಜಕೀಯ ಚಟುವಟಿಕೆಯ ಕುರಿತು ಚರ್ಚಿಸಿದ್ದಾರೆ. ರಾಹುಲ್ ಗಾಂಧಿ ಅವರು ವಿದೇಶದಲ್ಲಿ ಇರುವ ಕಾರಣ ಸದ್ಯಕ್ಕೆ ಇದಕ್ಕೆಲ್ಲ ಮಹತ್ವ ಕೊಡುವ ಅಗತ್ಯವಿಲ್ಲ. ಅವರು ಬಂದ ನಂತರ ಕೆಲವು ರಾಜಕೀಯ ಬದಲಾವಣೆಯ ತೀರ್ಮಾನ ಆಗುತ್ತದೆ ಎಂದು ನಾನು ನಿರೀಕ್ಷೆ ಮಾಡಿದ್ದೇನೆ’ ಎಂದು ಹೇಳಿದರು.

▶11

ನನಗೆ ಒಳ್ಳೆಯದಾಗಲಿದೆ: ವಿಜಯೇಂದ್ರ

‘ರಾಜ್ಯ ಘಟಕದ ಅಧ್ಯಕ್ಷ ಸ್ಥಾನದ ಆಯ್ಕೆಯಲ್ಲಿ ಯಾವುದೇ ಗೊಂದಲಗಳಿಲ್ಲ. ಪಕ್ಷದ ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ ಎಂಬುದನ್ನೂ ನಾನು ಒಪ್ಪುವುದಿಲ್ಲ. ಕರ್ನಾಟಕವೂ ಸೇರಿ ಹಲವು ರಾಜ್ಯಗಳ ಅಧ್ಯಕ್ಷ ಸ್ಥಾನಗಳಿಗೆ ಹೆಸರುಗಳು ಶೀಘ್ರವೇ ಘೋಷಣೆ ಆಗಲಿವೆ’ ಎಂದು ಬಿಜೆಪಿ ರಾಜ್ಯ ಘಟಕ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ವಿಶ್ವಾಸ ವ್ಯಕ್ತಪಡಿಸಿದರು.

ನಮ್ಮಲ್ಲಿ ಎಲ್ಲವೂ ಸರಿ ಇಲ್ಲ: ಡಿವಿಎಸ್

‘ನಮ್ಮಲ್ಲಿ ಎಲ್ಲವೂ ಸರಿ ಇಲ್ಲ. ಆಂತರಿಕ ವ್ಯತ್ಯಾಸ ಒಳಗೊಳಗೇ ಕುದಿಯುತ್ತಿದೆ. ಹೇಳಿಕೆಗಳಲ್ಲಿ ಎಲ್ಲವೂ ಸರಿ ಇದೆ ಎಂದು ಕಂಡರೂ, ಬೂದಿ ಮುಚ್ಚಿದ ಕೆಂಡದಂತಹ ಪರಿಸ್ಥಿತಿ ಇದೆ’ ಎಂದು ಕೇಂದ್ರದ ಮಾಜಿ ಸಚಿವ ಡಿ.ವಿ.ಸದಾನಂದಗೌಡ ಅವರು ಹೇಳಿದ್ದಾರೆ.

▶11

ತನಿಖೆಗೆ ಸಮಿತಿ ರಚನೆ: 14 ದಿನದೊಳಗೆ ವರದಿ ಸಲ್ಲಿಸಲು ಸೂಚನೆ

ಐದು ಹುಲಿ ಸಾವು; ವಿಷಪ್ರಾಶನ ಶಂಕೆ

ಪ್ರಜಾವಾಣಿ ವಾರ್ತೆ

ಹನೂರು (ಚಾಮರಾಜನಗರ ಜಿಲ್ಲೆ): ತಾಲ್ಲೂಕಿನ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಹೂಗ್ಯಂ ವನ್ಯಜೀವಿ ವಲಯದ ಮೀಣ್ಯಂ ಶಾಖೆಯ ಮಹದೇಶ್ವರ ದೇವಸ್ಥಾನದ ಬಳಿ ತಾಯಿ ಹುಲಿ ಹಾಗೂ ನಾಲ್ಕು ಮರಿಗಳು ಮೃತಪಟ್ಟಿವೆ. ಏಕಕಾಲಕ್ಕೆ ಇಷ್ಟು ಸಂಖ್ಯೆಯ ಹುಲಿಗಳ ಸಾವು ಈ ಭಾಗದಲ್ಲಿ ಇದೇ ಮೊದಲು.

ಅರಣ್ಯ ಸಿಬ್ಬಂದಿ ಗುರುವಾರ ಗಸ್ತು ತಿರುಗುವಾಗ ಮೃತದೇಹಗಳು ಪತ್ತೆಯಾಗಿದ್ದು, ಆ ಸ್ಥಳದಿಂದ 50 ಮೀಟರ್ ದೂರದಲ್ಲಿ ಜಾನುವಾರು ಮೃತದೇಹ ಕಂಡುಬಂದಿದೆ. ಅದಕ್ಕೆ ದುಷ್ಕರ್ಮಿಗಳು ವಿಷ ಸಿಂಪಡಿಸಿದ್ದು, ಅದರ ಮಾಂಸವನ್ನು ತಿಂದು ಹುಲಿಗಳು ಮೃತಪಟ್ಟಿರಬಹುದು ಎಂದು ಅಧಿಕಾರಿಗಳು ಶಂಕಿಸಿದ್ದಾರೆ. ಮರಣೋತ್ತರ ಪರೀಕ್ಷೆಯ ಬಳಿಕ ನಿಖರ ಕಾರಣ ಗೊತ್ತಾಗಲಿದೆ.

ಮುಖ್ಯಾಂಶಗಳು

- ವನ್ಯಜೀವಿ ವಲಯಗಳಲ್ಲಿ ಗಸ್ತು ಬಲಪಡಿಸಲು ಸೂಚನೆ
- ತನಿಖೆಗೆ ಉನ್ನತ ಮಟ್ಟದ ಸಮಿತಿ ರಚನೆ
I, PUNYAA Sadhashiva Reddy, residing at #258, first floor, 27th Main,22nd cross, 2nd sector,HSR layout, Bangalore-560102 have changed my name to Punya S Reddy vide affidavit dated 19-10-2024 before notary B.M.Chandrashekar henceforth I shall be called as Punya S Reddy only

CHANGE OF NAME
We, Vishnu Brahma and Kuruba Vani, Residing at No. 277/286, 1st Allotment, 3rd Main, 12th Cross Maruthi Nagar, Yelahanka Bengaluru-560064, have changed our minor son's name from V Vikram to MEGHA VARDHAN V vide affidavit dated 26-06-2025 before notary G.R. Ravichandra Reddy, Bengaluru.

Lost

I, BIMAN B Nath, would hereby like to inform that my son Sourak Nath studied in Bishop Cotton Boys' School, Bangalore and passed class X in year 2018 (Unique ID 6647978). I lost my son's ICSE class X pass certificate and marksheet while taking them to a xerox shop near my house. Finders please contact:- 9448475597.

ಚಿಟಿಕೆ ಸುದ್ದಿ

ಶಿಗ್ಗಾವಿ ಗುತ್ತಿಗೆದಾರ ಕೊಲೆ: ಆರೋಪಿಗಳ ಕಾಲಿಗೆ ಗುಂಡೇಟು

ಹಾವೇರಿ: ಶಿಗ್ಗಾವಿ ಪಟ್ಟಣದಲ್ಲಿ ಜೂನ್ 24ರಂದು ನಡೆದಿದ್ದ ಗುತ್ತಿಗೆದಾರ ಶಿವಾನಂದ ಕುನ್ನೂರು ಕೊಲೆ ಪ್ರಕರಣದ ಇಬ್ಬರು ಪ್ರಮುಖ ಆರೋಪಿಗಳಾದ ನಾಗರಾಜ ಸವದತ್ತಿ ಹಾಗೂ ಅಶ್ರಫ್‌ಖಾನ್ ಅಹ್ಮದ್‌ಖಾನ್ ಪಠಾಣ ಅವರ ಕಾಲಿಗೆ ಪೊಲೀಸರು ಗುಂಡು ಹೊಡೆದು ಗುರುವಾರ ಬಂಧಿಸಿದ್ದಾರೆ. ಗಾಯಗೊಂಡಿರುವ ಇಬ್ಬರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ.

‘ತಲೆಮರೆಸಿಕೊಂಡಿದ್ದ ಆರೋಪಿಗಳು ಊರೂರು ಸುತ್ತಿದ್ದರು. ಬಳಿಕ ಇಬ್ಬರೂ ಹಾನಗಲ್‌ನ ಕೊಂಡಜ್ಜಿ ಕ್ರಾಸ್‌ನಲ್ಲಿರುವ ಮಾಹಿತಿ ಲಭ್ಯವಾಗಿತ್ತು. ಬಂಧಿಸುವ ವೇಳೆ ಕಾನ್‌ಸ್ಟೆಬಲ್‌ಗಳ ಮೇಲೆಯೇ ಆರೋಪಿಗಳು ಹಲ್ಲೆ ಮಾಡಿ ಪರಾರಿಯಾಗಲು ಯತ್ನಿಸಿದಾಗ ಬೆನ್ನಟ್ಟಿದ್ದ ಪಿಎಸ್‌ಐಗಳಾದ ಸಂಪತ್ ಆನಿಕಿವಿ ಹಾಗೂ ಶರಣಪ್ಪ ಹಂದ್ರಗಲ್, ಆತ್ಮರಕ್ಷಣೆಗಾಗಿ ಗುಂಡು ಹಾರಿಸಿದ್ದಾರೆ’ ಎಂದು ಎಸ್‌ಪಿ ಅಂಶುಕುಮಾರ ತಿಳಿಸಿದರು.

‘ಪ್ರಕರಣದ ಸಂಬಂಧ ಐವರನ್ನು ಬಂಧಿಸಲಾಗಿದೆ. ಆಸ್ತಿಗಾಗಿ ಕೃತ್ಯ ಎಸಗಿರುವುದು ಸದ್ಯದ ತನಿಖೆಯಿಂದ ಗೊತ್ತಾಗಿದೆ’ ಎಂದು ಅವರು ತಿಳಿಸಿದರು.

ಹಿಂದೂ ಜಾಗರಣ ವೇದಿಕೆ ಮುಖಂಡನ ಬಂಧನ

ಮೂಡುಬಿದಿರೆ: ಅಪಘಾತ ಪ್ರಕರಣವೊಂದರಲ್ಲಿ ಬಸ್ ಮಾಲೀಕರಿಂದ ಕಾನೂನು ಬಾಹಿರವಾಗಿ ಹಣ ವಸೂಲಿ ಮಾಡಿ ಪರಿಹಾರವಾಗಿ ನೀಡಿದ ಆರೋಪದಲ್ಲಿ ಹಿಂದೂ ಜಾಗರಣ ವೇದಿಕೆಯ ಜಿಲ್ಲಾ ಸಹ ಸಂಚಾಲಕ ಸಮಿತ್‌ರಾಜ್ ಧರೆಗುಡ್ಡೆ ಅವರನ್ನು ಮೂಡುಬಿದಿರೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಸಮಿತ್‌ರಾಜ್

2024ರ ನ. 11ರಂದು ಖಾಸಗಿ ಬಸ್‌ವೊಂದು ಇಲ್ಲಿನ ಮೈಟ್ ಎಂಜಿನಿಯರಿಂಗ್ ಕಾಲೇಜು ಎದುರಿನ ರಸ್ತೆಯಲ್ಲಿ ಸ್ಕೂಟರ್‌ಗೆ ಡಿಕ್ಕಿ ಹೊಡೆದು ಇಬ್ಬರು ಗಾಯಗೊಂಡಿದ್ದು, ಅವರಲ್ಲಿ ಒಬ್ಬರು ಗಂಭೀರ ಗಾಯಗೊಂಡಿದ್ದರು. ಈ ವೇಳೆ ಸ್ಥಳದಲ್ಲಿದ್ದ ಸಮಿತ್ ರಾಜ್, ಮಾಲೀಕ ರಫೀಕ್ ಅವರಿಂದ ಗಾಯಾಳುಗಳಿಗೆ ₹5 ಲಕ್ಷ ಕೊಡಿಸಿದ್ದರು.

‘ಸಮಿತ್ ರಾಜ್ ನನ್ನಿಂದ ಬಲವಂತವಾಗಿ ಗಾಯಾಳುಗಳಿಗೆ ₹5 ಲಕ್ಷ ಪರಿಹಾರ ಕೊಡಿಸಿದ್ದಾರೆ. ಇದು ಕಾನೂನುಬಾಹಿರವಾಗಿದ್ದು ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಕೆಲ ದಿನಗಳ ಹಿಂದೆ ಮೂಡುಬಿದಿರೆ ಪೊಲೀಸರಿಗೆ ಬಸ್ ಮಾಲೀಕ ರಫೀಕ್ ದೂರು ನೀಡಿದ್ದರು. ಆರೋಪಿ ಸಮಿತ್ ರಾಜ್‌ರನ್ನು ಪೊಲೀಸರು ಬಂಧಿಸಿ ಕೋರ್ಟ್‌ಗೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಟಿಟಿಡಿಗೆ ₹1 ಕೋಟಿ ನೀಡಿದ ಗೂಗಲ್ ಉಪಾಧ್ಯಕ್ಷ

ತಿರುಪತಿ (ಪಿಟಿಐ): ತಿರುಪತಿ ತಿರುಮಲ ದೇವಸ್ಥಾನ ಮಂಡಳಿಯ (ಟಿಟಿಡಿ) ಎಸ್‌ವಿ ಪ್ರಾಣದಾನ ಟ್ರಸ್ಟ್‌ಗೆ ಗೂಗಲ್ ಉಪಾಧ್ಯಕ್ಷ ತೋಟ ಚಂದ್ರಶೇಖರ್ ಅವರು ಗುರುವಾರ ₹1 ಕೋಟಿ ದೇಣಿಗೆ ನೀಡಿದ್ದಾರೆ.

ಚಂದ್ರಶೇಖರ್ ಅವರು ಟಿಟಿಡಿ ಅಧ್ಯಕ್ಷ ಬಿ.ಆರ್ ನಾಯ್ಡು ಅವರಿಗೆ ದೇಣಿಗೆಯ ಚೆಕ್ ಅನ್ನು ಹಸ್ತಾಂತರಿಸಿದ್ದಾರೆ ಎಂದು ದೇವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಒಂದು ಉದ್ದಿಮೆ)
ನಂ. 8, "ಸಂಪರ್ಕ ಸೌಧ", ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು-560010. ಟೆಲಿಫ್ಯಾಕ್ಸ್: 080-22024000
ಇ-ಮೇಲ್: mdkrdcl@gmail.com, cekrdcl@gmail.com ವೆಬ್‌ಸೈಟ್: http://www.krdcl.in

ಸಂಖ್ಯೆ: ಕರಅನಿನಿ/ಐಎಫ್‌ಬಿ/2025-26/06 ದಿನಾಂಕ: 24-06-2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು (ಕೆ.ಆರ್.ಡಿ.ಸಿ.ಎಲ್) ಈ ಕೆಳಕಂಡ ಕಾಮಗಾರಿಗಳಿಗಾಗಿ ದ್ವಿ-ಲಕೋಟೆ ಟೆಂಡರ್ ಪದ್ಧತಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದೆ.

(1) ಕಾಮಗಾರಿ ಹೆಸರು: **ಬೆಂಗಳೂರು ನಗರ ಸಂಚಾರ ಪೊಲೀಸ್ ರಸ್ತೆ ಸುರಕ್ಷತಾ ಪ್ರಾಧಿಕಾರ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ಬೆಂಗಳೂರು ನಗರದಲ್ಲಿ ಹಾಲಿಯಿರುವ 537 ಸೋಲಾರ್ ಬ್ಲಿಂಕರ್‌ಗಳ ಸಮಗ್ರ ನಿರ್ವಹಣಾ ಸೇವೆಗಳನ್ನು ಒದಗಿಸುವುದು. ಕಾಮಗಾರಿಯ ಅಂದಾಜು ಮೊತ್ತ (ಜಿಎಸ್‌ಟಿ ಹೊರತುಪಡಿಸಿ)** : ರೂ. 1.08 ಕೋಟಿಗಳು. **ಇಎಂಡಿ ಮೊತ್ತ:** ರೂ. 1.08 ಲಕ್ಷಗಳು. **ಕಾಮಗಾರಿ ಪೂರ್ಣಗೊಳ್ಳುವ ಕಾಲಾವಧಿ (ಮಳೆಗಾಲ ಸೇರಿದಂತೆ)** : ನಿರ್ವಹಣೆಗಾಗಿ 36 ತಿಂಗಳು.

(2) ಕಾಮಗಾರಿ ಹೆಸರು: **ಬೆಂಗಳೂರು ನಗರ ಸಂಚಾರ ಪೊಲೀಸ್ ರಸ್ತೆ ಸುರಕ್ಷತಾ ಪ್ರಾಧಿಕಾರ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿ ಬೆಂಗಳೂರು ನಗರ ಪೊಲೀಸ್ ವಿಭಾಗಕ್ಕೆ ಬೆಂಗಳೂರು ನಗರದಲ್ಲಿ ಹಾಲಿಯಿರುವ 39 ಪೆಲಿಕಾನ್ ಸಿಗ್ನಲ್ ಲೈಟ್‌ಗಳ ಸಮಗ್ರ ನಿರ್ವಹಣಾ ಸೇವೆಗಳನ್ನು ಒದಗಿಸುವುದು. ಕಾಮಗಾರಿಯ ಅಂದಾಜು ಮೊತ್ತ (ಜಿಎಸ್‌ಟಿ ಹೊರತುಪಡಿಸಿ)** : ರೂ. 0.68 ಕೋಟಿಗಳು. **ಇಎಂಡಿ ಮೊತ್ತ:** ರೂ. 0.68 ಲಕ್ಷಗಳು. **ಕಾಮಗಾರಿ ಪೂರ್ಣಗೊಳ್ಳುವ ಕಾಲಾವಧಿ (ಮಳೆಗಾಲ ಸೇರಿದಂತೆ)** : ನಿರ್ವಹಣೆಗಾಗಿ 36 ತಿಂಗಳು.

ಆಸಕ್ತ ಅರ್ಜಿದಾರರು ಪೂರ್ಣ ಪ್ರಸ್ತಾವನೆ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ **www.kppp.karnataka.gov.in** ಮುಖಾಂತರ ವೀಕ್ಷಿಸಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. (ಎ) ಬಿಡ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಸಲ್ಲಿಸಲು ಕೊನೆಯ ದಿನಾಂಕ: **09.07.2025ರಂದು ಸಂಜೆ 5.30 ಗಂಟೆವರೆಗೆ.** (ಬಿ) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **11.07.2025ರಂದು ಬೆಳಿಗ್ಗೆ 11.00 ಗಂಟೆಗೆ.**

ಗಮನಿಸಿ: ಇನ್ನು ಮುಂದೆ ಪ್ರಕಟಣೆಯಲ್ಲಿನ ಯಾವುದೇ ಬದಲಾವಣೆಗಳನ್ನು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಆದರೆ ಮುಂದಿನ ಬದಲಾವಣೆಗಳನ್ನು ಕೇವಲ ಕೆಪಿಪಿ ಪೋರ್ಟಲ್/ ಕರಅನಿನಿ ವೆಬ್‌ಸೈಟ್ **https://www.krdcl.in** ನಲ್ಲಿ ಮಾತ್ರ ಅಪ್‌ಡೇಟ್ ಮಾಡಲಾಗುವುದು.

ಸಹಿ/- ಮುಖ್ಯ ಅಭಿಯಂತರರು,
ಕರಅನಿನಿ ಬೆಂಗಳೂರು

DIPR/CP/YC/1493/2025-26

ಕಾವೇರಿ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)
ಸೂಪರಿಂಟೆಂಡಿಂಗ್ ಇಂಜಿನಿಯರ್, ಹೇಮಾವತಿ ನಾಲಾ ವೃತ್ತ, ಚನ್ನರಾಯಪಟ್ಟಣ.
E-mail :sehcccrp@gmail.com

ದಿನಾಂಕ:24.06.2025

ಪ್ರಕಟಣೆ

ಕರ್ನಾಟಕ ಸರ್ಕಾರದ 1965ನೇ ಇಸವಿ ನೀರಾವರಿ ಕಾಯಿದೆ (ಸಂ.16) ಸೆಕ್ಷನ್ 27 ಮತ್ತು 32 ರ ಪ್ರಕಾರ ಹಾಗೂ ಕರ್ನಾಟಕ ಸರ್ಕಾರದ ಸಂಖ್ಯೆ: ಪಿ.ಡಬ್ಲ್ಯೂ.ಡಿ. 73 ಎಲ್.ಬಿ.ಡಬ್ಲ್ಯೂ, 72, ದಿನಾಂಕ 18/22.12.1973 ರಲ್ಲಿ ದತ್ತವಾದ ಅಧಿಕಾರದಿಂದ ಮತ್ತು ಸದಸ್ಯ ಕಾರ್ಯದರ್ಶಿ, ಹೇಮಾವತಿ ಜಲಾಶಯ ಯೋಜನೆಯ ನೀರಾವರಿ ಸಲಹಾ ಸಮಿತಿ ಹಾಗೂ ಸೂಪರಿಂಟೆಂಡಿಂಗ್ ಇಂಜಿನಿಯರ್, ಹೇಮಾವತಿ ಯೋಜನಾ ನಾಲಾ ವೃತ್ತದ ವೃತ್ತ, ಗೊರೂರು ಇವರ ಪ್ರಕಟಣೆ ದಿನಾಂಕ:24.06.2025 ರನ್ವಯ ಹೇಮಾವತಿ ಸೂಪರಿಂಟೆಂಡಿಂಗ್ ಇಂಜಿನಿಯರ್ (ಪ್ರಭಾರ) ಶ್ರೀ ಆರ್.ಡಿ. ಗಂಗಾಧರ್ ಆದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಪ್ರಸ್ತುತ ಹೇಮಾವತಿ ಜಲಾಶಯದ ಜಲಾನಯನ ಪ್ರದೇಶದಲ್ಲಿ ವಾಡಿಕೆಯಂತೆ ನಿರೀಕ್ಷಿತ ಮಟ್ಟದಲ್ಲಿ ಮಳೆಯಾಗುತ್ತಿದ್ದು, ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣವು ಗಣನೀಯವಾಗಿ ಏರಿಕೆಯಾಗಿದ್ದು, ಹೇಮಾವತಿ ಜಲಾಶಯದಲ್ಲಿ ದಿನಾಂಕ:24.06.2025 ರಂದು ನೀರಿನ ಸಂಗ್ರಹಣಾ ಸಾಮರ್ಥ್ಯವು 31.180 ಟಿ.ಎಂ.ಸಿ. ಗಳಷ್ಟಿದ್ದು, ಜಲಾಶಯಕ್ಕೆ ಬರುವ ನೀರಿನ ಒಳಹರಿವಿನ ಏರಿಕೆಯಿಂದ ಜಲಾಶಯವು ತುಂಬುವ ಸಂಭವವಿರುವುದರಿಂದ ಹೆಚ್ಚುವರಿ ನೀರನ್ನು ಹೇಮಾವತಿ ನದಿಗೆ ಹರಿಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ 2025-26 ನೇ ಸಾಲಿಗೆ ಹೇಮಾವತಿ ಜಲಾಶಯದಿಂದ ನದಿ ಮತ್ತು ಯೋಜನಾ ವ್ಯಾಪ್ತಿಯಲ್ಲಿ ಬರುವ ಹಾಸನ ಜಿಲ್ಲೆ ಮತ್ತು ಮಂಡ್ಯ ಜಿಲ್ಲೆಯ ಎಲ್ಲಾ ನಾಲೆಗಳಲ್ಲಿ ಜನ ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಕೆರೆ ಕಟ್ಟೆಗಳನ್ನು ತುಂಬಿಸಲು ದಿನಾಂಕ 26.06.2025 ರಿಂದ ನೀರನ್ನು ಹರಿಸಲಾಗುವುದು. ಈ ಸಂದರ್ಭದಲ್ಲಿ ಯೋಜನಾ ವ್ಯಾಪ್ತಿಯಲ್ಲಿನ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳು ನೀರು ಪೋಲಾಗದಂತೆ ಎಲ್ಲಾ ತುರ್ತು ಕ್ರಮಗಳನ್ನು ತೆಗೆದುಕೊಂಡು, ಯೋಜನಾ ಅಚ್ಚುಕಟ್ಟು ವ್ಯಾಪ್ತಿಯಲ್ಲಿ ಬರುವ ಸಾರ್ವಜನಿಕರು ಹಾಗೂ ರೈತರಿಗೆ ಸೂಕ್ತ ತಿಳುವಳಿಕೆ ನೀಡಿ, ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಕಟ್ಟುನಿಟ್ಟಾಗಿ ಸೂಚಿಸಲಾಗಿದೆ. ಈ ಬಗ್ಗೆ ಯೋಜನಾ ವ್ಯಾಪ್ತಿಯಲ್ಲಿನ ಎಲ್ಲಾ ಸಾರ್ವಜನಿಕರು ಮತ್ತು ಅಚ್ಚುಕಟ್ಟುದಾರರು ಸುಗಮ ನೀರು ನಿರ್ವಹಣೆ ನಡೆಸುವ ನಿಟ್ಟಿನಲ್ಲಿ ಇಲಾಖಾ ಅಧಿಕಾರಿಗಳೊಂದಿಗೆ ಸಹಕರಿಸಬೇಕೆಂದು ಕೋರಲಾಗಿದೆ.

ಸಹಿ/-(ಆರ್. ಡಿ ಗಂಗಾಧರ್)
ಸೂಪರಿಂಟೆಂಡಿಂಗ್ ಇಂಜಿನಿಯರ್ (ಪ್ರಭಾರ)
ಹೇಮಾವತಿ ನಾಲಾ ವೃತ್ತ, ಚನ್ನರಾಯಪಟ್ಟಣ.

ವಾಸಾಸಂಇ/ಹಿಸನಿ/ಹಾಸನ/267/ಕೆಎಸ್‌ಎಂಸಿಎ/2025-26

The Printers (Mysore) Pvt. Ltd

Publishers of DECCAN HERALD, PRAJAVANI, SUDHA & MAYURA
No.7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad , Mangalore, Harihara, Mysore, Gulbarga and Hospet. For the period **July to September - 2025**

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH & PV Print waste & unsolds (Voucher & Office copies)	12	6	4.5	4	4	4.5	2
Mixed Print & Folded waste	3	1.5	0.6	0.3	0.2	0.3	0.2
DH, PV, Sudha & Mayura White cut Peel waste	4	0.6	0.2	0.5	0.4	0.3	0.3
White Reel ends including core DH, PV, Sudha & Mayura	8	1.8	0.6	1	2	1	1
DH, PV, Sudha & Mayura Reel wrappers / Miscellaneous sweep / Bale pattie waste	6	2	0.9	1.2	1.2	0.9	0.9
Sudha & Mayura Print waste & unsolds - Magazine	1	0.4	0.9	0.4	0.6	0.9	0.05
Miscellaneous Tissue/Mixed White waste / Carton boxs	2	0.2	0.3	0.4	0.2	0.5	0.2

For clarification, Contact the Procurement Head at **45557340/ Mobile No; 9900042650.** Sealed Quotes/Tenders/mail may be addressed to Procurement Head **babu.v@printersmysore.co.in, venu.tl@printersmysore.co.in** and sent to the above address within 7 days from the date of this advertisement.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ-ಇಪಿ-23/895/2025-26 ದಿನಾಂಕ: 26.06.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ

ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ಹೆಸರು : ಕೋಲಾರ ಜಿಲ್ಲೆ ಮತ್ತು ತಾಲ್ಲೂಕಿನ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ರಾಷ್ಟ್ರೀಯ ಹೆದ್ದಾರಿಗೆ ಅಡ್ಡವಾಗಿ ಆರ್‌ಸಿಸಿ ಬಾಕ್ಸ್ ಕಲ್ವರ್ಟ್ ನಿರ್ಮಾಣ ಮತ್ತು ರಸ್ತೆ ಮರುನಿರ್ಮಾಣ ಮಾಡವ ಕಾಮಗಾರಿ.

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 14.07.2025 ಸಂಜೆ 4.00 ಗಂಟೆಯವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/-
ಮುಖ್ಯ ಅಭಿಯಂತರರು-1, ಕೆಐಎಡಿಬಿ, ಬೆಂಗಳೂರು

DIPR/CP/1494/NR/2025-26

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ

ಕಾಮಗಾರಿ ವಿಭಾಗ, ತುಮಕೂರು

ಸಂ: ಕರಾಸಾ/ಕಾನಿಅ/ತುವಿ/ಕಿಅ/199/2025-26 ದಿನಾಂಕ:25.06.2025

ಟೆಂಡರ್ ಪ್ರಕಟಣೆ ಸಂ. 09/2025-26
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪದ್ಧತಿಯಲ್ಲಿ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪದ್ಧತಿಯಲ್ಲಿನ ಕೆಲಸಗಳಿಗೆ ಕೆ.ಪಿ.ಡಬ್ಲ್ಯು.ಡಿ./ಸಿ.ಪಿ.ಡಬ್ಲ್ಯೂ.ಡಿ/ಎಂ.ಇ.ಎಸ್.ನಲ್ಲಿ ನೋಂದಾಯಿತರಾಗಿರುವ ಅರ್ಹ ಕಾಮಗಾರಿ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಕ್ಕೆ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು 'ಇ' ಆಡಳಿತದೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಲು ಕೋರಲಾಗಿದೆ. **ದಿನಾಂಕ: 30.06.2025 ರಿಂದ** ಯಾವುದೇ ವೆಚ್ಚವಿಲ್ಲದೆ http://kppp.karnataka.gov.in ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ವಿವರಗಳನ್ನು ಪಡೆದುಕೊಳ್ಳಬಹುದು.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರಿಗಿಟ್ಟಮೊತ್ತ (ರೂ. ಲಕ್ಷಗಳಲ್ಲಿ)	ಮುಂಗಡ ಠೇವಣಿ ಹಣ ರೂ.ಗಳಲ್ಲಿ	ಕಾಲಾವಧಿ ತಿಂಗಳಲ್ಲಿ (ಮಳೆಗಾಲ ಸೇರಿ)
1	ಚಿತ್ರದುರ್ಗ ವ್ಯಾಪ್ತಿಯ ಸರ್ವೆ ನಂ. 9/1ಎ ಕೆಳಗೋಟೆಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥವನ್ನು ನಿರ್ಮಿಸುವ ಕಾಮಗಾರಿ.	628.12	9,42,200	11 ತಿಂಗಳು

ಹೆಚ್ಚಿನ ಮಾಹಿತಿಗಳನ್ನು ಕಾರ್ಯನಿರ್ವಾಹಕ ಅಭಿಯಂತರು, ಕ.ರಾ.ರ.ಸಾ.ನಿ ಕಾಮಗಾರಿ ವಿಭಾಗ, ತುಮಕೂರು ಬಸ್ ನಿಲ್ದಾಣ, ತುಮಕೂರು ಇಲ್ಲಿ ಕಚೇರಿ ದಿನಗಳಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/-
ಕಾರ್ಯನಿರ್ವಾಹಕ ಅಭಿಯಂತರರು,
ಕಾಮಗಾರಿ ವಿಭಾಗ, ತುಮಕೂರು.

ವಾಸಾಸಂಇ/ವಾಪ್ರ/ಜಿಎ/1488/2025-26

BANGALORE ELEVATED TOLLWAY PVT. LIMITED

Office: Main Base Camp, Opp. Moog Controls Limited,
KIADB Road, Electronic City Phase I, Bangalore-560100.
Tele: 080-28520758 / 27821760 Email: betpl@highwayconcessions.com
BETPL

PUBLIC NOTICE

The public is hereby informed that, user fee for the use of Elevated section from Km 8.765 to Km 18.750 (Central Silk Board Junction to Electronics City) and at grade section from Km 8.765 to Km 33.130 (Central Silk Board Junction to Karnataka-Tamilnadu Boarder) in Bangalore-Hosur section of NH-44(Old NH-7) in the State of Karnataka are revised as per Wholesale Price Index (WPI) as on 31st March 2025 **(Ref.:NHAI/11015/NH-7/2025-26/PIU-BNG(EXP)/525 dt. 24.06.2025).**

The revised fee for the period from 1st July 2025 to 30th June 2026 calculated based on WPI as on 31st March 2025, are indicated in Tables 1 and 2 below.

Fee Rate for use of Elevated Section

Sl. No.	Category of Vehicle	Single journey	Multiple Journey	Monthly pass
1	Two Wheeler	25	40	755
2	Car, Jeep and Van	65	95	1885
3	LCV/Mini Bus	90	130	2640
4	Truck and Bus	175	265	5275
5	MAV	350	530	10550

Fee Rate for Fee Plaza at KM 32.700

Sl No	Category of Vehicle	Single journey	Multiple Journey	Monthly pass
1	Two Wheeler	0	0	0
2	Car, Jeep and Van	40	55	1130
3	LCV/Mini Bus	65	95	1885
4	Truck and Bus	125	190	3770
5	MAV	265	395	7915

Sd/- AUTHORIZED OFFICER
BANGALORE ELEVATED TOLLWAY PRIVATE LIMITED

ಸಕ್ಷಮ ಪ್ರಾಧಿಕಾರಿ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ, ರಾಷ್ಟ್ರೀಯ ಹೆದ್ದಾರಿಗಳು, ಮಿನಿ ವಿಧಾನಸೌಧ ಧಾರವಾಡ

ಸಾರ್ವಜನಿಕ ಅಂತಿಮ ತಿಳುವಳಿಕೆ ಪತ್ರ ಭೂಮಾಲಿಕರಿಗೆ/ಹಿತಾಸಕ್ತಿವುಳ್ಳ ಸಾರ್ವಜನಿಕರಿಗೆ

ಕರ್ನಾಟಕ ರಾಜ್ಯದ ಗದಗ ಜಿಲ್ಲೆಯ ಗಜೇಂದ್ರಗಡ ಪಟ್ಟಣಕ್ಕೆ ಬೈಪಾಸ್ ನಿರ್ಮಾಣಕ್ಕಾಗಿ ಸ್ವಾಧೀನಪಡಿಸಿಕೊಂಡಿರುವ ಭೂಮಿಗೆ ಪರಿಹಾರಧನ ಮೊತ್ತ ಪಾವತಿ ಮತ್ತು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ, ಗದಗ ಜಿಲ್ಲೆಯ ಗಜೇಂದ್ರಗಡ ತಾಲೂಕಿನ ಉಣಚಗೇರಿ, ಪುರ್ತಗೇರಿ ಹಾಗೂ ರಾಜೂರ ಗ್ರಾಮಗಳ ಜಮೀನುಗಳ ಮೂಲಕ ಹಾದು ಹೋಗುವ ಎನ್‌ಎಚ್-367 (ಭಾನಾಪುರ-ಗದ್ದನಕೇರಿ ಸೆಕ್ಸನ್) ರಲ್ಲಿ ಕಿ. ಮೀ 40.0 ರಿಂದ 47.00 ರವರೆಗೆ,

ಈ ಅಂತಿಮ ತಿಳುವಳಿಕೆ ಪತ್ರದ ಮೂಲಕ ಭೂಮಾಲಿಕರ/ಹಿತಾಸಕ್ತಿವುಳ್ಳ ಸಾರ್ವಜನಿಕರ ಆದ್ಯ ಗಮನಕ್ಕೆ ತರಲಾಗಿದೆ

- ಐತೀರ್ಪು ಘೋಷಣೆ ದಿನಾಂಕ: 18-10-2024 & 04-04-2025
- 60 ದಿನಗಳ ಅವಧಿಯಲ್ಲಿ ಭೂಪರಿಹಾರಧನ ಮೊತ್ತ ಪಡೆಯಲು ತಮಗೆ ತಿಳಿಸಲಾಗಿತ್ತು.
- ಭೂಮಾಲೀಕರು ಸದರಿ ಭೂಮಿಯ ಸ್ವಾಧೀನವನ್ನು ಕೆಳಗೆ ಸಹಿ ಮಾಡಿದವರಿಗೆ ಹಸ್ತಾಂತರಿಸುವಂತೆ ವಿನಂತಿಸಲಾಗಿದೆ.

ಅ. ನಂ	ಬೈಪಾಸ್ ಹೆಸರು	ಮೂಲ (Original)		ಹೆಚ್ಚುವರಿ (Additional)	
		ಪ್ರಕಟಗೊಳಿಸಿದ ದಿನಪತ್ರಿಕೆಗಳ ಹೆಸರು	ಪ್ರಕಟಗೊಳಿಸಿದ ದಿನಾಂಕ	ಪ್ರಕಟಗೊಳಿಸಿದ ದಿನಪತ್ರಿಕೆಗಳ ಹೆಸರು	ಪ್ರಕಟಗೊಳಿಸಿದ ದಿನಾಂಕ
1	ಗಜೇಂದ್ರಗಡ ಬೈಪಾಸ	"ವಿಜಯ ಕರ್ನಾಟಕ" ಮತ್ತು "ಪ್ರಜಾವಾಣಿ"	26-09-2024	"ಪ್ರಜಾವಾಣಿ" ಮತ್ತು "ವಿಜಯವಾಣಿ"	14-03-2025

ತಮ್ಮ ಬ್ಯಾಂಕ್ ಖಾತೆ ವಿವರಗಳನ್ನು ಸಲ್ಲಿಸಿದ ಭೂಮಾಲೀಕರ ಪರಿಹಾರದ ಮೊತ್ತವನ್ನು ಅವರವರ ಖಾತೆಗಳಿಗೆ ಜಮಾ ಮಾಡಲಾಗಿದೆ. ಇದಲ್ಲದೆ, ಉಳಿದ ಭೂಮಾಲೀಕರಿಗೆ ಪರಿಹಾರದ ಮೊತ್ತದ ಪಾವತಿಗೆ ಸಂಬಂಧಿಸಿದಂತೆ, ಮೊತ್ತವು ಈಗಾಗಲೇ **ದಿನಾಂಕ: 18-10-2024 & 04-04-2025** ರ ಸಾರ್ವಜನಿಕ ಸೂಚನೆಯ ಪ್ರಕಾರ ಟೆಂಡರ್ ಆಗಿರುವುದರಿಂದ ಅದರ ಪಾವತಿಗಳನ್ನು ಆದಷ್ಟು ಬೇಗ ಪಡೆಯಲು ಈ ಕಚೇರಿಯನ್ನು ಸಂಪರ್ಕಿಸಲು ಅವರಿಗೆ ಮೊತ್ತೊಮ್ಮೆ ಸೂಚಿಸಲಾಗಿದೆ.

ಅಂತೆಯೇ, ಎಲ್ಲಾ ಭೂಮಾಲೀಕರು/ಆಸಕ್ತಿ ವ್ಯಕ್ತಿಗಳು ಸ್ವಾಧೀನಪಡಿಸಿಕೊಂಡ ಭೂಮಿಯ ಸ್ವಾಧೀನವನ್ನು ಕೆಳಗೆ ಸಹಿ ಮಾಡಿದವರಿಗೆ ತಕ್ಷಣವೇ ಹಸ್ತಾಂತರಿಸುವಂತೆ ಇಲ್ಲಿ ಕೋರಲಾಗಿದೆ. ಇಲ್ಲದಿದ್ದರೆ 1956 ರಾಷ್ಟ್ರೀಯ ಹೆದ್ದಾರಿ ಕಾಯ್ದೆಯ ಸೆಕ್ಷನ್ 3Eನ ಉಪವಿಭಾಗ (2) ರ ಪ್ರಕಾರ ಪೋಲಿಸ್ ಸಹಾಯದಿಂದ ತೆಗೆದುಕೊಳ್ಳಲಾಗುವುದು.

ಸಹಿ/- (ಕ್ಯಾಪ್ಟನ್ ಶ್ರೀನಿವಾಸ ಗೌಡ.ವಿ)
ಸಕ್ಷಮ ಪ್ರಾಧಿಕಾರಿ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ,
ರಾಷ್ಟ್ರೀಯ ಹೆದ್ದಾರಿಗಳು, ಮಿನಿ ವಿಧಾನಸೌಧ, ಧಾರವಾಡ.

ನಗರಸಭೆ ಕಾರ್ಯಾಲಯ,ಜಮಖಂಡಿ

Website: www.jamkhandicity.mrc.gov.in Email ID:itstaff_ulb_jamkhandi@yahoo.co.in

ಕ್ರ.ಸಂ.:ನಸಜ/ಟೆಂಪ್ರ/15ನೇಹಯೋ/2025-26 ದಿನಾಂಕ :26-06-2025

::ಕೇ.ಪಿ.ಪಿ.ಪಿ- ಪೋರ್ಟಲ್ ಟೆಂಡರ ಪ್ರಕಟಣೆ ::

ಜಮಖಂಡಿ ನಗರಸಭೆಯ ಸನ್ 2025-26ನೇ ಸಾಲಿನ 15ನೇ ಹಣಕಾಸು ಮತ್ತು ಎಸ್.ಎಫ್.ಸಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಅನುದಾನದಲ್ಲಿಯ ಕಾಮಗಾರಿಗಳನ್ನು ಕೈಗೊಳ್ಳಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಮತ್ತು ನಿಯಮಗಳು 2000 ರಂತೆ ಈ ಕೆಳಗೆ ಕಾಣಿಸಿದ ಇಂಡೆಂಟ ನಂ. ಗಳ ಕಾಮಗಾರಿಗಳಿಗೆ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕೇ.ಪಿ.ಪಿ.ಪಿ ಪೋರ್ಟಲ್ ಮುಖಾಂತರ KW-1 & KW-2 ದ್ವಿ-ಲಕೋಟೆಯಲ್ಲಿ ಟೆಂಡರ ಆಹ್ವಾನಿಸಲಾಗಿದೆ. ಈ ಕೆಳಗಿನ ಕಾಮಗಾರಿಗಳಿಗೆ ಟೆಂಡರ ಸಲ್ಲಿಸುವ ಕೇ.ಪಿ.ಪಿ. ಪೋರ್ಟಲ್ ವೆಬ್ ಸೈಟ್ ವಿಳಾಸ: https://kppp.karnataka.gov.in, ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: 30/07/2025ರ ಸಾಯಂಕಾಲ 4-00 ಗಂಟೆವರೆಗೆ. ಹೆಚ್ಚಿನ ಮಾಹಿತಿಯನ್ನು ಈ ಕಾರ್ಯಾಲಯದ ತಾಂತ್ರಿಕ ಶಾಖೆಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ಟೆಂಡರ್‌ನಲ್ಲಿ ಯಾವುದೇ ತಿದ್ದುಪಡಿ ಇದ್ದರೆ ಕೇವಲ್ ಕೇ.ಪಿ.ಪಿ ಪೋರ್ಟಲ್‌ನಲ್ಲಿ ಮಾಡಲಾಗುವುದು. ಕಾಮಗಾರಿಗಳ ಇಂಡೆಂಟ್‌ಗಳ ವಿವರ ಈ ಕೆಳಗಿನಂತಿರುತ್ತದೆ.

ಕ್ರ.ಸಂ	ಇಂಡೆಂಟ ನಂ	ಮೀಸಲಾತಿ	ಕ್ರ.ಸಂ	ಇಂಡೆಂಟ ನಂ	ಮೀಸಲಾತಿ
1	DMA/2025 -26/WS/WORK_INDENT41977	ಪ.ಪಂಗಡ	11	DMA/2025 -26/EL/WORK_INDENT42062	ಕ್ಯಾಟಗರಿ 1
2	DMA/2025 -26/WS/WORK_INDENT41978	ಸಾಮಾನ್ಯ	12	DMA/2025 -26/WS/WORK_INDENT42065	ಪ.ಜಾತಿ
3	DMA/2025 -26/WS/WORK_INDENT41979	ಸಾಮಾನ್ಯ	13	DMA/2025 -26/OW/WORK_INDENT42077	ಸಾಮಾನ್ಯ
4	DMA/2025 -26/WS/WORK_INDENT41980	ಪ.ಪಂಗಡ	14	DMA/2025 -26/RD/WORK_INDENT42078	ಸಾಮಾನ್ಯ
5	DMA/2025 -26/WS/WORK_INDENT41981	ಕ್ಯಾಟಗರಿ 2(ಎ)	15	DMA/2025 -26/RD/WORK_INDENT42081	ಸಾಮಾನ್ಯ
6	DMA/2025 -26/RD/WORK_INDENT41983	ಸಾಮಾನ್ಯ	16	DMA/2025 -26/RD/WORK_INDENT42084	ಸಾಮಾನ್ಯ
7	DMA/2025 -26/RD/WORK_INDENT41984	ಸಾಮಾನ್ಯ	17	DMA/2025 -26/RD/WORK_INDENT42085	ಸಾಮಾನ್ಯ
8	DMA/2025 -26/RD/WORK_INDENT41985	ಸಾಮಾನ್ಯ	18	DMA/2025 -26/OW/WORK_INDENT42086	ಪ.ಜಾತಿ
9	DMA/2025 -26/RD/WORK_INDENT41986	ಸಾಮಾನ್ಯ	19	DMA/2025 -26/OW/WORK_INDENT42088	ಪ.ಜಾತಿ
10	DMA/2025 -26/WS/WORK_INDENT41987	ಕ್ಯಾಟಗರಿ 2(ಎ)	20	DMA/2025 -26/RD/WORK_INDENT42090	ಸಾಮಾನ್ಯ

ಸಹಿ/-(ಶ್ರೀ ಜ್ಯೋತಿಗಿರೀಶ ಎಸ್) ಪೌರಾಯುಕ್ತರು ನಗರಸಭೆ ಜಮಖಂಡಿ
ಸಹಿ/-(ಶ್ರೀಮತಿ ರೇಖಾ ಕಾಂಬಳೆ) ಉಪಾಧ್ಯಕ್ಷರು ನಗರಸಭೆ ಜಮಖಂಡಿ
ಸಹಿ/-(ಶ್ರೀ ಪರಮಗೊಂಡ ಗವರೋಜಿ) ಅಧ್ಯಕ್ಷರು ನಗರಸಭೆ ಜಮಖಂಡಿ

DIPR/BGK/RO-NO-141/KSMCA/2025-26

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ, ಬೆಂಗಳೂರು

ಕರ್ನಾಟಕ ಸರ್ಕಾರ
(ಕರ್ನಾಟಕ ಸರ್ಕಾರದ ಅಂಗ ಸಂಸ್ಥೆ)
ನಂ.8, ಎಂಎಸ್‌ಬಿ-1, 6ನೇ ಮತ್ತು 7ನೇ ಮಹಡಿ, ಕರ್ನಾಟಕ ಮಾರ್ಕೆಟಿಂಗ್ ಫೆಡರೇಷನ್ ಬಿಲ್ಡಿಂಗ್, ಕನ್ನಿಂಗ್‌ಹ್ಯಾಂ ರೋಡ್, ಬೆಂಗಳೂರು – 560052.

No: KREIS/INFR/OTH/103/2025-ADMN/E-217056 ದಿನಾಂಕ: 26.06.2025

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ **ವಸತಿ ಶಾಲೆ/ಕಾಲೇಜುಗಳಿಗೆ ವಾಟರ್ ಪ್ಯೂರಿಫೈಯರ್‌ಗಳನ್ನು ಒದಗಿಸಲು ಬೆಳಗಾವಿ, ಬೆಂಗಳೂರು, ಕಲಬುರಗಿ ಮತ್ತು ಮೈಸೂರು ಕಂದಾಯ ವಿಭಾಗವಾರು** ಕ್ರಮವಾಗಿ ಇ-ಪೋರ್ಟಲ್ ಮುಖಾಂತರ ಆಹ್ವಾನಿಸಲಾದ ಟೆಂಡರ್ ಇಂಡೆಂಟ್ ಸಂಖ್ಯೆ: **KREIS/2025-26/IND0077, KREIS/2025-26/ IND0078, KREIS/2025-26/IND0079** ಮತ್ತು **KREIS/2025-26/ IND0080** ದಿನಾಂಕ: 26.06.2025ರಂದು ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, **ಸದರಿ ಟೆಂಡರ್‌ಗಳಿಗೆ ಅಂತಿಮ ದಿನಾಂಕ: 25.07.2025 ರಂದು** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ರಲ್ಲಿ ನೋಡಬಹುದಾಗಿದೆ.

ಸಹಿ/- ಜಂಟಿ ನಿರ್ದೇಶಕರು (ಆಡಳಿತ)
ಹಾಗೂ ಟೆಂಡರ್ ಆಹ್ವಾನ ಪ್ರಾಧಿಕಾರ, ಕ.ವ.ಶಿ.ಸಂ.ಸಂಘ

DIPR/CP/YC/1491/2025-26

ಪುರಸಭೆ ಕಾರ್ಯಾಲಯ, ಗಜೇಂದ್ರಗಡ

ಕ್ರಸಂ:ಪುಸಗ/ಕಾವಿ/ಎಸ್.ಡಿ.ಎಂ.ಎಫ್/ವಹಿ-/2025-26 ದಿನಾಂಕ:26-06-2025

ಅಲ್ಪಾವಧಿ ಟೆಂಡರ್ ಪ್ರಕಟಣೆ-ಕೆಪಿಪಿಪಿ ಪೋರ್ಟಲ್ ಮೂಲಕ

(1) ಕರ್ನಾಟಕ ಪಾರದರ್ಶಕತೆ ಅಧಿನಿಯಮ-2000ರ ಪ್ರಕಾರ "ಇ-ಪ್ರೊಕ್ಯೂರ್‌ಮೆಂಟ್" ಪದ್ಧತಿಯಲ್ಲಿ ಗಜೇಂದ್ರಗಡ ಪುರಸಭೆಗೆ SDMF ಯೋಜನೆಯಡಿಯಲ್ಲಿ ಬಿಡುಗಡೆಯಾದ ಅನುದಾನದಲ್ಲಿ DMA/2025-26/OW/WORK_INDENT742948 ಕಾಮಗಾರಿ ಅನುಷ್ಠಾನಕ್ಕಾಗಿ ಕೆ.ಡಬ್ಲ್ಯು-1,2, ದಸ್ತಾವೇಜ್‌ನಲ್ಲಿ https://kppp.karnataka.gov.in/ ಪೋರ್ಟಲ್‌ನಲ್ಲಿ ನೊಂದಾಯಿಸಲ್ಪಟ್ಟ ಮತ್ತು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಕೆಪಿಪಿಪಿ ಪೋರ್ಟಲ್ ದಾಖಲೆಗಳಿಗಾಗಿ https://kppp.karnataka.gov.in/ರ ಮೂಲಕ ಕೆಳಗೆ ನಮೂದಿಸಿರುವ ದಿನಾಂಕದಂದು ಆನ್‌ಲೈನ್ ಮೂಲಕವೇ ಟೆಂಡರ್ ಸಲ್ಲಿಸುವುದು. **(2)** ಕೆಪಿಪಿಪಿ ಪೋರ್ಟಲ್ ಪದ್ಧತಿಯಲ್ಲಿ ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 08-07-2025** ಸಾಯಂಕಾಲ **5:00** ಗಂಟೆಯ ವರೆಗೆ **(3)** ಟೆಂಡರನ್ನು ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 10-07-2025** ರಂದು ಸಮಯ ಮುಂಜಾನೆ **10:30** ಗಂಟೆಗೆ (4) ಟೆಂಡರ್‌ನ್ನು ಆರ್ಥಿಕ ಬಿಡ್ಡ ತೆರೆಯುವ ದಿನಾಂಕ:14-07-2025 ರಂದು ಸಮಯ ಮುಂಜಾನೆ 10:30ಗಂಟೆಗೆ (5) ನಿಗಧಿಪಡಿಸಿದ ದಿನಾಂಕಗಳು ಒಂದು ವೇಳೆ ರಜಾ ದಿನಗಳನ್ನಾಗಿ ಘೋಷಿಸಲ್ಪಟ್ಟರೆ ಮುಂದಿನ ದಿನಾಂಕವನ್ನು ಪರಿಗಣಿಸಲಾಗುವುದು. ಈ ಕಚೇರಿಯಲ್ಲಿ ಯಾವುದೇ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲಾ. ಕಾಮಗಾರಿ ಇ.ಎಮ್.ಡಿ ಪೂರ್ಣಗೊಳಿಸುವ ಅವಧಿ, ಗುತ್ತಿಗೆದಾರರ ದರ್ಜೆ ಹಾಗೂ ಇನ್ನಿತರ ಹೆಚ್ಚಿನ ಮಾಹಿತಿ ಹಾಗೂ ಷರತ್ತುಗಳಿಗೆ ಕಚೇರಿಯ ವೆಬ್‌ಸೈಟ್ https://kppp.karnataka.gov.in/ ಹಾಗೂ ಕಚೇರಿ ವೇಳೆಯಲ್ಲಿ ಸಂಬಂಧಿಸಿದ ಶಾಖೆಯಲ್ಲಿ ಮಾಹಿತಿಯನ್ನು ಪಡೆಯಬಹುದು. ಇ-ಪೋರ್ಟಲ್‌ನ ಎಲ್ಲ ಷರತ್ತುಗಳು ಅನ್ವಯಿಸುತ್ತವೆ. ಹಾಗೂ ಟೆಂಡರ್ ಮಂಜೂರು ವ ನಾಮಂಜೂರ ಮಾಡುವ ಅಧಿಕಾರವನ್ನು ಪುರಸಭೆಯು ಕಾಯ್ದಿರಿಸಿಕೊಂಡಿದೆ.

ಸಹಿ/- ಮುಖ್ಯಾಧಿಕಾರಿ ಪುರಸಭೆ ಗಜೇಂದ್ರಗಡ
ಸಹಿ/- ಅಧ್ಯಕ್ಷರು ಪುರಸಭೆ ಗಜೇಂದ್ರಗಡ

ವಾ.ಸಾ.ಇ/ಗದಗ/137/ದೇಶಪಾಂಡೆಪಬ್ಲಿಸಿಟಿ/2025-26

ಕ-ರೈಡ್

ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
(ಕರ್ನಾಟಕ ಸರ್ಕಾರ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ಬೆಂಗಳೂರು ಉಪನಗರ ರೈಲು ಯೋಜನೆ

Website: **www.kride.in** | Email ID: **gmprocurement@kride.in**

ಇ-ಟೆಂಡರ್ ಪ್ರಕಟಣೆ

Tender Notice No.: **KRIDE/2024-25/OW/WORK_INDENT30/CALL-3 Date:24/06/2025**
ಬೆಂಗಳೂರು ಉಪನಗರ ರೈಲ್ವೆ ಯೋಜನೆಯ ಕಾರಿಡಾರ್ 2 ರಲ್ಲಿ ಮೋಹನ್ ಕುಮಾರ್ ರಸ್ತೆ, ಜಯರಾಮ್ ಕಾಲೋನಿ ಕೊಳಗೇರಿ, ಮತ್ತು ಇತರ ಪ್ರದೇಶಗಳಲ್ಲಿ BWSSBಯ ನೀರು ಮತ್ತು ಒಳಚರಂಡಿ ಮಾರ್ಗಗಳ ಸ್ಥಳಾಂತರ, ಬದಲಾವಣೆ ಮತ್ತು ತಿರುವಿಗಾಗಿ ಅಗತ್ಯ ಅನುಮತಿಗಳನ್ನು ಒಳಗೊಂಡಂತೆ ಮತ್ತು ಉಪಯುಕ್ತತೆಯ ಪಾಲುದಾರರೊಂದಿಗೆ ಸಮನ್ವಯಕ್ಕೆ ಸಂಬಂಧಿಸಿದ ಅನುಮೋದನೆಗಾಗಿ ಮತ್ತು ಕಾಮಗಾರಿಗಳಿಗಾಗಿ ಟೆಂಡರನ್ನು ಆಹ್ವಾನಿಸಲಾಗಿದೆ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 14.07.2025, ಮಧ್ಯಾಹ್ನ 15.00 ಗಂಟೆ.
ವಿವರಗಳಿಗೆ **https://kppp.karnataka.gov.in** ಇಲ್ಲಿಗೆ ಭೇಟಿಕೊಡಿ.

Tender Notice No.: KRIDE/HR/GMIGPA/2025 Date: 25/06/2025
Tender ID: 2025_KRIDE_239431_1
ಕ-ರೈಡ್ ನ ಎಲ್ಲಾ ಉದ್ಯೋಗಿಗಳು/ಅಧಿಕಾರಿಗಳು ಮತ್ತು ಅವಲಂಬಿತ ಕುಟುಂಬ ಸದಸ್ಯರಿಗೆ ಗುಂಪು ವೈದ್ಯಕೀಯ ವಿಮಾ ಪಾಲಿಸಿ ಮತ್ತು ಕ-ರೈಡ್‌ನ ಎಲ್ಲಾ ಉದ್ಯೋಗಿಗಳು/ಅಧಿಕಾರಿಗಳಿಗೆ ಗುಂಪು ವೈಯಕ್ತಿಕ ಅಪಘಾತ ವಿಮಾ ಪಾಲಿಸಿಗಾಗಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 15.07.2025, ಮಧ್ಯಾಹ್ನ 15.00 ಗಂಟೆ.
ವಿವರಗಳಿಗೆ **https://etenders.gov.in/eprocure/app** ಇಲ್ಲಿಗೆ ಭೇಟಿಕೊಡಿ.

Tender Notice No.: K-RIDE/BSRP/C4/Track Laying/2025 Date: 10/04/2025.
Tender ID: 2025_KRIDE_232476_1 PACKAGE – C4 Track
ಬಿಎಸ್‌ಆರ್‌ಪಿಯ ಕಾರಿಡಾರ್ 4ರಲ್ಲಿ ಹೀಲಲಿಗೆಯಿಂದ ರಾಜನಕುಂಟೆವರೆಗಿನ ಚೈನೇಜ್ (–) 635 ರಿಂದ ಚೈನೇಜ್ 46,985 ಮೀ ವರೆಗೆ ಬ್ಯಾಲೆಸ್ಟ್‌ಲೆಸ್, ಬ್ಯಾಲೆಸ್ಟೆಡ್ ಟ್ರ್ಯಾಕ್, ಫಾಸ್ಟನಿಂಗ್ ಸಿಸ್ಟಮ್ ಮತ್ತು ಟರ್ನ್ ಔಟ್ಸ್ ಗಳ ವಿನ್ಯಾಸ, ಪೂರೈಕೆ, ಸ್ಥಾಪನೆ, ಪರೀಕ್ಷೆ ಮತ್ತು ಕಾರ್ಯಾರಂಭಕ್ಕೆ ಟೆಂಡರ್ ಆಹ್ವಾನಿಸಲಾಗಿದೆ
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 09.08.2025, ಮಧ್ಯಾಹ್ನ 15.00 ಗಂಟೆ.
ವಿವರಗಳಿಗೆ **https://etenders.gov.in/eprocure/app** ಇಲ್ಲಿಗೆ ಭೇಟಿಕೊಡಿ.

DIPR/CP/1487/Zen/2025-26 ಸಹಿ/- ಪ್ರಧಾನ ವ್ಯವಸ್ಥಾಪಕರು/ಪ್ರೊಕ್ಯೂರ್‌ಮೆಂಟ್/ಕ-ರೈಡ್

KridePrm | Kride Bsrp | kride_bsrp | KRIDE,BSRP

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕರ್ನಾಟಕ ಸರ್ಕಾರ
ಜಿಲ್ಲಾ ಮಕ್ಕಳ ರಕ್ಷಣಾ ಘಟಕ
ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳ ಕಾರ್ಯಾಲಯ,
ಬಿ4/3 ವಿವೇಕ ನಗರ ಪಶ್ಚಿಮ,ವಿಜಯಪುರ-586103
ಕಛೇರಿ ವಿಳಾಸ: ದೂರವಾಣಿ ಸಂಖ್ಯೆ:- 08352-276354
ಇ-ಮೇಲ್ ವಿಳಾಸ:- dcpobijapur@gmail.com

ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ವಿಜಯಪುರ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಉಪಯೋಗಕ್ಕಾಗಿ 2025-26 ನೇ ಸಾಲಿನ ಒಂದು ವರ್ಷದ ಅವಧಿಗೆ ಹಳದಿ ಬೋರ್ಡ ಹೊಂದಿದ ಉತ್ತಮ ಗುಣಮಟ್ಟದ/ಸುಸ್ಥಿತಿಯಲ್ಲಿ ಇರುವ ಸ್ವಿಫ್ಟ್ ಡಿಜೈರ್, ಸ್ಕಾರಪಿಯೋ, ಇಂಡಿಕಾ ಬೋಲ್ಟ್, ಇಂಡಿಕಾ (ವಿಸ್ಟಾ), ಎರಟಿಗಾ, ಐ 20, ಟಾಟಾ ಇಂಡಿಗೊ, ಟಾಟಾ ಸುಮೋ ಅಥವಾ ಬೊಲೆರೋ ವಾಹನವುಳ್ಳ ಟ್ರಾವೆಲ್ಸ್ ಸಂಸ್ಥೆಯವರಿಂದ ಬಾಡಿಗೆ ಆಧಾರದ ಮೇಲೆ ಒಂದು ಬಾಡಿಗೆ ವಾಹನವನ್ನು ಪಡೆಯಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಕರೆಯಲಾಗಿದೆ. ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜುಗಳಲ್ಲಿ ಲಭ್ಯವಿದ್ದು, "www.eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು. ಪ್ರಕಟಣೆ ವಿವರ ಕೆಳಗಿನಂತಿದೆ.

1)ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ : 24.06.2025
2) ಟೆಂಡರ್ ಫಾರಂ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ : 23.07.2025 ಸಾಯಂಕಾಲ 3.00 ಘಂಟೆ.
3) ಟೆಂಡರ್ ಅಂದಾಜು ಮೌಲ್ಯ ರೂ. 4,80,000/-
4) ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತವನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ಸಲ್ಲಿಸುವುದು. ರೂ.12,000/-
5) ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ :24.07.2025 ಸಾಯಂಕಾಲ 3.01 ಘಂಟೆ.
6) ಆರ್ಥಿಕ ಲಕೋಟೆಯನ್ನು ತೆರೆಯುವ ದಿನಾಂಕ : 28.07.2025 ಬೆಳಿಗ್ಗೆ 11:00 ಘಂಟೆ.
7) ಹೆಚ್ಚಿನ ಮಾಹಿತಿಗಾಗಿ ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ: ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿವೇಕ ನಗರ ಪಶ್ಚಿಮ, ವಿಜಯಪುರ ದೂರವಾಣಿ ಸಂಖ್ಯೆ: 9886122292, e-mail id: dcpobijapur@gmail.com

Website: www.eproc.karnataka.gov.in

ಸಹಿ/- ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು,
ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ವಿಜಯಪುರ

ವಾಸಾಸಂಇ/ವಿಜಯಪುರ/152/ಕೆಎಸ್‌ಎಂಸಿಎ/2025-26

ಚಿಟಿಕೆ ಸುದ್ದಿ

ತಿಪ್ಪಗೊಂಡನಹಳ್ಳಿ ಜಲಾಶಯ ಉಳಿವಿಗೆ ವಿಚಾರಸಂಕಿಣ 28ಕ್ಕೆ

ಬೆಂಗಳೂರು: ಆಮ್ ಆದ್ಮಿ ಪಕ್ಷದಿಂದ (ಎಎಪಿ) ಜೂನ್ 28ರಂದು ಬಳ್ಳಾರಿ ರಸ್ತೆಯಲ್ಲಿರುವ ಅಖಿಲ ಭಾರತ ವೀರಶೈವ ಮಹಾಸಭಾದ ಸಭಾಂಗಣದಲ್ಲಿ 'ತಿಪ್ಪಗೊಂಡನಹಳ್ಳಿ ಜಲಾಶಯ ಉಳಿಸಿ, ಬೆಂಗಳೂರನ್ನು ರಕ್ಷಿಸಿ' ಎಂಬ ವಿಚಾರಸಂಕಿರಣ ಹಮ್ಮಿಕೊಳ್ಳಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಎಪಿ ರಾಜ್ಯ ಘಟಕದ ಕಾರ್ಯಾಧ್ಯಕ್ಷ ಸೀತಾರಾಮ್ ಗುಂಡಪ್ಪ ಮತ್ತು ಹೋರಾಟ ಸಮಿತಿ ಸಂಚಾಲಕ ಶಶಿಧರ್ ಸಿ. ಆರಾಧ್ಯ, 'ಅರ್ಕಾವತಿ ನದಿಯ ತಿಪ್ಪಗೊಂಡನಹಳ್ಳಿ ಜಲಾಶಯದ ಬಫರ್ ವಲಯವನ್ನು 500 ಮೀಟರ್‌ನಿಂದ 30 ಮೀಟರ್‌ಗೆ ಇಳಿಸಲು ಸರ್ಕಾರ ಕೈಗೊಂಡಿರುವ ನಿರ್ಣಯ ಖಂಡನೀಯ. ಬಫರ್ ವಲಯವನ್ನು ಕಡಿಮೆ ಮಾಡಿರುವುದರಿಂದ ಬೆಂಗಳೂರು ನಗರಕ್ಕೆ ಪೂರೈಕೆ ಆಗುವ ಕುಡಿಯುವ ನೀರು ಮತ್ತಷ್ಟು ಕಲುಷಿತ ಆಗುವ ಸಾಧ್ಯತೆ ಇದೆ. ಇದರ ಸಾಧಕ–ಬಾಧಕಗಳ ಕುರಿತು ವಿಚಾರಸಂಕಿರಣದಲ್ಲಿ ಚರ್ಚಿಸಲಾಗುವುದು' ಎಂದರು.

ಶಾಲಾ ಬಸ್ ಅಪಘಾತ: ವಿದ್ಯಾರ್ಥಿಗಳಿಗೆ ಗಾಯ

ಅಪಘಾತಕ್ಕೀಡಾದ ಶಾಲಾ ವಾಹನ

ನೆಲಮಂಗಲ: ಬೆಂಗಳೂರು ಉತ್ತರ ತಾಲ್ಲೂಕಿನ ಲಕ್ಷ್ಮಿಪುರದಲ್ಲಿ ಗುರುವಾರ ಬೆಳಿಗ್ಗೆ ಶಾಲಾ ವಾಹನ ಮತ್ತು ಲಾರಿ ಮಧ್ಯೆ ಅಪಘಾತ ಸಂಭವಿಸಿದ್ದು, ಶಾಲಾ ಮಕ್ಕಳಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಶಾಲಾ ವಾಹನದ ಚಾಲಕ ಎದುರಿನ ವಾಹನ ಹಿಂದಿಕ್ಕುವಾಗ ಅಪಘಾತವಾಗಿದೆ.

ಘಟನೆಯಲ್ಲಿ ಐವರು ಮಕ್ಕಳಿಗೆ ಗಾಯವಾಗಿದೆ. ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಎಲ್ಲರನ್ನೂ ಮನೆಗೆ ಕಳುಹಿಸಲಾಗಿದೆ ಎಂದು ಪೊಲೀಸರು ಹೇಳಿದರು.

ತಿಂಗಳ ಹಿಂದೆಯೂ ಶಾಲಾ ವಾಹನಗಳ ಮಧ್ಯೆ ಅಪಘಾತವಾಗಿತ್ತು. ಎಲ್ಲ ಶಾಲೆಗಳಿಗೂ ಎಚ್ಚರಿಕೆ ನೀಡಿದ್ದರೂ, ನಿರ್ಲಕ್ಷ್ಯದಿಂದ ವಾಹನ ಚಾಲನೆ ಮಾಡುತ್ತಿರುವವರನ್ನು ಬದಲಾವಣೆ ಮಾಡಿಲ್ಲ ಎಂದು ಇನ್‌ಸ್ಪೆಕ್ಟರ್ ಮುರಳೀಧರ್ ಹೇಳಿದರು.

ವಿಜಯಕುಮಾರ್‌ಗೆ 'ರೋಹಿತ್ ಪತ್ರಿಕೋದ್ಯಮ ಪ್ರಶಸ್ತಿ'

ಬೆಂಗಳೂರು: ಭಾರತೀಯ ಸಮೂಹ ಮಾಧ್ಯಮ ಮತ್ತು ಸಂಶೋಧನಾ ಸಂಸ್ಥೆ (ಐಎಂಎಸ್‌ಆರ್) ನೀಡುವ 'ರೋಹಿತ್ ಪತ್ರಿಕೋದ್ಯಮ ಪ್ರಶಸ್ತಿ'ಗೆ 'ಉದಯವಾಣಿ' ವರದಿಗಾರ ವಿಜಯಕುಮಾರ್ ಚಂದರಗಿ ಆಯ್ಕೆಯಾಗಿದ್ದಾರೆ.

ವಿಜಯಕುಮಾರ್ ಚಂದರಗಿ

ಪ್ರಶಸ್ತಿಯು ₹ 5 ಸಾವಿರ ನಗದು, ಫಲಕವನ್ನು ಒಳಗೊಂಡಿದೆ. ಧಾರವಾಡದವರಾದ ವಿಜಯಕುಮಾರ್ ಚಂದರಗಿ, ಶಿವಮೊಗ್ಗ ಸೇರಿದಂತೆ ವಿವಿಧೆಡೆ ಕೆಲಸ ಮಾಡಿದ್ದಾರೆ. ಸದ್ಯ ಬೆಂಗಳೂರಿನಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ತುಮಕೂರು ಜಿಲ್ಲೆಯ ರೋಹಿತ್ ಅವರು, 'ಟೈಮ್ಸ್ ಆಫ್ ಇಂಡಿಯಾ' ಸೇರಿದಂತೆ ವಿವಿಧ ಆಂಗ್ಲ ಪತ್ರಿಕೆಗಳಲ್ಲಿ ವರದಿಗಾರರಾಗಿ ಕಾರ್ಯನಿರ್ವಹಿಸಿದ್ದರು. ಮೃತ ರೋಹಿತ್ ಅವರ ಹೆಸರಿನಲ್ಲಿ ಅವರ ತಂದೆ ರಾಜಣ್ಣ ಮತ್ತು ತಾಯಿ ಲಲಿತಾ ಅವರು ಈ ಪ್ರಶಸ್ತಿ ಸ್ಥಾಪಿಸಿದ್ದಾರೆ

ಜುಲೈ 5ರಂದು ಬೆಳಿಗ್ಗೆ 10.30ಕ್ಕೆ ಇಲ್ಲಿನ ಶೇಷಾದ್ರಿಪುರಂ ಕಾಲೇಜಿನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಪ್ರಶಸ್ತಿ ಪ್ರದಾನ ಮಾಡುತ್ತಾರೆ ಎಂದು ಸಂಸ್ಥೆಯ ಆಡಳಿತ ಮಂಡಳಿ ಸದಸ್ಯ ಎಚ್.ಆರ್. ಶ್ರೀಶ ತಿಳಿಸಿದ್ದಾರೆ.

ಸೆಮೀಸ್‌ಗೆ ಮಹಾರಾಜ ಸೋಷಿಯಲ್ಸ್

ಬೆಂಗಳೂರು: ಮಹಾರಾಜ ಸೋಷಿಯಲ್ಸ್ ಎಫ್‌ಸಿ ತಂಡವು ಬಿಡಿಎಫ್‌ಎ 'ಸಿ' ಡಿವಿಷನ್ ಫುಟ್‌ಬಾಲ್ ಲೀಗ್‌ನಲ್ಲಿ ಇಂದಿರಾನಗರ ಎಫ್‌ಸಿ ತಂಡವನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯವು ನಿಗದಿತ ಸಮಯದಲ್ಲಿ ಗೋಲು ರಹಿತವಾಗಿ ಡ್ರಾಗೊಂಡಿತ್ತು. ಟೈ ಬ್ರೇಕರ್‌ನಲ್ಲಿ ಮಹಾರಾಜ ಸೋಷಿಯಲ್ಸ್ 4–3ರಿಂದ ಜಯಿಸಿತು.

ಮತ್ತೊಂದು ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಪಿಳ್ಳಣ್ಣ ಗಾರ್ಡನ್ ಎಫ್‌ಸಿ ತಂಡವು 2–0ರಿಂದ ಕೊಂಕಣ್ ಎಫ್‌ಸಿ ತಂಡವನ್ನು ಸೋಲಿಸಿತು. ಪಿಳ್ಳಣ್ಣ ಗಾರ್ಡನ್ ತಂಡದ ಪ್ರಭು ಎಸ್. (18ನೇ ನಿ.) ಹಾಗೂ ಸ್ಟೀಫನ್ ಎ. (36ನೇ ನಿ.) ತಲಾ ಒಂದು ಗೋಲು ಗಳಿಸಿದರು.

ನೇಪಾಳಿ ಗ್ಯಾಂಗ್ ಬಂಧನವೇ ಸವಾಲು

ಆರೋಪಿಗಳ ಪತ್ತೆಹಚ್ಚಿದರೂ ಕರೆತರಲು ತಾಂತ್ರಿಕ ಸಮಸ್ಯೆ

• ಕೆ.ಎಸ್.ಸುನಿಲ್

ಬೆಂಗಳೂರು: ಮನೆಗೆಲಸ ಹಾಗೂ ಭದ್ರತಾ ಸಿಬ್ಬಂದಿಯಾಗಿ ಕೆಲಸಕ್ಕೆ ಸೇರುವ ನೇಪಾಳಿ ಗ್ಯಾಂಗ್, ನಗರದಲ್ಲಿ ಶ್ರೀಮಂತರ ಮನೆಗಳನ್ನೇ ಗುರಿಯಾಗಿಸಿಕೊಂಡು ಕನ್ನ ಹಾಕುವ ಪ್ರಕರಣಗಳು ಹೆಚ್ಚಾಗುತ್ತಿವೆ.

ಉದ್ಯೋಗ ಅರಸಿ ಬರುವ ನೇಪಾಳಿ ತಂಡಗಳು, ನಗರದಲ್ಲಿ ಸಂಘಟಿತವಾಗಿ ವ್ಯವಸ್ಥಿತ ರೀತಿಯಲ್ಲಿ ಸಂಚು ರೂಪಿಸಿ ಕಳ್ಳತನ ಮಾಡುತ್ತಿವೆ. ಈ ಸಂಬಂಧ ನಗರದ ವಿವಿಧ ಠಾಣೆಗಳಲ್ಲಿ ದರೋಡೆ ಪ್ರಕರಣಗಳು ದಾಖಲಾಗಿವೆ. ಈ ಗ್ಯಾಂಗ್ ಬಂಧನವೇ ಪೊಲೀಸರಿಗೆ ಸವಾಲಾಗಿ ಪರಿಣಮಿಸಿದೆ.

'ನೇಪಾಳದಿಂದ ಬಂದ ಕೆಲವರು ಮಾತ್ರ ಈ ಕೃತ್ಯದಲ್ಲಿ ತೊಡಗಿದ್ದಾರೆ. ಭದ್ರತಾ ಸಿಬ್ಬಂದಿ ಹಾಗೂ ಮನೆಕೆಲಸದ ನೆಪದಲ್ಲಿ ದಂಪತಿಯೊಂದಿಗೆ ಸೇರಿ ಮನೆಯ ಸಂಪೂರ್ಣ ಮಾಹಿತಿ ತಿಳಿದು, ದರೋಡೆ ಮಾಡುತ್ತಾರೆ. ಭದ್ರತಾ ಸಿಬ್ಬಂದಿ ಕೆಲಸ ಹಾಗೂ ಮನೆಗೆಲಸವನ್ನೇ ಮುಖ್ಯವಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಮನೆ, ಫ್ಲ್ಯಾಟ್‌ಗಳಲ್ಲಿ ಯಾರೂ ಇಲ್ಲದ ಸಮಯ ನೋಡಿ ಯೋಜನೆ ರೂಪಿಸಿ, ಕೃತ್ಯವೆಸಗುತ್ತಿದ್ದಾರೆ. ಈ ಬಗ್ಗೆ ಮನೆ ಮಾಲೀಕರು ಎಚ್ಚರಿಕೆ ವಹಿಸಬೇಕು' ಎಂದು ಪೊಲೀಸರು ಹೇಳಿದರು.

ಮುಖ್ಯಾಂಶಗಳು

- ಮನೆಗೆಲಸ, ಭದ್ರತಾ ಸಿಬ್ಬಂದಿಯ ವೃತ್ತಿ ಆಯ್ಕೆ
- ಬೆಲೆಬಾಳುವ ವಸ್ತುಗಳ ದೋಚಿ ನೇಪಾಳಕ್ಕೆ ಪರಾರಿ
- ಇಂಟರ್‌ಪೋಲ್ ನೆರವು ಬಯಸುವುದು ಪೊಲೀಸರಿಗೆ ಅನಿವಾರ್ಯ

ನೇಪಾಳಿ ಗ್ಯಾಂಗ್ ಆರಂಭದಲ್ಲಿ ಮಾಲೀಕರ ವಿಶ್ವಾಸ ಗಳಿಸಿ, ನಂತರ ಸಮಯ ಸಾಧಿಸಿ ಮನೆಗೆ ಕನ್ನ ಹಾಕಿ ನಗದು, ಚಿನ್ನಾಭರಣ ದೋಚಿ ಪರಾರಿಯಾಗುತ್ತದೆ. ಆರೋಪಿಗಳ ಪತ್ತೆಗೆ ಪೊಲೀಸರು ಹರಸಾಹಸ ಪಡುವಂತಾಗಿದೆ. ಮನೆ ಮಾಲೀಕರು ಕಾರ್ಯನಿಮಿತ್ತ ಊರು, ದೇವಸ್ಥಾನ, ಪ್ರವಾಸಕ್ಕೆ ತೆರಳಿದ್ದಾಗ ತಮ್ಮ ತಂಡದ ಸದಸ್ಯರನ್ನು ತಾವು ಕೆಲಸ ಮಾಡುವ ಮನೆಗಳಿಗೆ ಕರೆಸಿಕೊಂಡು ಅವರ ಜತೆ ಸೇರಿ ಕಳ್ಳತನ ಮಾಡುವುದು ಈ ಗ್ಯಾಂಗ್ ಕೆಲಸವಾಗಿದೆ.

ನಗರದಲ್ಲಿ ಕಾಂಗ್ರೆಸ್ ಮುಖಂಡರೊಬ್ಬರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ನೇಪಾಳದ ರಾಜ್ ಹಾಗೂ ದೀಪಾ ದಂಪತಿ ಮೇ 27ರಂದು ಸುಮಾರು ₹1.90 ಕೋಟಿ ಮೌಲ್ಯದ 2 ಕೆ.ಜಿ ಚಿನ್ನ, ₹10 ಲಕ್ಷ ನಗದು, ಪಿಸ್ತೂಲ್‌ನೊಂದಿಗೆ ಪರಾರಿಯಾಗಿದ್ದಾರೆ. ಮೂರು ತಿಂಗಳ ಹಿಂದೆಯಷ್ಟೇ ಮನೆಯ ಮಾಲೀಕರು ಪರಿಚಯಸ್ಥರ ಮೂಲಕ ದಂಪತಿಯನ್ನು ಕೆಲಸಕ್ಕೆ ನೇಮಿಸಿಕೊಂಡಿದ್ದರು.

ಕಳೆದ ವರ್ಷ ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯ ಅರಿಹಂತ್ ಚಿನ್ನಾಭರಣ ಅಂಗಡಿ ಮಾಲೀಕ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದ ನೇಪಾಳ ದಂಪತಿ, ಚಿನ್ನಾಭರಣ ಸೇರಿದಂತೆ ₹15.15 ಕೋಟಿ ಮೌಲ್ಯದ ವಸ್ತುಗಳನ್ನು ದೋಚಿ ಪರಾರಿಯಾಗಿದ್ದರು.

ನೇಪಾಳಕ್ಕೆ ತೆರಳಿದ್ದ ವಿಜಯನಗರ ಪೊಲೀಸರು 21 ದಿನ ಹುಡುಕಾಟ ನಡೆಸಿ, ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಆರೋಪಿಗಳನ್ನು ಪತ್ತೆ ಮಾಡುವಲ್ಲಿ ಯಶಸ್ವಿಯಾದರು. ಆದರೆ, ತಾಂತ್ರಿಕ ಸಮಸ್ಯೆಯಿಂದಾಗಿ ಆರೋಪಿಗಳನ್ನು ನೇಪಾಳದಿಂದ ನಗರಕ್ಕೆ ಕರೆತರಲು ಈವರೆಗೂ ಪೊಲೀಸರಿಗೆ ಸಾಧ್ಯವಾಗಿಲ್ಲ.

'ಆರೋಪಿಗಳು ನೇಪಾಳದಲ್ಲಿ ಇರುವುದರಿಂದ ನೇರವಾಗಿ ಬಂಧಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಅವರನ್ನು ಹಸ್ತಾಂತರ ಮಾಡುವಂತೆ ಇಂಟರ್‌ಪೋಲ್ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದರು.

ಕಳೆದ ವರ್ಷ ಸಂಜಯನಗರ ಠಾಣೆ ವ್ಯಾಪ್ತಿಯಲ್ಲಿ ಮಾಜಿ ಮೇಯರ್ ನಾರಾಯಣಸ್ವಾಮಿ ಮನೆಯಲ್ಲಿ ಕೆಲಸಕ್ಕಿದ್ದ ನೇಪಾಳದ ಭದ್ರತಾ ಸಿಬ್ಬಂದಿಯೇ ₹1.10 ಕೋಟಿ ಮೌಲ್ಯದ ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡಿದ್ದರು. ಇದೇ ರೀತಿ ಜಯನಗರ ಠಾಣಾ ವ್ಯಾಪ್ತಿಯಲ್ಲಿ ಸಂಪಿಗೆ ಚಿತ್ರಮಂದಿರ ಮಾಲೀಕ ನಾಗೇಶ್ ಅವರ ಮನೆಯಲ್ಲಿ ಕೆಲಸಕ್ಕಿದ್ದ ನೇಪಾಳದ ದಂಪತಿ ₹38 ಲಕ್ಷ ಮೌಲ್ಯದ ಚಿನ್ನಾಭರಣ, ನಗದು ಕಳ್ಳತನ ಮಾಡಿದ್ದರು ಎಂದು ಪೊಲೀಸರು ಮಾಹಿತಿ ನೀಡಿದರು.

ಹಿನ್ನೆಲೆ ಬಗ್ಗೆ ತಿಳಿದುಕೊಳ್ಳಿ: ಸೀಮಂತ್ ಕುಮಾರ್ ಸಿಂಗ್

'ಅಪರಿಚಿತರನ್ನು ಮನೆ ಕೆಲಸಕ್ಕೆ ನೇಮಕ ಮಾಡಿಕೊಳ್ಳುವ ಮುನ್ನ ಅವರ ಹಿನ್ನೆಲೆ ಬಗ್ಗೆ ತಿಳಿದುಕೊಳ್ಳಬೇಕು. ಜತೆಗೆ ಅವರ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ಪಡೆಯಬೇಕು. ನೇಪಾಳದ ವ್ಯಕ್ತಿಗಳ ಹಿನ್ನೆಲೆ ವಿಚಾರಿಸದೇ, ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಾರೆ ಎಂಬ ಕಾರಣಕ್ಕೆ ಮನೆಗೆಲಸಕ್ಕೆ ನೇಮಕ ಮಾಡಿಕೊಳ್ಳಲಾಗುತ್ತಿದೆ. ಇದೇ ಕೃತ್ಯಕ್ಕೆ ಕಾರಣವಾಗುತ್ತಿದೆ' ಎಂದು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್ 'ಪ್ರಜಾವಾಣಿ'ಗೆ ತಿಳಿಸಿದರು.



ಸೀಮಂತ್ ಕುಮಾರ್ ಸಿಂಗ್

'ಪರಾರಿಯಾಗಿದ್ದ ಆರೋಪಿಗಳನ್ನು ನೇಪಾಳಿ ಪೊಲೀಸರ ನೆರವಿನೊಂದಿಗೆ ಪತ್ತೆ ಮಾಡಲಾಯಿತು. ಆದರೆ ಅವರನ್ನು ನಗರಕ್ಕೆ ಕರೆತರಲು ತಾಂತ್ರಿಕ ಸಮಸ್ಯೆ ಅಡ್ಡಿಯಾಗಿದೆ. ಕಳ್ಳತನದಲ್ಲಿ ಭಾಗಿಯಾಗುತ್ತಿರುವ ನೇಪಾಳಿ ಗ್ಯಾಂಗ್ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ' ಎಂದು ತಿಳಿಸಿದರು.

ಮಾಜಿ ಪೊಲೀಸ್ ಕಮಿಷನರ್ ವಿಚಾರಣೆ

ಮ್ಯಾಜಿಸ್ಟ್ರಿಯಲ್ ತನಿಖಾ ತಂಡದ ಎದುರು ವಿಚಾರಣೆಗೆ ದಯಾನಂದ ಹಾಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ತಂಡದ ವಿಜಯೋತ್ಸವದ ವೇಳೆ ಎಂ.ಚಿನ್ನಸ್ವಾಮಿ ಕ್ರೀಡಾಂಗದ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ನೇತೃತ್ವದಲ್ಲಿ ನಡೆಯುತ್ತಿರುವ ಮ್ಯಾಜಿಸ್ಟ್ರಿಯಲ್ ತನಿಖಾ ತಂಡದ ಎದುರು ಮಾಜಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಗುರುವಾರ ವಿಚಾರಣೆಗೆ ಹಾಜರಾದರು.



ಬಿ.ದಯಾನಂದ

ಮಧ್ಯಾಹ್ನದ ವಿಚಾರಣೆಗೆ ಬಂದ ದಯಾನಂದ ಅವರನ್ನು ಜಿಲ್ಲಾಧಿಕಾರಿ ನೇತೃತ್ವದ ತಂಡವು ಕೆಲವು ಪ್ರಶ್ನೆಗಳನ್ನು ಕೇಳಿ ಹೇಳಿಕೆ ದಾಖಲಿಸಿಕೊಂಡಿತು. ಕೆಲವು ಕಡತಗಳ ಜತೆಗೇ ಬಂದಿದ್ದ ದಯಾನಂದ ಅವರು, ತನಿಖಾ ತಂಡಕ್ಕೆ ಅವುಗಳನ್ನು ಹಸ್ತಾಂತರಿಸಿ ತಮ್ಮ ಹೇಳಿಕೆ ದಾಖಲಿಸಿದರು.

ಕಾಲ್ತುಳಿತ ಪ್ರಕರಣದಲ್ಲಿ 11 ಮಂದಿ ಮೃತಪಟ್ಟು 64 ಮಂದಿ ಗಾಯಗೊಂಡಿದ್ದರು. ಪ್ರಕರಣವನ್ನು ರಾಜ್ಯ ಸರ್ಕಾರವು ಮ್ಯಾಜಿಸ್ಟ್ರಿಯಲ್ ತನಿಖೆಗೆ ವಹಿಸಿತ್ತು. ಈ ಸಂಬಂಧ ವಿಚಾರಣೆಗೆ ಹಾಜರಾಗಲು ಮಾಜಿ ಕಮಿಷನರ್ ದಯಾನಂದ ಮತ್ತು ಇಬ್ಬರು ಡಿಸಿಪಿಗಳು ಸೇರಿದಂತೆ ಆರು ಪೊಲೀಸ್ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಲಾಗಿತ್ತು. ಕಳೆದ ವಾರ ನಡೆದ ವಿಚಾರಣೆಗೆ ಕಬ್ಬನ್ ಪಾರ್ಕ್ ಇನ್‌ಸ್ಪೆಕ್ಟರ್ ಆಗಿದ್ದ ಗಿರೀಶ್ ಹಾಗೂ ಕೇಂದ್ರ ವಲಯದ ಡಿಸಿಪಿ ಶೇಖರ್ ಅವರು ಹಾಜರಾಗಿದ್ದರು. ದಯಾನಂದ ಗೈರಾಗಿದ್ದರು. ವಿಚಾರಣೆಗೆ ಬರಲು ಸಮಯಾವಕಾಶ ನೀಡುವಂತೆ ದಯಾನಂದ ಕೋರಿದ್ದರು. ಶುಕ್ರವಾರ ಮಧ್ಯಾಹ್ನ ತನಿಖಾ ತಂಡದ ಎದುರು ಹಾಜರಾಗಿದ್ದರು.

'ಡಿಸಿಪಿ (ವಿಧಾನಸೌಧ) ಬಸವನಗೌಡ ಅವರು ಬರೆದ ಪತ್ರದ ಬಗ್ಗೆಯೂ ದಯಾನಂದ ಅವರಿಗೆ ತನಿಖಾ ತಂಡವು ಪ್ರಶ್ನೆ ಕೇಳಿತು. ಅಲ್ಲದೇ ಆರ್‌ಸಿಬಿ ಹಾಗೂ ಡಿಎನ್‌ಎ ಮ್ಯಾನೇಜ್‌ಮೆಂಟ್‌ಗೆ ವಿಜಯೋತ್ಸವ ನಡೆಸಲು ಪೊಲೀಸ್ ಇಲಾಖೆ ಅನುಮತಿ ನೀಡಿತ್ತೇ? ಅನುಮತಿ ನೀಡುವಂತೆ ಯಾರು ಮನವಿ ಸಲ್ಲಿಸಿದ್ದರೆ? ಆ ಮನವಿಗೆ ಇಲಾಖೆಯ ಪ್ರತಿಕ್ರಿಯೆ ಏನಿತ್ತು? ಬಂದೋಬಸ್ತ್‌ಗೆ ಎಷ್ಟು ಮಂದಿ ಸಿಬ್ಬಂದಿ ನೇಮಿಸಲಾಗಿತ್ತು? ಅಂದೇ ದಿನ ವಿಜಯೋತ್ಸವ ನಡೆಸಬೇಕೆಂದು ಯಾರಾದರೂ ಒತ್ತಡ ಹೇರಿದ್ದರೇ ಎಂಬ ಪ್ರಶ್ನೆ ಕೇಳಿ ಹೇಳಿಕೆ ದಾಖಲಿಸಿಕೊಂಡಿತು' ಎಂದು ಗೊತ್ತಾಗಿದೆ.

ಪ್ರತ್ಯಕ್ಷ ಸಾಕ್ಷಿಗಳಿಗೆ ಅವಕಾಶ: 'ಕ್ರೀಡಾಂಗಣದಲ್ಲಿ ಜೂನ್ 4ರಂದು ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ಸಂಭವಿಸಿದ ದುರಂತದ ಕುರಿತು ಸಮಗ್ರ ತನಿಖೆ ನಡೆಸಲಾಗುತ್ತಿದೆ. ಘಟನೆಗೆ ಸಂಬಂಧಿಸಿದಂತೆ ಮಾಹಿತಿ ಅಥವಾ ಪ್ರತ್ಯಕ್ಷವಾಗಿ ನೋಡಿದ ಸಾರ್ವಜನಿಕರು, ಮಾಧ್ಯಮದವರು ವಿಚಾರಣಾಧಿಕಾರಿ ಎದುರು ಹಾಜರಾಗಿ ಸಾಕ್ಷ್ಯ ಅಥವಾ ಹೇಳಿಕೆ ನೀಡಲು ಅವಕಾಶ ಕಲ್ಪಿಸಲಾಗಿದೆ. ತಮ್ಮ ಹೇಳಿಕೆ ದಾಖಲಿಸಲು ಇಚ್ಛಿಸುವವರು ಜೂನ್ 27ರ ಬೆಳಿಗ್ಗೆ 11ಕ್ಕೆ ಜಿಲ್ಲಾಧಿಕಾರಿ ನ್ಯಾಯಾಲಯ ಸಭಾಂಗಣ, ಜಿಲ್ಲಾಧಿಕಾರಿ ಕಚೇರಿ, ಬೆಂಗಳೂರು ನಗರ ಜಿಲ್ಲೆ, ಕೆ.ಜಿ.ರಸ್ತೆ, ಬೆಂಗಳೂರು– ಇಲ್ಲಿಗೆ ಲಿಖಿತ ರೂಪದಲ್ಲಿ ದೃಢೀಕರಿಸಿದ ಎರಡು ಪ್ರತಿಗಳೊಂದಿಗೆ ಖುದ್ದು ಹಾಜರಾಗಿ ಹೇಳಿಕೆ ದಾಖಲಿಸಬಹುದಾಗಿದೆ' ಎಂದು ವಿಚಾರಣಾ ತಂಡವು ತಿಳಿಸಿದೆ.

ಜಲಮಂಡಳಿ: ಫೋನ್‌–ಇನ್ ಇಂದು

ಬೆಂಗಳೂರು: ಜಲಮಂಡಳಿ ಅಧ್ಯಕ್ಷ ವಿ.ರಾಮ್‌ಪ್ರಸಾತ್ ಮನೋಹರ್ ಅವರು ಇದೇ 27ರಂದು (ಶುಕ್ರವಾರ) ಬೆಳಿಗ್ಗೆ 9.30ರಿಂದ 10.30ರವರೆಗೆ ಫೋನ್–ಇನ್ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ.

ಸಾರ್ವಜನಿಕರು ವಲಯ/ಪ್ರದೇಶಗಳಲ್ಲಿನ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ, ಇಳಿ ಗುಂಡಿಯಿಂದ ತ್ಯಾಜ್ಯ ನೀರು ಹೊರಬರುತ್ತಿರುವ ಬಗ್ಗೆ, ಜಲಮಾಪನ ಹಾಗೂ ನೀರಿನ ಬಿಲ್‌ಗೆ ಸಂಬಂಧಿಸಿದ ಸಮಸ್ಯೆಯ ಬಗ್ಗೆ ಮಾತನಾಡಿ ಪರಿಹಾರ ಪಡೆದುಕೊಳ್ಳಬಹುದು.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್. ಸಂಖ್ಯೆಯನ್ನು ತಿಳಿಸಿ ದೂರು ನೀಡಬಹುದು ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ. ದೂರವಾಣಿ ಸಂಖ್ಯೆ: 080-22945119 ಮತ್ತು 080-22229639.

ಕಾವೇರಿ ಆರತಿ ಸಲ್ಲ: ದಾಖಲೆ ಸಲ್ಲಿಕೆಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: ಕೃಷ್ಣರಾಜ ಸಾಗರ (ಕೆಆರ್‌ಎಸ್) ಜಲಾಶಯದ ಬಳಿ 'ಕಾವೇರಿ ಆರತಿ' ಆಯೋಜಿಸುವ ತೀರ್ಮಾನ ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ 'ಕಾವೇರಿ ಆರತಿ ಯೋಜನೆಗೆ ತಾಂತ್ರಿಕ ಸಲಹೆ ಪಡೆದಿಲ್ಲ ಎಂಬ ನಿಮ್ಮ ಆಕ್ಷೇಪಣೆಯನ್ನು ದೃಢಪಡಿಸುವ ದಾಖಲೆ ಸಲ್ಲಿಸಿ' ಎಂದು ಅರ್ಜಿದಾರರ ಪರ ವಕೀಲರಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಸಂಬಂಧ ರೈತ ಸಂಘದ ನಾಯಕಿ ಮಂಡ್ಯ ಜಿಲ್ಲೆಯ ಸುನಂದಾ ಜಯರಾಂ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಹಂಗಾಮಿ ಮುಖ್ಯ ನ್ಯಾಯಮೂರ್ತಿ ವಿ. ಕಾಮೇಶ್ವರ್ ರಾವ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹೈಕೋರ್ಟ್‌ನ ಹಿರಿಯ ವಕೀಲ ಎಂ.ಶಿವಪ್ರಕಾಶ್, 'ಕಾವೇರಿ ಆರತಿಗಾಗಿ ₹100 ಕೋಟಿ ವೆಚ್ಚ ಮಾಡಲಾಗುತ್ತಿದೆ. ಜಲಾಶಯದ 40 ಮೀಟರ್ ಅಂತರದಲ್ಲಿ 20 ಸಾವಿರದಿಂದ 25 ಸಾವಿರ ಜನರು ಜಮಾಯಿಸುವಂತಹ ದೊಡ್ಡ ಸ್ಟೇಡಿಯಂ ನಿರ್ಮಾಣ ಮಾಡಲಾಗುತ್ತಿದೆ. ಕನ್ನಂಬಾಡಿ ಕಟ್ಟೆಯ ಬಳಿಯಲ್ಲೇ 5 ಸಾವಿರ ವಾಹನಗಳ ಪಾರ್ಕಿಂಗ್ ವ್ಯವಸ್ಥೆಗೆ ಅವಕಾಶ ಕಲ್ಪಿಸಲಾಗುತ್ತಿದೆ. ಇದು ಜಲಾಶಯದ ಸುರಕ್ಷತೆ ಮತ್ತು ಭದ್ರತೆಗೆ ಅಪಾಯಕಾರಿ. ಜಲ, ಪರಿಸರ ಹಾಗೂ ವಾಯುಮಾಲಿನ್ಯಕ್ಕೂ ಕಾರಣವಾಗಲಿದೆ. ಅಲ್ಲದೇ, ಸರ್ಕಾರದ ಈ ನಿರ್ಧಾರ 2021ರ ಜಲಾಶಯ ಸುರಕ್ಷತಾ ಕಾಯ್ದೆಗೆ ವಿರುದ್ಧವಾಗಿದೆ' ಎಂದು ಪ್ರತಿಪಾದಿಸಿದರು.

ವಾದ ಆಲಿಸಿದ ನ್ಯಾಯಪೀಠ, 'ತಾಂತ್ರಿಕ ವರದಿ ಸಲ್ಲಿಸಿ' ಎಂದು ಶಿವಪ್ರಕಾಶ್ ಅವರಿಗೆ ನಿರ್ದೇಶಿಸಿ ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಿತು. ಕಾವೇರಿ ನೀರಾವರಿ ನಿಗಮದ ಪರ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಅವರು ಹಾಜರಾಗಿದ್ದರು.

ನೇಮಕಾತಿ ಪತ್ರ ವಿತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ (ಎನ್‌ಡಬ್ಲ್ಯುಕೆಆರ್‌ಟಿಸಿ) ಹೊಸ ನೇಮಕಾತಿ ಮೂಲಕ ಆಯ್ಕೆಗೊಂಡ ಚಾಲಕರಿಗೆ ನೇಮಕಾತಿ ಪತ್ರ ವಿತರಣೆ ಮಾಡಲಾಯಿತು. ವಾಣಿಜ್ಯ ಮಳಿಗೆಗಳ ಪರವಾನಗಿ ನಿರ್ವಹಣಾ ತಂತ್ರಾಂಶವನ್ನು ಇದೇ ಸಂದರ್ಭದಲ್ಲಿ ಅನಾವರಣಗೊಳಿಸಲಾಯಿತು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಮಾತನಾಡಿ, 'ಎನ್‌ಡಬ್ಲ್ಯುಕೆಆರ್‌ಟಿಸಿಗೆ 1000 ಚಾಲಕರು ಮತ್ತು ಚಾಲಕ ಕಂ ನಿರ್ವಾಹಕರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದೆ. ಇಂದು ಸಾಂಕೇತಿಕವಾಗಿ 46 ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಎನ್‌ಡಬ್ಲ್ಯುಕೆಆರ್‌ಟಿಸಿ ಅಧ್ಯಕ್ಷ ಭರಮಗೌಡ ಕಾಗೆ ಮಾತನಾಡಿ, 'ಸಂಸ್ಥೆಗೆ ಇನ್ನೂ ಚಾಲನಾ ಸಿಬ್ಬಂದಿಯ ಅವಶ್ಯಕತೆ ಇದೆ. ಘಟಕಗಳ ಸುಧಾರಣೆ ಮಾಡಬೇಕಾಗಿದೆ. ಅದಕ್ಕಾಗಿ ಸರ್ಕಾರದಿಂದ ವಿಶೇಷ ಅನುದಾನ ಅಗತ್ಯ' ಎಂದು ತಿಳಿಸಿದರು.

ಎನ್‌ಡಬ್ಲ್ಯುಕೆಆರ್‌ಟಿಸಿ ಪ್ರಿಯಾಂಗಾ ಎಂ., ಉಪಾಧ್ಯಕ್ಷ ಪೀರ್ ಸಾಬ್ ಕೌತಾಳ, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂ ಪಾಷಾ, ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ಆರ್. ರಾಮಚಂದ್ರನ್, ಕೆಕೆಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಎಂ. ರಾಚಪ್ಪ ಭಾಗವಹಿಸಿದ್ದರು.

ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ ಹೊಸ ನೇಮಕಾತಿ ಮೂಲಕ ಆಯ್ಕೆಗೊಂಡ ಚಾಲಕರಿಗೆಸಾರಿಗೆ ಸಚಿವ ರಾಮಲಿಂಗಾರೆಡ್ಡಿ,ಎನ್‌ಡಬ್ಲ್ಯುಕೆಆರ್‌ಟಿಸಿ ಅಧ್ಯಕ್ಷಭರಮಗೌಡ ಕಾಗೆ ಬುಧವಾರ ನೇಮಕಾತಿ ಪತ್ರ ವಿತರಿಸಿದರು

ವಶ ಪಡಿಸಿಕೊಂಡ ₹50 ಕೋಟಿ ಮೌಲ್ಯದ ಡ್ರಗ್ಸ್ ನಾಶಕ್ಕೆ ಚಾಲನೆ ನೀಡಿದ ಸಚಿವ

ಡ್ರಗ್ಸ್ ದಂಧೆ ಮಟ್ಟಹಾಕಲು ಮತ್ತಷ್ಟು ಕಠಿಣ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳರು: 'ನಗರ ಪೊಲೀಸರು ಒಂದು ವರ್ಷದ ಅವಧಿಯಲ್ಲಿ ₹50 ಕೋಟಿ ಮೌಲ್ಯದ ನೈಸರ್ಗಿಕ ಹಾಗೂ ಸಿಂಥೆಟಿಕ್ ಡ್ರಗ್ಸ್ ಅನ್ನು ಜಪ್ತಿ ಮಾಡಿಕೊಂಡಿದ್ದಾರೆ' ಎಂದು ಗೃಹ ಸಚಿವ ಜಿ.ಪರಮೇಶ್ವರ ತಿಳಿಸಿದರು.

ಇಲ್ಲಿನ ಕಂಠೀರವ ಕ್ರೀಡಾಂಗಣದಲ್ಲಿ ನಗರ ಪೊಲೀಸ್ ವತಿಯಿಂದ ಗುರುವಾರ ಆಯೋಜಿಸಿದ್ದ 'ಅಂತರರಾಷ್ಟ್ರೀಯ ಮಾದಕ ವ್ಯಸನ ಮತ್ತು ಅಕ್ರಮ ಕಳ್ಳ ಸಾಗಾಣಿಕೆ ವಿರೋಧಿ ದಿನ' ಉದ್ಘಾಟಿಸಿ ಅವರು ಮಾತನಾಡಿದರು.

'ಶೈಕ್ಷಣಿಕ ವೀಸಾದ ಅಡಿ ವಿದೇಶದಿಂದ ಬಂದವರು ನಗರದಲ್ಲಿ ಡ್ರಗ್ಸ್ ದಂಧೆಯಲ್ಲಿ ತೊಡಗಿರುವುದು ತನಿಖೆ ವೇಳೆ ಪತ್ತೆಯಾಗಿದೆ. ಡ್ರಗ್ಸ್ ದಂಧೆಯಲ್ಲಿ ತೊಡಗಿದ್ದ 200 ವಿದೇಶಿಗರನ್ನು ಗಡಿಪಾರು ಮಾಡಲಾಗಿದೆ. ವರ್ಷದ ಅವಧಿಯಲ್ಲಿ ನಾಲ್ಕು ಸಾವಿರ ಕೆ.ಜಿ ಗಾಂಜಾ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಮಾಹಿತಿ ನೀಡಿದರು.

'ವಿಶ್ವದಲ್ಲಿ ಮಾದಕ ವಸ್ತುಗಳು ಮತ್ತು ಮಾನವ ಕಳ್ಳ ಸಾಗಾಣಿಕೆ ವಿರುದ್ಧ ಆಂದೋಲನ ನಡೆಯುತ್ತಿದೆ. ಡ್ರಗ್ಸ್‌ನಿಂದ ಆಗುವ ಅನಾಹುತಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ. ಡ್ರಗ್ಸ್ ಚಟುವಟಿಕೆ ಮಟ್ಟಹಾಕಲು ಮತ್ತಷ್ಟು ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಹೇಳಿದರು.

'ಕೆಲವು ರಾಜ್ಯಗಳಲ್ಲಿ ಡ್ರಗ್ಸ್ ಪೆಡ್ಲರ್‌ಗಳ ಆಸ್ತಿ ಮುಟ್ಟುಗೋಲು, ಗೂಂಡಾ ಕಾಯ್ದೆ ಹಾಕುವ ಮೂಲಕ ಕ್ರಮ ಜರುಗಿಸಲಾಗುತ್ತಿದೆ. ಕಳೆದ ಅಧಿವೇಶನದಲ್ಲಿ ಮಾದಕ ವ್ಯಸನ ಮುಕ್ತ ಕರ್ನಾಟಕ ಮಾಡುವುದಾಗಿ ಮುಖ್ಯಮಂತ್ರಿ ಘೋಷಿಸಿದ್ದರು. ಡ್ರಗ್ಸ್ ಚಟುವಟಿಕೆ ಮಟ್ಟಹಾಕಲು ಮತ್ತಷ್ಟು ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುವುದು' ಎಂದು ಹೇಳಿದರು.

'ರಾಜ್ಯದಲ್ಲಿ 6.50 ಲಕ್ಷ ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಲಾಗಿದೆ. ಪ್ರತಿ ತಿಂಗಳು ಆಯಾ ಠಾಣೆಯ ಪೊಲೀಸರು ಶಾಲಾ– ಕಾಲೇಜುಗಳಿಗೆ ಭೇಟಿ ನೀಡಿ, ಏನಾಗುತ್ತಿದೆ ಎಂಬುದರ ಕುರಿತು ಮಾಹಿತಿ ಪಡೆಯಬೇಕು. ಪ್ರತಿ ಕಾಲೇಜಿನಲ್ಲಿ ಆ್ಯಂಟಿ ಡ್ರಗ್ಸ್ ಸಮಿತಿ ರಚಿಸುವಂತೆ ಸೂಚಿಸಲಾಗಿದೆ' ಎಂದರು.

'ರಾಜ್ಯ ಪೊಲೀಸ್ ಇಲಾಖೆ ಯಾವುದನ್ನೂ ರಾಜೀ ಮಾಡಿಕೊಳ್ಳುವುದಿಲ್ಲ. ಡ್ರಗ್ಸ್ ಚಟುವಟಿಕೆಯ ಕುರಿತು ಮಾಹಿತಿ ಗೊತ್ತಾದ ಕೂಡಲೇ ಸಾರ್ವಜನಿಕರು ಕ್ಯೂಆರ್ ಕೋಡ್ ಮೂಲಕ ಪೊಲೀಸರಿಗೆ ಮಾಹಿತಿ ನೀಡಬೇಕು. ಅಕ್ರಮ ಚಟುವಟಿಕೆಗಳು ನಿಮ್ಮ ಕಂಡು ಬಂದರೆ ತಿಳಿಸಬೇಕು' ಎಂದು ಹೇಳಿದರು.

ಬೆಂಗಳೂರು ನಗರ ಪೊಲೀಸರು ಕಾರ್ಯಾಚರಣೆ ನಡೆಸಿ ವಶಪಡಿಸಿಕೊಂಡಿರುವ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ನಾಶಪಡಿಸಲು ಗೃಹ ಸಚಿವರು ಇದೇ ವೇಳೆ ಆನ್‌ಲೈನ್ ಮೂಲಕ ಚಾಲನೆ ನೀಡಿದರು.

ಶಾಸಕ ರಿಜ್ವಾನ್ ಅರ್ಷದ್, ರಾಜ್ಯ ಪೊಲೀಸ್ ಮಹಾನಿರ್ದೇಶಕ ಡಾ.ಎಂ.ಎ.ಸಲೀಂ, ಸೈಬರ್ ಅಪರಾಧಗಳು ಮತ್ತು ಮಾದಕ ವಸ್ತು ವಿಭಾಗದ ಪೊಲೀಸ್ ಮಹಾನಿರ್ದೇಶಕ ಪ್ರಣವ್ ಮಹಾಂತಿ, ಬೆಂಗಳೂರು ನಗರ ಪೊಲೀಸ್ ಕಮಿಷನರ್ ಸೀಮಂತ್ ಕುಮಾರ್ ಸಿಂಗ್, ಆದರ್ಶ ಗ್ರೂಪ್‌ನ ಸಿಎಂಡಿ ಬಿ.ಎಂ.ಜಯಶಂಕರ್ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಅಕ್ರಮ ಚಟುವಟಿಕೆ ಕಂಡರೆ ಪೊಲೀಸರಿಗೆ ಮಾಹಿತಿ ನೀಡಿ
- ಡ್ರಗ್ಸ್: ರಾಜ್ಯದಲ್ಲಿ 6.50 ಲಕ್ಷ ವಿದ್ಯಾರ್ಥಿಗಳಿಗೆ ಜಾಗೃತಿ
- ಮಾದಕ ವಸ್ತುಗಳ ಮಾರಾಟ: 200 ವಿದೇಶಿಗರ ಗಡಿಪಾರು

ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯ ಇದೆ. ಮಾದಕ ವ್ಯಸನಕ್ಕೆ ಸಿಲುಕಿ ಜೀವನ ಹಾಳು ಮಾಡಿಕೊಳ್ಳಬೇಡಿ

ಜಿ.ಪರಮೇಶ್ವರ್, ಗೃಹ ಸಚಿವ

'ರಕ್ಷಾ' ಕ್ಯೂ–ಆರ್ ಕೋಡ್ ಬಿಡುಗಡೆ

ಮಾದಕ ವಸ್ತುಗಳ ಕುರಿತು ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಬಹುದಾದ 'ರಕ್ಷಾ' ಕ್ಯೂ–ಆರ್ ಕೋಡ್ ಅನ್ನು ಇದೇ ವೇಳೆ ಬಿಡುಗಡೆ ಮಾಡಲಾಯಿತು.

ಡ್ರಗ್ಸ್ ಬಳಕೆಯಿಂದ ಆಗುವ ದುಷ್ಪರಿಣಾಮದ ಕುರಿತು ಬೆಂಗಳೂರು ನಗರ ಪೊಲೀಸರೊಂದಿಗೆ ಜತೆಗೂಡಿ ಸಾಮಾಜಿಕ ಜಾಗೃತಿ ಮೂಡಿಸುತ್ತಿರುವ ವಿವಿಧ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಸಚಿವ ಜಿ.ಪರಮೇಶ್ವರ ಅವರು ಪ್ರಶಸ್ತಿ ನೀಡಿ ಅಭಿನಂದಿಸಿದರು.

'ಅಂತರರಾಷ್ಟ್ರೀಯ ಮಾದಕ ವ್ಯಸನ ಮತ್ತು ಅಕ್ರಮ ಕಳ್ಳ ಸಾಗಾಣಿಕೆ ವಿರೋಧಿ ದಿನ'ದ ಅಂಗವಾಗಿ ಬೆಂಗಳೂರಿನ ಯಲಹಂಕದಲ್ಲಿ ನಡೆದ ಜಾಗೃತಿ ಜಾಥಾದಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು

ಸುದ್ದಿ 2 ನಿಮಿಷ

ಮನುಷ್ಯನ ಅಸ್ಥಿಪಂಜರ: ಎಫ್‌ಎಸ್‌ಎಲ್ ವರದಿ

ಬೆಂಗಳೂರು: ಬೇಗೂರಿನ ಲಕ್ಷ್ಮಿಪುರ ಬಡಾವಣೆಯ ಎಂ.ಎನ್. ಕ್ರೆಡೆನ್ಸ್ ಫ್ಲೋರಾ ಅಪಾರ್ಟ್‌ಮೆಂಟ್‌ನ ಮಳೆ ನೀರು ಸಂಗ್ರಹಕ್ಕೆ ತೆರೆದಿದ್ದ ಗುಂಡಿ ಸ್ವಚ್ಛಗೊಳಿಸುವ ವೇಳೆ ಪತ್ತೆಯಾಗಿದ್ದ ಅಸ್ಥಿಪಂಜರ ಮನುಷ್ಯನದ್ದೇ ಎಂದು ವಿಧಿವಿಜ್ಞಾನ ಪ್ರಯೋಗಾಲಯ (ಎಫ್‌ಎಸ್ ಎಲ್) ವರದಿಯಿಂದ ಗೊತ್ತಾಗಿದೆ. ವರದಿ ಆಧರಿಸಿ ಬೇಗೂರು ಠಾಣೆಯ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಜೂನ್ 16ರಂದು ಗುತ್ತಿಗೆ ಕಾರ್ಮಿಕರು ಮಳೆ ನೀರು ಸಂಗ್ರಹ ಗುಂಡಿ ಸ್ವಚ್ಛಗೊಳಿಸುವಾಗ ಅಸ್ಥಿಪಂಜರದ ಜೊತೆಗೆ ಒಂದು ಪ್ಯಾಂಟ್ ಪತ್ತೆ ಆಗಿತ್ತು. ಮೇಲ್ನೋಟಕ್ಕೆ ಪುರುಷನ ಅಸ್ಥಿಪಂಜರವೆಂದು ಕಂಡುಬಂದಿತ್ತು. ದೃಢೀಕರಿಸಲು ಎಫ್‌ಎಸ್‌ಎಲ್‌ಗೆ ರವಾನಿಸಲಾಗಿತ್ತು.

'ಅಸ್ಥಿಪಂಜರವು ಎಷ್ಟು ವರ್ಷಗಳ ಹಿಂದಿನದ್ದು ಎಂದು ಹೇಳುವುದಕ್ಕೇ ಈಗಲೇ ಸಾಧ್ಯವಿಲ್ಲ. ಇನ್ನಷ್ಟು ಅಧ್ಯಯನ ಬಳಿಕ ಗೊತ್ತಾಗಲಿದೆ' ಎಂದು ಪೊಲೀಸರು ಹೇಳಿದರು.

'ಅಸ್ಥಿಪಂಜರವು ಮನುಷ್ಯನದ್ದೇ ಎಂದು ಖಚಿತವಾಗಿದೆ. ಅಲ್ಲಿ ಪತ್ತೆಯಾಗಿರುವ ಮೂಳೆಗಳನ್ನು ಡಿಎನ್‌ಎ ಪರೀಕ್ಷೆಗೆ ಕಳುಹಿಸಲಾಗುವುದು. ಡಿಎನ್‌ಎ ಪರೀಕ್ಷೆಯಿಂದ ಮೃತನ ವಯಸ್ಸು ಸೇರಿದಂತೆ ಇನ್ನಿತರ ಮಾಹಿತಿಗಳನ್ನು ತಿಳಿಯಬಹುದಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತದ ಕೋಸ್ಟ್ ಗಾರ್ಡ್‌ಗೆ 'ರ್‍ಯಾಡ್‌ಸಿಮ್' ಹಸ್ತಾಂತರ

ಬೆಂಗಳೂರು: ಭಾರತೀಯ ವಾಯುಪಡೆಯು ದೇಶಿಯವಾಗಿ ಅಭಿವೃದ್ಧಿಪಡಿಸಿರುವ ರೇಡಾರ್ ಸಿಮ್ಯುಲೇಟರ್‌ನ 'ರ್‍ಯಾಡ್‌ಸಿಮ್' ತಂತ್ರಾಂಶವನ್ನು ಇಂಡಿಯನ್ ಕೋಸ್ಟ್ ಗಾರ್ಡ್‌ಗೆ ಹಸ್ತಾಂತರಿಸಿತು.

ದಮನ್‌ನಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಬೆಂಗಳೂರಿನ ವಾಯುಪಡೆಯ ಸಾಫ್ಟ್‌ವೇರ್ ಡೆವಲಪ್‌ಮೆಂಪ್ ಇನ್‌ಸ್ಟಿಟ್ಯೂಟ್ (ಎಸ್‌ಡಿಐ) ಅಭಿವೃದ್ಧಿಪಡಿಸಿರುವ 'ರ್‍ಯಾಡ್‌ಸಿಮ್' ಅನ್ನು ಇಂಡಿಯನ್ ಕೋಸ್ಟ್ ಗಾರ್ಡ್‌ಗೆ ಹಸ್ತಾಂತರಿಸಲಾಯಿತು. ಇದನ್ನು ಎರಡೂ ಪಡೆಗಳ ಸಹಭಾಗಿತ್ವದ ಮೈಲುಗಲ್ಲಾಗಿ ಗುರುತಿಸಲಾಗುತ್ತಿದೆ.

'ರ್‍ಯಾಡ್‌ಸಿಮ್' ಅನ್ನು ಅತ್ಯುನ್ನತ ವ್ಯವಸ್ಥೆಯಾಗಿ ವಿನ್ಯಾಸಗೊಳಿಸಲಾಗಿದ್ದು, ನೈಜ ರೇಡಾರ್ ಮತ್ತು ಏರ್ ಟ್ರಾಫಿಕ್ ಕಂಟ್ರೋಲ್ (ಎಟಿಸಿ) ಪರಿಸರಕ್ಕೆ ಅನುಕೂಲಕರವಾಗಲಿದೆ ಎಂದು ಪ್ರಕಟಣೆ ತಿಳಿಸಿದೆ.

ತಂಗಳು ಬಡಿಸಿದ ಪತ್ನಿಯನ್ನು ಹೊಡೆದು ಕೊಂದ ಪತಿ

ಪ್ರಜಾವಾಣಿ ವಾರ್ತೆ

ತಿಮ್ಮಮ್ಮ

ರಂಗಯ್ಯ

ಮಾಗಡಿ: ತಾಲ್ಲೂಕಿನ ಮತ್ತಿಕೆರೆ ಗ್ರಾಮದ 75 ವರ್ಷದ ಪಾರ್ಶ್ವವಾಯು ಪೀಡಿತ ವ್ಯಕ್ತಿಯೊಬ್ಬ ತಂಗಳು ಊಟ ಬಡಿಸಿದ ಪತ್ನಿಯನ್ನು ತುರೆಮಣೆಯಿಂದ ಹೊಡೆದು ಕೊಲೆ ಮಾಡಿದ್ದಾನೆ. ತಲೆ ಮರೆಸಿಕೊಳ್ಳಲು ತಿರುಪತಿಗೆ ತೆರಳಲು ಮುಂದಾಗಿದ್ದ ಆತನನ್ನು ಪೊಲೀಸರು ಬಂಧಿಸಿದ್ದಾರೆ.

ತಿಮ್ಮಮ್ಮ(65) ಎಂಬುವರನ್ನು ತುರಿಯುವ ಮಣೆಯಿಂದ ಹೊಡೆದು ಕೊಲೆ ಮಾಡಿದ ಆರೋಪದ ಮೇಲೆ ಅವರ ಪತಿ ರಂಗಯ್ಯ ಎಂಬಾತನನ್ನು ಮಾಗಡಿ ಪೊಲೀಸರು ಗುರುವಾರ ಬಂಧಿಸಿದ್ದಾರೆ

ಇಬ್ಬರು ಪುತ್ರರು ಹಾಗೂ ಪುತ್ರಿಯರಿದ್ದರೂ ವೃದ್ಧ ದಂಪತಿ ಗ್ರಾಮದಲ್ಲಿ ಪ್ರತ್ಯೇಕ ಮನೆಯಲ್ಲಿ ವಾಸವಿದ್ದರು. ಪಾರ್ಶ್ವವಾಯುಪೀಡಿತರಾಗಿದ್ದ ರಂಗಯ್ಯ ಚೇತರಿಸಿಕೊಳ್ಳುತ್ತಿದ್ದರು.

ಸಣ್ಣಪುಟ್ಟ ವಿಷಯಕ್ಕೂ ಜಗಳ ವಾಡುತ್ತಿದ್ದ ಕಾರಣಕ್ಕೆ ಬೇಸತ್ತು ತಿಮ್ಮಮ್ಮ 15 ದಿನದ ಹಿಂದೆ ಪುತ್ರಿಯ ಮನೆಗೆ ಹೋಗಿದ್ದರು. ಬಳಿಕ ಸಂಬಂಧಿಕರು ಸಮಾಧಾನ ಮಾಡಿ ಕರೆದುಕೊಂಡು ಬಂದಿದ್ದರು.

ತಿಮ್ಮಮ್ಮ ಅವರಿಗೂ ವಯಸ್ಸಾಗಿರುವುದರಿಂದ ಅಡುಗೆ ಸೇರಿದಂತೆ ಮನೆಗೆಲಸ ಮಾಡುವುದು ಕಷ್ಟವಾಗಿತ್ತು. ಗುರುವಾರ ಬೆಳಿಗ್ಗೆ 9ಕ್ಕೆ ಊಟ ಕೊಟ್ಟ ತಿಮ್ಮಮ್ಮ ಅವರೊಂದಿಗೆ ರಂಗಯ್ಯ 'ರಾತ್ರಿ ಉಳಿದಿದ್ದ ತಂಗಳು ಬಡಿಸಿದ್ದೀಯಾ' ಎಂದು ಜಗಳ ತೆಗೆದಿದ್ದ. ಜಗಳ ತಾರಕಕ್ಕೇರಿದಾಗ ಕೋಣೆಯಲ್ಲಿದ್ದ ತುರಿಯುವ ಮಣೆಯಿಂದ ರಂಗಯ್ಯ, ಪತ್ನಿಯ ತಲೆ ಮತ್ತು ಕುತ್ತಿಗೆಗೆ ಹೊಡೆದಿದ್ದಾನೆ. ಬಳಿಕ, ಸ್ಥಳದಿಂದ ಪರಾರಿಯಾಗಿ ತಿರುಪತಿಗೆ ಹೋಗಲು ರಾಮನಗರಕ್ಕೆ ತೆರಳಿದ್ದ. ಬಸ್ ಹತ್ತುವ ಮುಂಚೆಯೇ ಆತನನ್ನು ಬಂಧಿಸಲಾಯಿತು ಎಂದು ಮಾಗಡಿ ಪೊಲೀಸರು ತಿಳಿಸಿದ್ದಾರೆ.

'ಗುಡಿ, ಚರ್ಚ್, ಮಸೀದಿಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಇರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿರುವ ಎಲ್ಲ ಗುಡಿ, ಚರ್ಚ್, ಮಸೀದಿಯಲ್ಲಿ ಅಂಬೇಡ್ಕರ್ ಭಾವಚಿತ್ರ ಅಳವಡಿಸುವುದನ್ನು ಕಡ್ಡಾಯಗೊಳಿಸಬೇಕು' ಎಂದು ರಾಮಮನೋಹರ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್. ಶಿವಣ್ಣ, ಸರ್ಕಾರವನ್ನು ಆಗ್ರಹಿಸಿದ್ದಾರೆ.

'ಅಂಬೇಡ್ಕರ್ ನೀಡಿರುವ ಸಂವಿಧಾನದ ಪ್ರಕಾರವೇ ನ್ಯಾಯಾಲಯಗಳು ಪ್ರತಿನಿತ್ಯ ಕಾರ್ಯನಿರ್ವಹಿಸುತ್ತವೆ. ನ್ಯಾಯಾಧೀಶರೆಲ್ಲರೂ ಸಂವಿಧಾನ ಓದುತ್ತಾರೆ. ಆದರೆ ನ್ಯಾಯಾಲಯಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಅಳವಡಿಸದೇ ಇರುವುದು ದುರದೃಷ್ಟಕರ. ಹೈಕೋರ್ಟ್ ಆದೇಶದ ಮೂಲಕ ಇನ್ನು ಮುಂದಾದರೂ ನ್ಯಾಯಾಂಗ ವ್ಯವಸ್ಥೆಯ ಕಚೇರಿಗಳಲ್ಲಿ ಅಂಬೇಡ್ಕರ್ ಭಾವಚಿತ್ರ ಅಳವಡಿಸಬೇಕು' ಎಂದು ಹೇಳಿಕೆಯಲ್ಲಿ ಒತ್ತಾಯಿಸಿದ್ದಾರೆ.

'ರಾಜ್ಯ ಸರ್ಕಾರವೇ ಸಂವಿಧಾನದ ಪ್ರತಿಗಳನ್ನು ದೇವಾಲಯ, ಚರ್ಚ್, ಮಸೀದಿ, ಬಸದಿ, ಗುರುದ್ವಾರಗಳಿಗೆ ಉಚಿತವಾಗಿ ಪೂರೈಕೆ ಮಾಡಬೇಕು' ಎಂದು ಅವರು ಒತ್ತಾಯಿಸಿದ್ದಾರೆ.

ಗಾಂಜಾ ಮಿಶ್ರಿತ ಜೆಲ್ಲಿ ಮಾರಾಟ: ಇಬ್ಬರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

ಇಸ್ಮಾಯಿಲ್

ಜಾಹಿದ್

ಬೆಂಗಳೂರು: ಗಾಂಜಾ ಮಿಶ್ರಿತ ಜೆಲ್ಲಿ ಮಾರಾಟ ಮಾಡುತ್ತಿದ್ದ ಇಬ್ಬರನ್ನು ಬ್ಯಾಟರಾಯನಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯ ಇಂದಿರಾನಗರದ ನಿವಾಸಿಗಳಾದ ಟಿ.ಎಸ್.ಮೊಹಮ್ಮದ್ ಜಾಹಿದ್ (25) ಹಾಗೂ ಇಸ್ಮೈಲ್ ಅದ್ನಾನ್ (24) ಬಂಧಿತರು.

ಆರೋಪಿಗಳಿಂದ ₹3 ಲಕ್ಷ ಮೌಲ್ಯದ ಒಂದು ಕೆ.ಜಿ 440 ಗ್ರಾಂ ಗಾಂಜಾ ಮಿಶ್ರಿತ ಜೆಲ್ಲಿ ಪೊಟ್ಟಣಗಳು, ₹50 ಸಾವಿರ ನಗದು ಹಾಗೂ ಎರಡು ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಆರೋಪಿಗಳಿಬ್ಬರೂ ಹೆಬ್ಬಾಳದ ಮುನಿಯಪ್ಪ ಲೇಔಟ್‌ನಲ್ಲಿ ನೆಲಸಿದ್ದರು.

'ಹೆಬ್ಬಾಳ ಪೊಲೀಸ್ ಠಾಣಾ ವ್ಯಾಪ್ತಿಯ ಮುನಿಯಪ್ಪ ಲೇಔಟ್‌ನಲ್ಲಿ ಗಾಂಜಾ ಮಿಶ್ರಿತ ಜೆಲ್ಲಿ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತ ಮಾಹಿತಿ ಬಂದಿತ್ತು. ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ವಶಕ್ಕೆ ಪಡೆದುಕೊಳ್ಳಲಾಯಿತು.

ಗಣತಿ: ಬೆಂಗಳೂರಿನಲ್ಲಿ ಮಂದಗತಿ

ಜೂನ್ 30ರವರೆಗೆ ಒಳಮೀಸಲಾತಿ ಸಮೀಕ್ಷೆಗೆ ಅವಕಾಶ • ಕಾಲೊನಿಗಳಿಗೆ ಭೇಟಿ

• ಬಾಲಕೃಷ್ಣಪಿ.ಎಚ್.

ಬೆಂಗಳೂರು: ಒಳಮೀಸಲಾತಿ ಕಲ್ಪಿಸಲು ದತ್ತಾಂಶ ಸಂಗ್ರಹಕ್ಕೆ ನಡೆದಿರುವ ಸಮೀಕ್ಷೆಯಲ್ಲಿ ರಾಜ್ಯದ 30 ಜಿಲ್ಲೆಗಳಲ್ಲಿ ಸರಾಸರಿ ಶೇ 95ರಷ್ಟು ಸಾಧನೆಯಾಗಿದ್ದರೆ, ಶೇ 50ರಷ್ಟು ಮಾತ್ರ ಗುರಿ ಸಾಧಿಸಿರುವ ಬೆಂಗಳೂರು ನಗರ ಸಮೀಕ್ಷೆಯಲ್ಲಿ ತೀರ ಹಿಂದುಳಿದಿದೆ. ಇನ್ನು ನಾಲ್ಕು ದಿನಗಳಲ್ಲಿ ಸಮೀಕ್ಷೆ ಪೂರ್ಣಗೊಳಿಸಬೇಕಾದ ಸವಾಲು ಎದುರಾಗಿದೆ.

ಪರಿಶಿಷ್ಟ ಜಾತಿಯಲ್ಲಿ 101 ಸಮುದಾಯಗಳಿವೆ. ಆಯಾ ಸಮುದಾಯಗಳ ಜನಸಂಖ್ಯೆ, ಶಿಕ್ಷಣ, ಉದ್ಯೋಗ, ಆರ್ಥಿಕ ಸ್ಥಿತಿ ಸಹಿತ ವಿವಿಧ ಮಾಹಿತಿಗಳನ್ನು ನಿಖರವಾಗಿ ಸಂಗ್ರಹಿಸಲು ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಅಧ್ಯಕ್ಷತೆಯ ಏಕಸದಸ್ಯ ವಿಚಾರಣಾ ಆಯೋಗಕ್ಕೆ ಜವಾಬ್ದಾರಿ ನೀಡಲಾಗಿತ್ತು. ಮೇ 5ರಿಂದ ಸಮೀಕ್ಷೆ ಆರಂಭವಾಗಿತ್ತು. ಹಲವು ಬಾರಿ ವಿಸ್ತರಣೆಯಾಗಿ ಈಗ ಜೂನ್ 30ರವರೆಗೆ ಅವಕಾಶ ನೀಡಲಾಗಿದೆ.

2011ರ ಜನಗಣತಿ ಪ್ರಕಾರ ರಾಜ್ಯದಲ್ಲಿ ಪರಿಶಿಷ್ಟ ಜಾತಿಯ ಒಟ್ಟು ಜನಸಂಖ್ಯೆ 1.08 ಕೋಟಿ ಇದ್ದು, 2025ಕ್ಕೆ 1.49 ಕೋಟಿ ಆಗಿರುತ್ತದೆ ಎಂದು ಅಂದಾಜು ಮಾಡಲಾಗಿದೆ.

ಬೆಂಗಳೂರು ವಲಯವಾರು ಅಂಕಿ ಅಂಶ
(ಜೂನ್ 24ರವರೆಗೆ)

ವಲಯ	ಶೇಕಡಾ
ರಾಜರಾಜೇಶ್ವರಿನಗರ	60
ಯಲಹಂಕ	55
ದಾಸರಹಳ್ಳಿ	51
ಬೆಂಗಳೂರು ದಕ್ಷಿಣ	51
ಬೊಮ್ಮನಹಳ್ಳಿ	50
ಬೆಂಗಳೂರು ಪೂರ್ವ	49
ಬೆಂಗಳೂರು ಪಶ್ಚಿಮ	47
ಮಹದೇವಪುರ	47
ಸರಾಸರಿ	50

ಬೆಂಗಳೂರು ನಗರ ವ್ಯಾಪ್ತಿಯಲ್ಲಿ 2011ರ ಜನಗಣತಿ ಪ್ರಕಾರ ಎಸ್‌ಸಿ ಜನಸಂಖ್ಯೆ 9.60 ಲಕ್ಷ ಆಗಿದ್ದು, ಈಗ 13.62 ಲಕ್ಷ ಇದ್ದಾರೆ ಎಂದು ಅಂದಾಜು ಪ್ರಮಾಣವನ್ನು ಅಧಿಕಾರಿಗಳು ಇಟ್ಟುಕೊಂಡಿದ್ದಾರೆ. ಈ ಅಂದಾಜು ಜನಸಂಖ್ಯೆಯಲ್ಲಿ ಮಂಗಳವಾರ ಸಂಜೆಯವರೆಗೆ 6.77 ಲಕ್ಷ ಮಾತ್ರ ಗಣತಿಯಾಗಿದೆ.

ರಾಜ್ಯದಲ್ಲಿ 11 ಜಿಲ್ಲೆಗಳಲ್ಲಿ ಶೇ 100 ದಾಟಿ ಸಮೀಕ್ಷೆಯಾಗಿದೆ. 8 ಜಿಲ್ಲೆಗಳಲ್ಲಿ ಶೇ 95ರಿಂದ ಶೇ 99ರಷ್ಟು ಗಣತಿಯಾಗಿದೆ. ಉಳಿದ ಜಿಲ್ಲೆಗಳಲ್ಲಿ ಶೇ 90ರಿಂದ ಶೇ 95ರಷ್ಟು ಪೂರ್ಣಗೊಂಡಿದೆ. ಬೆಂಗಳೂರಿನಲ್ಲಿ ಮಂಗಳವಾರದವರೆಗೆ ಶೇ 50ರಷ್ಟು ಸಮೀಕ್ಷೆಯಾಗಿದ್ದು, ಎರಡು ದಿನಗಳಲ್ಲಿ ಶೇ 2-3ರಷ್ಟು ಹೆಚ್ಚಳವಾಗಿರಬಹುದು ಎಂದು ಏಕಸದಸ್ಯ ವಿಚಾರಣಾ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ 'ಪ್ರಜಾವಾಣಿ'ಗೆ ತಿಳಿಸಿದರು.

ಬೆಂಗಳೂರು ನಗರ ಸೇರಿದಂತೆ ರಾಜ್ಯದಲ್ಲಿ ಶೇ 92ರಷ್ಟು ಸಮೀಕ್ಷೆಯಾಗಿದೆ. ಈಗ ಸಮರೋಪಾದಿಯಲ್ಲಿ ಸಮೀಕ್ಷೆ ನಡೆಸಲಾಗುತ್ತಿದೆ ಎಂದು ಹೇಳಿದರು.

'ಮತ್ತೆ ಅವಧಿ ವಿಸ್ತರಣೆ ಇಲ್ಲ'

ಸಮೀಕ್ಷೆಯ ಅವಧಿಯನ್ನು ಮತ್ತೆ ವಿಸ್ತರಣೆ ಮಾಡುವುದಿಲ್ಲ. ಇನ್ನು ಉಳಿದಿರುವ ನಾಲ್ಕು ದಿನಗಳಲ್ಲಿ ಶಕ್ತಿ ಮೀರಿ ಪ್ರಯತ್ನಿಸಲಾಗುವುದು. ಬುಧವಾರ 2300 ಮನೆಗಳಿಗೆ ಭೇಟಿ ನೀಡಲಾಗಿದೆ. ಗುರುವಾರವೂ ಇದೇ ಪ್ರಮಾಣದಲ್ಲಿ ಮನೆ ಭೇಟಿ ನಡೆದಿದೆ ಎಂದು ಏಕಸದಸ್ಯ ವಿಚಾರಣಾ ಆಯೋಗದ ಅಧ್ಯಕ್ಷ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್ ತಿಳಿಸಿದರು.

ಬೆಂಗಳೂರಿನಲ್ಲಿ ವಲಸಿಗರ ಸಂಖ್ಯೆ ಹೆಚ್ಚಿದೆ. ಅವರು ಆಯಾ ಜಿಲ್ಲೆಗಳಲ್ಲಿ ನಡೆದ ಸಮೀಕ್ಷೆಯಲ್ಲಿ ನಮೂದಾಗಿರುವ ಸಾಧ್ಯತೆ ಇರುತ್ತದೆ. ಅಲ್ಲದೇ ಬಾಡಿಗೆ ಮನೆಯಲ್ಲಿ ಇರುವವರು ಸಾಮಾಜಿಕ ಅಸಮಾನತೆಯ ಕಾರಣಕ್ಕೆ ಜಾತಿ ಹೇಳಲು ಹಿಂಜರಿಯುವುದೂ ಕಾರಣ ಇರಬಹುದು. ಅಂಥವರೆಲ್ಲ ಆನ್‌ಲೈನ್ ಮೂಲಕ ಮಾಹಿತಿ ನೀಡಲು ಅವಕಾಶ ಇದೆ ಎಂದು ಹೇಳಿದರು.

'ಸರ್ಕಾರಿ ಶಿಕ್ಷಕರಿಲ್ಲದಿರುವುದೂ ಕಾರಣ'



ಜಿಲ್ಲೆಗಳಲ್ಲಿ ಸರ್ಕಾರಿ ಶಾಲೆಗಳ ಶಿಕ್ಷಕರನ್ನು ಸಮೀಕ್ಷೆಗೆ ಬಳಸಿಕೊಳ್ಳಲಾಗಿದೆ. ಆಯಾ ಊರಿನ ಮಾಹಿತಿ ಆ ಶಿಕ್ಷಕರಿಗೆ ಇರುತ್ತದೆ. ಅವರು ನಿಖರವಾಗಿ ಗಣತಿ ಮಾಡಿದ್ದಾರೆ. ಆದರೆ, ಬೆಂಗಳೂರು ನಗರದಲ್ಲಿ ಶಿಕ್ಷಕರನ್ನು ಬಳಸಿಕೊಳ್ಳಲಾಗಿಲ್ಲ. ಅಲ್ಲದೇ ಇಲ್ಲಿ ಯಾರು ಯಾವ ಸಮುದಾಯ ಎಂದು ಅಕ್ಕಪಕ್ಕದವರಿಗೇ ಗೊತ್ತಿರುವುದಿಲ್ಲ. ಇದರಿಂದ ಸಮೀಕ್ಷೆ ಪ್ರಮಾಣ ಕಡಿಮೆಯಾಗಿದೆ. ಮತ್ತೆ ಅವಧಿ ವಿಸ್ತರಣೆಗೆ ಅರ್ಥವಿಲ್ಲ. ಉಳಿದಿರುವ ದಿನಗಳಲ್ಲಿ ಸಮೀಕ್ಷೆ ಪೂರ್ಣಗೊಳಿಸಲಾಗುವುದು ಎಂದು ಸಮುದಾಯದ ಮುಖಂಡ ಎಚ್. ಆಂಜನೇಯ ತಿಳಿಸಿದ್ದಾರೆ.

ಮುಖಂಡರೇ ಭೇಟಿ

'ಯಾವ ಪ್ರದೇಶದಲ್ಲಿ ಗಣತಿ ಕಡಿಮೆ ಇದೆ ಎಂದು ಗುರುತಿಸಿ ಅಲ್ಲಿಗೆ ಸಮುದಾಯದ ಮುಖಂಡರು, ಜನಪ್ರತಿನಿಧಿಗಳೇ ನಾಲ್ಕು ದಿನ ಭೇಟಿ ನೀಡಲಿದ್ದಾರೆ. ನಾನೂ ಹೋಗುತ್ತಿದ್ದೇನೆ. ಪರಿಶಿಷ್ಟ ಜಾತಿಯ ಜನ ಇರುವ ಎಲ್ಲ ಕಾಲೊನಿಗಳಿಗೆ ಹೋಗಿ ಎಲ್ಲಿ ಸಮೀಕ್ಷೆ ಆಗಿಲ್ಲ ಎಂದು ನೋಡಿ ಸಮೀಕ್ಷೆ ನಡೆಸಲಾಗುವುದು. ಜೂನ್ 30ರ ಒಳಗೆ ಸಮೀಕ್ಷೆ ಕಾರ್ಯ ಮುಗಿಸಲಾಗುವುದು' ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಸಚಿವ ಕೆ.ಎಚ್. ಮುನಿಯಪ್ಪ ಪ್ರತಿಕ್ರಿಯಿಸಿದ್ದಾರೆ.

'ಪ್ರಜಾವಾಣಿ'ಯ ರಾಜೇಶ್ ರೈ ಚಟ್ಲ ಸೇರಿ 53 ಮಂದಿಗೆ ಗೌರವ

'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ' ಪ್ರಕಟ

ಪ್ರಜಾವಾಣಿ ವಾರ್ತೆ

ಬಿ.ಎಸ್. ಪಾಟೀಲ

ಸಿದ್ದಯ್ಯ



ವಿ. ರವಿಚಂದರ್

ದೀಪಕ್ ತಿಮ್ಮಯ

ರಾಜೇಶ್ ರೈ ಚಟ್ಲ

ಬೆಂಗಳೂರು: 'ಪ್ರಜಾವಾಣಿ' ಮುಖ್ಯ ವರದಿಗಾರ ರಾಜೇಶ್ ರೈ ಚಟ್ಲ, ನಿವೃತ್ತ ಐಎಎಸ್ ಅಧಿಕಾರಿಗಳಾದ ಬಿ.ಎಸ್. ಪಾಟೀಲ, ಸಿದ್ದಯ್ಯ, ಉಮಾಶಂಕರ್, ಜೈಕರ್ ಜರೋಮ್, ನಗರ ಯೋಜಕ ರವಿಚಂದರ್, ಸಂಗೀತಾ ಕಟ್ಟಿ, ಪತ್ರಕರ್ತ ದೀಪಕ್ ತಿಮ್ಮಯ, ಡಿ.ಎಸ್. ಮ್ಯಾಕ್ಸ್ ಸಂಸ್ಥೆಯ ದಯಾನಂದ್ ಸೇರಿದಂತೆ 53 ಮಂದಿಗೆ ಬಿಬಿಎಂಪಿಯ 'ನಾಡಪ್ರಭು ಕೆಂಪೇಗೌಡ ಪ್ರಶಸ್ತಿ' ಪ್ರಕಟಿಸಲಾಗಿದೆ.

ಬಿಬಿಎಂಪಿಯ ಕೇಂದ್ರ ಕಚೇರಿಯಲ್ಲಿ ಜೂನ್ 27ರ ಸಂಜೆ ನಡೆಯುವ ಕೆಂಪೇಗೌಡರ 516ನೇ ಜಯಂತಿಯ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ಪ್ರಶಸ್ತಿಯು ₹1 ಲಕ್ಷ ನಗದು ಹಾಗೂ ಫಲಕವನ್ನು ಒಳಗೊಂಡಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಬಿಎಂಪಿಯ 51 ಸಿಬ್ಬಂದಿಗೆ ಉತ್ತಮ ಅಧಿಕಾರಿ/ ನೌಕರರ ಪ್ರಶ್ತಿಯನ್ನು ಈ ಸಂದರ್ಭದಲ್ಲಿ ಪ್ರದಾನ ಮಾಡಲಾಗುತ್ತದೆ.

ಕೆಂಪೇಗೌಡ ಪ್ರಶಸ್ತಿ ಪುರಸ್ಕೃತರು

ನಂದಕುಮಾರ್, ಎಂ.ಜಿ. ರಾಜಗೋಪಾಲ್, ಅರುಣ್ ಪೈ, ಡಾ. ವೆಂಕಟಪ್ಪ, ದೀಪಕ್ ತಿಮ್ಮಯ, ಸತೀಶ್, ಮಾರಸಪ್ಪ ರವಿ, ದರ್ಶನ್ ಗೌಡ, ಅವಿರಾಜ್, ಶ್ಯಾಮ್‌ಸುಂದರ್, ಪ್ರೊ. ಮಿಶ್ರಾ, ಬಿ.ಎಸ್. ಪಾಟೀಲ, ಸಿದ್ದಯ್ಯ, ರವಿಚಂದರ್, ಉಮಾಶಂಕರ್, ಜೈಕರ್ ಜರೋಮ್, ದಯಾನಂದ್, ಕಲ್ಪನಾ ಶಿವಣ್ಣ, ಚಂದ್ರಶೇಖರ್ ರಾಜು, ವರ್ಮಾ, ಹರ್ಷ ಹಂಪನಾ ನಾಗರಾಜು, ಕೆ.ಎಂ. ನಾಗರಾಜು, ಟಿ.ಎಸ್. ಲೂಕಸ್, ಪದ್ಮಶ್ರೀ, ಎಂ. ಚಂದ್ರರೆಡ್ಡಿ, ಎ. ಆರೋಗ್ಯಪ್ಪ, ವಿ.ಎಸ್. ಪ್ಯಾಟ್ರಿಕ್ ರಾಜು, ಸಂಗೀತ ಕಟ್ಟಿ, ಡಾ. ಗೌರಿ ಸುಬ್ರಮಣ್ಯ, ವಿದ್ವಾನ್ ಆರ್.ಕೆ. ಶಂಕರ್, ಎಚ್. ಆರ್. ಭಾರ್ಗವ್, ಎಚ್. ತಿಮ್ಮರಾಜ್ ಅರಸ್, ರಾಜೇಶ್ ರೈ ಚಟ್ಲ, ಭಾವನ ನಾಗಯ್ಯ, ಮಹೇಶ್ ಭೂಪತಿ, ಧನುಷ್ ಎಂ, ಎಂ. ಅಭಿಮನ್ಯು, ವಾನ್ಯವಿ ಬಿ.ಎಸ್, ಡಾ. ವಾಸು, ರಾಧಿಕಾ ಸ್ವಾಮಿ, ರವಿಗೌಡ ಜಕ್ಕೂರು, ವಿದೂಷಿ ರೇಖಾ ಜಗದೀಶ್, ದ್ಯಾಮಣ್ಣ ಎಂ. ಶಾಸ್ತ್ರಿ, ಬಿ.ಪಿ. ಆರಾಧ್ಯ, ಕೆ. ಶಂಕರ್, ಡಾ. ವೆಂಕಟ್, ಸಿ. ಶಿವರಾಜು, ಬಿ.ಎಂ. ಶಿವರುದ್ರಯ್ಯ, ವೈ.ಕೆ. ಬೆನ್ನೂರು, ನಂದಿತಾ ಸುಬ್ಬರಾವ್, ಅತೀಕ್ ಅಹಮದ್ ಬೇಗ್, ಸಂಗೀತಾ ಜೈನ್, ಎನ್. ದೇವರಾಜು.

ಬಂಡಿದೇವರ ಉತ್ಸವ

ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬಂಡಿದೇವರ ಉತ್ಸವದ ಎರಡನೇ ದಿನವಾದ ಗುರುವಾರ ರಾತ್ರಿ ಕೆಂಪೇಗೌಡರ ಪೂರ್ವಿಕ ದೇವರಾದ ಕೆಂಪಣ್ಣಸ್ವಾಮಿ ಹಾಗೂ ಶ್ರೀವೀರಣ್ಣಸ್ವಾಮಿ ಉತ್ಸವ ಮೂರ್ತಿಗಳನ್ನು ಎತ್ತಿನಗಾಡಿಗಳಲ್ಲಿ ಕೂರಿಸಿ, ಬಿಬಿಎಂಪಿ ಕಚೇರಿ ಮುಂಭಾಗದಲ್ಲಿ ಪೂಜೆ ಸಲ್ಲಿಸಿ, ಅಲ್ಲಿಂದ ವಿಧಾನಸೌಧದ ಆವರಣದಲ್ಲಿರುವ ಕೆಂಪೇಗೌಡರ ಪ್ರತಿಮೆವರೆಗೆ ಮೆರವಣಿಗೆ ನಡೆಸಲಾಯಿತು

ಸಂಕ್ಷಿಪ್ತ ಸುದ್ದಿ

ಪರೇಷ್ಟಿ ನೃತ್ಯ 29ಕ್ಕೆ

ಬೆಂಗಳೂರು: ಸ್ಕೂಲ್ ಪರ್ಫಾರ್ಮಿಂಗ್ ಆರ್ಟ್ಸ್ ವತಿಯಿಂದ ಜೂನ್ 29ರಂದು ಬೆಳಿಗ್ಗೆ 11ರಿಂದ ಕೋರಮಂಗಲದ ಮೆಡ್ಡೈ ದಿ ಸ್ಟೇಜ್‌ನಲ್ಲಿ ಪರೇಷ್ಟಿ ನೃತ್ಯ ಪ್ರದರ್ಶನ ನಡೆಯಲಿದೆ.

ಕಲಾವಿದೆ ಬೊರ್ನಾಲೀ ಸರ್ಕಾರ್ ಅವರು ಈ ನೃತ್ಯ ಸಂಯೋಜನೆ ಮಾಡಿದ್ದು, ಸುಬ್ರತೇ ಡೇ ಅವರು ಸಂಗೀತ ಸಂಯೋಜನೆ ಮಾಡಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರೈತ ಸಂತೆ ನಾಳೆ

ಬೆಂಗಳೂರು: ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಇದೇ 28ರಂದು ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರ(ಜಿಕೆವಿಕೆ) ಆವರಣದಲ್ಲಿ (ಗಣಪತಿ ದೇವಸ್ಥಾನದ ಹತ್ತಿರ) ವಿಭಿನ್ನ ರೀತಿಯಲ್ಲಿ ರೈತ ಸಂತೆಯನ್ನು ಆಯೋಜಿಸುತ್ತಿದೆ.

ಬೆಳಿಗ್ಗೆ 7.00ರಿಂದ ಸಂಜೆ 4.00 ಗಂಟೆಯವರೆಗೆ ನಡೆಯುವ ರೈತ ಸಂತೆಯಲ್ಲಿ ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳು, ಸಾವಯವ ಉತ್ಪನ್ನಗಳು, ಮಾವು, ಹಲಸು ಹಣ್ಣುಗಳು, ಸಸ್ಯ ಸಂರಕ್ಷಣೆಗೆ ಸಂಬಂಧಿಸಿದ ಉತ್ಪನ್ನಗಳ ಮಾರಾಟದ ವ್ಯವಸ್ಥೆ ಇದೆ.

ಬಿಜೆಪಿ ಕಚೇರಿ ಬಳಿ 'ಕೈ' ಪ್ರತಿಭಟನೆ

ಬೆಂಗಳೂರು: ಬಿಜೆಪಿಯು ಕೃತಕ ಬುದ್ಧಿಮತ್ತೆ ಬಳಸಿ ಇಂದಿರಾಗಾಂಧಿ ಅವರ ಚಿತ್ರವನ್ನು ತಿರುಚಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದೆ ಎಂದು ಆಕ್ರೋಶ ವ್ಯಕ್ತಪಡಿಸಿ ಯುವ ಕಾಂಗ್ರೆಸ್ ಕಾರ್ಯಕರ್ತರು ಬಿಜೆಪಿ ಕಚೇರಿ ಎದುರು ಗುರುವಾರ ಪ್ರತಿಭಟನೆ ನಡೆಸಿದರು.

ಮಲ್ಲೇಶ್ವರದಲ್ಲಿರುವ ಬಿಜೆಪಿ ಕಚೇರಿಗೆ ಮುತ್ತಿಗೆ ಹಾಕಲು ಮುಂದಾದಾಗ ಪೊಲೀಸರು ಅವರನ್ನು ವಶಕ್ಕೆ ತೆಗೆದುಕೊಂಡರು.

GRT ಜ್ಯುವೆಲರ್ಸ್: 'ಗೋಲ್ಡ್ ಫಾರ್ ಆಲ್'

ಕಡಿಮೆ ವೇಸ್ಟೇಜ್‌ನಿಂದ ಕನಸಿನ ಆಭರಣ ಹೊಂದುವ ಅವಕಾಶ

ಬೆಂಗಳೂರು: ಆಭರಣ ಉದ್ಯಮದ ಗೌರವಾನ್ವಿತ ಸಂಸ್ಥೆ GRT ಜ್ಯುವೆಲರ್ಸ್ ತನ್ನ ಮತ್ತು ಗ್ರಾಹಕರ ನಡುವಿನ ವಿಶ್ವಾಸಾರ್ಹ ಸಂಬಂಧದ ಪರಂಪರೆ ಮುಂದುವರಿಸಿಕೊಂಡು ಹೋಗಲು 'GRT ಗೋಲ್ಡ್ ಫಾರ್ ಆಲ್' ಸ್ಕೀಮ್ ಘೋಷಣೆ ಮಾಡಿದೆ.

ಈ ಮಾರಾಟ ಯೋಜನೆಯ ಮೂಲಕ ಕಡಿಮೆ ವೇಸ್ಟೇಜ್ (VA) 5 % ರಿಂದ ಪ್ರಾರಂಭವಾಗಲಿರುವ ಜಿಆರ್‌ಟಿ ಆಭರಣಗಳು ಗ್ರಾಹಕರಿಗೆ ಅನುಕೂಲ ತರಲಿವೆ. ತಯಾರಿಕೆ ಶುಲ್ಕ ಕಡಿಮೆ ಆಗುವುದರಿಂದ ಕೊಳ್ಳುಗರು, ಆಭರಣ ವೆಚ್ಚದಲ್ಲಿ ಉಳಿತಾಯ ಕಾಣಲಿದ್ದಾರೆ. ಆಭರಣ ಪ್ರಿಯರು ಸಂತೋಷಪಡಲು ಇದೊಂದು ಉತ್ತಮ ಅವಕಾಶ ಎಂದು ಸಂಸ್ಥೆ ಹೇಳಿದೆ.

1964ರಲ್ಲಿ ಆಭರಣ ಉದ್ಯಮದ ಒಂದು ಸಾಧಾರಣ ಸಂಸ್ಥೆಯಾಗಿ ಆರಂಭವಾದ GRT ಜ್ಯುವೆಲರ್ಸ್, ಇಂದು ಗೌರವಾನ್ವಿತ ಉದ್ಯಮವಾಗಿ ಬೆಳೆದಿದೆ. ಅದರ ಉನ್ನತ ಗುಣಮಟ್ಟ, ಕರಕುಶಲತೆ ಮತ್ತು ಗ್ರಾಹಕರ ನಿರಂತರ ಸಂಪರ್ಕ ಈ ಬೆಳವಣಿಗೆಗೆ ಕಾರಣವಾಗಿದೆ. ಇಂದು ಜಿಆರ್‌ಟಿ ದಕ್ಷಿಣ ಭಾರತದಲ್ಲಿ 64 ಮತ್ತು ಸಿಂಗಾಪುರದಲ್ಲಿ ಒಂದು ಮಳಿಗೆ ಸೇರಿದಂತೆ ಒಟ್ಟು 65 ಸ್ಥಳಗಳಲ್ಲಿ ವ್ಯಾಪಕ ಶ್ರೇಣಿಯ ಚಿನ್ನ, ವಜ್ರ, ಪ್ಲಾಟಿನಂ, ಬೆಳ್ಳಿ ಹಾಗೂ ರತ್ನದ ಆಭರಣಗಳನ್ನು ಒದಗಿಸುತ್ತಿದೆ.

ಜಿಆರ್‌ಟಿ ಜ್ಯುವೆಲರ್ಸ್ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಆನಂದ್ ಅನಂತಪದ್ಮನಾಭನ್ ಅವರು ಮಾತನಾಡಿ, ಚಿನ್ನ ಅಥವಾ ಇತರ ಆಭರಣಗಳನ್ನು ಖರೀದಿಸುವುದು ತಲೆಮಾರುಗಳಿಂದ ಬಂದಿರುವ ಪ್ರತೀತಿ. ಇತ್ತೀಚಿನ ದಿನಗಳಲ್ಲಿ ಚಿನ್ನದ ಬೆಲೆ ಅನಿರೀಕ್ಷಿತ ಏರಿಕೆ ಕಾಣುತ್ತಿದ್ದರೂ ನಮ್ಮ ಸಂಸ್ಥೆ 'ಗೋಲ್ಡ್ ಫಾರ್ ಆಲ್' ಯೋಜನೆ ಘೋಷಣೆ ಮಾಡಿ ಗ್ರಾಹಕರಿಗೆ ಅನುಕೂಲ ಮಾಡಿದೆ. ಇದರಿಂದ ನಮ್ಮ ವ್ಯಾಲ್ಯುಬಲ್ ಕಸ್ಟಮರ್‌ಗಳಿಗೆ ಹೆಚ್ಚಿನ ಪ್ರಯೋಜನವಾಗಲಿದೆ ಎಂಬ ನಮ್ಮ ನಂಬಿಕೆ ನಮ್ಮದು ಎಂದಿದ್ದಾರೆ.

ಜಿಆರ್‌ಟಿಯ ಮತ್ತೊಬ್ಬ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ರಾಧಾಕೃಷ್ಣನ್, 'ನಾವು 60 ವರ್ಷಗಳಿಗೂ ಹೆಚ್ಚು ಕಾಲದಿಂದ ಜನರ ನಂಬಿಕೆ ಉಳಿಸಿಕೊಂಡಿದ್ದೇವೆ. ಹಾಗಿದ್ದಾಗ ಅವರ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳದಿದ್ದರೆ ಹೇಗೆ? ಚಿನ್ನದ ಬೆಲೆಗಳು ಏರಿಳಿಗೊಳ್ಳುತ್ತಿರುವ ಈ ಸಮಯದಲ್ಲಿ ಎಲ್ಲರಿಗೂ ಚಿನ್ನವನ್ನು ಖರೀದಿಸಲು ಸಾಧ್ಯವಾಗುವಂತೆ ಮಾಡುವುದು ನಮ್ಮ ಕರ್ತವ್ಯ. ನಮ್ಮಲ್ಲಿಗೆ ಬಂದು ಅಮೂಲ್ಯ ಆಭರಣಗಳನ್ನು ಖರೀದಿಸಲು ಗ್ರಾಹಕರನ್ನು ಸ್ವಾಗತಿಸುತ್ತೇವೆ ಎಂದರು.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ

ಆದಿಚುಂಚನಗಿರಿ ಕ್ಷೇತ್ರದ
ಶ್ರೀ ಶ್ರೀ ಶ್ರೀ ನಿರ್ಮಲಾನಂದನಾಥ ಮಹಾಸ್ವಾಮೀಜಿಗಳ ಮಾರ್ಗದರ್ಶನದಲ್ಲಿ

ನಾಡಪ್ರಭು ಕೆಂಪೇಗೌಡರ
516ನೇ ಜಯಂತ್ಯುತ್ಸವ

ಕರ್ನಾಟಕದ ಚರಿತ್ರೆಯಲ್ಲಿ ಚೈತನ್ಯಪುರುಷರಲ್ಲಿ ಒಬ್ಬರಾದ ನಾಡಪ್ರಭು ಕೆಂಪೇಗೌಡರು ಪ್ರಾತಃಸ್ಮರಣೀಯರು. ಯಲಹಂಕ ನಾಡಪ್ರಭುಗಳ ವಂಶದ ಹೆಮ್ಮೆಯ ಕುಡಿಯಾದ ಕೆಂಪೇಗೌಡರು ಇಂದಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು, ರಾಮನಗರ ಮತ್ತು ಕೋಲಾರ ವ್ಯಾಪ್ತಿಯ ಸಂಸ್ಥಾನದ ಚುಕ್ಕಾಣಿ ಹಿಡಿದಿದ್ದವರು. ಸಾತ್ವಿಕ ಆಡಳಿತ ಮತ್ತು ಅಗತ್ಯವಿದ್ದಾಗ ಕ್ಷಾತ್ರಬಲದ ಪ್ರದರ್ಶನ- ಇವೇ ಅವರ ಮಂತ್ರಗಳಾಗಿದ್ದವು.

ಇಂದು ಬೆಂಗಳೂರು ಆವಿಷ್ಕಾರ ಮತ್ತು ತಂತ್ರಜ್ಞಾನ ನಗರವಾಗಿ ಜಗದ್ವಿಖ್ಯಾತಿ ಗಳಿಸಿದೆ. ಬೆಂಗಳೂರನ್ನು ಸುಸ್ಥಿರ, ವಾಣಿಜ್ಯ ಲಾಭದಾಯಕ, ಜನವಸತಿಗೆ ಯೋಗ್ಯ, ಕಲೆ-ಸಂಸ್ಕೃತಿಗಳ ತಾಣವಾಗಿ ಬೆಳೆಸುವ ಬಗ್ಗೆ ಕೆಂಪೇಗೌಡರಿಗೆ ಸ್ಪಷ್ಟ ಕಲ್ಪನೆಯಿತ್ತು. ಇಲ್ಲಿರುವ ಕೆರೆಗಳ ಜಾಲ, ನೀರು ಹರಿಯಲು ಮಾಡಿದ್ದ ರಾಜಕಾಲುವೆ, ಸುಂಕದಕಟ್ಟೆಗಳು, ನಗರದ ಮಿತಿ ಗುರುತಿಸಿದ್ದ ಗಡಿ ಗೋಪುರಗಳು ಅವರ ದೂರದೃಷ್ಟಿಗೆ ಸಾಕ್ಷಿಗಳಾಗಿವೆ. ಇದಾದ ಮೇಲೆ ಕಾಲಕಾಲಕ್ಕೆ ಬೆಂಗಳೂರನ್ನು ಆಳಿದ ಸಾಮಂತರು, ಸಂಸ್ಥಾನಗಳ ರಾಜರು, ಮೈಸೂರಿನ ಯದುವಂಶದ ಒಡೆಯರ್ ಗಳು, ಇತ್ತೀಚಿನ ಸರಕಾರಗಳು ಕೆಂಪೇಗೌಡರ ಈ ಉಜ್ವಲ ಪರಂಪರೆಯನ್ನು ಅರ್ಥಪೂರ್ಣ ಉಪಕ್ರಮಗಳ ಮೂಲಕ ಮುಂದುವರಿಸಿಕೊಂಡು ಬಂದಿವೆ. ಹಿಂದೆ ಗುಂಡೂರಾಯರ ಸರಕಾರವು ಕೆಂಪೇಗೌಡರ ಹೆಸರಿನಲ್ಲಿ ಸುಸಜ್ಜಿತ ಬಸ್ ನಿಲ್ದಾಣ ಸ್ಥಾಪಿಸಿದರೆ, ಬಿ ಎಸ್ ಯಡಿಯೂರಪ್ಪನವರ ಮೊದಲ ಅವಧಿಯ ಸರಕಾರವು ಇಲ್ಲಿನ ವಿಮಾನ ನಿಲ್ದಾಣಕ್ಕೆ ನಾಡಪ್ರಭುವಿನ ಹೆಸರಿಟ್ಟಿತು. ಸಿದ್ದರಾಮಯ್ಯ ಅವರು ತಮ್ಮ ಮೊದಲ ಅವಧಿಯಲ್ಲಿ ನಾಡಪ್ರಭುವಿನ ಜಯಂತಿಗೆ ಅಧಿಕೃತ ಚಾಲನೆ ನೀಡಿದರು. ಎಚ್.ಡಿ.ಕುಮಾರಸ್ವಾಮಿ ತಮ್ಮ ಅವಧಿಯಲ್ಲಿ ಕೆಂಪೇಗೌಡ ಲೇಔಟ್ ನಿರ್ಮಿಸಿದರು. ಬಸವರಾಜ ಬೊಮ್ಮಾಯಿ, ವಿಧಾನಸೌಧದ ಆವರಣದಲ್ಲಿ ಕೆಂಪೇಗೌಡರ ಪ್ರತಿಮೆ ಸ್ಥಾಪಿಸಿದರು. ಇಂತಹ ಚಾರಿತ್ರಿಕ ಹಿನ್ನೆಲೆಯ ಬೆಂಗಳೂರು ಇಂದು ಒಂದೂವರೆ ಕೋಟಿ ಜನರಿಗೆ ಆಶ್ರಯ ನೀಡಿದೆ. ಇಲ್ಲಿ ಕೆಂಪೇಗೌಡರ ಕಾಲದಿಂದಲೂ ಜಾತಿಭೇದಗಳ ತಾರತಮ್ಯವಿಲ್ಲವೆನ್ನುವುದು ಹೆಮ್ಮೆಯ ಸಂಗತಿ. ಬಿಜೆಪಿ ಆಡಳಿತದ ವೇಳೆ ಎರಡೂವರೆ ವರ್ಷಗಳ ಹಿಂದೆ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ 108 ಅಡಿ ಎತ್ತರದ, ನಾಡಪ್ರಭುಗಳ ಬೃಹತ್ ಕಂಚಿನ ಪ್ರತಿಮೆ ಸ್ಥಾಪಿಸಲಾಯಿತು. ಸಮೃದ್ಧಿಯ ಪ್ರತಿಮೆ ಎಂದು ಹೆಸರಿಸಲಾದ ಈ ಪ್ರತಿಮೆಯನ್ನು ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿ ಲೋಕಾರ್ಪಣೆ ಮಾಡಿದರು.

ವಾಣಿಜ್ಯ ವಹಿವಾಟಿಗೆ ತರಹೇವಾರಿ ಪೇಟೆಗಳ ಕಲ್ಪನೆ ಕೆಂಪೇಗೌಡರದು! ಬೆಂಗಳೂರಿನ ಕೀರ್ತಿಯನ್ನು ನಾವು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯಬೇಕಾಗಿದ್ದು, ಸಾರ್ವಜನಿಕ ಜೀವನದಲ್ಲಿ ಕೆಂಪೇಗೌಡರಂತಹ ದೂರದೃಷ್ಟಿಯ ನಾಯಕರ ಅಗತ್ಯವಿದೆ. ನಾವು ಕೆಂಪೇಗೌಡರು, ಅವರು ನಿರ್ಮಿಸಿದ ಬೆಂಗಳೂರು, ಇಲ್ಲಿರುವ ಜನ ಮತ್ತು ಸಾಧಕರು ಎಲ್ಲವನ್ನೂ ಸಂಭ್ರಮಿಸಬೇಕು.

ಇದರ ಅಂಗವಾಗಿ ಇಂದು (ಜೂನ್ 27, 2025, ಶುಕ್ರವಾರ) ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನದ ಮೂಲಕ ಅರ್ಥಪೂರ್ಣ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಬನ್ನಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಪಾಲ್ಗೊಳ್ಳಿ!

ಸ್ವಾಗತ ಕೋರುವವರು
ಡಾ. ಸಿ ಎನ್ ಅಶ್ವತ್ಥನಾರಾಯಣ
ಶಾಸಕರು, ಮಲ್ಲೇಶ್ವರ ಮತ್ತು ಮಾಜಿ ಉಪ ಮುಖ್ಯಮಂತ್ರಿಗಳು

ಸಾಧಕರಿಗೆ ನಾಡಪ್ರಭು ಸ್ಮರಣಾರ್ಥ ಪ್ರಶಸ್ತಿಗಳ ಪ್ರದಾನ

ನಾಡಪ್ರಭು ಕೆಂಪೇಗೌಡ ಅಂತಾರಾಷ್ಟ್ರೀಯ ಪ್ರಶಸ್ತಿ-2025 ಪುರಸ್ಕೃತರು

ಶ್ರೀ ಡಾ. ಕೆ ಪಿ ಗೋಪಾಲಕೃಷ್ಣ (ಶಿಕ್ಷಣ ಕ್ಷೇತ್ರ), ಬೆಂಗಳೂರು
ಶ್ರೀ ಡಾ. ಅಮರನಾಥ್ ಗೌಡ (ಅನಿವಾಸಿ ಉದ್ಯಮ ಕ್ಷೇತ್ರ), ಬೆಂಗಳೂರು.
ಶ್ರೀ ಡಾ. ಪ್ರಹ್ಲಾದ್ ರಾಮರಾವ್ (ವಿಜ್ಞಾನ ಕ್ಷೇತ್ರ), ಬೆಂಗಳೂರು.

ಕರುನಾಡ ಪ್ರಭು ಕೆಂಪೇಗೌಡ ಪ್ರಶಸ್ತಿ-2025 ಪುರಸ್ಕೃತರು

- ಎಲ್ ಹನುಮಯ್ಯ (ಕೃಷಿ, ಬೆಂಗಳೂರು ಜಿಲ್ಲೆ)
- ಎಚ್ ಸುಬ್ಬಣ್ಣ (ಸಮಾಜಸೇವೆ, ಬೆಂಗಳೂರು ಜಿಲ್ಲೆ)
- ಎಂ ಜೆ ಕಮಲಾಕ್ಷಿ (ಚಿತ್ರಕಲೆ, ಬೆಂಗಳೂರು)
- ವಿ ನರಸಿಂಹನ್ (ಆರ್ಕಿಟೆಕ್ಟ್, ಬೆಂಗಳೂರು)
- ಸಿ ಎ ಪ್ರಸನ್ನ (ಉದ್ಯಮಿ, ಬೆಂಗಳೂರು)
- ನಾಗಾನಂದ್ ದೊರೆಸ್ವಾಮಿ (ಉದ್ಯಮ ಪ್ರೋತ್ಸಾಹಿ, ಬೆಂಗಳೂರು)
- ಮರಿಮಲ್ಲಯ್ಯ (ಸಮಾಜಸೇವೆ, ಬೆಂಗಳೂರು ಜಿಲ್ಲೆ)
- ಕೆ ಎಂ ಹನುಮಂತರಾಯಪ್ಪ (ಸಮಾಜಸೇವೆ, ಬೆಂ.ಗ್ರಾಮಾಂತರ)
- ಚಂದ್ರಮ್ಮ (ಕೃಷಿ, ರಾಮನಗರ ಜಿಲ್ಲೆ)
- ವೆಂಕಟೇಶ (ಕೃಷಿ ಕೈಗಾರಿಕೆ, ಮಂಡ್ಯ ಜಿಲ್ಲೆ)
- ಯೋಗಾತ್ಮ ಶ್ರೀಹರಿ (ಯೋಗ & ಸಮಾಜಸೇವೆ, ಮೈಸೂರು)
- ಪುಟ್ಟಯ್ಯ (ಕೃಷಿ, ಮೈಸೂರು ಜಿಲ್ಲೆ)
- ಗಣಪತಿ (ಪತ್ರಿಕೋದ್ಯಮ, ಮೈಸೂರು)
- ವೆಂಕಟೇಶ ಸಿ ಎಂ (ಪರಿಸರ, ಚಾಮರಾಜನಗರ ಜಿಲ್ಲೆ)
- ಎ ಆರ್ ಮುತ್ತಣ್ಣ (ಕೃಷಿ, ಕೊಡಗು ಜಿಲ್ಲೆ)
- ಬಾರಿಯಂಡ ಜೋಯಪ್ಪ (ಸಾಹಿತ್ಯ, ಕೊಡಗು ಜಿಲ್ಲೆ)
- ಕಂದಾವರ ರಘುರಾಮ ಶೆಟ್ಟಿ (ಯಕ್ಷಗಾನ, ದಕ್ಷಿಣ ಕನ್ನಡ ಜಿಲ್ಲೆ)
- ಎಂ ಜೆ ದಿನೇಶ್ (ಕೃಷಿ, ಚಿಕ್ಕಮಗಳೂರು ಜಿಲ್ಲೆ)
- ಡಾ. ಮಮತಾ ಜಿ (ವೈದ್ಯಕೀಯ, ಹಾಸನ ಜಿಲ್ಲೆ)
- ವೈ ಪಿ ಕೆಂಪಯ್ಯ (ಸಾಂಸ್ಕೃತಿಕ, ತುಮಕೂರು ಜಿಲ್ಲೆ)
- ನಾಗಣ್ಣ (ಪತ್ರಿಕೋದ್ಯಮ, ತುಮಕೂರು ಜಿಲ್ಲೆ)
- ಡಾ. ಶಂಕರಪ್ಪ ಎಸ್ ಪಿ ಗೌಡ (ವೈದ್ಯಕೀಯ, ತುಮಕೂರು ಜಿಲ್ಲೆ)
- ಸಿ ಆರ್ ಹರೀಶ್ (ಕೃಷಿ, ಕೋಲಾರ ಜಿಲ್ಲೆ)
- ಆರ್. ಆಂಜನೇಯ ರೆಡ್ಡಿ (ಸಾಮಾಜಿಕ ಚಟುವಟಿಕೆ, ಚಿಕ್ಕಬಳ್ಳಾಪುರ ಜಿಲ್ಲೆ)
- ಬಿ ಎನ್ ಸಚಿನ್ (ಕೃಷಿ, ಚಿಕ್ಕಬಳ್ಳಾಪುರ ಜಿಲ್ಲೆ)

ದಿನಾಂಕ: 27 ಜೂನ್ 2025, ಶುಕ್ರವಾರ
ಸಮಯ: ಸಂಜೆ 4 ಗಂಟೆ
ಸ್ಥಳ: ಗಾಯತ್ರಿ ವಿಹಾರ ಗ್ರ್ಯಾಂಡ್, ಗೇಟ್ ನಂಬರ್ 4, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಬೆಂಗಳೂರು

ರಾಜ್ಯದ ಸಮಸ್ತ ಜನತೆಗೆ ಸ್ವಾಗತ

ಬನ್ನಿ, ಬೆಂಗಳೂರಿನ ಜನಕನನ್ನು ಸ್ಮರಿಸೋಣ; ಅವರ ಪರಂಪರೆಯನ್ನು ಮುಂದುವರಿಸಿಕೊಂಡು ಹೋಗೋಣ!

ಶ್ರೀ ಪ್ರೊ.ಎಂ ಕೃಷ್ಣೇಗೌಡ,
ಅಧ್ಯಕ್ಷರು, ನಾಡಪ್ರಭು ಕೆಂಪೇಗೌಡ ಪ್ರತಿಷ್ಠಾನ

• ಅಭಿಲಾಷ್ ಪಿ.ಎಸ್.

ಅಯಾನ ಸಿನಿಯಾನ

ಗಿರೀಶ ಕಾಸರವಳ್ಳಿ ಅವರ ನಿರ್ದೇಶನದ 'ಇಲ್ಲಿರಲಾರೆ ಅಲ್ಲಿಗೆ ಹೋಗಲಾರೆ' ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟಿದ್ದ ಅಯಾನ ಬಳಿಕ ಪೃಥ್ವಿ ಅಂಬಾರ್ ನಟನೆಯ 'ದೂರದರ್ಶನ' ಸಿನಿಮಾ ಮೂಲಕ ಸದ್ದು ಮಾಡಿದ್ದರು. ಹಳ್ಳಿ ಹುಡುಗಿಯಾಗಿ ಈ ಸಿನಿಮಾದಲ್ಲಿ ನಟಿಸಿದ್ದ ಇವರು ಇದೀಗ 'ಎಕ್ಸ್ ಆ್ಯಂಡ್ ವೈ' ಸಿನಿಮಾದಲ್ಲಿ ಮಾಡರ್ನ್ ಹುಡುಗಿಯಾಗಿ ಕಾಣಿಸಿಕೊಂಡಿದ್ದಾರೆ. ಈ ಸಿನಿಮಾ ಜೂನ್ 26ಕ್ಕೆ ತೆರೆಕಂಡಿದ್ದು ತಮ್ಮ ಸಿನಿಪಯಣದ ಬಗ್ಗೆ ಅಯಾನ ಮಾತಿಗಿಳಿದಾಗ...

'ಬೆಂಗಳೂರಿನ ಹುಡುಗಿ ನಾನು. ನಟನೆಯ ಕನಸು ಹೊತ್ತು ಬೆಳೆದವಳಲ್ಲ. ಭರತನಾಟ್ಯ, ರಂಗಭೂಮಿ ನನ್ನನ್ನು ಬಣ್ಣದ ಲೋಕಕ್ಕೆ ಪರಿಚಯಿಸಿತು. ಎಂ.ಎಸ್.ಸತ್ಯು ಅವರ ನಾಟಕಗಳಲ್ಲಿ ಪ್ರಮುಖ ಪಾತ್ರಗಳಲ್ಲಿ ನಟಿಸಿದೆ. ಇವುಗಳು 40 ಪ್ರದರ್ಶನ ಕಂಡಿವೆ. ರಂಗಭೂಮಿಯಿಂದ ಬಂದ ನನಗೆ ಸಿನಿಮಾ ಲೋಕವೇ ಹೊಸದಾಗಿತ್ತು. ನೂರಾರು ಜನರೆದುರು ನಿಂತು ನಟಿಸಿದ ನನಗೆ ಕ್ಯಾಮೆರಾದೆದುರು ನಟಿಸುವುದು ಸವಾಲಿನ ವಿಷಯವಾಗಿತ್ತು. ನನ್ನ ಮೊದಲ ಕಮರ್ಷಿಯಲ್ ಸಿನಿಮಾ 'ದೂರದರ್ಶನ' ಬಿಡುಗಡೆಗೊಂಡಾಗ ಭಯವಿತ್ತು. ಚಿತ್ರಮಂದಿರಗಳಲ್ಲಿ ಜನ ನನ್ನ ಪಾತ್ರವನ್ನು ಹಾಗೂ ಸಿನಿಮಾದ ಭಿನ್ನ ಕಥಾವಸ್ತುವನ್ನು ಹೇಗೆ ಸ್ವೀಕರಿಸುತ್ತಾರೆ ಎನ್ನುವ ಕುತೂಹಲವೂ ಇತ್ತು. ಈ ಸಿನಿಮಾ ಒಂದೊಳ್ಳೆಯ ಅನುಭವ ನೀಡಿತ್ತು' ಎಂದು ನೆನಪುಗಳನ್ನು ಬಿಚ್ಚಿಟ್ಟರು.

ಈಗ ತೆರೆಕಂಡಿರುವ ಭಿನ್ನ ಕಥಾಹಂದರದ 'ಎಕ್ಸ್ ಆ್ಯಂಡ್ ವೈ' ಸಿನಿಮಾದಲ್ಲಿ 'ಆಶಾ' ಎನ್ನುವ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಇನ್ನಷ್ಟೇ ಹುಟ್ಟಬೇಕಿರುವ ಒಂದು ಆತ್ಮದ ಜೊತೆಗಿನ ಪಯಣ ನನ್ನದು. ಸಿನಿಮಾ ನೋಡಿದರೆ ಇದು ಅರ್ಥವಾಗಲಿದೆ. ಮಾಡರ್ನ್ ಹುಡುಗಿಯಾಗಿ ಕಾಣಿಸಿಕೊಂಡಿದ್ದೇನೆ. ಈ ಸಿನಿಮಾದ ಚಿತ್ರೀಕರಣ ಹೊಸ ಪಾಠ ಕಲಿಸಿದೆ. ಈ ಹಿಂದೆ ಚಿತ್ರೀಕರಣಕ್ಕೂ ಮುನ್ನ ಬಹಳ ಸಿದ್ಧತೆ ಮಾಡಿಕೊಂಡು ಹೋಗುವ ನಟಿ ನಾನಾಗಿದ್ದೆ. ಆದರೆ ನಿರ್ದೇಶಕ ಸತ್ಯ ಅವರು ಸಿನಿಮಾದ ಚಿತ್ರೀಕರಣದ ದಿನವೇ ಸಂಭಾಷಣೆ, ದೃಶ್ಯಗಳನ್ನು ಬರೆದದ್ದೂ ಇದೆ. ಇದನ್ನು ಆ ಕ್ಷಣದಲ್ಲೇ ಚಿತ್ರೀಕರಿಸಿದ್ದೂ ಇದೆ. ಹೀಗಾಗಿ ಇದು ನಟಿಯಾಗಿ ನನಗೆ ಪಾಠದಂತಿತ್ತು' ಎಂದರು ಅಯಾನ.

'ದೂರದರ್ಶನ ಸಿನಿಮಾದಿಂದ ಚಿತ್ರರಂಗ ನನ್ನನ್ನು ಗುರುತಿಸಿತು. ನನ್ನ ನಟನೆಯನ್ನು ಜನರು ಗುರುತಿಸಿದರು. 'ದೂರದರ್ಶನ'ದ ಬಳಿಕ ಸುಮಾರು ಆರು ತಿಂಗಳು ಬಿಡುವು ಪಡೆದಿದ್ದೆ. ಒಳ್ಳೆಯ ಕಥೆಗಾಗಿ ಕಾಯುತ್ತಿದ್ದೆ. ಬಳಿಕ ತೆಲುಗಿನಲ್ಲೊಂದು ಸಿನಿಮಾ ಮಾಡಿದೆ. ಇದು ಇನ್ನಷ್ಟೇ ಬಿಡುಗಡೆಯಾಗಬೇಕಿದೆ. 'ಅಯ್ಯನ ಮನೆ' ಬಳಿಕ ಜೀ5ನಲ್ಲಿ ಪ್ರಸಾರವಾಗಲಿರುವ ಮತ್ತೊಂದು ವೆಬ್ ಸರಣಿಯಲ್ಲಿ ನಾನು ಮುಖ್ಯಭೂಮಿಕೆಯಲ್ಲಿದ್ದೇನೆ. ಇದರಲ್ಲಿ 60 ಕಂತುಗಳಿವೆ. 'ಅಯ್ಯನ ಮನೆ' ಬಳಿಕ ವೆಬ್ ಸರಣಿ ಮೇಲೆ ಜನರ ಗಮನ ಹೆಚ್ಚಿದೆ. ಕಲಾವಿದರಿಗೂ ಪರ್ಯಾಯ ವೇದಿಕೆ ಈ ಮುಖಾಂತರ ದೊರೆತಿದೆ. ಕನ್ನಡದಲ್ಲಿ ವಿಜಯ್ ನಾಗೇಂದ್ರ ಅವರ 'ಆಲ್ಫಾ' ಸಿನಿಮಾದ ಶೇಕಡ 70ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಹೊಸ ಕಥೆಗಳನ್ನು ಕೇಳುತ್ತಿದ್ದೇನೆ. ನಾನು ಭಿನ್ನವಾದ ಪಾತ್ರಗಳನ್ನೇ ಆಯ್ಕೆ ಮಾಡಿಕೊಂಡು ಬಂದಿದ್ದೇನೆ. ಈ ಸೂತ್ರವನ್ನಿಟ್ಟುಕೊಂಡೇ ಮುಂದುವರಿಯುತ್ತೇನೆ' ಎಂದು ಮಾತಿಗೆ ವಿರಾಮವಿತ್ತರು.

ಅಯಾನ

ಚಿತ್ರರಂಗಕ್ಕೆ ಉದ್ಯಮಿ ಅನಿಲ್ ಶೆಟ್ಟಿ ಪ್ರವೇಶ

ಅನಿಲ್ ಶೆಟ್ಟಿ

ಸ್ಟಾರ್ಟ್‌ಅಪ್ ಉದ್ಯಮಿ ಹಾಗೂ ಯುವ ರಾಜಕಾರಣಿ ಅನಿಲ್ ಶೆಟ್ಟಿ ನಾಯಕ ನಟನಾಗಿ ಚಲನಚಿತ್ರರಂಗಕ್ಕೆ ಹೆಜ್ಜೆ ಇಡಲು ಸಜ್ಜಾಗಿದ್ದಾರೆ.

ಜನ್ಮದಿನದ ಸಂದರ್ಭದಲ್ಲಿ ಅನಿಲ್ ತಮ್ಮ ಈ ನಿರ್ಧಾರವನ್ನು ಪ್ರಕಟಿಸಿದ್ದು, ಚಿತ್ರರಂಗಕ್ಕೆ ಸೇರುವ ತಮ್ಮ ಬಹು ದಿನಗಳ ಕನಸನ್ನು ನನಸು ಮಾಡಲು ಮುಂದಾಗಿದ್ದಾರೆ. ಉದ್ಯಮದಲ್ಲಿ ಹಲವಾರು ಯಶಸ್ವಿ ಯೋಜನೆಗಳನ್ನು ರೂಪಿಸಿರುವ ಅನಿಲ್ ಶೆಟ್ಟಿ ಈಗ ಚಿತ್ರೋದ್ಯಮದಲ್ಲೂ ತಮ್ಮ ಛಾಪು ಮೂಡಿಸಲು ಮುಂದಾಗಿದ್ದಾರೆ. ತಮ್ಮ ಮೊದಲ ಚಿತ್ರದಲ್ಲೇ ಅನಿಲ್ ನಟನಾಗಿ ಮಾತ್ರವಲ್ಲದೆ ಬರಹಗಾರರಾಗಿಯೂ ಗುರುತಿಸಿಕೊಳ್ಳುತ್ತಿರುವುದು ವಿಶೇಷ. ಕ್ರಿಕೆಟಿಗ ಕೆ.ಎಲ್.ರಾಹುಲ್ ಮತ್ತು ಬಾಲಿವುಡ್ ನಟ ಸುನೀಲ್ ಶೆಟ್ಟಿ ಅವರೊಂದಿಗೆ 'ಡ್ರಿಪ್ ಪ್ರಾಜೆಕ್ಟ್' ಮತ್ತು 'ಮೆಟಮನ್' ಎನ್ನುವ ಎರಡು ಫ್ಯಾಷನ್ ಬ್ರಾಂಡ್‌ಗಳನ್ನು ಸ್ಥಾಪಿಸಿರುವ ಇವರು ಅನೇಕ ಸ್ಟಾರ್ಟ್‌ಅಪ್ ಕಂಪನಿಗಳಿಗೆ ಬಂಡವಾಳ ಹೂಡಿದ್ದಾರೆ.

ಅನಿಲ್ ಶೆಟ್ಟಿ ನಟನೆಯ ಚಿತ್ರದ ಶೀರ್ಷಿಕೆ ಮತ್ತು ತಂಡದ ವಿವರಗಳು ಇನ್ನಷ್ಟೇ ಬಹಿರಂಗಗೊಳ್ಳಬೇಕಿದೆ. ಚಲನಚಿತ್ರರಂಗದ ಖ್ಯಾತ ಕಲಾವಿದರ ಜೊತೆ ಅನಿಲ್ ಕೆಲಸ ಮಾಡಲು ಮಾತುಕತೆ ನಡೆಸುತ್ತಿದ್ದಾರೆ ಎನ್ನಲಾಗಿದೆ.

ಆಪರೇಷನ್‌ಗೆ ಸಜ್ಜಾದ ಹೇಮಂತ್!

'ಕವಲುದಾರಿ', 'ಸಪ್ತಸಾಗರದಾಚೆ ಎಲ್ಲೋ' ಸಿನಿಮಾ ನಿರ್ದೇಶಕ ಹೇಮಂತ್ ಎಂ.ರಾವ್ ಇದೀಗ ನಟ ಡಾಲಿ ಧನಂಜಯ ಅವರಿಗೆ ಆ್ಯಕ್ಷನ್ ಕಟ್ ಹೇಳಲು ಸಜ್ಜಾಗಿದ್ದಾರೆ. ಈ ಸಿನಿಮಾದಲ್ಲಿ ನಟ ಶಿವರಾಜ್‌ಕುಮಾರ್ ವಿಶೇಷ ಪಾತ್ರದಲ್ಲಿರಲಿದ್ದಾರೆ.

'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾ ಬಳಿಕ ನಿರ್ದೇಶಕ ಹೇಮಂತ್ ಎಂ.ರಾವ್ 'ಭೈರವನ ಕೊನೆ ಪಾಠ' ಕೈಗೆತ್ತಿಕೊಂಡಿದ್ದರು. ನಟ ಶಿವರಾಜ್‌ಕುಮಾರ್ ಅವರು ಆ ಸಂದರ್ಭದಲ್ಲಿ ಅನಾರೋಗ್ಯಕ್ಕೀಡಾದ ಕಾರಣ ಅದನ್ನು ಹೇಮಂತ್ ಮುಂದೂಡಿ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡರು. ಇತ್ತೀಚೆಗೆ ಈ ಚಿತ್ರದ ಮುಹೂರ್ತ ನಡೆದಿದ್ದು, ಚಿತ್ರಕ್ಕೆ '666 ಆಪರೇಷನ್ ಡ್ರೀಮ್ ಥಿಯೇಟರ್' ಎಂಬ ಶೀರ್ಷಿಕೆ ಇಡಲಾಗಿದೆ. ಚಿತ್ರತಂಡವು ಸದ್ಯ ಕಲಾವಿದರ ಹುಡುಕಾಟದಲ್ಲಿದೆ. ಸಿನಿಮಾವನ್ನು ಡಾ.ವೈಶಾಖ್ ಜೆ ಗೌಡ ಅವರ ವೈಶಾಖ್ ಜೆ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ.

70ರ ದಶಕದ ಶೈಲಿ ಚಿತ್ರದ ವೈಶಿಷ್ಟ್ಯವಾಗಿದ್ದು ಶಿವರಾಜ್‌ಕುಮಾರ್ ಭಿನ್ನವಾದ ಪಾತ್ರದ ಮುಖಾಂತರ ಪ್ರೇಕ್ಷಕರ ಎದುರಿಗೆ ಬರಲಿದ್ದಾರೆ. ಚಿತ್ರಕ್ಕೆ ಚರಣ್ ರಾಜ್ ಸಂಗೀತ ಸಂಯೋಜನೆ, ಅದ್ವೈತ ಗುರುಮೂರ್ತಿ ಛಾಯಾಚಿತ್ರಗ್ರಹಣ, ವಿಶ್ವಾಸ್ ಕಶ್ಯಪ್ ಕಲಾ ನಿರ್ದೇಶನವಿರಲಿದೆ.

ಈ ಸಿನಿಮಾ ಬಳಿಕ ಹೇಮಂತ್ 'ಭೈರವನ ಕೊನೆ ಪಾಠ' ಪ್ರಾಜೆಕ್ಟ್ ಕೈಗೆತ್ತಿಕೊಳ್ಳಲಿದ್ದಾರೆ. 'ಈ ಸಿನಿಮಾದಲ್ಲಿನ ಶಿವರಾಜ್‌ಕುಮಾರ್ ಅವರ ಪಾತ್ರಕ್ಕೆ ಹೆಚ್ಚಿನ ದೈಹಿಕ ಶ್ರಮದ ಅಗತ್ಯವಿದೆ. ಇದರಲ್ಲಿ ಕುದುರೆ ಓಡಿಸಬೇಕು, ತೂಕವುಳ್ಳ ವಸ್ತ್ರಗಳನ್ನು ಧರಿಸಬೇಕು. ಹೀಗಾಗಿ ಅವರು ಈ ಪಾತ್ರಕ್ಕೆ ದೈಹಿಕವಾಗಿ ಸಂಪೂರ್ಣ ಸಿದ್ಧರಿರುವವರೆಗೂ ಮುಂದೂಡುತ್ತಿದ್ದೇವೆ. ಇದೇ ವರ್ಷಾಂತ್ಯದಲ್ಲಿ ಅಥವಾ ಮುಂದಿನ ವರ್ಷದ ಆರಂಭದಲ್ಲಿ ಈ ಚಿತ್ರದ ಚಿತ್ರೀಕರಣ ಆರಂಭವಾಗಲಿದೆ' ಎಂದು ಹೇಮಂತ್ ತಿಳಿಸಿದ್ದರು.

ತಿಮ್ಮನ ಮೊಟ್ಟೆಗಳು ಚಿತ್ರದ ದೃಶ್ಯ

ತೆರೆಯಲ್ಲಿ ಆರು ಸಿನಿಮಾಗಳು

ಚಂದನವನದ ತೆರೆಗಳಲ್ಲಿ ಈ ವಾರ ಆರು ಸಿನಿಮಾಗಳು ತೆರೆಕಂಡಿವೆ.

ಎಕ್ಸ್ ಆ್ಯಂಡ್ ವೈ: 'ರಾಮಾ ರಾಮಾ ರೇ' ಖ್ಯಾತಿಯ ನಿರ್ದೇಶಕ ಡಿ.ಸತ್ಯಪ್ರಕಾಶ್ ನಿರ್ದೇಶನದ ಸಿನಿಮಾವಿದು. ಅವರೇ ಈ ಸಿನಿಮಾ ನಿರ್ಮಿಸಿ, ನಿರ್ದೇಶಿಸುವುದರ ಜೊತೆಗೆ ಪ್ರಮುಖಪಾತ್ರದಲ್ಲೂ ನಟಿಸಿದ್ದಾರೆ. ವಿಭಿನ್ನ ಕಥಾಹಂದರ ಹೊಂದಿರುವ ಈ ಸಿನಿಮಾ ಸತ್ಯಪ್ರಕಾಶ್ ನಿರ್ದೇಶನದ ನಾಲ್ಕನೇ ಚಿತ್ರ. ಕಥೆ, ಚಿತ್ರಕಥೆ ಹಾಗೂ ಸಂಭಾಷಣೆಯನ್ನೂ ಅವರೇ ಬರೆದಿದ್ದಾರೆ. ಎಲ್ಲಾ ವೈದ್ಯಕೀಯ ಸೌಲಭ್ಯಗಳಿರುವ 'ಅಂಬೋ ಆಟೋ' ಈ ಚಿತ್ರದ ಮುಖ್ಯ ಪಾತ್ರಧಾರಿಯಾಗಿದೆ. ಬೃಂದಾ ಆಚಾರ್ಯ, ಅಯಾನ, ಅಥರ್ವ ಪ್ರಕಾಶ್ ತಾರಾಗಣದಲ್ಲಿದ್ದಾರೆ. ಹರ್ಷ ಕೌಶಿಕ್ ಸಂಗೀತ, ಲವಿತ್ ಛಾಯಾಚಿತ್ರಗ್ರಹಣ, ಬಿ.ಎಸ್.ಕೆಂಪರಾಜ್ ಸಂಕಲನ ಚಿತ್ರಕ್ಕಿದೆ.

ತಿಮ್ಮನ ಮೊಟ್ಟೆಗಳು: ರಕ್ಷಿತ್ ತೀರ್ಥಹಳ್ಳಿ ಬರೆದು ನಿರ್ದೇಶಿಸಿರುವ ಚಿತ್ರವಿದು. ಶ್ರೀಕೃಷ್ಣ ಪ್ರೊಡಕ್ಷನ್ ಬ್ಯಾನರ್ ಅಡಿಯಲ್ಲಿ ಆದರ್ಶ್ ಅಯ್ಯಂಗಾರ್ ಚೊಚ್ಚಲ ನಿರ್ಮಾಣದ ಚಿತ್ರ ಇದಾಗಿದೆ. ರಕ್ಷಿತ್ ತೀರ್ಥಹಳ್ಳಿಯವರೇ ಬರೆದ 'ಕಾಡಿನ ನೆಂಟರು' ಕಥಾ ಸಂಕಲನದಿಂದ ಆಯ್ದ ಒಂದು ಕಥೆ ಇದಾಗಿದೆ. ಹಲವು ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವಗಳಲ್ಲಿ ಈ ಸಿನಿಮಾ ಪ್ರದರ್ಶನಗೊಂಡು ಪ್ರಶಂಸೆ ಪಡೆದಿದೆ. ಪ್ರಕೃತಿ ಮತ್ತು ಮನುಷ್ಯನ ನಡುವಿನ ಸೂಕ್ಷ್ಮ ಸಂವೇದನೆಗಳನ್ನೊಳಗೊಂಡ ಈ ಚಿತ್ರದಲ್ಲಿ ಕೇಶವ್ ಗುತ್ತಳಿಕೆ, ಸುಚೇಂದ್ರ ಪ್ರಸಾದ್, ಆಶಿಕಾ ಸೋಮಶೇಖರ್, ಶೃಂಗೇರಿ ರಾಮಣ್ಣ, ಪ್ರಗತಿ ಪ್ರಭು, ರಘು ರಾಮನಕೊಪ್ಪ, ಮಾಸ್ಟರ್ ಹರ್ಷ, ವಿನಯ್ ಕಣಿವೆ, ಪೃಥ್ವಿರಾಜ್ ಕೊಪ್ಪ, ಪ್ರಾಣೇಶ್ ಕೂಳೆಗದ್ದೆ ಮುಂತಾದವರು ನಟಿಸಿದ್ದಾರೆ. ಪ್ರವೀಣ್ ಎಸ್. ಛಾಯಾಚಿತ್ರಗ್ರಹಣ, ಕೆಂಪರಾಜು ಬಿ.ಎಸ್. ಸಂಕಲನ ಹಾಗೂ ಹೇಮಂತ್ ಜೋಯಿಷ್ ಸಂಗೀತ ಸಂಯೋಜನೆ ಚಿತ್ರಕ್ಕಿದೆ.

ಈ ಸಿನಿಮಾಗಳ ಜೊತೆಗೆ ಅಶೋಕ್ ಸಾಮ್ರಾಟ್ ನಿರ್ದೇಶನದ **'ಅವನಿರಬೇಕಿತ್ತು'**, ರಾಜೇಶ್ ಮೂರ್ತಿ ನಿರ್ದೇಶನದ **'ಬ್ಲಡಿ ಬಾಬು'**, ಚಂದನ್ ರಾಜ್ ನಟನೆಯ **'ರಾಜರತ್ನಾಕರ'** ಹಾಗೂ ಸಮರ್ಥ್ ಎಂ.ನಟಿಸಿ ನಿರ್ದೇಶಿಸಿರುವ **'ಅಥಣಿ'** ಸಿನಿಮಾ ತೆರೆಕಂಡಿದೆ.

ಜಸ್ಟ್ ಮ್ಯಾರೀಡ್ ಎಂದ ದೇವರಾಜ್

ಶೈನ್ ಶೆಟ್ಟಿ ಹಾಗೂ ಅಂಕಿತಾ ಅಮರ್ ಜತೆಯಾಗಿ ನಟಿಸಿರುವ 'ಜಸ್ಟ್ ಮ್ಯಾರೀಡ್' ಚಿತ್ರ ಬಿಡುಗಡೆಗೆ ಸಿದ್ಧಗೊಳ್ಳುತ್ತಿದೆ. ಚಿತ್ರದ ಪ್ರಮುಖ ಪಾತ್ರವೊಂದರಲ್ಲಿ ನಟ ದೇವರಾಜ್ ಕಾಣಿಸಿಕೊಂಡಿದ್ದಾರೆ. ಸಿ.ಆರ್.ಬಾಬಿ ಚಿತ್ರದ ನಿರ್ದೇಶಕರು. ದೇವರಾಜ್ ಅವರು ನಿವೃತ್ತ ನ್ಯಾಯಾಧೀಶರ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಪೂರ್ಣಚಂದ್ರ ಅವರ ಪಾತ್ರದ ಹೆಸರು. 'ಕರ್ತವ್ಯದಲ್ಲಿ ನ್ಯಾಯಾಧೀಶ, ಸ್ವಭಾವದಲ್ಲಿ ರಕ್ಷಕ, ನ್ಯಾಯಾಲಯದಲ್ಲಿಯೂ, ಮನೆಯಲ್ಲಿಯೂ ಕಾನೂನು ಪಾಲಿಸುವಂಥ ಪಾತ್ರ' ಎಂದು ಚಿತ್ರತಂಡ ಹೇಳಿದೆ.

ಅಜನೀಶ್ ಲೋಕನಾಥ್, ಸಿ.ಆರ್.ಬಾಬಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. 'ಪ್ರೇಮಕಥೆಯ ಚಿತ್ರವಾಗಿದ್ದರೂ, ಪ್ರೇಕ್ಷಕರಿಗೆ ಬೇಕಾದ ಎಲ್ಲಾ ಅಂಶಗಳು ಇವೆ' ಎಂದಿದ್ದಾರೆ ನಿರ್ದೇಶಕರು.

ಅಜನೀಶ್ ಸಂಗೀತ, ಪಿ.ಜಿ. ಛಾಯಾಚಿತ್ರಗ್ರಹಣ, ಶ್ರೀಕಾಂತ್ ಮತ್ತು ಪ್ರತೀಕ್ ಸಂಕಲನವಿದೆ.

24 ಗಂಟೆಗಳಲ್ಲಿ 3.2 ಕೋಟಿಗೂ ಅಧಿಕ ವೀಕ್ಷಣೆ

'ಜನ ನಾಯಗನ್' ಫಸ್ಟ್‌ಲುಕ್

ಭರ್ಜರಿಯಾಗಿ ಸದ್ದು ಮಾಡುತ್ತಿದೆ 'ಜನ ನಾಯಗನ್' ಚಿತ್ರ. ಈ ಸಿನಿಮಾದ ಫಸ್ಟ್‌ಲುಕ್ ಬಿಡುಗಡೆಯಾದ 24 ಗಂಟೆಗಳಲ್ಲಿ 3.2 ಕೋಟಿಗೂ ಅಧಿಕ ವೀಕ್ಷಣೆ ಪಡೆದು 5 ಕೋಟಿಯತ್ತ ಮುನ್ನುಗ್ಗುತಿದೆ. ಕೆ.ವಿ.ಎನ್ ಸಂಸ್ಥೆಯ ನಿರ್ಮಾಪಕ ವೆಂಕಟ್ ಕೆ.ನಾರಾಯಣ ನಿರ್ಮಾಣದಲ್ಲಿ ದಳಪತಿ ವಿಜಯ್ ನಟನೆಯ 69ನೇ ಚಿತ್ರವಾದ 'ಜನ ನಾಯಗನ್' ಫಸ್ಟ್ ಲುಕ್ ಅಭಿಮಾನಿಗಳ ಖುಷಿಯನ್ನು ಹೆಚ್ಚಿಸಿದೆ. ಸೋಶಿಯಲ್ ಮೀಡಿಯಾದಲ್ಲಿ ಭಾರಿ ವೈರಲ್ ಆಗಿರುವ ದಳಪತಿ ವಿಜಯ್ ಅವರ ಫಸ್ಟ್ ಲುಕ್ ಬಹಳಷ್ಟು ಕುತೂಹಲವನ್ನು ಮೂಡಿಸಿದೆ.

ಅದ್ದೂರಿ ವೆಚ್ಚದಲ್ಲಿ ಕೆ.ವಿ.ಎನ್ ಸಂಸ್ಥೆ ನಿರ್ಮಾಣ ಮಾಡಿರುವ ಈ 'ಜನ ನಾಯಗನ್' ಚಿತ್ರವನ್ನು ಭಾರತ ಸೇರಿದಂತೆ ವಿದೇಶಗಳಲ್ಲೂ ಅದ್ದೂರಿಯಾಗಿ ಬಿಡುಗಡೆ ಮಾಡಲು ತಂಡ ಸಕಲ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದು, ಈ ಚಿತ್ರವು ಮುಂದಿನ ವರ್ಷದ ಮೊದಲ ಹಬ್ಬ ಸಂಕ್ರಾಂತಿಯ ವಿಶೇಷ ಸಂದರ್ಭದಲ್ಲಿ ಬಿಡುಗಡೆಯಾಗಲಿದೆ. 2026ರ ಜನವರಿ 9ರಂದು ಪ್ರೇಕ್ಷಕರ ಮುಂದೆ ಚಿತ್ರವು ಬರಲಿದೆ.

ಈಗ ನಟ ದಳಪತಿ ವಿಜಯ್ ಅವರ 51ನೇ ಜನ್ಮದಿನಕ್ಕಾಗಿ 'ಜನ ನಾಯಗನ್' ಚಿತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಕೆ.ವಿ.ಎನ್ ಪ್ರೊಡಕ್ಷನ್ ಸಂಸ್ಥೆಯ ನಿರ್ಮಾಪಕ ವೆಂಕಟ್ ಕೆ. ನಾರಾಯಣ ನಿರ್ಮಾಣದ ಈ ಅದ್ದೂರಿ ಚಿತ್ರದ ಫಸ್ಟ್‌ಲುಕ್‌ಗೆ ಎಲ್ಲರಿಂದ ಉತ್ತಮ ಪ್ರತಿಕ್ರಿಯೆ ದೊರಕಿದೆ.

ನಟ ದಳಪತಿ ವಿಜಯ್ ಅವರ ಪೊಲೀಸ್ ಖದರ್ ಲುಕ್, ರಾಯಲ್ ಸಿಂಹಾಸನದ ಮೇಲೆ ಖಡ್ಗ ಹಿಡಿದು ಕುಳಿತಿರುವ ಮಾಸ್ ಪೋಸ್ಟರ್ ಅಭಿಮಾನಿಗಳಲ್ಲಿ ಬಹಳಷ್ಟು ಕುತೂಹಲವನ್ನು ಮೂಡಿಸಿದೆ. ಕೆ.ವಿ.ಎನ್ ಪ್ರೊಡಕ್ಷನ್ಸ್‌ನ ಈ ಚಿತ್ರವು ಎಲ್ಲಾ ಭಾಷೆಗಳಲ್ಲೂ ಬಿಡುಗಡೆಯಾಗಲಿದೆ.

ಸದ್ಯ ನಟ ವಿಜಯ್ ಸಿನಿಮಾಗಿಂತಲೂ ರಾಜಕೀಯದ ಕಡೆ ಹೆಚ್ಚಾಗಿ ಗಮನ ಹರಿಸುತ್ತಿದ್ದು, ತಮ್ಮದೇ ಹೊಸ ಪಕ್ಷದ ಕೆಲಸ ಕಾರ್ಯದಲ್ಲಿ ತೊಡಗಿದ್ದಾರೆ. ಇದು ಇವರ ಕೊನೆಯ ಚಿತ್ರವಾಗಿದ್ದು, ವೆಂಕಟ್ ಕೆ.ನಾರಾಯಣ ನಿರ್ಮಾಣದ ಈ ದೊಡ್ಡ ಬಜೆಟ್ 'ಜನ ನಾಯಗನ್' ಚಿತ್ರವನ್ನು ಎಚ್.ವಿನೋತ್ ನಿರ್ದೇಶನ ಮಾಡುತ್ತಿದ್ದು, ಚಿತ್ರಕ್ಕೆ ಅನಿರುದ್ಧ್ ರವಿಚಂದರ್ ಸಂಗೀತ, ಸತ್ಯನ್ ಸೂರ್ಯನ್ ಛಾಯಾಚಿತ್ರಗ್ರಹಣ, ಅನ್ಲ್ ಅರಸು ಸಾಹಸ, ಪ್ರದೀಪ್ ಇ. ರಾಘವ ಸಂಕಲನ, ಶೇಖರ್ ವಿ.ಜೆ., ಸುಧನ್ ನೃತ್ಯ ನಿರ್ದೇಶನವಿದೆ.

ಜನ ನಾಯಗನ್ ಚಿತ್ರದಲ್ಲಿ ಪೂಜಾ ಹೆಗ್ಡೆ, ಬಾಬಿ ಡಿಯೋಲ್, ಮಮಿತಾ ಬೈಜು, ಪ್ರಿಯಾಮಣಿ, ಪ್ರಕಾಶ್ ರಾಜ್ ಮತ್ತು ಗೌತಮ್ ವಾಸುದೇವ್ ಮೆನನ್ ಒಳಗೊಂಡಂತೆ ಬಹುದೊಡ್ಡ ತಾರಾಗಣವೇ ನೆರೆದಿದೆ.

ಪ್ರಸ್ತುತಿ: ಪಿ.ವಿ.ಬ್ರ್ಯಾಂಡ್ ಸ್ಪಾಟ್

ವೆಂಕಟ್ ಕೆ.ನಾರಾಯಣ – ಕೆ.ವಿ.ಎನ್ ಪ್ರೊಡಕ್ಷನ್ಸ್

ದಳಪತಿ ವಿಜಯ್

ಮಣ್ಣಿನ ಸೊಗಡಿನ ಸಿನಿಮಾ ಹಂಸಲೇಖ ಅಭಿಯಾನ

ಹಂಸಲೇಖ, ರವಿಚಂದ್ರನ್

ಗುಣಮಟ್ಟದ ಕಥೆಯುಳ್ಳ ಕನ್ನಡ ಸಿನಿಮಾಗಳು ಹೆಚ್ಚಾಗಿ ಬರುತ್ತಿಲ್ಲ, ಕನ್ನಡ ಸಿನಿಮಾಗಳಿಗೆ ಪ್ರೇಕ್ಷಕರ ಕೊರತೆಯಿದೆ ಎನ್ನುವ ಮಾತುಗಳು ಕೇಳಿಬರುತ್ತಿರುವ ಸಂದರ್ಭದಲ್ಲೇ ಸಂಗೀತ ನಿರ್ದೇಶಕ ಹಂಸಲೇಖ ಹೊಸ ಆಂದೋಲನ ಆರಂಭಿಸಿದ್ದಾರೆ.

ಇತ್ತೀಚೆಗೆ ಅವರ ನಿರ್ದೇಶನದ ಚೊಚ್ಚಲ ಚಿತ್ರ 'ಓಕೆ'ಯ ಶೀರ್ಷಿಕೆ ಅನಾವರಣ ಕಾರ್ಯಕ್ರಮ ನಡೆಯಿತು. ಈ ವೇದಿಕೆಯನ್ನೇ ಬಳಸಿಕೊಂಡ ಹಂಸಲೇಖ, 'ಇಂದಿನ ಕನ್ನಡ ಚಲನಚಿತ್ರರಂಗಕ್ಕೆ ಬೇಕಾಗಿರುವುದು ಕಥೆಗಳು ಮತ್ತು ಕಥೆಗಾರರು. ಅವರನ್ನು ಗುರುತಿಸಿ, ಚಿತ್ರಮಂದಿರಗಳಿಗೆ ಜನರನ್ನು ತುಂಬಿಸುವ ಕಾಯಕವನ್ನು ಒಂದು ಆಂದೋಲನವಾಗಿ ತೆಗೆದುಕೊಳ್ಳಬೇಕು' ಎಂದರು.

'ಇಂದಿನ ಅಗತ್ಯವೂ ಇದೇ. ನಮ್ಮ ಉದ್ಯಮವೂ ಪ್ಯಾನ್ ಇಂಡಿಯಾ ಕಡೆ ತಿರುಗಿದೆ. ನಮ್ಮಲ್ಲಿ ಸುಮಾರು 150–200 ಜನ ನಿರ್ದೇಶಕರಿದ್ದಾರೆ. ಅವರೆಲ್ಲರೂ ಪ್ರಯೋಗಗಳನ್ನೇ ಮಾಡುತ್ತಿದ್ದಾರೆ. ಆದರೆ ಪ್ರಯೋಗಗಳು ಪ್ರಯೋಗಶಾಲೆಗೆ, ಅಡುಗೆಮನೆಗಲ್ಲ. ಪ್ರಯೋಗಶಾಲೆಯಲ್ಲಾಗಿದ್ದು ಅಭಿವೃದ್ಧಿ ಕಡೆಗೆ ಹೋಗುವ ವಿಷಯಗಳು. ಅಡುಗೆ ಮಾಡಿದ್ದು ತಿನ್ನುವುದಕ್ಕೆ, ಸಂತೋಷಕ್ಕೆ. ಭಾರತೀಯ ಸಿನಿಮಾ ಎಂದರೆ ಹಾಡುಗಳು, ಸಂಭಾಷಣೆ, ಭಾವನೆಗಳು. ಇವುಗಳು ಇದ್ದರೆ ಪ್ರೇಕ್ಷಕರಿಗೆ ರುಚಿಸುತ್ತದೆ. ಹಳ್ಳಿ ಕಡೆ ಸಂತೆ ಬೆಳೆ, ಮನೆ ಬೆಳೆ ಎಂದು ಮಾಡುತ್ತಾರೆ. ಸಂತೆ ಬೆಳೆ ಸಂತೆಗೆ, ಇದನ್ನು ದಿನಾ ತಿನ್ನಲು ಸಾಧ್ಯವಿಲ್ಲ. ನಮ್ಮ ಸಂಸ್ಕೃತಿಯ ಕಥೆಯುಳ್ಳ ಚಿಕ್ಕ ಚಿಕ್ಕ ಚಿತ್ರಗಳನ್ನು ಮಾಡುವುದು ಇಂದಿನ ಅಗತ್ಯ' ಎಂದರು.

'ಐದು ವರ್ಷಗಳ ಹಿಂದೆ ಅದೀಬ್ ಅಖ್ತರ್ 'ಪಂಜರ' ಕಥೆ ಬರೆದಿದ್ದರು. ಕಥೆ ಓದಿ ಅವರನ್ನು ಕರೆಸಿ ಒಪ್ಪಿಗೆ ಪಡೆದುಕೊಂಡು ಮುಂಗಡ ಹಣ ಕೊಟ್ಟೆ. ಮಣ್ಣಿನ ಗುಣವಿರುವ ಕಥೆಗಳು, ಕಥೆಗಾರರು ನಮ್ಮ ಸಿನಿಮಾಗಳಿಗೆ ಬೇಕು. ಅದು ಬಂದರಷ್ಟೇ ಪ್ರೇಕ್ಷಕರು ಸಿನಿಮಾವನ್ನು ಆನಂದಿಸುತ್ತಾರೆ. ಕಥೆಗಳಲ್ಲಿ ಕನ್ನಡದ ಡಿಎನ್‌ಎ ಇದ್ದರೆ ಜನ ಚಿತ್ರ ನೋಡುತ್ತಾರೆ. ಈ ಚಿತ್ರದ ಮೂಲಕ ಪ್ರೇಕ್ಷಕರನ್ನು ಚಿತ್ರಮಂದಿರಕ್ಕೆ ಕರೆತರುವ ದೊಡ್ಡ ಆಂದೋಲನವನ್ನು ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಪ್ರೀತಿಯಿಂದ ನಡೆಸಲು ನಿರ್ಧಾರ ಮಾಡಿದ್ದೇವೆ' ಎಂದರು.

'ನಿರ್ದೇಶಕನಾಗಬೇಕು ಎಂಬ ಆಸೆ ಇತ್ತು. ಆದರೆ ಪ್ರತಿಭೆಗಳಿಗೆ ಬೆಂಬಲ ನೀಡುತ್ತಾ ಅವರನ್ನು ಮೇಲಕ್ಕೆತ್ತುವ ಕೆಲಸದಲ್ಲಿ ಮುಳುಗಿದ್ದೆ. ಈ ಸಂದರ್ಭದಲ್ಲಿ ನನ್ನ ಬದುಕು ಮುಗಿಯಿತೇ ಎನ್ನುವ ಆತಂಕದಲ್ಲಿದ್ದೆ. ಆದರೆ ಈಗ ಇದೇ ಚಂದನವನ ನನ್ನ ನಿರ್ದೇಶನದ ಆಸೆಯನ್ನೂ ಪೂರ್ಣಗೊಳಿಸಿದೆ' ಎನ್ನುತ್ತಾ ನಟ ರವಿಚಂದ್ರನ್ ಅವರೊಂದಿಗಿನ ಒಡನಾಟವನ್ನು ಮೆಲುಕು ಹಾಕಿದರು.

'ಹೊಸ, ಭಿನ್ನ ತಂತ್ರಜ್ಞಾನವನ್ನು ಉದ್ಯಮಕ್ಕೆ ಕೊಟ್ಟವರು ರವಿಚಂದ್ರನ್. ಪ್ರೇಮಲೋಕ, ರಣಧೀರದಂತಹ ಸಿನಿಮಾಗಳನ್ನು ಮಾಡೋಣ ಎಂದು ಇಂದಿನವರು ಕನಸಿನಲ್ಲೂ ಅಂದುಕೊಳ್ಳುತ್ತಿಲ್ಲ. ರವಿಚಂದ್ರನ್ ಅವರು ಹತ್ತು ಕೆ.ಜಿ.ಕಮ್ಮಿ ಮಾಡಿಕೊಂಡರೆ ಇಂದಿಗೂ ಸ್ಫುರದ್ರೂಪಿ ನಟ' ಎಂದರು ಹಂಸಲೇಖ.

'ಓಕೆ' ಸಿನಿಮಾಕ್ಕೆ ನಾಗೇಶ್ ವಾಷ್ಟರ್ ಮತ್ತು ಸೂರ್ಯಪ್ರಕಾಶ್ ಬಂಡವಾಳ ಹೂಡುತ್ತಿದ್ದಾರೆ. ಸಿನಿಮಾವನ್ನು ಆಕಾಂಕ್ಷ ಪ್ರೊಡಕ್ಷನ್ ಮತ್ತು ಹಂಸಲೇಖ ಅವರ ಐದನಿ ಎಂಟರ್‌ಟೈನ್‌ಮೆಂಟ್ ಸಂಸ್ಥೆ ಜಂಟಿಯಾಗಿ ನಿರ್ಮಾಣ ಮಾಡುತ್ತಿವೆ.

'ರಾಜನಾಗಿ ಮೆರವಣಿಗೆ ಮಾಡಿಸಿದವರು'

ನಟ ರವಿಚಂದ್ರನ್ ಮಾತನಾಡಿ, 'ರಾಜು (ಹಂಸಲೇಖ) ನನ್ನನ್ನು ಪರದೆ ಮೇಲೆ ರಾಜನಾಗಿ ಮೆರವಣಿಗೆ ಮಾಡಿಸಿದ್ದು ನೀವೇ. ನಾನು ಪರದೆಯಲ್ಲಿ ಮೆರೆದಿದ್ದರೆ ಅದಕ್ಕೆ ನೀವು ಮತ್ತು ನಿಮ್ಮ ಹಾಡುಗಳು ಕಾರಣ. ನನ್ನನ್ನು ಕ್ರೇಜಿ ಪಾತ್ರವಾಗಿ ಇದು ಮಾಡಿದೆ. ಸಿನಿಮಾ ಓಡುತ್ತಿಲ್ಲ ಎಂದು ಜನ ಹೇಳುತ್ತಿದ್ದಾರೆ. ಆದರೆ ಪ್ರತಿ ವಾರ ಎಲ್ಲರೂ ಸಕ್ಸಸ್ ಮೀಟ್ ಮಾಡುತ್ತಿದ್ದಾರೆ. ಅದು ಸಮಸ್ಯೆ ಆಗಿದೆ. 1986ರಲ್ಲಿ ನಾವು ಕೊಟ್ಟಿದ್ದವಲ್ಲ, ಅದು ಯಶಸ್ಸು. ಆದರೆ ಈ ಯಶಸ್ಸನ್ನು ಒಂದು ದಿನವೂ ನಾವು ಹೆಗಲ ಮೇಲೆ ಹೊತ್ತು ಸಾಗಲಿಲ್ಲ. ಏಕೆಂದರೆ ನಾವು ನಿರಂತರವಾಗಿ ಸಿನಿಮಾ ಮಾಡುತ್ತಿದ್ದೆವು. ನನ್ನ ಮತ್ತು ಹಂಸಲೇಖ ಸ್ನೇಹದಲ್ಲಿ ಲೆಕ್ಕಾಚಾರ ಇರಲಿಲ್ಲ. ನನಗೆ ಲೆಕ್ಕಾಚಾರ ಗೊತ್ತಿಲ್ಲ. ಸಿನಿಮಾ ಮಾಡುವುದು ಮಾತ್ರ ಗೊತ್ತು. ಇಂದಿಗೂ ಯಾರಾದರೂ 'ಪ್ರೇಮಲೋಕ', 'ರಣಧೀರ' ಸಿನಿಮಾಗಳ ಲಾಭ ಎಷ್ಟು ಅಂತ ಕೇಳಿದರೆ ನನಗೆ ಗೊತ್ತಿಲ್ಲ. ಎನ್.ಎಸ್. ರಾವ್ ಅವರು ನನಗೆ ಹಂಸಲೇಖ ಅವರ ಪರಿಚಯ ಮಾಡಿಕೊಟ್ಟರು. ನನ್ನ ಮತ್ತು ಹಂಸಲೇಖ ಸ್ನೇಹ ಕಲ್ಮಶ ಇಲ್ಲದ್ದು. ಸಿನಿಮಾದ ಯೋಚನೆಯಷ್ಟೇ ನಮ್ಮಲ್ಲಿತ್ತು' ಎಂದರು.

ಪ್ರಜಾವಾಣಿ ಕಥಾಸ್ಪರ್ಧೆಯಲ್ಲಿ ಮೆಚ್ಚುಗೆ ಪಡೆದ ಕಥೆ

2019ರಲ್ಲಿ ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ತೀರ್ಪುಗಾರರ ಮೆಚ್ಚುಗೆ ಪಡೆದ ಅದೀಬ್ ಅಖ್ತರ್ ಅವರ 'ಪಂಜರ' ಕಥೆಯನ್ನೇ ಹಂಸಲೇಖ ಅವರು 'ಓಕೆ' ಮೂಲಕ ತೆರೆಗೆ ತರುತ್ತಿದ್ದಾರೆ. ಸಿನಿಮಾದಲ್ಲಿ ನಟ ಕಿಶೋರ್ ನಟಿಸುತ್ತಿದ್ದಾರೆ. 'ಭ್ರೂಣ ಹತ್ಯೆ ವಿಷಯ ಈ ಕಥೆಯಲ್ಲಿದೆ. ಇದರ ಬಗ್ಗೆ ಜಾಗೃತಿ ಮೂಡಿಸಿ, ವೈದ್ಯಕೀಯ ವಲಯಕ್ಕೆ ಎಚ್ಚರಿಕೆ ಕೊಡಬೇಕು ಎನ್ನುವ ಆಶಯದಲ್ಲಿ ಇದನ್ನು ಆರಿಸಿಕೊಂಡಿದ್ದೇನೆ. ಕಥೆಯನ್ನು ತೆರೆ ಮೇಲೆ ತರುವ ರೀತಿ ಹೊಸದಾಗಿರುತ್ತದೆ. ಸಂಗೀತ ಈ ಸಿನಿಮಾದ ಮುಖ್ಯ ಅಂಶವಾಗಿರುತ್ತದೆ' ಎಂದಿದ್ದಾರೆ ಹಂಸಲೇಖ.

ಮಡಿಕೇರಿ ತಾಲ್ಲೂಕಿನ ಬಲಮುರಿ ಗ್ರಾಮದಲ್ಲಿ ಬುಧವಾರ ಮಳೆಯ ನಡುವೆಯೇ ಗುಂಡಿ ತೆಗೆಯುವ ವೇಳೆ ಬರುತ್ತಿದ್ದ ನೀರನ್ನು ಹೊರ ಚೆಲ್ಲಿ ನಂತರ ವ್ಯಕ್ತಿಯೊಬ್ಬರ ಅಂತ್ಯಸಂಸ್ಕಾರ ನಡೆಸಲಾಯಿತು (ಎಡ ಚಿತ್ರ) ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಮಾರನಹಳ್ಳಿ ಬಳಿ ಬುಧವಾರ ತಡರಾತ್ರಿ ಹೆದ್ದಾರಿಯ ಮೇಲೆ ಮಣ್ಣು ಕುಸಿದಿತ್ತು.

ವಿವಿಧೆಡೆ ಮಳೆ ಅಬ್ಬರ: ಜನಜೀವನ ಅಸ್ತವ್ಯಸ್ತ

ಕಾಫಿ, ಅಡಿಕೆ ತೋಟಗಳು ಮತ್ತು ಬೆಳೆಗಳು ಜಲಾವೃತ

- ಬೈದುವಳ್ಳಿ ಬಳಿ ಸೇತುವೆಯ ಮೇಲೆ ನೀರು

ಪ್ರಜಾವಾಣಿ ವಾರ್ತೆ

ನಾಪೋಕ್ಲು ಸಮೀಪದ ಚೆರಿಯಪರಂಬುವಿನಲ್ಲಿ ಗುರುವಾರ ತೆಪ್ಪದಲ್ಲಿ ಸಾಗಿದ ಮಂದಿ

ಚಿಕ್ಕಮಗಳೂರು: ಜಿಲ್ಲೆಯಲ್ಲಿ ಮಳೆ ಮುಂದುವರಿದಿದ್ದು, ಗುರುವಾರ ಮಧ್ಯಾಹ್ನದ ನಂತರ ಮತ್ತಷ್ಟು ಜೋರಾಗಿದೆ. ನದಿಗಳು, ಉಪನದಿಗಳು ತುಂಬಿ ಹರಿಯುತ್ತಿದ್ದು, ಜನಜೀವನ ಅಸ್ತವ್ಯಸ್ತಗೊಂಡಿದೆ.

ಮೂಡಿಗೆರೆ, ಕೊಪ್ಪ, ನರಸಿಂಹ ರಾಜಪುರ, ಶೃಂಗೇರಿ, ಕಳಸ, ಬಾಳೆಹೊನ್ನೂರು, ಕೊಟ್ಟಿಗೆಹಾರ ಸುತ್ತಮುತ್ತ ಮಳೆ ಅಬ್ಬರಿಸುತ್ತಿದೆ. ಮೂಡಿಗೆರೆ ತಾಲ್ಲೂಕಿನಲ್ಲಿ ಹೇಮಾವತಿ ನದಿ ನೀರಿನ ಹರಿವು ಏರಿಕೆಯಾಗಿದ್ದು, ಬೈದುವಳ್ಳಿ ಬಳಿ ಸೇತುವೆಯ ಮೇಲೆ ನೀರು ಹರಿಯುತ್ತಿದೆ. ನೀರಿನ ಅಬ್ಬರಕ್ಕೆ ಕಾಫಿತೋಟ, ಅಡಿಕೆ ತೋಟ ಜಲಾವೃತಗೊಂಡಿವೆ. ಕೆಸವಳಲು ಕೂಡಿಗೆ ಸಂಗಮ ಕೂಡ ಭರ್ತಿಯಾಗಿದೆ.

ಜಿಲ್ಲೆಯ ಐದು ತಾಲ್ಲೂಕುಗಳ ಅಂಗನವಾಡಿ ಮತ್ತು ಶಾಲೆಗಳಿಗೆ ಜೂನ್ 27ರಂದು(ಶುಕ್ರವಾರ) ಜಿಲ್ಲಾಡಳಿತ ರಜೆ ಘೋಷಣೆ ಮಾಡಿದೆ. ಕೊಪ್ಪ, ನರಸಿಂಹರಾಜಪುರ, ಶೃಂಗೇರಿ, ಮೂಡಿಗೆರೆ, ಕಳಸ ತಾಲ್ಲೂಕುಗಳ ಅಂಗನವಾಡಿ, ಶಿಶು ಪಾಲನಾ ಕೇಂದ್ರ, ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ರಜೆ ನೀಡಲಾಗಿದೆ. ಕುದುರೆಮುಖ ಸುತ್ತಮುತ್ತ ಮಳೆ ಧಾರಾಕಾರವಾಗಿ ಸುರಿಯುತ್ತಿದ್ದು, ತುಂಗಾ ಮತ್ತು ಭದ್ರಾ ನದಿಗಳೂ ಮೈದುಂಬಿ ಹರಿಯುತ್ತಿವೆ. ಚಿಕ್ಕಮಗಳೂರು ನಗರ, ಮುಳ್ಳಯ್ಯನ ಗಿರಿ ಸುತ್ತಮುತ್ತ ಕೂಡ ಗುರುವಾರ ಮಳೆ ಸುರಿಯಿತು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ವಿವಿಧೆಡೆ ಆಗಾಗ ಮಳೆ ಸುರಿಯಿತು.

ತಗ್ಗಿದ ಮಳೆ-ಗದ್ದೆಗಳಲ್ಲಿ ನಿಂತ ನೀರು (ಬೆಳಗಾವಿ ವರದಿ): ನಗರವೂ ಸೇರಿದಂತೆ ಜಿಲ್ಲೆಯ ಎಲ್ಲ ಕಡೆ ಗುರುವಾರ ಮಳೆ ಪ್ರಮಾಣ ತಗ್ಗಿದ್ದು ಆಗಾಗ ತುಂತುರು ಮಳೆಯಾಗಿದೆ. ಆದರೆ ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಮುಂದುವರಿದಿದೆ. ಚಿಕ್ಕೋಡಿ, ನಿಪ್ಪಾಣಿ ತಾಲ್ಲೂಕಿನ 10 ಸೇತುವೆಗಳು ಇನ್ನೂ ಜಲಾವೃತಗೊಂಡ ಸ್ಥಿತಿಯಲ್ಲಿವೆ.

ಕೊಲ್ಹಾಪುರ ಜಿಲ್ಲೆಯ ರಾಜಾಪುರ ಬ್ಯಾರೇಜಿನಿಂದ ಕೃಷ್ಣಾ ನದಿಗೆ 84,083 ಕ್ಯೂಸೆಕ್ ಹೊರ ಹರಿವು ಇದೆ. ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ- ಯಡೂರ ಸೇತುವೆ ಬಳಿಯಲ್ಲಿ ಕೃಷ್ಣಾ ನದಿಗೆ 1.08 ಲಕ್ಷ ಕ್ಯೂಸೆಕ್ ಹೊರ ಹರಿವು ಇದೆ.

ಮಹಾರಾಷ್ಟ್ರದಲ್ಲಿ 15 ದಿನಗಳಿಂದ ಮಳೆ ಬೀಳುತ್ತಿದ್ದು ಕೃಷ್ಣಾ ಹಾಗೂ ಉಪ ನದಿಗಳು ಪಾತ್ರ ಮೀರಿ ಹರಿಯುತ್ತಿವೆ. ನದಿ ನೀರು ಹೊಲ ಗದ್ದೆಗಳಿಗೆ ನುಗ್ಗಿದ್ದು, ಕಬ್ಬು, ಸೋಯಾ, ಮೆಕ್ಕೆಜೋಳ ಬೆಳೆಗಳು ಜಲಾವೃತಗೊಂಡಿವೆ.

ಕೃಷ್ಣಾ ನದಿ ತೀರದಲ್ಲಿರುವ ಕಲ್ಲೋಳ ಗ್ರಾಮದ ದತ್ತಾತ್ರೇಯ ಮಂದಿರ, ದೂಧಗಂಗಾ ನದಿ ತೀರದಲ್ಲಿರುವ ಯಕ್ಸಂಬಾದ ಮನಸೂರ ಪೀರ ದರ್ಗಾ, ಕಾರದಗಾ ಗ್ರಾಮದ ಬಂಗಾಲಿಬಾಬಾ ದೇವಸ್ಥಾನ ಜಲಾವೃತಗೊಂಡಿವೆ.

ಖಾನಾಪುರ ತಾಲ್ಲೂಕಿನಲ್ಲೂ ಮಳೆ ತಗ್ಗಿದ್ದರಿಂದ ನಾಲ್ಕು ಸೇತುವೆಗಳು ಸಂಚಾರಕ್ಕೆ ತೆರೆದುಕೊಂಡಿವೆ.

ಕೊಡಗಿನ ಹುದಿಕೇರಿಯಲ್ಲಿ 22 ಸೆಂ.ಮೀ, ಶ್ರೀಮಂಗಲ 21, ಶಾಂತಳ್ಳಿ 17, ಹೆತ್ತೂರು 16.7, ನಾಪೋಕ್ಲು 15, ಹಾನಬಾಳು 14.2, ವಿರಾಜಪೇಟೆ 14, ಅಮ್ಮತ್ತಿ 11, ಭಾಗಮಂಡಲ, 09 ಸೆಂ.ಮೀ ಮಳೆಯಾಗಿದೆ. ಹೊಸನಗರ ತಾಲ್ಲೂಕಿನ ಚಕ್ರಾದ ವಾರಾಹಿ ಯೋಜನಾ ಪ್ರದೇಶದಲ್ಲಿ 19.5 ಸೆಂ. ಮೀ, ಯಡೂರಿನಲ್ಲಿ 14.6 ಹಾಗೂ ಮಾಸ್ತಿಕಟ್ಟೆಯಲ್ಲಿ 14 ಸೆಂ.ಮೀ, ತೀರ್ಥಹಳ್ಳಿ ತಾಲ್ಲೂಕಿನ ಆಗುಂಬೆಯಲ್ಲಿ 14.75 ಸೆಂ.ಮೀ ಮಳೆ ಆಗಿದೆ.

ಸುರಕ್ಷತೆ ನಿರ್ಲಕ್ಷ್ಯ: ಜಲಪಾತದ ಬಳಿ ನೃತ್ಯ

ಮೂಡಿಗೆರೆ (ಚಿಕ್ಕಮಗಳೂರು): ಶಿರಾಡಿ ಘಾಟ್ ತಾತ್ಕಾಲಿಕವಾಗಿ ಬಂದ್ ಆಗಿದ್ದರಿಂದ ಚಾರ್ಮಾಡಿ ಘಾಟ್ ಮೂಲಕ ವಾಹನ ಸಂಚಾರ ಗುರುವಾರ ಬೆಳಿಗ್ಗೆಯಿಂದ ಹೆಚ್ಚಾಗಿದೆ. ಸುರಕ್ಷತೆಯನ್ನು ನಿರ್ಲಕ್ಷಿಸಿ ಜಲಪಾತದ ಬಳಿ ಅಪಾಯಕಾರಿಯಾಗಿ ವರ್ತಿಸುತ್ತಿದ್ದ ಕೆಲವು ಪ್ರವಾಸಿಗರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಬಣಕಲ್ ಪೊಲೀಸ್ ಠಾಣೆ ವ್ಯಾಪ್ತಿಯ ಚಾರ್ಮಾಡಿ ಘಾಟ್ ಪ್ರದೇಶದಲ್ಲಿ ಮಧ್ಯಾಹ್ನದ ವೇಳೆ ಮಳೆಯ ನಡುವೆ ಕೆಲವು ಪ್ರವಾಸಿಗರು ಜಲಪಾತದ ಭದ್ರತಾ ರೇಖೆ ಮೀರಿ, ನೀರು ಹರಿದು ಹೋಗುವ ಪಾರ್ಶ್ವದಲ್ಲಿ ಇರುವ ಕಲ್ಲು ಬಂಡೆಗಳ ಮೇಲೆ ಏರಿ, ಫೋಟೊಶೂಟ್ ಹಾಗೂ ವಿಡಿಯೊಗಾಗಿ ಕುಣಿದು ಕುಪ್ಪಳಿಸುತ್ತಿದ್ದರು. ಈ ದೃಶ್ಯವನ್ನು ಗಸ್ತು ಕರ್ತವ್ಯದಲ್ಲಿದ್ದ ಪೊಲೀಸರು ಗಮನಿಸಿದ್ದು, ತಕ್ಷಣ ಸ್ಥಳಕ್ಕೆ ಬಂದು ಎಚ್ಚರಿಕೆ ನೀಡಿದರು. ಸೂಚನೆ ನಿರ್ಲಕ್ಷಿಸಿದ ಪ್ರವಾಸಿಗರ ವಿರುದ್ಧ ಬಣಕಲ್ ಠಾಣೆ ಪಿಎಸ್ಐ ರೇಣುಕಾ ಪ್ರಕರಣ ದಾಖಲಿಸಿದ್ದಾರೆ.

‘ಘಾಟ್ ಪ್ರದೇಶ ಜಲಪಾತಗಳು ಹಾಗೂ ಬಂಡೆಗಳ ಬಳಿ ಚಲನೆ ಅಪಾಯಕಾರಿಯಾಗಿದ್ದು, ಬಂಡೆ ಮೇಲೆ ಏರುವುದು ಅಥವಾ ನಿರ್ಬಂಧಿತ ಪ್ರದೇಶ ಪ್ರವೇಶಿಸುವುದು ಕಾನೂನುಬಾಹಿರ. ನಿಯಮ ಮೀರಿದವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುತ್ತದೆ’ ಎಂದು ರೇಣುಕಾ ಅವರು ತಿಳಿಸಿದ್ದಾರೆ. ಪೊಲೀಸರು ಹಾಗೂ ಅರಣ್ಯ ಇಲಾಖೆ ಇಲ್ಲಿ ಎಚ್ಚರಿಕೆ ಫಲಕ ಹಾಕಿದ್ದರೂ ಕೆಲ ಪ್ರವಾಸಿಗರು ಹೀಗೆ ವರ್ತಿಸುತ್ತಾರೆ ಇದೆ ಎಂದು ಸ್ಥಳೀಯರು ದೂರಿದ್ದಾರೆ.

ವರನ ಮನೆಗೆ ತೆಪ್ಪದಲ್ಲಿ ಪ್ರಯಾಣ

ನಾಪೋಕ್ಲು: ಬಿರುಸಿನ ಮಳೆಯಿಂದ ರಸ್ತೆ ಸಂಪರ್ಕ ಕಡಿತಗೊಂಡಿರುವುದರಿಂದ, ಮೂರು ದಿನದ ಹಿಂದೆ ಮಡಿಕೇರಿಯಲ್ಲಿ ಮದುವೆಯಾಗಿದ್ದ ಫಿರ್ದೋಸ್ ಮತ್ತು ರಂಸೀನಾ ಅವರ ಮನೆಗೆ ನವವಧುವಿನ ಮನೆಯವರು ಗುರುವಾರ ತೆಪ್ಪದ ಮೂಲಕ ತೆರಳಿದರು.

ಮಸೀದಿಯಲ್ಲಿ ಕಾರ್ಯಕ್ರಮದ ಬಳಿಕ ವಧುವನ್ನು ತವರು ಮನೆಗೆ ಕರೆತರುವ ಸಂಪ್ರದಾಯಯಕ್ಕೆ ಮಳೆ ಅಡ್ಡಿಯಾಗಿತ್ತು. ನಾಪೋಕ್ಲು-ಚೆರಿಯಪರಂಬು ರಸ್ತೆ ಸಂಪರ್ಕ ಬಂದ್ ಆಗಿದ್ದರಿಂದ ಬಸ್ಸಿನಲ್ಲಿ ಬಂದವರು ಪರ್ಯಾಯ ಮಾರ್ಗ ಕಂಡುಹಿಡಿದರು. ತೆಪ್ಪ ತರಿಸಿ ನೀರಿನಲ್ಲಿ ಸಾಗಿದ ಮಂದಿ ಚೆರಿಯಪರಂಬುವಿನಲ್ಲಿರುವ ವರನ ಮನೆ ತಲುಪಿದರು.

ತುಂಬಿ ಹರಿದ ನದಿ, ತೊರೆ

ಒಂದನೇ ಪುಟದಿಂದ...

ನಾಪೋಕ್ಲು - ವಿರಾಜಪೇಟೆ, ನಾಪೋಕ್ಲು- ಮೂರ್ನಾಡು ರಸ್ತೆಗಳಿಗೂ ನೀರು ನುಗ್ಗಿದೆ. ಸದ್ಯ ನಾಪೋಕ್ಲು ಪಟ್ಟಣಕ್ಕೆ ಮಡಿಕೇರಿ ಮತ್ತು ಭಾಗ ಮಂಡಲದೊಂದಿಗೆ ಸಂಪರ್ಕವಿದ್ದು, ವಿರಾಜಪೇಟೆ ಸಂಪರ್ಕ ಕಡಿತಗೊಂಡಿದೆ. ಮಳೆ ಮುಂದುವರಿದರೆ ನಾಪೋಕ್ಲು ದ್ವೀಪದಂತಾಗುವ ಭೀತಿ ಎದುರಾಗಿದೆ. ಹಲವೆಡೆ ಮನೆಗಳು ಕುಸಿದಿವೆ. ಪೊನ್ನಂಪೇಟೆ ತಾಲ್ಲೂಕಿನ ಹುದಿಕೇರಿ ವ್ಯಾಪ್ತಿಯಲ್ಲಿ 22 ಸೆಂ. ಮೀನಷ್ಟು ಮಳೆಯಾಗಿದ್ದು, ನಿಟ್ಟೂರು ಬಳಿಯ ಚಿಣ್ಣರಹಾಡಿಯ ಸಂಪರ್ಕ ಸೇತುವೆಯ ದಡ ಕುಸಿದಿದೆ.

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಉಮ್ಮತ್ತೂರು-ಶುಕ್ರವಾರ-ಸಂತೆ ಸಂಪರ್ಕಿಸುವ ಪ್ರಮುಖ ಸೇತುವೆ ಮುಳುಗಡೆಯಾಗಿತ್ತು. ನಡಗೆರೆ ಗ್ರಾಮಕ್ಕೆ ತೆರಳುವ ಸೇತುವೆ ಮುಳುಗಡೆಯಾಗಿದ್ದ-ರಿಂದ ಸಂಚಾರ ಸ್ಥಗಿತಗೊಂಡಿತ್ತು.

ಜಲ ದಿಗ್ಬಂಧನ: ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣ ತಾಲ್ಲೂಕಿನ ಕಾವೇರಿ ನದಿ ತೀರದಲ್ಲೂ ಕೃಷಿ ಜಮೀನುಗಳು ಜಲಾವೃತವಾಗಿವೆ. ರಂಗನತಿಟ್ಟು ಪಕ್ಷಿಧಾಮದಲ್ಲಿ ದೋಣಿ ನಿಲ್ಲಿಸುವ ಜಾಗ ಮುಳುಗಿದೆ. ದೊಡ್ಡೇಗೌಡನಕೊಪ್ಪಲು ಸಮೀಪ ನದಿಯ ನಡುಗಡ್ಡೆಯಲ್ಲಿರುವ ಗೌತಮ ಕ್ಷೇತ್ರದ ಸಂಪರ್ಕ ರಸ್ತೆ ಮುಳುಗಿದ್ದು, ಗಜಾನನ ಸ್ವಾಮೀಜಿ ಸೇರಿ ನಾಲ್ವರು ಜಲ ದಿಗ್ಬಂಧನದಲ್ಲಿದ್ದಾರೆ. ‘ಆಹಾರ, ನೀರು ಇನ್ನಿತರ ಅಗತ್ಯ ವಸ್ತುಗಳ ದಾಸ್ತಾನಿದೆ’ ಎಂದು ಸ್ವಾಮೀಜಿ ತಿಳಿಸಿದ್ದಾರೆ.

ಕೊಡಗು ಜಿಲ್ಲಾ ಉಸ್ತುವಾರಿ ಸಚಿವ ಎನ್.ಎಸ್. ಬೋಸರಾಜು ಕುಶಾಲನಗರ ಹಾಗೂ ಮಡಿಕೇರಿಯಲ್ಲಿ ಹಾನಿ ಪ್ರದೇಶಗಳಿಗೆ ಭೇಟಿ ನೀಡಿದರು.

ಶಿವಮೊಗ್ಗ ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆಯ ಆರ್ಭಟ ಮುಂದುವರೆದಿದೆ. ಹೀಗಾಗಿ ಗುರುವಾರ ಜಿಲ್ಲೆಯಲ್ಲಿ ತೀರ್ಥಹಳ್ಳಿ ತಾಲ್ಲೂಕು ಹಾಗೂ ಹೊಸನಗರ ತಾಲ್ಲೂಕಿನ ನಗರ ಹೋಬಳಿಯ ಶಾಲೆ-ಕಾಲೇಜುಗಳಿಗೆ ಜಿಲ್ಲಾಡಳಿತ ರಜೆ ಘೋಷಿಸಿತ್ತು.

ಗಾಜನೂರಿನ ತುಂಗಾ ಜಲಾಶಯದ ಒಳಹರಿವು 44,158 ಕ್ಯೂಸೆಕ್ ಇದೆ. ತುಂಗಾ ಹಾಗೂ ಶಿಕಾರಿಪುರದ ಅಂಜನಾಪುರ ಜಲಾಶಯ ಭರ್ತಿ ಆಗಿವೆ. ತುಂಗಾ ಜಲಾಶಯದಿಂದ ಅಷ್ಟೇ ಪ್ರಮಾಣದ ನೀರನ್ನು ನದಿಗೆ ಹರಿಸಲಾಗುತ್ತಿದ್ದು, ಶಿವಮೊಗ್ಗದ ಹೃದಯ ಭಾಗದಲ್ಲಿ ಹರಿಯುವ ತುಂಗೆ ಮೈದುಂಬಿದ್ದಾಳೆ.

ಗುಡ್ಡ ಕುಸಿತ ತಡೆಗೆ ₹400 ಕೋಟಿ ಮೊತ್ತದ ಕಾಮಗಾರಿ

ಒಂದನೇ ಪುಟದಿಂದ...

ಕಂದಾಯ ಇಲಾಖೆಯ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ‘ಭೂಕುಸಿತದಿಂದ ಆಗಲಿರುವ ಅಪಾಯ ತಡೆಯಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ. ಮೊದಲ ಹಂತದಲ್ಲಿ ಜನ ವಸತಿ ಮೇಲೆ ಗುಡ್ಡ ಕುಸಿತವಾಗುವುದನ್ನು ತಡೆಯಲು ಕಾಮಗಾರಿ ಕೈಗೊತ್ತಿಕೊಳ್ಳಲಾಗುವುದು’ ಎಂದರು.

‘ಎರಡನೇ ಹಂತದಲ್ಲಿ ರಸ್ತೆಗಳ ಮೇಲೆ ಗುಡ್ಡ ಕುಸಿತ ತಡೆಯುವ ಕಾಮಗಾರಿಗೆ ಆದ್ಯತೆ ನೀಡಲಾಗುವುದು. ಮಳೆಗಾಲ ಮುಗಿದ ಕೂಡಲೇ ಅಕ್ಟೋಬರ್ ವೇಳೆಗೆ ಮೊದಲ ಹಂತದ ಕಾಮಗಾರಿ ಆರಂಭಿಸಬೇಕು. ಟೆಂಡರ್ ಸೇರಿ ಬೇಕಿರುವ ಪೂರ್ವ ಸಿದ್ಧತೆಗಳನ್ನು ಅಧಿಕಾರಿಗಳು ಮಾಡಿಕೊಳ್ಳಬೇಕು. ಕೇಂದ್ರ ಹಣಕಾಸು ಆಯೋಗದಿಂದಲೂ ಅನುದಾನ ಲಭ್ಯವಾಗುವ ಭರವಸೆ ಇದೆ’ ಎಂದು ಹೇಳಿದರು.

ಹೆದ್ದಾರಿ ಯೋಜನೆ: ₹880 ಕೋಟಿ

ನವದೆಹಲಿ: ಕರ್ನಾಟಕದ ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ 2025–26ನೇ ಸಾಲಿನಲ್ಲಿ ₹880 ಕೋಟಿ ಹಂಚಿಕೆ ಮಾಡಿ ಕೇಂದ್ರ ಭೂಸಾರಿಗೆ ಹಾಗೂ ಹೆದ್ದಾರಿ ಸಚಿವಾಲಯ ಆದೇಶ ಹೊರಡಿಸಿದೆ.

ಈ ಮೊತ್ತವನ್ನು ಮಂಜೂರಾದ ರಾಷ್ಟ್ರೀಯ ಹೆದ್ದಾರಿ ಯೋಜನೆಗಳಿಗೆ ಮಾತ್ರ ಬಳಸಬೇಕು. ಯಾವುದೇ ಹೆದ್ದಾರಿ ಯೋಜನೆಗೆ ಮಂಜೂರಾದ ಮೊತ್ತಕ್ಕಿಂತ ಹೆಚ್ಚುವರಿ ಹಣ ಬಳಕೆ ಮಾಡುವಂತಿಲ್ಲ ಎಂದು ಸಚಿವಾಲಯ ಷರತ್ತು ವಿಧಿಸಿದೆ.

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು (ಕ್ಯೂಸೆಕ್‌ಗಳಲ್ಲಿ)
ಕೆ ಆರ್ ಎಸ್ *	124.80	120.90	46,804	55,446
ಹಾರಂಗಿ	2,859	2,851.00	7,689	8,541
ಕಬಿನಿ	2,284.00	2,279.15	30,660	30,000
ಹೇಮಾವತಿ	2,922	2,915.80	23,872	20,850
ಲಿಂಗನಮಕ್ಕಿ	1,819	1,781.55	55,337	4,068
ಸೂಪಾ (ಮೀ)	564	535.05	27,442.2	1,913.76
ಮಾಣಿ	595	582.30	5,739	-
ತುಂಗಭದ್ರಾ	1,633	1,616.85	30,838	198
ಮಲಪ್ರಭಾ	2,079.5	2,058.25	10,999	194
ಘಟಪ್ರಭಾ	2175	2,135.15	30,300	136
ಭದ್ರಾ *	186	157.1	22,407	1,284
ಆಲಮಟ್ಟಿ (ಮೀ)	519.6	516.49	91,230	70,420
ನಾರಾಯಣಪುರ (ಮೀ)	492.25	490.66	70,000	65,180

* ನೆಲಮಟ್ಟದಿಂದ

ಮೂರು ಜಿಲ್ಲೆಗಳಲ್ಲಿ ರೆಡ್ ಅಲರ್ಟ್ ಘೋಷಣೆ

ಕೇರಳ: 4 ಮಂದಿ ಬಲಿ

ತಿರುವನಂತಪುರ (ಪಿಟಿಐ): ಕೇರಳದಲ್ಲಿ ಗುರುವಾರ ಧಾರಾಕಾರ ಮಳೆ ಮುಂದುವರಿದಿದ್ದು, ರಾಜ್ಯದ ವಿವಿಧೆಡೆ ನಾಲ್ಕು ಮಂದಿ ಮೃತ ಪಟ್ಟಿದ್ದಾರೆ.

ಕಣ್ಣೂರಿನಲ್ಲಿ ಮಿಂಚಿನ ಹೊಡೆತಕ್ಕೆ ರಾಜೀವ್ (54) ಎಂಬುವವರು ಮೃತಪಟ್ಟಿದ್ದು, ತಿರುವನಂತಪುರದಲ್ಲಿ ನದಿಯಲ್ಲಿ ಮುಳುಗಿದ ಸೂರಜ್, ಪಾಲಕ್ಕಾಡ್‌ನ ಭಾರತ್‌ಪುರಳ ಪಟ್ಟಂಬಿಯಲ್ಲಿ ನಾಪತ್ತೆಯಾಗಿದ್ದ ವಿದ್ಯಾರ್ಥಿ ಪ್ರಣವ್(20) ಮೃತದೇಹವು ನದಿಯಲ್ಲಿ ಗುರುವಾರ ಸಿಕ್ಕಿದೆ. ತಿರುವನಂತಪುರದ ಸಮುದ್ರದಲ್ಲಿ ಮೀನುಗಾರಿಕೆಗೆ ತೆರಳಿದ್ದ ಮೀನುಗಾರರೊಬ್ಬರು ಕಣ್ಮರೆಯಾಗಿದ್ದಾರೆ.

ರೆಡ್ ಅಲರ್ಟ್: ಎರ್ನಾಕುಲ, ಇಡುಕ್ಕಿ ಹಾಗೂ ತ್ರಿಶ್ಶೂರ್ ಜಿಲ್ಲೆಯ ತಗ್ಗುಪ್ರದೇಶಗಳಿಗೆ ನೀರು ನುಗ್ಗಿದೆ. ಭಾರತೀಯ ಹವಾಮಾನ ಇಲಾಖೆ (ಐಎಂಡಿ)ಯು ರಾಜ್ಯದ ಮೂರು ಜಿಲ್ಲೆಗಳಿಗೆ ‘ರೆಡ್ ಅಲರ್ಟ್’ ಘೋಷಿಸಿದೆ. ಭಾರಿ ಮಳೆ ಹಾಗೂ ಬಿರುಸಾದ ಗಾಳಿಯಿಂದ ರಾಜಧಾನಿ ತಿರುವನಂತಪುರ ಸೇರಿದಂತೆ ಕೇರಳದ ಹಲವು ಜಿಲ್ಲೆಗಳಲ್ಲಿ ಮರ, ವಿದ್ಯುತ್ ಕಂಬಗಳು ಬುಡಸಮೇತ ಉರುಳಿಬಿದ್ದಿವೆ. ಹಲವೆಡೆ ಹೋರ್ಡಿಂಗ್‌ಗಳು ಕೆಳಗುರುಳಿವೆ.

ಇಡುಕ್ಕಿ, ಮಲಪ್ಪುರ, ವಯನಾಡ್ ಜಿಲ್ಲೆಗಳಿಗೆ ಐಎಂಡಿಯು ‘ರೆಡ್ ಅಲರ್ಟ್’ ಘೋಷಿಸಿದ್ದು, ಉಳಿದ ಏಳು ಜಿಲ್ಲೆಗಳಿಗೆ ‘ಆರೆಂಜ್ ಅಲರ್ಟ್’ ಘೋಷಿಸಿದೆ.

ಭಾರಿ ಮಳೆಯಿಂದ ಈ ವಾರ ನದಿಗಳು ಉಕ್ಕಿ ಹರಿಯಲಿದ್ದು, ಜನರು ಎಚ್ಚರಿಕೆಯಿಂದ ಇರಬೇಕು ಎಂದು ರಾಜ್ಯ ನೀರಾವರಿ ಇಲಾಖೆಯು ಎಚ್ಚರಿಕೆ ಸಂದೇಶ ರವಾನಿಸಿದೆ. ಎರ್ನಾಕುಲಂನ ಮೂವಟ್ಟುಪುಳ, ತ್ರಿಶ್ಶೂರ್, ಮಲಪ್ಪುರಂನಲ್ಲಿ ಹರಿಯುವ ಭಾರತ್‌ಪುಳ, ಪತ್ತನಂತಿಟ್ಟ ಜಿಲ್ಲೆಯ ಪಂಪಾ ನದಿ, ಕೊಟ್ಟಾಯಂನ ಮಣಿಮಲ, ಇಡುಕ್ಕಿಯ ತೋಡುಪುಳ, ವಯನಾಡ್‌ನ ಕಬಿನಿ ನದಿ ತೀರದ ಜನರಿಗೆ ಎಚ್ಚರಿಕೆಯಿಂದ ಇರುವಂತೆ ಸರ್ಕಾರ ಸೂಚನೆ ನೀಡಿದೆ.

ಮಳೆಯಿಂದ ಎರ್ನಾಕುಲ, ತ್ರಿಶ್ಶೂರ್, ಇಡುಕ್ಕಿ ಜಿಲ್ಲೆಯ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದ್ದು, ನೂರಾರು ಮಂದಿಯನ್ನು ಆಶ್ರಯ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ.

ಕಳೆದ ವರ್ಷ ಮಳೆಯಿಂದ ಭೀಕರ ಭೂಕುಸಿತಕ್ಕೆ ಸಾಕ್ಷಿಯಾಗಿದ್ದ ಮುಂಡಕ್ಕೈ ಮತ್ತು ಚೂರಲ್‌ಮಲ ಭಾಗದಲ್ಲಿ ನದಿಯು ಉಕ್ಕಿ ಹರಿಯುತ್ತಿದ್ದು, ಕೆಸರು ಹರಿದುಬರುತ್ತಿದೆ. ಇದರಿಂದ ಸ್ಥಳೀಯರಲ್ಲಿ ಆತಂಕ ಮನೆ ಮಾಡಿದೆ.

ಎರ್ನಾಕುಲದ ಅಲುವಾದಲ್ಲಿ ಉಕ್ಕಿ ಹರಿದ ಪೆರಿಯಾರ್ ನದಿ —ಪಿಟಿಐ ಚಿತ್ರ

ಮುಖ್ಯಾಂಶಗಳು

- ಭಾರಿ ಮಳೆ– ಉಕ್ಕಿ ಹರಿಯುತ್ತಿರುವ ರಾಜ್ಯದ ಪ್ರಮುಖ ನದಿಗಳು
- ಮೂರು ಜಿಲ್ಲೆಗಳಿಗೆ ರೆಡ್ ಅಲರ್ಟ್ ಘೋಷಣೆ
- ತಗ್ಗು ಪ್ರದೇಶಗಳ ಮುಳುಗಡೆ; ಆಶ್ರಯ ಕೇಂದ್ರಕ್ಕೆ ಸ್ಥಳಾಂತರ

‘ನಾನು ಎಲ್ಲ ಶಾಸಕರ ಕೈಗೆ ಸಿಗುತ್ತೇನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಎಲ್ಲ ಶಾಸಕರ ಕೈಗೆ ಸಿಗುತ್ತೇನೆ. ಬೇರೆ ಸಚಿವರು ಸಿಗದೇ ಹೋದರೆ, ಅದಕ್ಕೆ ನಾನು ಪ್ರತಿಕ್ರಿಯೆ ಕೊಡುವುದಿಲ್ಲ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸರ್ಕಾರದಲ್ಲಿ ಯಾವುದೇ ಗೊಂದಲ ಇಲ್ಲ. ಶಾಸಕರು ಮತ್ತು ಮುಖ್ಯಮಂತ್ರಿ ನಡುವೆ ಕೂಡಾ ಗೊಂದಲ ಇಲ್ಲ’ ಎಂದರು.

‘ಕೆಲವು ಶಾಸಕರು ತಮ್ಮ ಕ್ಷೇತ್ರದ ಬಗ್ಗೆ ಮಾತನಾಡಿದ್ದಾರೆ ಅಷ್ಟೇ. ಮುಖ್ಯಮಂತ್ರಿಯವರು ಇದೆಲ್ಲವನ್ನೂ ಗಮನಿಸುತ್ತಾರೆ. ಇದಕ್ಕೆ ಇಡೀ ಸರ್ಕಾರವೇ ಗೊಂದಲದಲ್ಲಿದೆ ಎಂದು ಹೇಳುವುದು ಸರಿಯಲ್ಲ’ ಎಂದರು.

‘ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ರಾಜ್ಯಕ್ಕೆ ಯಾಕೆ ಬರುತ್ತಿದ್ದಾರೆ ಎನ್ನುವುದು ಗೊತ್ತಿಲ್ಲ. ಅವರು ಶಾಸಕರ ಜೊತೆ ಮಾತನಾಡಬಹುದು’ ಎಂದರು.

ಸುರ್ಜೇವಾಲಾ ಅವರನ್ನು ಉಸ್ತುವಾರಿ ಸ್ಥಾನದಿಂದ ಬದಲಿಸುವಂತೆ ಕೆಲವರು ಒತ್ತಾಯಿಸುತ್ತಿರುವ ಬಗ್ಗೆ ಪ್ರತಿಕ್ರಿಯಿಸಿದ ಪರಮೇಶ್ವರ, ‘ಇದು ಹೈಕಮಾಂಡ್‌ಗೆ ಸಂಬಂಧಿಸಿದ ವಿಷಯ. ಎಐಸಿಸಿಗೆ ಸಂಬಂಧಿಸಿದ ವಿಷಯ ನಾನು ಹೇಗೆ ಮಾತನಾಡಲಿ? ಎಐಸಿಸಿ ಅಧ್ಯಕ್ಷರು, ರಾಹುಲ್ ಗಾಂಧಿ ಈ ಬಗ್ಗೆ ತೀರ್ಮಾನಿಸುತ್ತಾರೆ’ ಎಂದರು.

3ನೇ ಪತ್ನಿಯ ಮೃತದೇಹ ಬಸ್‌ನಲ್ಲಿ ಸಾಗಿಸಿದ್ದ ಆರೋಪಿ

23 ವರ್ಷಗಳ ಹಿಂದೆ ನಡೆದ ಕೊಲೆ; ಬಂಧನ

ಪ್ರಜಾವಾಣಿ ವಾರ್ತೆ

ಗಂಗಾವತಿ (ಕೊಪ್ಪಳ ಜಿಲ್ಲೆ): ಮೂರನೇ ಪತ್ನಿಯನ್ನು ಕೊಲೆ ಮಾಡಿದ ಆರೋಪ ಹೊತ್ತು 23 ವರ್ಷಗಳ ಕಾಲ ತಲೆಮರೆಸಿಕೊಂಡಿದ್ದ 75 ವರ್ಷದ ವ್ಯಕ್ತಿಯನ್ನು ಗಂಗಾವತಿ ನಗರ ಪೊಲೀಸರು ಬುಧವಾರ ರಾತ್ರಿ ಬಂಧಿಸಿದ್ದಾರೆ.

ಹನುಮಂತ

ರಾಯಚೂರು ಜಿಲ್ಲೆಯ ಮಾನ್ವಿ ತಾಲ್ಲೂಕಿನ ಹಾಲದಾಳ ಗ್ರಾಮದ ಹನುಮಂತ ಹುಸೇನಪ್ಪ ಬಂಧಿತ ಆರೋಪಿ.

‘ಹನುಮಂತ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಕಿರಿಯ ಸಹಾಯಕ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದ. ಮೊದಲ ಪತ್ನಿ ಮೃತಪಟ್ಟಿದ್ದರಿಂದ ಎರಡನೇ ಮದುವೆಯಾಗಿದ್ದ. ಜಗಳ ಮಾಡಿ ಎರಡನೇ ಪತ್ನಿ ಬಿಟ್ಟು ಹೋಗಿದ್ದರಿಂದ ಕೊಪ್ಪಳ ತಾಲ್ಲೂಕಿನ ಇಂದರಗಿ ಗ್ರಾಮದ ರೇಣುಕಮ್ಮ ಅವರೊಂದಿಗೆ ಮೂರನೇ ಮದುವೆಯಾಗಿದ್ದ. ಸರ್ಕಾರಿ ನೌಕರ ಎನ್ನುವ ಕಾರಣಕ್ಕೆ ರೇಣುಕಮ್ಮ ಈ ಮದುವೆಗೆ ಒಪ್ಪಿಕೊಂಡಿದ್ದರು.

‘ಗಂಗಾವತಿಯಲ್ಲಿ ವಾಸವಿದ್ದ ಹನುಮಂತ ಪತ್ನಿ ರೇಣುಕಮ್ಮನ ಶೀಲ ಶಂಕಿಸಿ ಜಗಳವಾಡಿ 2002ರಲ್ಲಿ ಕೊಲೆ ಮಾಡಿದ್ದ. ನಂತರ ಪತ್ನಿಯ ದೇಹವನ್ನು ಗೋಣಿ ಚೀಲದಲ್ಲಿ ತುಂಬಿ ಆಟೊದಲ್ಲಿ ಹಾಕಿ ಬಳ್ಳಾರಿ ಜಿಲ್ಲೆಯ ಕಂಪ್ಲಿಗೆ ಸರ್ಕಾರಿ ಬಸ್‌ನಲ್ಲಿ ಕಳುಹಿಸಿದ್ದ. ಬಸ್‌ನಲ್ಲಿ ಮೃತ ದೇಹವಿದ್ದ ಚೀಲ ನೋಡಿದ್ದ ನಿರ್ವಾಹಕ ಬಸ್ಸನ್ನು ನೇರವಾಗಿ ಪೊಲೀಸ್ ಠಾಣೆಗೆ ತೆಗೆದುಕೊಂಡು ಹೋಗಿ ದೂರು ನೀಡಿದ್ದರು’ ಎಂದು ಪೊಲೀಸರು ತಿಳಿಸಿದ್ದಾರೆ.

ಅಷ್ಟರಲ್ಲಿ ಆರೋಪಿ ಹನುಮಂತ ಪರಾರಿಯಾಗಿದ್ದ. ಇತ್ತೀಚೆಗೆ ಸ್ವಂತ ಊರಿಗೆ ಹನುಮಂತ ಬಂದಿದ್ದ. ಈ ಮಾಹಿತಿ ಪಡೆದ ಪೊಲೀಸರು ರಾಯಚೂರು ಜಿಲ್ಲೆಯ ಸಿರವಾರ ತಾಲ್ಲೂಕಿನ ಆತನೂರ ಗ್ರಾಮದಲ್ಲಿ ಆರೋಪಿಯನ್ನು ಬಂಧಿಸಿದ್ದಾರೆ.

> ಹನುಮಂತ ಪತ್ನಿಯನ್ನು ಕೊಲೆ ಮಾಡಿದ ಆರೋಪ ಹೊತ್ತಿದ್ದು, ದೀರ್ಘ ಕಾಲ ತಲೆಮರೆಯಿಸಿಕೊಂಡಿದ್ದ. ಆರೋಪಿಯನ್ನು ನಮ್ಮ ಪೊಲೀಸರು ಶ್ರಮಪಟ್ಟು ಬಂಧಿಸಿದ್ದಾರೆ
> **ಡಾ. ರಾಮ್ ಎಲ್. ಅರಸಿದ್ಧಿ,** ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ



ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಗ್ರಂಥಗಳು ಬಾಳನ್ನು ಬೆಳಗಿಸುವ ಸಂಜೀವಿನಿ.

-ಡಿ.ವಿ.ಜಿ.

ಸಂಪಾದಕೀಯ

ಬಾಹ್ಯಾಕಾಶಕ್ಕೆ ತಲುಪಿದ ಶುಭಾಂಶು ಮಹತ್ವಾಕಾಂಕ್ಷೆಯ ಮೊದಲ ಹೆಜ್ಜೆ

ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರು ಆಕ್ಸಿಯಂ-4ರ ಭಾಗವಾಗಿ ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ಐಎಸ್‌ಎಸ್) ಪ್ರವೇಶ ಮಾಡಿರುವುದು ಭಾರತದ ಬಾಹ್ಯಾಕಾಶ ಕಾರ್ಯಕ್ರಮದಲ್ಲಿನ ಹೊಸ ಹಂತವೊಂದನ್ನು ಸೂಚಿಸುತ್ತದೆ. ಭಾರತದ ಬಾಹ್ಯಾಕಾಶ ಕಾರ್ಯಕ್ರಮವು ಈವರೆಗೆ ಸಾಂಪ್ರದಾಯಿಕವಾಗಿ ಆರ್ಥಿಕ ಪ್ರಾಯೋಗಿಕತೆಯನ್ನು ಕೇಂದ್ರೀಕರಿಸಿ ಕೊಂಡಿತ್ತು. ಈ ಹಿಂದಿನವರು ಲಭ್ಯ ಸಂಪನ್ಮೂಲಗಳನ್ನು ಸಮಾಜದ 'ನಿಜವಾದ ಸಮಸ್ಯೆ'ಗಳನ್ನು ಪರಿಹರಿಸಲು ಬಳಸಿಕೊಂಡಿದ್ದರು. ಹವಾಮಾನ ಮುನ್ಸೂಚನೆ ... ಇತ್ತು. ಬಾಹ್ಯ ಜಗತ್ತಿನ ಶೋಧದ ವಿಚಾರ ಕುರಿತು ಗಮನ ಕೇಂದ್ರೀಕರಿಸಲು ಸಾಧ್ಯವಿರಲಿಲ್ಲ. ಕಳೆದ ಎರಡು ದಶಕಗಳಲ್ಲಿ ಈ ಪರಂಪರೆಯನ್ನು ಮುರಿಯಲಾಗಿದೆ. ಆಸ್ಟ್ರೋಸ್ಯಾಟ್, ಚಂದ್ರಯಾನ-1 ಮತ್ತು ಮಂಗಳ ಗ್ರಹದ ಕಕ್ಷೆಗೆ ಉಪಗ್ರಹ ಮುಂತಾದ ಕಾರ್ಯಕ್ರಮಗಳು ಬಾಹ್ಯಾಕಾಶದಲ್ಲಿ ಭಾರತದ ಬದಲಾದ ಆಸಕ್ತಿಗೆ ನಿದರ್ಶನಗಳಾಗಿವೆ. ಚಂದ್ರಯಾನ-2 ವಿಫಲವಾಯಿತು. ಆದರೆ, ಚಂದ್ರಯಾನ-3 ಯಶಸ್ವಿಯಾಯಿತು. ಇದೇ ಮೊದಲ ಬಾರಿಗೆ ಬಾಹ್ಯಾಕಾಶ ನೌಕೆಯೊಂದನ್ನು ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಸುವ ಮೂಲಕ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಇತಿಹಾಸ ಬರೆಯಿತು. ಈ ವಿರಳ ವೈಜ್ಞಾನಿಕ ಸಾಧನೆಯನ್ನು ಇಡೀ ದೇಶವು ಉಸಿರು ಬಿಗಿಹಿಡಿದು ನೋಡಿತ್ತು. ವಿಕ್ರಮ್ ನೌಕೆಯು ಚಂದ್ರನ ಅಂಗಳದಲ್ಲಿ ಇಳಿದುದನ್ನು ಕಂಡು ಇಡೀ ದೇಶ ಸಂಭ್ರಮಪಟ್ಟಿತ್ತು.

ಈ ಯಶಸ್ಸಿನಿಂದ ಉತ್ತೇಜಿತಗೊಂಡ ಕೇಂದ್ರ ಸರ್ಕಾರವು ಆಳ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ಅನುಮೋದನೆ ಕೊಟ್ಟಿದೆ. ಚಂದ್ರನ ಮೇಲೆ ಮಾನವಸಹಿತ ನೌಕೆಯನ್ನು 2040ರ ಹೊತ್ತಿಗೆ ಇಳಿಸುವ ಯೋಜನೆಯನ್ನು ಹಾಕಿಕೊಳ್ಳಲಾಗಿದೆ. ಸೂರ್ಯ ಮತ್ತು ಶುಕ್ರ ಗ್ರಹವನ್ನು ಅಧ್ಯಯನ ನಡೆಸುವ ಯೋಜನೆಗಳೂ ಇವೆ. ಅತ್ಯಲ್ಪ ಗುರುತ್ವಾಕರ್ಷಣ ಶಕ್ತಿ ಇರುವ ವಾತಾವರಣದಲ್ಲಿ ಶುಭಾಂಶು ಅವರು 14 ದಿನ ಇರಲಿದ್ದಾರೆ. ಮುಂದಿನ ಹಂತದಲ್ಲಿ ಇರುವುದು ಗಗನಯಾನ ಯೋಜನೆ- ಇದರ ಮೊದಲ ಉಡ್ಡಯನವನ್ನು 2027ರಲ್ಲಿ ನಿರೀಕ್ಷಿಸಬಹುದು. ಅದಾದ ಬಳಿಕ ಭಾರತೀಯ ಅಂತರಿಕ್ಷ ನಿಲ್ದಾಣ ಕಾರ್ಯಕ್ರಮ ಇದೆ. ಇದರ ಮೊದಲ ಭಾಗವು 2028ರಲ್ಲಿ ಉಡ್ಡಯನಗೊಳ್ಳಬಹುದು. ಶುಭಾಂಶು ಅವರ ಬಾಹ್ಯಾಕಾಶ ಯಾತ್ರೆಯು ನಾಲ್ಕು ದಶಕ ಹಿಂದಿನ ರಾಕೇಶ್ ಶರ್ಮಾ ಅವರ ಯಾತ್ರೆಯಂತೆ ಅಲ್ಲ. ಭಾರತವು ವಿಸ್ತೃತವಾದ ಕಾರ್ಯಕ್ರಮಗಳೊಂದಿಗೆ ಸಜ್ಜಾಗಿದೆ. ಶುಭಾಂಶು ಮತ್ತು ಅವರ ಜೊತೆಗಾರ ಗ್ರೂಪ್ ಕ್ಯಾಪ್ಟನ್ ಪ್ರಶಾಂತ್ ಬಾಲಕೃಷ್ಣನ್ ನಾಯರ್ ಅವರು ಪಡೆದುಕೊಳ್ಳುವ ಅನುಭವವು ನಮ್ಮ ಕಾರ್ಯಕ್ರಮಗಳಿಗೆ ವರವಾಗಿ ಪರಿಣಮಿಸಲಿದೆ. ಗಗನಯಾತ್ರಿಕರ ಪಡೆಯೊಂದನ್ನು ರೂಪಿಸಲು ಭಾರತವು ಬಹಳ ಗಂಭೀರವಾಗಿ ಸಿದ್ಧವಾಗಿದೆ ಎಂಬುದನ್ನು ಈ ಗಗನಯಾತ್ರಿಕರು ಜಗತ್ತಿಗೆ ತೋರಿಸಲಿದ್ದಾರೆ.

ಶುಭಾಂಶು ಅವರು ಪಡೆದುಕೊಳ್ಳುವ ಅನುಭವವು ದೇಶದ ಬಾಹ್ಯಾಕಾಶ ಕಾರ್ಯಕ್ರಮಗಳಿಗೆ ವರವಾಗಿ ಪರಿಣಮಿಸಲಿದೆ

ಜಾಗತಿಕ ಬಾಹ್ಯಾಕಾಶ ಮಾರುಕಟ್ಟೆಯಲ್ಲಿ ಭಾರತದ ಪಾಲು ಈಗ ಶೇ 2ರಷ್ಟು ಮಾತ್ರ. ಈಗ ಇದರ ಮೌಲ್ಯವು 840 ಕೋಟಿ ಡಾಲರ್ (₹72 ಸಾವಿರ ಕೋಟಿ) ಮಾತ್ರ. ಆದರೆ, 2033ರ ಹೊತ್ತಿಗೆ ಇದನ್ನು 4,400 ಕೋಟಿ ಡಾಲರ್‌ಗೆ (₹3.76 ಲಕ್ಷ ಕೋಟಿ) ಹೆಚ್ಚಿಸುವ ಗುರಿ ಇರಿಸಿಕೊಳ್ಳಲಾಗಿದೆ. ಈ ಕ್ಷೇತ್ರವನ್ನು ಖಾಸಗಿ ವಲಯಕ್ಕೆ ತೆರೆಯಲಾಗಿದೆ. ಈ ಕಂಪನಿಗಳು ಏನು ಮಾಡಬೇಕು ಮತ್ತು ಇಸ್ರೊ ಯಾವೆಲ್ಲ ಕೆಲಸಗಳನ್ನು ಮಾಡಬೇಕು ಎಂಬುದರ ಕುರಿತು ರೂಪುರೇಷೆ ಸಿದ್ಧಪಡಿಸಲಾಗಿದೆ. ಹೊಸದಾಗಿ ಈ ವಲಯಕ್ಕೆ ಬರುವವರನ್ನು ಕೈಹಿಡಿದು ಮುನ್ನಡೆಸುವ ಕೆಲಸವನ್ನು ಇಸ್ರೊ ಮಾಡಲಿದೆ. ಬುದ್ಧಿವಂತ ಯುವ ವಿಜ್ಞಾನಿಗಳು, ಎಂಜಿನಿಯರ್‌ಗಳು, ಗಗನಯಾನಿಗಳು ಮತ್ತು ಉದ್ಯಮಿಗಳ ಅಗತ್ಯ ಇದೆ. ತನ್ನ ಎಂಜಿನಿಯರ್‌ಗಳಲ್ಲಿ ಹೆಚ್ಚಿನವರು ಐಐಟಿಯ ಹೊರಗೆಯೇ ಕಲಿತವರು ಎಂಬುದನ್ನು ಇಸ್ರೊ ಹೆಮ್ಮೆಯಿಂದ ಹೇಳಿಕೊಳ್ಳುತ್ತದೆ. ಆದರೆ, 1960 ಮತ್ತು 1970ರ ದಶಕದ ರೀತಿಗೆ ವ್ಯತಿರಿಕ್ತವಾಗಿ ಬುದ್ಧಿವಂತ ಯುವಜನರು ಬಾಹ್ಯಾಕಾಶ ಕಾರ್ಯಕ್ರಮದಿಂದ ಹೊರಗೆ ಏಕೆ ಉಳಿಯುತ್ತಿದ್ದಾರೆ ಎಂಬುದರ ಕುರಿತು ಇಸ್ರೊ ಆತ್ಮಾವಲೋಕನ ಮಾಡಿಕೊಳ್ಳಬೇಕು. ಬಾಹ್ಯಾಕಾಶ ಕ್ಷೇತ್ರದಲ್ಲಿ ಆಕರ್ಷಕ ವೃತ್ತಿ ಅವಕಾಶಗಳನ್ನು ಒದಗಿಸಲು ಹೊಸ ಕ್ರಮಗಳನ್ನು ಕೈಗೊಳ್ಳಬೇಕು. ಯುವ ಆಕಾಂಕ್ಷಿಗಳಲ್ಲಿ ಸ್ಫೂರ್ತಿ ತುಂಬುವಲ್ಲಿ ಸಂವಹನವು ಮಹತ್ವದ ಪಾತ್ರ ವಹಿಸಬಹುದು. ಬಾಹ್ಯಾಕಾಶ ಕ್ಷೇತ್ರದಲ್ಲಿ ಇನ್ನಷ್ಟು ಎತ್ತರಕ್ಕೆ ಏರಬೇಕಿದ್ದರೆ ಇದು ಅನಿವಾರ್ಯವಾಗಿ ಬೇಕಿರುವ ಕ್ರಮಗಳು.

ಚಾಟಿ

ದರ ನಿಯಂತ್ರಿಸಿ...

ಬೆಂಗಳೂರಿನಲ್ಲಿ ಆ್ಯಪ್ ಆಧಾರಿತ ಆಟೊದಲ್ಲಿ 1.5 ಕಿ.ಮೀ. ದೂರದ ಪ್ರಯಾಣಕ್ಕೆ ₹70ಕ್ಕೂ ಹೆಚ್ಚು ಭರಿಸಬೇಕಿದೆ. ದರ ನಿಯಂತ್ರಣವು ಇಲ್ಲವಾಗಿದೆ. ರಾಜ್ಯ ಸರ್ಕಾರವು ಆಟೊ ಪ್ರಯಾಣಕ್ಕೆ ಮೂಲ ಬಾಡಿಗೆ ದರ ನಿಗದಿಪಡಿಸಬೇಕು. ಕಡ್ಡಾಯವಾಗಿ ಮೀಟರ್ ಬಳಸಲು ಚಾಲಕರಿಗೆ ಸೂಚಿಸಬೇಕು... ಆ್ಯಪ್ ಆಧಾರಿತ ಕಂಪನಿಗಳು ಮತ್ತು ಡಿಜಿಟಲ್ ಏಕಸ್ವಾಮ್ಯದಿಂದ ಸಂಕಷ್ಟಕ್ಕೆ ಸಿಲುಕಿರುವ ಗ್ರಾಹಕರನ್ನು ರಕ್ಷಿಸಬೇಕಿದೆ...

ಪಿ.ಸಿ. ಮೋಹನ್, ಸಂಸದ, 'ಎಕ್ಸ್'ನಿಂದ

ಕಿಡಿನುಡಿ

11 ವರ್ಷಗಳಲ್ಲಿ ಬಿಜೆಪಿಯವರು ರೈತರು, ಕೂಲಿ ಕಾರ್ಮಿಕರಿಗೆ ಏನು ಮಾಡಿದ್ದಾರೆ? ತುರ್ತು ಪರಿಸ್ಥಿತಿ ಆಗಿ 50 ವರ್ಷವಾಯ್ತು. ಔರಂಗಜೇಬ್ ಸತ್ತು ಎಷ್ಟೋ ವರ್ಷಗಳಾಗಿವೆ. ಈಗ ಅದರ ಬಗ್ಗೆ ಮಾತನಾಡಿದರೆ ಏನು ಉಪಯೋಗ? ಎಮರ್ಜೆನ್ಸಿ ಛಲೋ ಅಂತ ನಾವ್ಯಾರೂ ಹೇಳಿಲ್ಲ.

ಶರಣಬಸಪ್ಪ ದರ್ಶನಾಪೂರ, ಸಣ್ಣ ಕೈಗಾರಿಕೆ ಸಚಿವ

25 ವರ್ಷಗಳ ಹಿಂದೆ

ಮಂಗಳವಾರ, 27-6-2000

● **ತುಮಕೂರು ಬಳಿ ದಲಿತರಿಗೆ ಸಾಮಾಜಿಕ ಬಹಿಷ್ಕಾರ**

ತುಮಕೂರು, ಜೂನ್ 26 – ಊರಿನ ದಲಿತರ ಸಾಮಾಜಿಕ ಬಹಿಷ್ಕಾರಕ್ಕೆ ಒಂದು ಸಮುದಾಯ 'ಕಟ್ಟು' ವಿಧಿಸಿರುವ ಕಾರಣ ಕೆ.ಪಾಲಸಂದ್ರ ಗ್ರಾಮದಲ್ಲಿ ಎರಡು ಸಮುದಾಯಗಳ ನಡುವೆ ದ್ವೇಷದ ಜ್ವಾಲೆ ಬೂದಿಮುಚ್ಚಿದ ಕೆಂಡದಂತೆ ಒಳಗೊಳಗೇ ಕುದಿಯುತ್ತಿದೆ.

'ಊರಿನ ಜನ ಯಾವುದೇ ಕೆಲಸ ಕಾರ್ಯಕ್ಕೆ ಮಾದಿಗರನ್ನು ಕರೆಯಬಾರದು. ಅವರ ಜೊತೆ ಮಾತನಾಡಬಾರದು. ದಲಿತರು ನಮ್ಮ ಕಡೆ ಕಾಲಿಡಬಾರದು. ಇದನ್ನು ಉಲ್ಲಂಘಿಸಿದರೆ 101 ರೂಪಾಯಿ ದಂಡ ವಿಧಿಸಲಾಗುವುದು' ಎಂದು ಊರಿನ ತಿಗಳ ಸಮುದಾಯದ ಮುಖಂಡರು ಸ್ಥಳೀಯರ ಮೇಲೆ 'ಕಟ್ಟು' ವಿಧಿಸಿದ್ದಾರೆ.

● **ಮಂಕು ಬೆಡಗಿಯರು**

ಲಂಡನ್, ಜೂನ್ 26 (ಡಿಪಿಎ)– ಬಿಕಿನಿ ತೊಡುವ ಬೆಡಗಿಯರು ಸಾಮಾನ್ಯವಾಗಿ ಮಂಕಾಗಿರುತ್ತಾರೆ. ಬುದ್ಧಿವಂತ ಮಹಿಳೆಯರು ಬಿಕಿನಿ ತೊಟ್ಟರೆ ಇನ್ನಷ್ಟು ಮಂಕಾಗುತ್ತಾರೆ ಎಂದು ಇಲ್ಲಿನ ವಿಶ್ವವಿದ್ಯಾಲಯದ ಮನೋವಿಜ್ಞಾನಿ ಹೇಳಿದ್ದಾರೆ.

75 ವರ್ಷಗಳ ಹಿಂದೆ

ಮಂಗಳವಾರ, 27-6-1950

● **ದಕ್ಷಿಣ ಕೊರಿಯಾ ರಾಜಧಾನಿಯ ಹೊರಾಂಗಣದಲ್ಲಿ ಕಮ್ಯುನಿಸ್ಟ್ ಸೇನೆ**

ಟೋಕಿಯೊ, ಜೂನ್ 26 – ಕಳೆದ ರಾತ್ರಿ ಉತ್ತರ ಕೊರಿಯಾದ ಕಮ್ಯುನಿಸ್ಟ್ ಸೇನಾಪಡೆಗಳು ದಕ್ಷಿಣ ಕೊರಿಯಾ ರಾಜಧಾನಿಗೆ 12 ಮೈಲಿ ದೂರದಲ್ಲಿರುವ ಯುಜುಂಗ್ ಬೋ ಪಟ್ಟಣವನ್ನು ಆಕ್ರಮಿಸಿಕೊಂಡು ರಾಜಧಾನಿ ಸೆವೌಲ್ ನಗರದ ಕಡೆಗೆ ನುಗ್ಗುತ್ತಿವೆ ಎಂಬುವುದಾಗಿ ಟೋಕಿಯೊಗೆ ಸುದ್ದಿ ಬಂದಿದೆ.

ಕಮ್ಯುನಿಸ್ಟ್ ಸೇನೆಗಳಾಗಲೇ ರಾಜಧಾನಿಯ ಹೊರಾಂಗಣದಲ್ಲಿ ತಮ್ಮ ಮುಂಚೂಣಿ ದಳ ಸಹಿತ ಮುನ್ನುಗ್ಗುತ್ತಿವೆಯೆಂದು ಜಪಾನಿನ ಪತ್ರಿಕೆಗಳು ವರದಿ ಮಾಡಿವೆ.

● **ನಿಜಲಿಂಗಪ್ಪನವರಿಗೆ ಪಾರ್ಲಿಮೆಂಟ್ ಸದಸ್ಯತ್ವ**

ಬೊಂಬಾಯಿ, ಜೂನ್ 26– ಭಾರತ ಪಾರ್ಲಿಮೆಂಟ್‌ನಲ್ಲಿ ಮುಂಬೈಯನ್ನು ಪ್ರತಿನಿಧಿಸುವ ಸ್ಥಾನಕ್ಕೆ ನಿಜಲಿಂಗಪ್ಪನವರೊಬ್ಬರೇ ಕ್ರಮಬದ್ಧವಾಗಿ ನಾಮಕರಣ ಹೊಂದಿರುವ ಹುರಿಯಾಳಾಗಿದ್ದು, ಅವರನ್ನು ಚುನಾಯಿಸಿರುವುದಾಗಿ ಅಧಿಕೃತ ಪ್ರಕಟಣೆಯೊಂದು ಇಂದು ತಿಳಿಸಿದೆ.

ಸರ್ವಪಕ್ಷ ನಿಯೋಗಗಳ ಪರಾಮರ್ಶೆ

ಜನರಾಜಕಾರಣ

ಪ್ರೊ.ಸಂದೀಪ್ ಶಾಸ್ತ್ರಿ

'ಸಿಂಧೂರ ಕಾರ್ಯಾಚರಣೆ' ಬಗ್ಗೆ ಭಾರತದ ನಿಲುವನ್ನು ವಿವರಿಸಲು ವಿದೇಶಗಳಿಗೆ ಕಳುಹಿಸಲಾಗಿದ್ದ, ಸರ್ವಪಕ್ಷಗಳ ಪ್ರಾತಿನಿಧ್ಯ ಹೊಂದಿರುವ ಏಳು ನಿಯೋಗಗಳು ತಮ್ಮ ಕೆಲಸ ಪೂರ್ಣಗೊಳಿಸಿವೆ. ಅವು ಭಾರತಕ್ಕೆ ಮರಳಿವೆ. ನಿಯೋಗಗಳಲ್ಲಿ ಇದ್ದ ಎಲ್ಲ ಸದಸ್ಯರನ್ನು ಭೇಟಿ ಮಾಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, ನಿಯೋಗಗಳ ಪ್ರಯತ್ನಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಇದರ ಸುತ್ತಲಿನ ಬೆಳವಣಿಗೆಗಳ ಬಗ್ಗೆ- ಅಂದರೆ, ನಿಯೋಗಗಳನ್ನು ರಚಿಸಿದ ಪ್ರಕ್ರಿಯೆ ಬಗ್ಗೆ, ಅವುಗಳು ಮಾಡಬೇಕಿರುವ ಕಾರ್ಯಗಳನ್ನು ನಿಗದಿ ಮಾಡಿದ ಬಗೆಯ ಬಗ್ಗೆ, ಅವು ಚರ್ಚಿಸಬೇಕಿರುವ ವಿಷಯಗಳ ಕುರಿತು ಮಾಹಿತಿ ನೀಡಿದ ಬಗ್ಗೆ, ನಿಯೋಗಗಳಿಗೆ ನಿಗದಿ ಮಾಡಿದ ದೇಶಗಳಲ್ಲಿ ಅವು ಅನುಕೂಲಕರ ಸನ್ನಿವೇಶ ಇಲ್ಲದಿದ್ದರೂ ಸಭೆಗಳನ್ನು ನಡೆಸಿದ ಬಗ್ಗೆ ಹಾಗೂ ಸಾರ್ವಜನಿಕರ ಜೊತೆ ನಡೆಸಿದ ಸಂವಾದದ ಬಗ್ಗೆ, ನಿಯೋಗಗಳ ಭೇಟಿಯಿಂದ ಆಗುವ ವಿಸ್ತೃತ ಪರಿಣಾಮಗಳ ಬಗ್ಗೆ- ಪರಿಶೀಲನೆ ನಡೆಸಲು ಇದು ಒಂದು ಉತ್ತಮ ಸಮಯ.

ಈ ನಿಯೋಗಗಳ ಭೇಟಿಯ ಬಗ್ಗೆ ಭಾರತದಲ್ಲಿ ಸಾರ್ವಜನಿಕರ ಗಮನ ಇದ್ದಿದ್ದು ಬಹಳ ಗಮನಾರ್ಹವಾಗಿತ್ತು. ಹೀಗಾಗಿ, 'ಸಂಸದೀಯ ಸ್ನೇಹಕೂಟ'ಗಳನ್ನು ರಚಿಸಲು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರು ಆಲೋಚನೆ ನಡೆಸಿರುವುದರಲ್ಲಿ ಆಶ್ಚರ್ಯ ಮೂಡಿಸುವಂಥದ್ದು ಏನೂ ಇಲ್ಲ.

ಸರ್ವಪಕ್ಷಗಳ ಪ್ರಾತಿನಿಧ್ಯದ ಏಳು ನಿಯೋಗಗಳಲ್ಲಿ ಒಟ್ಟು 59 ಸದಸ್ಯರು ಇದ್ದರು. ಬೇರೆ ಬೇರೆ ಪಕ್ಷಗಳ ಸಂಸದರು, ರಾಜಕಾರಣಿಗಳು ಮತ್ತು ನಿವೃತ್ತ ರಾಜತಾಂತ್ರಿಕರು ಈ ನಿಯೋಗದ ಸದಸ್ಯರಾಗಿದ್ದರು. ಎರಡು ನಿಯೋಗಗಳಿಗೆ ಬಿಜೆಪಿ ನಾಯಕರ ನೇತೃತ್ವ ಇತ್ತು. ಇನ್ನೆರಡು ನಿಯೋಗಗಳಿಗೆ ಬಿಜೆಪಿಗೆ ಸೇರಿರದ, ಆದರೆ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟದ (ಎನ್‌ಡಿಎ) ಭಾಗವಾಗಿರುವ ಪಕ್ಷಗಳ ನಾಯಕರ ನೇತೃತ್ವ ಇತ್ತು. ಇನ್ನುಳಿದ ಮೂರು ನಿಯೋಗಗಳ ನೇತೃತ್ವವನ್ನು ವಿರೋಧ ಪಕ್ಷಗಳ ಪ್ರಮುಖರು ವಹಿಸಿದ್ದರು.

ನಿಯೋಗ ರಚಿಸಲು ಮುಂದಡಿ ಇರಿಸಿದ ಕೇಂದ್ರ ಸರ್ಕಾರವು ನಿಯೋಗಗಳ ಮುಖ್ಯಸ್ಥರನ್ನು ಹಾಗೂ ನಿಯೋಗಗಳ ಸದಸ್ಯರನ್ನು ಆಯ್ಕೆ ಮಾಡುವಾಗ ತನ್ನದೇ ಆದ ಸ್ಪಷ್ಟ ತಾರ್ಕಿಕ ಕಾರಣಗಳನ್ನು ಹೊಂದಿತ್ತು. ತೃಣಮೂಲ ಕಾಂಗ್ರೆಸ್ ಪಕ್ಷದ ವಿಚಾರದಲ್ಲಿ, ಮೊದಲು ಆಯ್ಕೆ ಮಾಡಿದ್ದ ಪ್ರತಿನಿಧಿಯು ನಿಯೋಗದ ಭಾಗವಾಗಲು ನಿರಾಕರಿಸಿದರು. ಟಿಎಂಸಿ ಪಕ್ಷವು ಇನ್ನೊಬ್ಬರ ಹೆಸರನ್ನು ಸೂಚಿಸಿತು. ಹೀಗಾಗಿ ಆ ಪಕ್ಷದ ಪ್ರತಿನಿಧಿಯನ್ನು ಬದಲಾಯಿಸಲಾಯಿತು.

ನಿಯೋಗಗಳಲ್ಲಿ ಕಾಂಗ್ರೆಸ್ ಸದಸ್ಯರ ನಾಮನಿರ್ದೇಶನಕ್ಕೆ ಸಂಬಂಧಿಸಿದಂತೆ ದೊಡ್ಡ ವಿವಾದವೊಂದು ಸೃಷ್ಟಿಯಾಯಿತು. ಕಾಂಗ್ರೆಸ್ ಪಕ್ಷವು ನೀಡಿದ ಪಟ್ಟಿಯಲ್ಲಿ ಇದ್ದ ಪ್ರತಿನಿಧಿಗಳ ಪೈಕಿ ಒಬ್ಬರನ್ನು ಮಾತ್ರ ನಿಯೋಗದ ಸದಸ್ಯರನ್ನಾಗಿ ನೇಮಕ ಮಾಡಲಾಯಿತು.

ಕಾಂಗ್ರೆಸ್ಸಿನ ಇನ್ನುಳಿದ ಸದಸ್ಯರು ಸರ್ಕಾರದ ಆಯ್ಕೆಯಾಗಿದ್ದರು. ಸಣ್ಣಪುಟ್ಟ ಭಿನ್ನಾಭಿಪ್ರಾಯಗಳನ್ನು ಹೊರತುಪಡಿಸಿದರೆ, ನಿಯೋಗಗಳ ಕಾರ್ಯ ನಿರ್ವಹಣೆಯ ಮೇಲೆ ಯಾವುದೂ ಕೆಟ್ಟ ಪರಿಣಾಮ ಬೀರಲಿಲ್ಲ. ಇದರ ಶ್ರೇಯಸ್ಸು ಎಲ್ಲ ರಾಜಕೀಯ ಪಕ್ಷಗಳಿಗೆ ಸಲ್ಲಬೇಕು. ನಿಯೋಗಗಳ ಕೆಲವು ಸದಸ್ಯರು ಆಡಿದ ಮಾತುಗಳಿಗೆ, ಅವರು ಪ್ರತಿನಿಧಿಸುವ ಪಕ್ಷಗಳ ಕಡೆಯಿಂದ ಒಂದಿಷ್ಟು ಪ್ರತಿಕ್ರಿಯೆಗಳು ಬಂದವು. ಆದರೆ ಈ ಪ್ರತಿಕ್ರಿಯೆಗಳು ಇಡೀ ವಿಚಾರದ ಕೇಂದ್ರವೇನೂ ಅಲ್ಲ.

ಏಳು ನಿಯೋಗಗಳು ಭೇಟಿ ನೀಡಿದ ದೇಶಗಳ ಹೆಸರು ಗಮನಿಸಿದಾಗ, ಆದ್ಯತೆಗಳಲ್ಲಿ ಬಹಳ ಸ್ಪಷ್ಟವಾದ ವ್ಯತ್ಯಾಸ ಇದ್ದುದು, ಕಾರ್ಯತಂತ್ರದಲ್ಲಿ ಭಿನ್ನತೆ ಇದ್ದುದು ಗೊತ್ತಾಗುತ್ತದೆ. ಆ ನೆಲೆಯಲ್ಲಿಯೇ ನಿಯೋಗಗಳು ಭೇಟಿ ನೀಡಬೇಕಾದ ದೇಶಗಳನ್ನು ಅಂತಿಮಗೊಳಿಸಲಾಗಿತ್ತು. ನಿಯೋಗಗಳ ಸದಸ್ಯರು ಹಾಗೂ ಅವುಗಳ ನಾಯಕ ಯಾರು ಎಂಬುದನ್ನು ಅಂತಿಮಗೊಳಿಸುವಾಗ ಈ ಅಂಶವನ್ನು ಗಮನದಲ್ಲಿ ಇರಿಸಿಕೊಳ್ಳಲಾಗಿತ್ತು. ನಿಯೋಗಗಳ ವಿದೇಶ ಭೇಟಿ ಶುರುವಾದ ನಂತರದಲ್ಲಿ, ನಿಯೋಗದಲ್ಲಿ ಕೆಲವು ಸದಸ್ಯರ ಉಪಸ್ಥಿತಿಯನ್ನು ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಂಡು, ಭೇಟಿಯ ಉದ್ದೇಶವನ್ನು ವಿವರಿಸಲಾಯಿತು. ಅದರಲ್ಲೂ ಮುಖ್ಯವಾಗಿ, ನಿಯೋಗದಲ್ಲಿನ ಸದಸ್ಯರ ಪ್ರಾತಿನಿಧ್ಯವು ಸಾರ್ವಜನಿಕರ ಜೊತೆಗಿನ ಸಂವಾದಗಳಲ್ಲಿ ಹಾಗೂ ಮಾಧ್ಯಮಗಳ ಜೊತೆಗಿನ ಚರ್ಚೆಯ ವೇಳೆ ನಿರೀಕ್ಷಿತ ಪರಿಣಾಮವನ್ನು ಉಂಟುಮಾಡಿದ್ದುದು ಸ್ಪಷ್ಟ.

ಏಳು ನಿಯೋಗಗಳು ಮಾಡಿರುವ ಕೆಲಸಗಳ ಬಗ್ಗೆ ಮಾಧ್ಯಮಗಳು ಮಾಡಿರುವ ವರದಿಗಳನ್ನು ಪರಿಶೀಲಿಸಿದರೆ, ಕೆಲವು ನಿಯೋಗಗಳ ಕೆಲಸಗಳ ಮೇಲೆ ಹೆಚ್ಚು ಗಮನ ಇತ್ತು ಎಂಬುದು ಗೊತ್ತಾಗುತ್ತದೆ.

> ಏಳು ನಿಯೋಗಗಳು ಮಾಡಿರುವ ಕೆಲಸಗಳ ಬಗ್ಗೆ ಮಾಧ್ಯಮಗಳು ಮಾಡಿರುವ ವರದಿಗಳನ್ನು ಪರಿಶೀಲಿಸಿದರೆ, ಕೆಲವು ನಿಯೋಗಗಳ ಕೆಲಸಗಳ ಮೇಲೆ ಹೆಚ್ಚು ಗಮನ ಇತ್ತು ಎಂಬುದು ಗೊತ್ತಾಗುತ್ತದೆ. ಅಮೆರಿಕ ಮತ್ತು ಲ್ಯಾಟಿನ್ ಅಮೆರಿಕದ ಕೆಲವು ದೇಶಗಳಿಗೆ ಭೇಟಿ ನೀಡಿದ ನಿಯೋಗವು ಹೆಚ್ಚಿನ ಗಮನವನ್ನು ಪಡೆದುಕೊಂಡಂತೆ ಕಾಣುತ್ತಿತ್ತು. ನಿಯೋಗದ ನಾಯಕತ್ವ ವಹಿಸಿದ್ದ ವ್ಯಕ್ತಿ ಹಾಗೂ ಆ ನಿಯೋಗ ಭೇಟಿ ಮಾಡಿದ ದೇಶಗಳು ಇದಕ್ಕೆ ಕಾರಣ ಇರಬಹುದು

ಅಮೆರಿಕ ಮತ್ತು ಲ್ಯಾಟಿನ್ ಅಮೆರಿಕದ ಕೆಲವು ದೇಶಗಳಿಗೆ ಭೇಟಿ ನೀಡಿದ ನಿಯೋಗವು ಹೆಚ್ಚಿನ ಗಮನವನ್ನು ಪಡೆದುಕೊಂಡಂತೆ ಕಾಣುತ್ತಿತ್ತು. ನಿಯೋಗದ ನಾಯಕತ್ವ ವಹಿಸಿದ್ದ ವ್ಯಕ್ತಿ ಹಾಗೂ ಆ ನಿಯೋಗ ಭೇಟಿ ಮಾಡಿದ ದೇಶಗಳು ಇದಕ್ಕೆ ಕಾರಣ ಇರಬಹುದು. ಈ ನಿಯೋಗದ ನೇತೃತ್ವವನ್ನು ಕಾಂಗ್ರೆಸ್ಸಿನ ಸಂಸದ ಶಶಿ ತರೂರ್ ಅವರು ವಹಿಸಿದ್ದರು. ಇತರ ನಿಯೋಗಗಳು (ಯುರೋಪಿನ ಪಶ್ಚಿಮ ಭಾಗಕ್ಕೆ ಭೇಟಿ ನೀಡಿದ ನಿಯೋಗ ಹೊರತುಪಡಿಸಿ) ಕಡಿಮೆ ಪ್ರಮಾಣದಲ್ಲಿ ಮಾಧ್ಯಮಗಳ ಗಮನ ಸೆಳೆದವು. ಆದರೆ ಈ ನಿಯೋಗಗಳ ಕೆಲವು ಸದಸ್ಯರ ಸಾರ್ವಜನಿಕ ಹೇಳಿಕೆಗಳು ಮಾಧ್ಯಮಗಳ ಗಮನವನ್ನು ಸೆಳೆದವು.

ಸರ್ವಪಕ್ಷಗಳ ನಿಯೋಗಗಳು ಭೇಟಿ ನೀಡಿದ್ದ ಸಂದರ್ಭದಲ್ಲಿ ಆ ದೇಶಗಳಲ್ಲಿ ಭಾರತದ ಕೇಂದ್ರ ಸಚಿವರು ಪರ್ಯಾಯ ಸಭೆಗಳನ್ನು ಆಯೋಜಿಸಿದ್ದರು. ಇದು ಬಹಳ ಕುತೂಹಲಕಾರಿ ಅಂಶ. ಜಾಗತಿಕ ಮಟ್ಟದಲ್ಲಿ ಹಲವು ಬೆಳವಣಿಗೆಗಳು ನಡೆಯುತ್ತಿರುವ ಈ ಸಂದರ್ಭದಲ್ಲಿ, ನಿಯೋಗಗಳ ಭೇಟಿಯ ಸಂದರ್ಭದಲ್ಲಿಯೇ ಸಚಿವರು ಸಭೆಗಳನ್ನು ಆಯೋಜಿಸಿದ್ದುದು ಕಾಕತಾಳೀಯವೇ ಅಲ್ಲವೇ ಎಂಬುದು ಸ್ಪಷ್ಟವಾಗಿಲ್ಲ. ಮೂವತ್ತೆರಡು ದೇಶಗಳಿಗೆ ಭೇಟಿ ನೀಡಿದ ನಿಯೋಗಗಳು ಅಲ್ಲಿ ಯಾರನ್ನು ಭೇಟಿ ಮಾಡಿದವು ಎಂಬ ವಿಚಾರದಲ್ಲಿಯೂ ವ್ಯತ್ಯಾಸಗಳು ಕಂಡುಬಂದವು.

ನಿಯೋಗಗಳಲ್ಲಿನ ಬಹುಪಾಲು ಸದಸ್ಯರು ಸಂಸದರಾಗಿದ್ದರು. ಹೀಗಾಗಿ, ನಿಯೋಗಗಳು ತಾವು ಭೇಟಿ ಮಾಡಿದ ದೇಶಗಳ ಸಂಸದರ ಜೊತೆ ಮಾತುಕತೆ ನಡೆಸಿದವು. ನಿಯೋಗಗಳು ಭೇಟಿ ಮಾಡಿದ ದೇಶಗಳಲ್ಲಿ ಮಾತುಕತೆಗೆ ಸಿಕ್ಕ ಸಚಿವರ ಹಿರಿತನದಲ್ಲಿಯೂ ವ್ಯತ್ಯಾಸಗಳು ಇದ್ದವು. ನಿಯೋಗಗಳ ಸದಸ್ಯರು ಹೆಚ್ಚಿನ ದೇಶಗಳಲ್ಲಿ ಭಾರತ ಮೂಲದವರ ಜೊತೆ ಸಂವಾದ ನಡೆಸಿದರು. ಭಾರತೀಯ ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ವಿಚಾರದಲ್ಲಿ ಹಾಗೂ ಬೆಂಬಲ ಗಿಟ್ಟಿಸಲು ಅಗತ್ಯವಿರುವ ಜಾಲವೊಂದನ್ನು ಕಟ್ಟುವ ವಿಚಾರದಲ್ಲಿ ಈ ಬಗೆಯ ಮಾತುಕತೆಗಳು ಮಹತ್ವದ್ದಾಗಿ ಕಂಡುಬಂದವು.

ನಿಯೋಗಗಳು ತಮ್ಮ ಭೇಟಿಯನ್ನು ಪೂರ್ಣಗೊಳಿಸಿ, ಸ್ವದೇಶಕ್ಕೆ ಮರಳಿದ ನಂತರದಲ್ಲಿ ಅವುಗಳಿಗೆ ಪ್ರಧಾನಿ ಮೋದಿ ಅವರನ್ನು ಭೇಟಿ ಮಾಡಿ, ಮಾತುಕತೆ ನಡೆಸುವ ಅವಕಾಶ ಇತ್ತು. ಮೋದಿ ಅವರು ನಿಯೋಗಗಳ ಸದಸ್ಯರಿಗೆ ಔತಣಕೂಟ ಆಯೋಜಿಸಿದ್ದರು. ಇಲ್ಲಿ ಮಾಧ್ಯಮಗಳ ಗಮನವು ವಿವಿಧ ನಿಯೋಗಗಳಲ್ಲಿ ಇದ್ದ ಕಾಂಗ್ರೆಸ್ ಪಕ್ಷದ ಸದಸ್ಯರ ಜೊತೆ ಮೋದಿ ಅವರು ಯಾವ ಬಗೆಯಲ್ಲಿ ಚರ್ಚೆ ನಡೆಸಿದರು ಎಂಬುದರ ಮೇಲೆ ಇತ್ತು! ಮಾಧ್ಯಮಗಳ ಕಣ್ಣಿನ ಆಚೆಗೆ, ನಿಯೋಗಗಳ ಸದಸ್ಯರಿಗೆ ಪ್ರಧಾನಿ ಮೋದಿ ಅವರ ಜೊತೆ ಹಾಗೂ ಸಂಪುಟದ ಹಿರಿಯ ಸದಸ್ಯರ ಜೊತೆ ಇನ್ನಷ್ಟು ಮಾತುಕತೆ ನಡೆಸುವ ಅವಕಾಶ ಇತ್ತು ಎಂಬುದು ಖಚಿತ.

ತಾವು ನಡೆಸಿದ ಸಭೆಗಳ ಬಗ್ಗೆ ಮಾಹಿತಿ ಒದಗಿಸಲು ಏಳೂ ನಿಯೋಗಗಳ ನಾಯಕರು ಒಟ್ಟಾಗಿ ಸೇರಿ ಒಂದು ಪತ್ರಿಕಾಗೋಷ್ಠಿ ನಡೆಸಿದ್ದಿದ್ದರೆ ಇನ್ನಷ್ಟು ಉತ್ತಮವಾಗಿತ್ತು. ನಿಯೋಗಗಳು ಮಾಡಿದ ಕೆಲಸಗಳ ಬಗ್ಗೆ ಜನರಿಗೆ ಹೆಚ್ಚು ಮಾಹಿತಿ ಸಿಗುತ್ತಿತ್ತು. ಸರ್ವಪಕ್ಷಗಳ ನಿಯೋಗಗಳು ಬೇರೆ ಬೇರೆ ದೇಶಗಳಿಗೆ ಭೇಟಿ ನೀಡಿದ್ದುದು ಪ್ರಮುಖ ವಿದ್ಯಮಾನ ಹೌದಾದರೂ ಮುಂದಿನ ದಿನಗಳಲ್ಲಿಯೂ ಇಂತಹ ಕೆಲವು ಕ್ರಮಗಳನ್ನು ಕೈಗೊಳ್ಳುವುದು ಸೂಕ್ತವಾಗಬಹುದು.

ಇಲ್ಲಿ ಒಂದು ವಿಷಯವನ್ನು ಪ್ರಸ್ತಾಪಿಸುವುದು ಬಹಳ ಮುಖ್ಯವಾಗುತ್ತದೆ. ವಿದೇಶಗಳಲ್ಲಿ ಇದ್ದಾಗ ತಾವು ಪ್ರತಿನಿಧಿಸುತ್ತಿದ್ದುದು ಭಾರತವನ್ನು, 'ಸಿಂಧೂರ ಕಾರ್ಯಾಚರಣೆ'ಯ ಪರಿಣಾಮಗಳ ಬಗ್ಗೆ ಎಲ್ಲರೂ ಒಂದಾಗಿ ಅಭಿಪ್ರಾಯ ವ್ಯಕ್ತಪಡಿಸಲಾಗುತ್ತಿತ್ತು ಎಂಬುದನ್ನು ನಿಯೋಗಗಳ ಸದಸ್ಯರು ಬಹಳ ಸ್ಪಷ್ಟವಾಗಿ ತಿಳಿಸಿದ್ದರು. ನಿಯೋಗಗಳ ಕೆಲಸವು ಪೂರ್ಣಗೊಂಡು ಭಾರತಕ್ಕೆ ಹಿಂದಿರುಗಿದ ನಂತರದಲ್ಲಿ ತಮ್ಮ ಪಕ್ಷಗಳನ್ನು ಪ್ರತಿನಿಧಿಸುವ ಕೆಲಸವು ಹಿಂದೆ ಇದ್ದಂತೆಯೇ ನಡೆಯಲಿದೆ ಎಂಬುದನ್ನು ಕೂಡ ಕೆಲವು ಸದಸ್ಯರು ಹೇಳಿದರು.

ಸರ್ವಪಕ್ಷಗಳ ನಿಯೋಗದ ಸದಸ್ಯರಾಗಿ ಹೊರದೇಶಗಳಲ್ಲಿ ಇದ್ದಾಗ ಎಲ್ಲರಿಗೂ ಒಪ್ಪಿತವಾದ ನಿಲುವನ್ನು ಅನುಸರಿಸುವುದು ಹಾಗೂ ಆಂತರಿಕ ರಾಜಕಾರಣದಲ್ಲಿ ತಮ್ಮ ರಾಜಕೀಯ ಪಕ್ಷಗಳ ಕಾರ್ಯಸೂಚಿಗೆ ಅನುಗುಣವಾಗಿ ವರ್ತಿಸುವುದು ಮುಂದಿನ ದಿನಗಳಲ್ಲಿ ಸ್ವೀಕೃತ ನಿಯಮ ಆಗಲಿದೆಯೇ? ಆ ರೀತಿ ಆದಲ್ಲಿ, ಎಲ್ಲ ರಾಜಕೀಯ ಪಕ್ಷಗಳು ಹಾಗೂ ಅವುಗಳ ಮುಖಂಡರು ಈ ವ್ಯತ್ಯಾಸವನ್ನು ಗುರುತಿಸಬೇಕಾಗುತ್ತದೆ, ಗೌರವಿಸಬೇಕಾಗುತ್ತದೆ.

ಈ ರೀತಿ ಆದಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ ನಿಲುವುಗಳಲ್ಲಿನ ಭಿನ್ನತೆಗಳನ್ನು ಗುರುತಿಸದೇ ಇರುವುದರಿಂದ ಆಗುವ ಸಮಸ್ಯೆಗಳನ್ನು ತಡೆಯಲು ಸಾಧ್ಯವಾಗುತ್ತದೆ. ಆದರೆ ತೀವ್ರವಾಗಿ ಧ್ರುವೀಕೃತ ಆಗುತ್ತಿರುವ ರಾಜಕೀಯ ವ್ಯವಸ್ಥೆಯಲ್ಲಿ ಇಂಥದ್ದೊಂದು ಸಾಧ್ಯವೇ? ಅದಕ್ಕಿಂತ ಹೆಚ್ಚಾಗಿ, ಇಂಥ ನಿಲುವು ಬಹುಕಾಲ ಉಳಿಯುತ್ತದೆಯೇ? ಈ ಬಗೆಯಲ್ಲಿ ಭಿನ್ನತೆಯನ್ನು ಕಾಪಾಡಿಕೊಳ್ಳುವುದನ್ನು ಸಲೀಸಾಗಿ ಮರೆಯುವ ರಾಜಕೀಯ ಮುಖಂಡರು, ರಾಜಕೀಯ ಲಾಭ ಪಡೆದುಕೊಳ್ಳುವ ಆಸೆಯನ್ನು ಮೀರಿ ನಿಲ್ಲುತ್ತಾರೆಯೇ? ಅದರಲ್ಲೂ, ರಾಜಕೀಯವಾಗಿ ತಮಗೆ ಅನುಕೂಲ ಆಗುತ್ತದೆ ಎಂಬುದು ಗೊತ್ತಾದಾಗಲೂ ಅವರು ಆ ಒತ್ತಡವನ್ನು ಮೀರುವರೇ? ಮುಂದಿನ ದಿನಗಳಲ್ಲಿ ರಾಜಕೀಯವು ಯಾವ ಗತಿಯಲ್ಲಿ ಸಾಗಲಿದೆ ಎಂಬುದು ಈ ಪ್ರಶ್ನೆಗಳಿಗೆ ಉತ್ತರ ನೀಡಲಿದೆ.

ಲೇಖಕ: ರಾಜಕೀಯ ವಿಶ್ಲೇಷಕ

ವಾಚಕರ ವಾಣಿ

ತುರ್ತು ಪರಿಸ್ಥಿತಿಯ ನೆರಳು ಕವಿದಿದೆ...

ರಾಷ್ಟ್ರೀಯ ಪಕ್ಷಗಳಲ್ಲಿ ಒಂದು ರೀತಿಯ ಆಂತರಿಕ ತುರ್ತು ಪರಿಸ್ಥಿತಿ ಇರುತ್ತದೆ. ಅಲ್ಲಿ ಆ ಪಕ್ಷದ ಪ್ರತಿನಿಧಿಗಳು ಆತ್ಮಸಾಕ್ಷಿ, ನೈತಿಕತೆಯನ್ನು ಅಡಮಾನ ಇಟ್ಟಿರುತ್ತಾರೆ. ಸ್ವಂತ ವಿವೇಚನೆಗೆ ಅಲ್ಲಿ ಆಸ್ಪದ ಕಡಿಮೆ. ಜನಹಿತ, ನಾಡಹಿತಕ್ಕಿಂತ ಸ್ವಹಿತ, ಪಕ್ಷಹಿತ ಮುಖ್ಯ. ನಿಷ್ಠುರವಾಗಿ ಅಭಿಪ್ರಾಯ ವ್ಯಕ್ತಪಡಿಸುವವರನ್ನು ಅಲ್ಲಿ ಸಹಿಸುವುದಿಲ್ಲ. ಅಂತೆಯೇ ನಮ್ಮ ಸಂಸದರು ಕರ್ನಾಟಕದ ಅಭಿವೃದ್ಧಿ, ಅನುದಾನ ವಿಷಯದಲ್ಲಿ ಕೇಂದ್ರದಿಂದ ಏನೇ ತಾರತಮ್ಯವಾದರೂ ಚಕಾರ ಎತ್ತುವುದಿಲ್ಲ.

ನೈತಿಕತೆ, ಆತ್ಮಸಾಕ್ಷಿ ಶಬ್ದಗಳಿಗೆ ರಾಜಕೀಯದಲ್ಲಿ ಈಗ ಯಾವ ಅರ್ಥವೂ ಉಳಿದಿಲ್ಲ. ಅಂತಹ ನೈತಿಕ ಧೈರ್ಯ, ಸ್ಥೈರ್ಯವಿರುವ ವ್ಯಕ್ತಿಗಳು ಯಾವ ಪಕ್ಷದಲ್ಲಿ ಇದ್ದಾರೆ? ಹೀಗಾಗಿ, ಏನೇ ದುರಾಚಾರ ನಡೆದರೂ ಸ್ವಪಕ್ಷೀಯರು ಧ್ವನಿ ಎತ್ತುವುದಿಲ್ಲ. ಕೂಡಲೇ, ಹೈಕಮಾಂಡ್ ಮಧ್ಯಪ್ರವೇಶಿಸಿ ಎಚ್ಚರಿಕೆ ನೀಡುತ್ತದೆ.

ರಾಷ್ಟ್ರೀಯ ಪಕ್ಷಗಳಿಗೂ ಒಂದಿಷ್ಟು ಶಿಸ್ತು ಬೇಕು ನಿಜ. ಆದರೆ ಅದು ರಾಷ್ಟ್ರಹಿತ, ನಾಡಹಿತಕ್ಕಿಂತ ಮಿಗಿಲಾದದ್ದು ಅಲ್ಲ. ನ್ಯಾಯೋಚಿತ ಆಡಳಿತ ವ್ಯವಸ್ಥೆಯ ಬದಲು ಪ್ರತೀಕಾರಾತ್ಮಕ ಆಡಳಿತ ವ್ಯವಸ್ಥೆ ಅನ್ನುವುದು ಇಂದಿನ ಸರ್ಕಾರಗಳ ಮಾರ್ಗವಾಗಿದೆ. ಹಾಗಾಗಿ, ತುರ್ತು ಪರಿಸ್ಥಿತಿಯ ನೆರಳು ಸದಾ ದೇಶದ ಮೇಲೆ ಕವಿದಿರುವಂತೆ ಭಾಸವಾಗುತ್ತದೆ. ಇದು ನಿಜವಾದ ಕಾಲದ ಕೇಡು.

ವೆಂಕಟೇಶ ಮಾಚಕನೂರ, ಧಾರವಾಡ

ಅಸ್ಪೃಶ್ಯತೆಗೆ ಕೊನೆ ಇಲ್ಲವೇ?

ಚಾಮರಾಜನಗರ ಜಿಲ್ಲೆಯ ಹೊಮ್ಮ ಗ್ರಾಮದ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಮಹಿಳೆಯು ಅಡುಗೆ ಮಾಡುತ್ತಿದ್ದಾರೆ ಎಂಬ ಕಾರಣಕ್ಕೆ ಪೋಷಕರು, ತಮ್ಮ ಮಕ್ಕಳನ್ನು ಶಾಲೆ ಬಿಡಿಸುತ್ತಿರುವುದು ವರದಿಯಾಗಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಸಂವಿಧಾನ ಜಾರಿಯಾಗಿ ಮುಕ್ಕಾಲು ಶತಮಾನ ಕಳೆದಿದೆ. ಜಾತಿ ಕಾರಣಕ್ಕಾಗಿ ನಡೆಯುತ್ತಿರುವ ಇಂತಹ ಪ್ರಕರಣಗಳು ಹೆಚ್ಚುತ್ತಲೇ ಇವೆ. ಆಳುವ ವರ್ಗ ಏನು ಮಾಡುತ್ತಿದೆ? ಹಳ್ಳಿಗಳಲ್ಲಿ ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ. ಇದರ ನಿರ್ಮೂಲನೆಗೆ ಜಾಗೃತಿ ಮೂಡಿಸಬೇಕಿದೆ.

ರಾಮಚಂದ್ರ ಮಂಚಲದೊರೆ, ಗುಬ್ಬಿ

ವಾಸ್ತವಕ್ಕೆ ಹಿಡಿದ ಕನ್ನಡಿ

'ಶಿಕ್ಷಣ ವ್ಯವಸ್ಥೆ: ಕಲ್ಪನಾತೀತ ದುರವಸ್ಥೆ' ಲೇಖನದಲ್ಲಿ (ಪ್ರ.ವಾ., ಜೂನ್ 25) ಸಿ.ಎನ್. ರಾಮಚಂದ್ರನ್ ಅವರು, ವಾಸ್ತವದ ಮೇಲೆ ಬೆಳಕು ಚೆಲ್ಲಿದ್ದಾರೆ. ಸರ್ಕಾರಿ ಶಾಲೆಗಳಲ್ಲಿರುವ ನುರಿತ ಶಿಕ್ಷಕರು ಯಾವುದೇ ಖಾಸಗಿ ಶಾಲೆಯಲ್ಲಿಲ್ಲ.

ಆದರೆ, ಈ ಅವ್ಯವಸ್ಥೆಗೆ ಮೂಲ ಕಾರಣ ಸರಿಯಾದ ಉತ್ತರದಾಯಿತ್ವ ಇಲ್ಲದಿರುವುದಾಗಿದೆ. ಸರ್ಕಾರಿ ಶಾಲೆ, ಕಾಲೇಜುಗಳಿಗೆ ಸೇರುವ ಬಹುತೇಕ ವಿದ್ಯಾರ್ಥಿಗಳು ಸಾಮಾಜಿಕವಾಗಿ, ಆರ್ಥಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದವರಾಗಿರುತ್ತಾರೆ. ಹಾಗಾಗಿ, ಸರಿಯಾದ ಉತ್ತರದಾಯಿತ್ವ ನಿಗದಿಪಡಿಸುವುದು ಸರ್ಕಾರದ ಜವಾಬ್ದಾರಿ.

ಅಭಿಷೇಕ್ ಎನ್., ಬೇಲೂರು

ಕರಗಬಲ್ಲ ಹಾಲಿನ ಪೊಟ್ಟಣ ಸ್ವಾಗತಾರ್ಹ

ಪಾಲಿಲ್ಯಾಕ್ಟಿಕ್ ಆಮ್ಲ ಎಂಬ ಸಸ್ಯಜನ್ಯ ರಾಸಾಯನಿಕದಿಂದ ತಯಾರಿಸುವ ಮಣ್ಣಿನಲ್ಲಿ ಕರಗಬಲ್ಲ ಪ್ಲಾಸ್ಟಿಕ್‌ನಲ್ಲಿ ಗ್ರಾಹಕರಿಗೆ ಹಾಲಿನ ಉತ್ಪನ್ನಗಳನ್ನು ತಲುಪಿಸಲು ಬೆಂಗಳೂರು ಹಾಲು ಒಕ್ಕೂಟ (ಬಮೂಲ್) ಮುಂದಾಗಿರುವುದು ಉತ್ತಮ ನಡೆ. ಮುಂಬರುವ ದಿನಗಳಲ್ಲಿ ಕೆಎಂಎಫ್ ತನ್ನ ಎಲ್ಲ ಹಾಲಿನ ಉತ್ಪನ್ನಗಳನ್ನು ಇದೇ ಮಾದರಿಯಲ್ಲಿ ಮಾರುಕಟ್ಟೆಗೆ ಒದಗಿಸುವಂತಾಗಲಿ. ಆರಂಭಿಕವಾಗಿ ಇದು ಕೊಂಚ ಹೆಚ್ಚು ವೆಚ್ಚದಾಯಕವಾದರೂ ಬಳಕೆಯ ವ್ಯಾಪ್ತಿ ಹಿಗ್ಗಿದಂತೆ ಅದರ ವೆಚ್ಚ ಖಂಡಿತ ತಗ್ಗಬಲ್ಲದು. ಮಾರುಕಟ್ಟೆಯಲ್ಲಿ ಇತರ ಸಹಕಾರ ಹಾಗೂ ಖಾಸಗಿ ವಲಯದಿಂದ ತೀವ್ರ ಸ್ಪರ್ಧೆ ಎದುರಿಸುತ್ತಿರುವ 'ನಂದಿನಿ'ಯ ನೈತಿಕ ಬಲವೂ ಇದರಿಂದ ಮತ್ತಷ್ಟು ಹಿಗ್ಗಬಲ್ಲದು. ಇಂಥದೊಂದು ತಾಜಾ ಯಶೋಗಾಥೆಗೆ ನಾಡು ಕಾಯುತ್ತಿದೆ.

ಕೇಶವ ಎಚ್. ಕೊರ್ಸೆ, ಶಿರಸಿ

ವಿದ್ಯಾರ್ಥಿಗಳು ಭಾಷಾ ದಲಿತರು

ರಘುನಾಥ ಚ.ಹ. ಅವರ 'ಅತಿಯಾದರೆ ಭಾವುಕತೆಯೂ ಕುತ್ತು' ಲೇಖನವು (ಪ್ರ.ವಾ., ಜೂನ್ 26) ಕನ್ನಡಿಗರ ಮನಸ್ಸಿಗೆ ಕನ್ನಡಿ ಹಿಡಿದಿದೆ. ಬೆಂಗಳೂರು, ಮೈಸೂರು ಸೇರಿ ರಾಜ್ಯದ ನಗರ ಪ್ರದೇಶಗಳ ಶಾಲೆ, ಕಾಲೇಜುಗಳಲ್ಲಿ ಕನ್ನಡ ಮಾತನಾಡುವ ವಿದ್ಯಾರ್ಥಿಗಳು ಭಾಷಾ ದಲಿತರಾಗಿದ್ದಾರೆ! ಕರ್ನಾಟಕದಲ್ಲಿರುವ ಕೇಂದ್ರ ಸರ್ಕಾರದ ಅಧೀನದ ಸಂಸ್ಥೆಗಳಲ್ಲಿ ಕನ್ನಡ ಕರಗುತ್ತಿದೆ. ಕಮಲ್ ಹಾಸನ್ ಮಾತಿಗೆ ಕೋಪಗೊಳ್ಳುವ ಕನ್ನಡಿಗರು, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಹೇಳಿಕೆಗೆ, ಜಾಣ ಕುರುಡುತನ ಪ್ರದರ್ಶಿಸಿದ್ದು ವಿಪರ್ಯಾಸ.

ತಮ್ಮ ಬಲಹೀನತೆಯನ್ನು ಔದಾರ್ಯದ ಹೆಸರಿನಲ್ಲಿ ಪ್ರಚಾರ ಪಡೆಯುವ ಕನ್ನಡಿಗರು, ಕರ್ಣನಂತೆ ಆಗದೆ ಕಲಿಭೀಮರಾಗಿ ಕುವೆಂಪು ಹಾಗೂ ಇತರ ಕನ್ನಡದ ಕವಿಗಳ ಕನ್ನಡದ ಕನಸನ್ನು ನನಸಾಗಿಸಲಿ.

ಮಂಜುಳಾ ರಾಮಶೇಷ, ಹುಲಿಮಂಗಲ

ಜನರಿಗೆ ನಿತ್ಯ ಮನರಂಜನೆ

ರಾಜ್ಯದಲ್ಲಿ ಲಂಚಾವತಾರ ನಾಟಕವು ಸಾರ್ವಜನಿಕರಿಗೆ ನಿತ್ಯವೂ ಮನರಂಜನೆ ನೀಡುತ್ತಿದೆ. ಒಂದಾದ ನಂತರ ಒಂದು ಎಪಿಸೋಡ್ ಹೊರಬರುತ್ತಲೇ ಇದೆ. ದೇಶದಲ್ಲಿ ಮೂರು ರಾಜ್ಯಗಳಲ್ಲಿ ಮಾತ್ರವೇ ಕಾಂಗ್ರೆಸ್ ಅಧಿಕಾರದಲ್ಲಿದೆ. ಅಧಿಕಾರಕ್ಕೆ ಬಂದು ಎರಡು ವರ್ಷವಾದರೂ ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದ ಮೇಲೆ ಮಾಡಲಾಗಿದ್ದ ಭ್ರಷ್ಟಾಚಾರ ಆರೋಪಗಳಲ್ಲಿ ಒಂದನ್ನಾದರೂ ಸಾಬೀತುಪಡಿಸುವಲ್ಲಿ ಯಶಸ್ವಿಯಾಗಿಲ್ಲ. ಭ್ರಷ್ಟಾಚಾರ ನಿಯಂತ್ರಿಸಿ, ತನ್ನ ಕಾರ್ಯವೈಖರಿ ತಿದ್ದಿಕೊಳ್ಳುವ ಸ್ಥಿತಿಯಲ್ಲಿ ರಾಜ್ಯ ಸರ್ಕಾರ ಇದ್ದಂತಿಲ್ಲ.

ಶಿವರಾಮಕೃಷ್ಣ, ಮೈಸೂರು

ಚುರುಮುರಿ

ಬಿಲ್ಲು–ಬಾಣ!

● ಬಿ.ಎನ್. ಮಲ್ಲೇಶ್

'ಲೇ ಗುಡ್ಡೆ, ಈಗ ಯಾರ್ಯಾರೋ ಜಗಳ ಮಾಡ್ತಿರೋವಾಗ ಇನ್ಯಾರೋ ಬಂದು, ನಾನೇಳ್ತಿದೀನಿ, ಈಗ ನಿಮ್ ಜಗಳ ಮುಗೀತು, ಇಬ್ರೂ ತೆಪ್ಪಗಿರಿ ಅನ್ನೋದಾ?' ಹರಟೆಕಟ್ಟೇಲಿ ದುಬ್ಬೀರ ಕೇಳಿದ.

'ಅನ್ನೋದು. ಅದಕ್ಕೆ 'ಟ್ರಂಪ್ ಸಿಂಡ್ರೋಮ್' ಅಂತಾರೆ'.

'ಟ್ರಂಪ್ ಸಿಂಡ್ರೋಮಾ? ಅಂದ್ರೆ?' ಮಂಜಮ್ಮ ಕೇಳಿದಳು.

'ಅಂದ್ರೇ ಮೂಗು ತೂರಿಸೋ ಕಾಯಿಲೆ ಅಂತ. ಸುಮ್ನಿದ್ದೋರ್ನ ಜಗಳಕ್ಕೆ ಹಚ್ಚೋದು, ಅಥ್ವ ಜಗಳ ಆಡ್ತಿದ್ದೋರ ಹತ್ರ ಹೋಗಿ, ಜಗಳ ನಿಲ್ಸಿ, ಶಾಂತಿ ಶಾಂತಿ ಅನ್ನೋದು. ಆಮೇಲೆ ಈ ಜಗಳ ನಿಲ್ಸಿದ್ದು ನಾನೇ ನಾನೇ ಅಂತ ಕೊಚ್ಕಳಾದು...'

'ಅದ್ರಿಂದ ಅವ್ರಿಗೇನ್ ಲಾಭ?'

'ನೊಬೆಲ್ ಶಾಂತಿ ಪ್ರಶಸ್ತಿ ಮೇಲೆ ಕಣ್ಣು... ಆದ್ರೆ ಅವ್ರಿಗೆ ಶಾಂತಿನೂ ಸಿಗಲ್ಲ, ನೊಬೆಲ್ಲೂ ಸಿಗಲ್ಲ...'

'ಅಲ್ಲ, ಅವ್ರು ಜಗಳ ಬಿಡಿಸೋದ್ರಲ್ಲಿ ಎಕ್ಸ್‌ಪರ್ಟ್ ಅಂತೆ? ಎಂತೆಂಥ ಯುದ್ಧಾನೇ ನಿಲ್ಸಿದಾರಂತೆ?' ಕೊಟ್ರೇಶಿ ಕೇಳಿದ.

'ನಿನ್ತೆಲಿ, ಅವ್ರಿಗೆ ತಾಕತ್ತಿದ್ರೆ ನಮ್ ವೈ ಅಂಡ್ ವೈ ಜಗಳ ನಿಲ್ಸೋಕೇಳು...'

'ವೈ ಅಂಡ್ ವೈ? ಅಂದ್ರೆ?'

'ಯತ್ನಾಳು, ಯಡ್ಯೂರಪ್ಪ...'

'ಅದಾಗಲ್ಲ ಬಿಡು, ಬೇರೆ?'

'ಡಿಕೆ–ಎಚ್‌ಡಿಕೆ ಏಟು, ಎದಿರೇಟು ನಿಲ್ಸೋಕೇಳು...'

'ಅದೂ ಆಗಲ್ಲ, ಮತ್ತೆ?'

'ಹೋಗ್ಲಿ, ನಮ್ ತೆಪರೇಸೀನ ಅವನೆಂಡ್ತಿ ಹೊಡಿಯೋದನ್ನಾದ್ರೂ ನಿಲ್ಸೋಕಾಗುತ್ತಾ?'

'ಇದಂತೂ ಸಾಧ್ಯಾನೇ ಇಲ್ಲ, ಬಿಟ್ಹಾಕು... ಬೇರೆ ಏನು ಸುದ್ದಿ?'

'ಬೇರೆ ಸುದ್ದೀನಾ? ಬಿಲ್ಲುಗಳು ಅಲ್ಲಿ, ಬಾಣಗಳು ಇಲ್ಲಿ...'

'ಬಿಲ್ಲು ಅಲ್ಲಿ, ಬಾಣ ಇಲ್ಲಿ? ಏನು ಹಂಗಂದ್ರೆ?'

'ಅರ್ಥ ಆಗ್ಲಿಲ್ವಾ? ನಮ್ ಸಿದ್ರಾಮಣ್ಣ ಏಳು ಬಿಲ್ಲು (ಬಿಲ್) ತಗಂಡು ಡೆಲ್ಲಿಗೋಗಿದ್ರು... ಬಿಲ್ಲಿಲ್ಲದಿದ್ರೂ ಇಲ್ಲಿ ಶಾಸಕರ ಲಂಚದ ಬಾಣಗಳು ಹಾರಾಡ್ತಾ ಇದ್ವು ಅಂದೆ...'

'ಅಲೆಲೆ, ಎಲ್ಲಿಂದೆಲ್ಲಿಗೆ ಲಿಂಕ್ ಮಾಡಿದ್ಯೋ ಗುಡ್ಡೆ' ಎಂದ ದುಬ್ಬೀರ. ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ಎಲ್ಲರೂ ರೈತರ ಮಕ್ಕಳೇ, ಆದರೆ...

ಚನ್ನರಾಯಪಟ್ಟಣದ ರೈತರ ಹೋರಾಟವನ್ನು ಸರ್ಕಾರ ವಿವೇಕದಿಂದ ನೋಡಬೇಕು. ನಾಳೆಗಳ ಬಗ್ಗೆಯೂ ಯೋಚಿಸುವುದು ಸರ್ಕಾರದ ಹೊಣೆಗಾರಿಕೆ

● ನಾ. ದಿವಾಕರ

ಭಾರತದ ರಾಜಕೀಯ ಸಂಕಥನಗಳಲ್ಲಿ ಪಕ್ಷಾತೀತವಾಗಿ ಕಾಣಬಹುದಾದ ಒಂದು ಸಮಾನ ಎಳೆ ರೈತರಿಗೆ ಸಂಬಂಧಿಸಿದ್ದು. ಆ ಸಮಾನ ಎಳೆ, ರೈತರನ್ನು 'ಅನ್ನದಾತರು' ಎಂದು ನೋಡುವ ಹೃದಯ ವೈಶಾಲ್ಯ ಮತ್ತು 'ನಾವೂ ಮಣ್ಣಿನ ಮಕ್ಕಳೇ' ಎಂದು ಬೆನ್ನುತಟ್ಟಿಕೊಳ್ಳುವ ಜಾಣ್ಮೆಗೆ ಸಂಬಂಧಿಸಿದ್ದು.

ಆದರೆ, 1980ರ ನರಗುಂದ, ನವಲಗುಂದ ಬಂಡಾಯದಿಂದ ಸದ್ಯದ ದೇವನಹಳ್ಳಿ–ಚನ್ನರಾಯಪಟ್ಟಣದವರೆಗೆ, ನವ ಉದಾರವಾದಿ ಆರ್ಥಿಕತೆಗೆ ಅನುಗುಣವಾಗಿ ಹಾಗೂ ಬೃಹತ್ ಉದ್ಯಮಗಳ ಏಳಿಗೆಗಾಗಿ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ, ತಮ್ಮ ಭೂಮಿಗಾಗಿ ಹೋರಾಡುವ ರೈತರ ವಿರುದ್ಧ ಕ್ರೂರ ದಬ್ಬಾಳಿಕೆ ನಡೆಸುವ ಒಂದು ಪರಂಪರೆಯನ್ನೇ ಗುರುತಿಸಬಹುದು.

ಪ್ರಸ್ತುತ, ಚನ್ನರಾಯಪಟ್ಟಣ ಭೂಸ್ವಾಧೀನ ಪ್ರಕ್ರಿಯೆಯ ಮೂಲ ಇರುವುದು ಕೇಂದ್ರ ರಕ್ಷಣಾ ಸಚಿವಾಲಯದ ವ್ಯಾಪ್ತಿಗೆ ಬರುವ 'ಹೈಟೆಕ್ ಡಿಫೆನ್ಸ್ ಮತ್ತು ಏರೊಸ್ಪೇಸ್ ಪಾರ್ಕ್' ನಿರ್ಮಿಸುವ ಯೋಜನೆಯಲ್ಲಿ. ಈ ಏರೊಸ್ಪೇಸ್ ಪಾರ್ಕ್ ನಿರ್ಮಾಣಕ್ಕೆ ಅಗತ್ಯವಾದ ಅತಿ ಎತ್ತರದ ಭೂಪ್ರದೇಶ ದಕ್ಷಿಣ ಭಾರತದ ಮತ್ತಾವುದೇ ರಾಜ್ಯದಲ್ಲಾಗಲೀ, ಕರ್ನಾಟಕದ ಇತರ ಭಾಗಗಳಲ್ಲಾಗಲೀ ಲಭ್ಯವಿಲ್ಲ ಎಂದು ಹೇಳಲಾಗುತ್ತದೆ.

ಆದರೆ, 2021ರ ಅಧಿಸೂಚನೆ ಮೂಲಕ ಈ ಪ್ರದೇಶದ 13 ಗ್ರಾಮಗಳ 1,777 ಎಕರೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಸರ್ಕಾರದ ಆದೇಶಕ್ಕೆ ರೈತ ಸಮುದಾಯ ಆರಂಭದಿಂದ ವಿರೋಧ ವ್ಯಕ್ತಪಡಿಸುತ್ತಲೇ ಬಂದಿದೆ. ತಮ್ಮ ಜೀವನೋಪಾಯಕ್ಕೆ ಆಧಾರವಾದ ಫಲವತ್ತಾದ ಭೂಮಿ ಕಳೆದುಕೊಂಡು, ಮುಂದೊಂದು ದಿನ ಅಲ್ಲಿಯೇ ನಿರ್ಮಾಣವಾಗುವ ಆಧುನಿಕ ನಗರ ನಾಗರಿಕತೆಯಲ್ಲಿ ತಮ್ಮ ಬದುಕು ಅತಂತ್ರವಾಗುವ ಆತಂಕ ರೈತರದ್ದಾಗಿದೆ.

ರೈತರ ಭೂಮಿ ವಶಪಡಿಸಿಕೊಳ್ಳುವ ಪ್ರಕ್ರಿಯೆಯಲ್ಲಿ, ಯುಪಿಎ ಸರ್ಕಾರವು 2013ರಲ್ಲಿ ಜಾರಿಗೊಳಿಸಿರುವ ಭೂಸ್ವಾಧೀನ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಲಾಗಿದೆ. ಈ ಪರಿಸರದ ಗ್ರಾಮ ಮತ್ತು ಹೋಬಳಿಗಳ ರೈತರು ಈಗಾಗಲೇ ಕೈಗಾರಿಕಾ ಅಭಿವೃದ್ಧಿಗಾಗಿ ತಮ್ಮ ಕೃಷಿ ಭೂಮಿ ಕಳೆದುಕೊಂಡಿದ್ದಾರೆ. ಈಗ 'ಹೈಟೆಕ್ ಡಿಫೆನ್ಸ್ ಮತ್ತು ಏರೊಸ್ಪೇಸ್ ಪಾರ್ಕ್' ಯೋಜನೆಗಾಗಿ ಮತ್ತೆ ಭೂಮಿ ಕಳೆದುಕೊಳ್ಳುವ ಆತಂಕದಲ್ಲಿದ್ದಾರೆ.

ಏರೊಸ್ಪೇಸ್ ಯೋಜನೆ ಮತ್ತು ಭೂಸ್ವಾಧೀನ ಪ್ರಕ್ರಿಯೆ ವಿರುದ್ಧ ಹೋರಾಡುತ್ತಿರುವ ರೈತರು ಮೂರು ವರ್ಷಗಳಿಂದಲೂ ನಿರಂತರ ಸಂಘರ್ಷದಲ್ಲಿದ್ದಾರೆ. ಕಾಂಗ್ರೆಸ್ ನೇತೃತ್ವದ ಈಗಿನ ಸರ್ಕಾರವು ರೈತರ ಹಕ್ಕೊತ್ತಾಯಗಳಿಗೆ ಮಣಿದು, ಕೆಲವು ಗ್ರಾಮಗಳಲ್ಲಿನ ಕೃಷಿ ಮತ್ತು ಜನವಸತಿ ಪ್ರದೇಶಗಳನ್ನು ಹೊಂದಿರುವ 495 ಎಕರೆ ಕೃಷಿ ಭೂಮಿಯ ಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಲು ನಿರ್ಧರಿಸಿದೆ.

ಆದರೆ, ಇನ್ನುಳಿದ 1,282 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸರ್ಕಾರವು ದೃಢ ನಿರ್ಧಾರ ಮಾಡಿದ್ದು, ಪರಿಹಾರದ ರೂಪದಲ್ಲಿ ಸಂತ್ರಸ್ತ ರೈತರಿಗೆ ಅಭಿವೃದ್ಧಿಪಡಿಸಿದ ಒಂದು ಎಕರೆ ಭೂಮಿಯಲ್ಲಿ 10,771 ಚದರಡಿ ಜಾಗ ಕೊಡಲು ನಿರ್ಧರಿಸಿದೆ. ಈ ಜಾಗವನ್ನೂ ರೈತರು ವಾಣಿಜ್ಯ ಚಟುವಟಿಕೆಗಳಿಗೆ ಮಾತ್ರ ಬಳಸಬಹುದಾಗಿರುತ್ತದೆ. ಈ ಷರತ್ತುಗಳಿಗೆ ಒಪ್ಪಿ ರೈತರು ತಮ್ಮ ಮುಷ್ಕರ ಕೈಬಿಡುವಂತೆ ಸರ್ಕಾರ ಒತ್ತಡ ಹೇರುತ್ತಿದೆ.

ಕಾರ್ಪೊರೇಟ್ ಸಂಸ್ಥೆಗಳ ಮಾರುಕಟ್ಟೆ ನೀತಿ ಮತ್ತು ಮೂಲ ಸೌಕರ್ಯ ಆಧಾರಿತ ಆರ್ಥಿಕ ನೀತಿಗಳಿಗೆ ಅನುಗುಣವಾಗಿ ಜಾರಿಗೊಳಿಸಲಾಗುವ ಯೋಜನೆಗಳು ಕೃಷಿ ಭೂಮಿಯನ್ನು ಬೆಂಗಾಡು ಮಾಡುವುದರ ಜೊತೆಗೆ, ರೈತ ಸಮುದಾಯದ ಭವಿಷ್ಯದ ತಲೆಮಾರುಗಳ ಪಾಲಿಗೆ ತ್ರಿಶಂಕು ಜಗತ್ತನ್ನೇ ಸೃಷ್ಟಿಸುತ್ತವೆ. ರೈತರ ಸದ್ಯದ ಸಮಸ್ಯೆಗಳು ಹಾಗೂ ಜೀವನದ ಮೂಲಾಧಾರ ಕೃಷಿಯಿಂದ ವಿಮುಖರಾಗಿ ನಗರೀಕರಣಕ್ಕೆ ಒಳಗಾಗುವ ರೈತ ಕುಟುಂಬಗಳ ಮುಂದಿನ ತಲೆಮಾರು ಎದುರಿಸಬಹುದಾದ ಸಂಕೀರ್ಣ ಸಮಸ್ಯೆಗಳ ಬಗ್ಗೆ ಯಾವ ಸರ್ಕಾರಗಳೂ ಗಂಭೀರವಾಗಿ ಯೋಚಿಸುತ್ತಿಲ್ಲ.

ಆಧುನಿಕ ಆರ್ಥಿಕ ಅಭಿವೃದ್ಧಿ ಮಾದರಿಗಳಲ್ಲಿ ಯೋಜನೆಗಳಿಂದ ಆಗುವ ಆರ್ಥಿಕ ವೆಚ್ಚವನ್ನು ಮಾತ್ರ ಪರಿಗಣಿಸಲಾಗುತ್ತದೆಯೇ ಹೊರತು ಸಾಮಾಜಿಕ ವೆಚ್ಚವನ್ನು ಅಲ್ಲ. ಹಾಗಾಗಿ ವರ್ತಮಾನ– ಭವಿಷ್ಯದ ತಳಸಮಾಜದ ಜೀವನೋಪಾಯ ಮಾರ್ಗಗಳು, ಆರ್ಥಿಕ ಭದ್ರತೆ ಮತ್ತು ಸಾಮಾಜಿಕ ಪಲ್ಲಟಗಳು ಇಲ್ಲಿ ಚರ್ಚೆಗೊಳಗಾಗುವುದೇ ಇಲ್ಲ.

ರೈತರ ಭೂ ಹೋರಾಟದಲ್ಲಿ ಇರುವುದು ಬರೀ ಭೂಮಿಯ ಪ್ರಶ್ನೆಯಲ್ಲ, ಅದು ಭವಿಷ್ಯದ ತಲೆಮಾರಿನ ಭವಿಷ್ಯದ ಪ್ರಶ್ನೆಯೂ ಹೌದು. ಇಂತಹ ಹೋರಾಟಗಳನ್ನು ನಿರ್ವಹಿಸುವಾಗ ಸರ್ಕಾರಗಳಿಗೆ ಸಂಯಮ, ಸಹಾನುಭೂತಿ, ಪರಾನುಭೂತಿ ಮತ್ತು ಸಂವೇದನೆ ಇರುವುದು ಮುಖ್ಯವಾಗುತ್ತದೆ. ಪೊಲೀಸ್ ದಬ್ಬಾಳಿಕೆಗೆ ಮುಂದಾಗುವ ಬದಲು, ಮುಖ್ಯಮಂತ್ರಿ, ಸಚಿವರು, ಜನಪ್ರತಿನಿಧಿಗಳು ಕೂಡಲೇ ಮಧ್ಯಪ್ರವೇಶಿಸಿ, ರೈತ ಮುಖಂಡರೊಡನೆ ಆರೋಗ್ಯಕರ ಸಮಾಲೋಚನೆ ನಡೆಸಿ, ಪರಿಹರಿಸುವುದು ವಿವೇಕಯುತ ಕ್ರಮವಾಗುತ್ತದೆ.

ನಮ್ಮ ಜನಪ್ರತಿನಿಧಿಗಳೆಲ್ಲರೂ 'ತಾವೂ ಮಣ್ಣಿನ ಮಕ್ಕಳೇ?' ಎಂದು ಬೆನ್ನುತಟ್ಟಿಕೊಳ್ಳುತ್ತಾರೆ. ಆದರೆ, ಮಣ್ಣಿನ ಮಕ್ಕಳ ಹಿತಾಸಕ್ತಿಗೆ ಧಕ್ಕೆಯುಂಟಾಗಿ ಅವರು ಮುಷ್ಕರ ಹೂಡಿದಾಗ ಕ್ರೂರವಾಗಿ ಹತ್ತಿಕ್ಕಲು ಮುಂದಾಗುತ್ತಾರೆ. ಇದು ಪ್ರಜಾತಂತ್ರದ ಚೋದ್ಯವಷ್ಟೇ ಅಲ್ಲ, ಮಾನವೀಯತೆಯ ವಿಡಂಬನೆಯೂ ಹೌದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನಲ್ಲಿ ಸರ್ಕಾರವು ಡಿಫೆನ್ಸ್ ಏರೋಸ್ಪೇಸ್ ಪಾರ್ಕ್ ಅಭಿವೃದ್ಧಿಪಡಿಸಲು ಮುಂದಾಗಿರುವುದಕ್ಕೆ ಸ್ಥಳೀಯರಿಂದ ತೀವ್ರ ವಿರೋಧ ವ್ಯಕ್ತವಾಗಿದೆ. ಕೆಐಎಡಿಬಿಯು ಅದಕ್ಕಾಗಿ 1,777 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸಿದ್ಧತೆ ನಡೆಸಿದೆ. ಅದನ್ನು ವಿರೋಧಿಸಿ ರೈತರು ಸಾವಿರಕ್ಕೂ ಹೆಚ್ಚು ದಿನಗಳಿಂದ ನಿರಂತರ ಹೋರಾಟ ನಡೆಸುತ್ತಿದ್ದಾರೆ. ರೈತರ ಜತೆಗೆ ವಿವಿಧ ಸಂಘಟನೆಗಳು, ಹೋರಾಟಗಾರರು, ನ್ಯಾಯವಾದಿಗಳು, ಸಿನಿಮಾ ನಟರು ಕೈಜೋಡಿಸಿದ್ದಾರೆ. ತನ್ನ ನಿರ್ಧಾರದಿಂದ ಹಿಂದೆ ಸರಿಯಲು ಸರ್ಕಾರಕ್ಕೆ ರೈತರು ಗಡುವು ನೀಡಿದ್ದು, ಹೋರಾಟ ಪ್ರಮುಖ ಘಟ್ಟ ತಲುಪಿದೆ

ದೇವನಹಳ್ಳಿ: ಭೂಸ್ವಾಧೀನ ವಿರೋಧಿಸಿ ಮೂರು ವರ್ಷಗಳಿಂದ ಪ್ರತಿಭಟನೆ

ಭೂಮಿ, ಬದುಕಿಗಾಗಿ 'ಸಾವಿರದ' ಹೋರಾಟ

• ಬಿ.ವಿ.ಶ್ರೀನಾಥ್, ಸಂದೀಪ್

ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿ ನಲ್ಲಪ್ಪನಹಳ್ಳಿಯ ರೈತ ಮಹಿಳೆ ಲಕ್ಷ್ಮಮ್ಮ ಅವರಿಗೆ ಈಗ ಬದುಕಿನ ಪ್ರಶ್ನೆ ಎದುರಾಗಿದೆ. ಅವರಿಗಿದ್ದ ತುಂಡು ಜಮೀನನ್ನು ಸರ್ಕಾರ ವಶಪಡಿಸಿಕೊಳ್ಳಲು ಮುಂದಾಗಿದ್ದು, ಅವರಿಗೆ ಆಕಾಶವೇ ಕಳಚಿ ಮೇಲೆ ಬಿದ್ದಂತಾಗಿದೆ. ಜಮೀನನ್ನು ಸ್ವಾಧೀನ ಪಡಿಸಿಕೊಳ್ಳುತ್ತಿರುವುದರ ವಿರುದ್ಧ ಹೋರಾಟ ಮಾಡುತ್ತಿರುವ ಲಕ್ಷ್ಮಮ್ಮ ಅವರು, ಇದು ಅಸ್ತಿತ್ವದ ಹೋರಾಟ ಎಂದೇ ಹೇಳುತ್ತಿದ್ದಾರೆ.

ಇದು ಲಕ್ಷ್ಮಮ್ಮ ಒಬ್ಬರ ಕಥೆಯಲ್ಲ; ಈ ಭಾಗದ ಸುಮಾರು 3,000 ರೈತರ ಬದುಕಿಗೆ ಎದುರಾಗಿರುವ ಸಂಕಷ್ಟದ ಕಥೆ. ದೇವನಹಳ್ಳಿ ತಾಲ್ಲೂಕಿನಲ್ಲಿ ರಕ್ಷಣೆ ಮತ್ತು ಏರೋಸ್ಪೇಸ್ ಪಾರ್ಕ್ ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ರಾಜ್ಯ ಸರ್ಕಾರ ಅದಕ್ಕಾಗಿ ಚನ್ನರಾಯಪಟ್ಟಣ ಹೋಬಳಿಯ ನಾಲ್ಕು ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯ 13 ಗ್ರಾಮಗಳ 1,777 ಎಕರೆ ಭೂಮಿಯನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ (ಕೆಐಎಡಿಬಿ) ಮೂಲಕ ಸ್ವಾಧೀನಪಡಿಸಲು ಮುಂದಾಗಿದೆ. ಈಗಾಗಲೇ 10 ಗ್ರಾಮಗಳ 1,282 ಎಕರೆ ಜಮೀನು ಸ್ವಾಧೀನಕ್ಕೆ ಅಂತಿಮ ಅಧಿಸೂಚನೆಯನ್ನೂ ಹೊರಡಿಸಿದೆ. ಜಮೀನಿಗೆ ಸೂಕ್ತ ಪರಿಹಾರ ನೀಡುತ್ತೇವೆ, ಅದು ಬೇಡದಿದ್ದರೆ 10,771 ಚದರ ಅಡಿ ಅಭಿವೃದ್ಧಿಯಾದ ಭೂಮಿ ಕೊಡುತ್ತೇವೆ ಎನ್ನುತ್ತಿದೆ ಕೆಐಎಡಿಬಿ.

ಅಧಿಸೂಚನೆಗೆ ಒಳಪಟ್ಟಿರುವ ಭೂಮಿಯ ಪೈಕಿ ಶೇ 33ರಷ್ಟು ನೀರಾವರಿ, ಶೇ 50ರಷ್ಟು ಖುಷ್ಕಿ ಭೂಮಿ ಇದೆ. ಇಲ್ಲಿ ಸಾವಿರಾರು ಟನ್ ರಾಗಿ, ದ್ರಾಕ್ಷಿ, ಹೂವು, ತರಕಾರಿಯನ್ನು ಬೆಳೆಯಲಾಗುತ್ತಿದ್ದು, ಅದರಲ್ಲಿ ಹೆಚ್ಚಿನ ಪಾಲನ್ನು ಬೆಂಗಳೂರಿಗೆ ಪೂರೈಕೆ ಮಾಡಲಾಗುತ್ತಿದೆ. ಪ್ರತಿದಿನ 6,000-8,000 ಲೀಟರ್ ಹಾಲು ಉತ್ಪಾದನೆಯಾಗುತ್ತಿದೆ. ಉತ್ತಮ ಗುಣಮಟ್ಟದ ರೇಷ್ಮೆಗೂಡು ಮತ್ತು 'ಬೆಂಗಳೂರು ಬ್ಲೂ ದ್ರಾಕ್ಷಿ' ಉತ್ಪಾದನೆ ಕೂಡ ಇಲ್ಲಿನ ವಿಶೇಷವಾಗಿದ್ದು, ಕೃಷಿ ಮತ್ತು ಪೂರಕ ಉದ್ದಿಮೆಗಳಲ್ಲಿ ಜನ ತೊಡಗಿದ್ದಾರೆ.

ಇದು ಸಮೃದ್ಧ ಕೃಷಿ ಭೂಮಿಯಾಗಿರುವುದರಿಂದ, ಅದನ್ನು ನಂಬಿ ಸಾವಿರಾರು ಮಂದಿಯ ಜೀವನೋಪಾಯ ನಡೆಯುತ್ತಿರುವುದರಿಂದ ಭೂಮಿ ನೀಡುವುದಿಲ್ಲ ಎಂದು ಸ್ಥಳೀಯರು ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಈ ವ್ಯಾಪ್ತಿಯಲ್ಲಿರುವ ಬಹುತೇಕರು ಸಣ್ಣ ಹಿಡುವಳಿದಾರರು. ಈ ಭೂ ಸ್ವಾಧೀನದಿಂದ 600 ಕುಟುಂಬಗಳ ಮೇಲೆ ಪರಿಣಾಮ ಬೀರಲಿದ್ದು, 387 ಕುಟುಂಬಗಳು ಸಂಪೂರ್ಣ ಭೂರಹಿತವಾಗಲಿವೆ. ಈ ಕುಟುಂಬಗಳಿಗೆ ಸೇರಿದ ಸುಮಾರು 3,000 ಮಂದಿ ಜಮೀನನ್ನು ಕಳೆದುಕೊಳ್ಳಲಿದ್ದಾರೆ. ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಈ ಭೂಮಿ ಅವಲಂಬಿಸಿ ಬದುಕುತ್ತಿರುವವರ ಬದುಕೂ ಬೀದಿಗೆ ಬೀಳುವ ಆತಂಕ ವ್ಯಕ್ತವಾಗಿದೆ. ಇದರಲ್ಲಿ ಬಡ ರೈತರು, ದಲಿತರು, ಕೃಷಿ ಕೂಲಿಕಾರ್ಮಿಕರೂ ಸೇರಿದಂತೆ ಅನಕ್ಷರಸ್ಥರು, ಕಡಿಮೆ ವಿದ್ಯಾರ್ಹತೆ ಹೊಂದಿದವರು ಹೆಚ್ಚಾಗಿದ್ದಾರೆ.

ಭೂ ಸ್ವಾಧೀನ ವಿರೋಧಿಸಿ ರೈತರು 2022ರ ಏಪ್ರಿಲ್ 4 ರಿಂದ ಚನ್ನರಾಯಪಟ್ಟಣ ನಾಡ ಕಚೇರಿ ಎದುರು ಅನಿರ್ದಿಷ್ಟಾವಧಿ ಧರಣಿ ನಡೆಸುತ್ತಿದ್ದಾರೆ. ಮೂರು ವರ್ಷಗಳ ನಂತರವೂ ಅವರು ಪಟ್ಟು ಸಡಿಲಿಸುತ್ತಿಲ್ಲ. ಪ್ರತಿಭಟನನಿರತ ರೈತರ ಮೇಲೆ ದೇವನಹಳ್ಳಿ ಟೌನ್ ಠಾಣೆಯಲ್ಲಿ ಪ್ರಕರಣಗಳು ದಾಖಲಾಗಿದ್ದು, ರೈತರು, ಮಹಿಳೆಯರು ನ್ಯಾಯಾಲಯಕ್ಕೆ ಅಲೆಯುವಂತಾಗಿದೆ. 75ನೇ ಸ್ವಾತಂತ್ರ್ಯೋತ್ಸವ ಸಮಾರಂಭದ ವೇಳೆ ಪ್ರತಿಭಟನೆ ಮಾಡುತ್ತಿದ್ದ ರೈತರ ಮೇಲೆ ಲಾಠಿ ಚಾರ್ಜ್ ಮಾಡಲಾಗಿತ್ತು. ಇಂಥ ಅನೇಕ ಘಟನೆಗಳು ನಡೆದಿವೆ, ನಡೆಯುತ್ತಲೇ ಇವೆ. ಸರ್ಕಾರ ಸಾಧ್ಯವಿರುವ ರೀತಿಯಲ್ಲೆಲ್ಲ ಹೋರಾಟ ಹತ್ತಿಕ್ಕಲು ಯತ್ನಿಸಿದೆ ಎನ್ನುವುದು ರೈತರ ಆರೋಪ. ಆದರೂ, ಇದು ತಮ್ಮ ಬದುಕಿನ ಪ್ರಶ್ನೆ. ಹಿಂದೆ ಸರಿಯುವುದಿಲ್ಲ ಎನ್ನುವುದು ಅವರ ಖಚಿತ ನುಡಿ. ರೈತರ ಹೋರಾಟಕ್ಕೆ ಅನೇಕ ಸಂಘಟನೆಗಳು, ಸಾಮಾಜಿಕ ಕಾರ್ಯಕರ್ತರು, ನ್ಯಾಯವಾದಿಗಳು, ಸಿನಿಮಾ ನಟರು ಬೆಂಬಲ ವ್ಯಕ್ತಪಡಿಸಿದ್ದಾರೆ. ದೇವನಹಳ್ಳಿ ಚಲೋ ಕೂಡ ನಡೆಸಿದ್ದಾರೆ.

ಕೆಐಎಡಿಬಿ ಪ್ರಾಥಮಿಕ ಅಧಿಸೂಚನೆ (ಆಗಸ್ಟ್ 30, 2021) ಹೊರಡಿಸಿದ್ದು 13 ಗ್ರಾಮಗಳ 1,777 ಎಕರೆ ಸ್ವಾಧೀನಕ್ಕೆ. ನಂತರ 2024ರ ಜುಲೈ 28ರಂದು ಎರಡು ಹಳ್ಳಿಗಳು ಮತ್ತು ಈ ವರ್ಷದ ಏಪ್ರಿಲ್ 16ರಂದು ಎಂಟು ಹಳ್ಳಿಗಳ ವ್ಯಾಪ್ತಿಯಲ್ಲಿ ಭೂಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಿದೆ. ಈ ನಡುವೆ ರೈತರ ಹೋರಾಟ ತೀವ್ರವಾಗಿದ್ದರಿಂದ ಮೂರು ಗ್ರಾಮಗಳಿಗೆ ಸೇರಿದ 495 ಎಕರೆ ಜಮೀನನ್ನು ವಶಕ್ಕೆ ಪಡೆಯುವುದಿಲ್ಲ ಎಂದು ಸರ್ಕಾರ ಹೇಳುತ್ತಿದೆ. ಆದರೆ, ರೈತರು ಇದನ್ನು ಒಪ್ಪಲು ಸಿದ್ಧರಿಲ್ಲ. ಒಟ್ಟು ಭೂಸ್ವಾಧೀನವನ್ನೇ ಕೈಬಿಡಬೇಕು ಎಂದು ಆಗ್ರಹಿಸಿ ಸರ್ಕಾರಕ್ಕೆ ಗಡುವು ನೀಡಿದ್ದಾರೆ.

2021ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದಾಗ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಇತ್ತು. ಭೂಸ್ವಾಧೀನಕ್ಕೆ ರೈತರ ವಿರೋಧವಿರುವ ಬಗ್ಗೆ ಅಂದಿನ ವಿರೋಧ ಪಕ್ಷವಾಗಿದ್ದ ಕಾಂಗ್ರೆಸ್ ಸದಸ್ಯರು ಪ್ರಶ್ನೆ ಮಾಡಿದಾಗ, 'ರೈತರ ಒಪ್ಪಿಗೆ ಇಲ್ಲದೆ ಯಾವುದೇ ಕಾರಣಕ್ಕೂ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಿಲ್ಲ, ಶೇ 50ಕ್ಕಿಂತ ಹೆಚ್ಚು ರೈತರು ಭೂಮಿ ಕೊಡುವುದಿಲ್ಲ ಎಂದರೆ ಭೂಸ್ವಾಧೀನವನ್ನು ಕೈಬಿಡಲಾಗುವುದು' ಎಂದು ಅಂದಿನ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ಹೇಳಿದ್ದರು. 13 ಹಳ್ಳಿಗಳ ಶೇ 80ರಷ್ಟು ರೈತರು ತಮ್ಮ ದಾಖಲೆಗಳ ಸಹಿತ ತೆರಳಿ, 'ನಾವು ಯಾವುದೇ ಕಾರಣಕ್ಕೂ ಭೂಮಿ ಕೊಡುವುದಿಲ್ಲ' ಎಂದು ಕೆಐಎಡಿಬಿ ಅಧಿಕಾರಿಗಳಿಗೆ ಪತ್ರ ಕೊಟ್ಟರು. ಆದರೂ, ಬಿಜೆಪಿ ಸರ್ಕಾರ ತನ್ನ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಆಗ ವಿರೋಧ ಪಕ್ಷವಾಗಿದ್ದು, ರೈತರಿಗೆ ಬೆಂಬಲ ವ್ಯಕ್ತಪಡಿಸಿದ್ದ ಕಾಂಗ್ರೆಸ್ ಈಗ ಆಡಳಿತ ನಡೆಸುತ್ತಿದೆ. ಅದೂ ಈಗ ರೈತರ ಸಂಕಷ್ಟಕ್ಕೆ ಮಿಡಿಯುತ್ತಿಲ್ಲ, ಭೂಸ್ವಾಧೀನ ಆದೇಶ ವಾಪಸ್ ಪಡೆಯುತ್ತಿಲ್ಲ ಎನ್ನುವುದು ರೈತರ ಅಳಲು.



1,282 ಎಕರೆ — ಅಂತಿಮ ಅಧಿಸೂಚನೆಗೆ ಒಳಪಟ್ಟ ಗ್ರಾಮಗಳು
- ಗೋಕರೆ ಬಚ್ಚೇನಹಳ್ಳಿ
- ಹ್ಯಾಡಾಳ
- ಪೋಲನಹಳ್ಳಿ
- ಪಾಳ್ಯ
- ಚೀಮಾಚನಹಳ್ಳಿ
- ನಲ್ಲಪ್ಪನ ಹಳ್ಳಿ
- ಮಲ್ಲೇಪುರ
- ನಲ್ಲೂರು
- ಮುದ್ದೇನಹಳ್ಳಿ
- ಹರಳೂರು

495 ಎಕರೆ — ಕೈಬಿಡಲಾಗುವ ಗ್ರಾಮಗಳು
- ಚನ್ನರಾಯಪಟ್ಟಣ
- ಮಟ್ಟಬಾರ್ಲು
- ಶ್ರೋತ್ರೀಯ ತೆಲ್ಲೋಹಳ್ಳಿ

ದೇವನಹಳ್ಳಿಯಲ್ಲಿ ಅಭಿವೃದ್ಧಿಯ ಮಹಾಪೂರ

ದೇವನಹಳ್ಳಿಯಲ್ಲಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣವಾದ ನಂತರ ಈ ಭಾಗದಲ್ಲಿ ವಿವಿಧ ರೀತಿಯ ಯೋಜನೆಗಳಿಗಾಗಿ ವಿಮಾನ ನಿಲ್ದಾಣದ ಸುತ್ತಮುತ್ತ ಸರ್ಕಾರವು ರೈತರ ಜಮೀನನ್ನು ವಶಪಡಿಸಿಕೊಳ್ಳುವ ಪ್ರವೃತ್ತಿ ದಶಕಗಳಿಂದಲೂ ನಡೆಯುತ್ತಲೇ ಇದೆ. ಹರಳೂರು ಕೈಗಾರಿಕಾ ಪ್ರದೇಶಕ್ಕಾಗಿ ಕೆಐಎಡಿಬಿ ಈಗಾಗಲೇ ಇದೇ ಪ್ರದೇಶದಲ್ಲಿ 1,300 ಎಕರೆಯನ್ನು ಮೊದಲ ಹಂತದಲ್ಲಿ ಸ್ವಾಧೀನಪಡಿಸಿಕೊಂಡಿದೆ.

1,180ಕ್ಕೂ ಹೆಚ್ಚು ದಿನಗಳ ಧರಣಿ

ಭೂಮಿ ಉಳಿಸಿಕೊಳ್ಳಲು ರೈತರು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡುತ್ತಿದ್ದಾರೆ. ದೇವನಹಳ್ಳಿ, ಬೆಂಗಳೂರು ಓಡಾಟ, ಸಂಬಂಧಿಸಿದ ಸಚಿವರು, ಅಧಿಕಾರಿಗಳ ಭೇಟಿ, ಧರಣಿ ಸ್ಥಳದಲ್ಲಿ ಸರಣಿ ಸಭೆಗಳು, ಪರಿಣತರೊಂದಿಗೆ ಹೋರಾಟದ ರೂಪುರೇಷೆಗಳ ಬಗ್ಗೆ ಚರ್ಚೆ, ನಿರಂತರ ಗ್ರಾಮ ಭೇಟಿ... ಹೀಗೆ ಹೋರಾಟವನ್ನು ಈವರೆಗೆ ಜೀವಂತವಾಗಿ ಇಟ್ಟಿದ್ದಾರೆ.

ಬೆಳಿಗ್ಗೆ ಎದ್ದಗಳಿಗೆಯಿಂದ ರಾತ್ರಿ ಮಲಗುವವರೆಗೂ ಒಂದಿಲ್ಲೊಂದು ಕೆಲಸದಲ್ಲಿ ತೊಡಗಬೇಕಾದ ಅನಿವಾರ್ಯ ಇರುವ ರೈತರು ಸಾವಿರಾರು ದಿನ ಧರಣಿ ನಡೆಸುವುದು ಸುಲಭದ ಮಾತಲ್ಲ. ಕೆಲ ರೈತರು, ರಾತ್ರಿಯಿಂದ ಬೆಳಗಿನ ಜಾವದವರೆಗೆ ಹೊಲದಲ್ಲಿ ಕೆಲಸ ಮಾಡಿ, ಹಗಲಿನಲ್ಲಿ ಭೂಮಿ ಉಳಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದ್ದಾರೆ. ಕೆಲವರು ತಮ್ಮ ಕೆಲಸ, ಆದಾಯವನ್ನೂ ಬದಿಗೊತ್ತಿ ಹೋರಾಟದಲ್ಲಿ ತೊಡಗಿದ್ದಾರೆ. ದಿನದಿಂದ ದಿನಕ್ಕೆ ಹೋರಾಟದ ಗುಂಪು ಹಿಗ್ಗುತ್ತಲೇ ಇದೆ ಎನ್ನುವುದು ಅವರ ಭರವಸೆಯ ನುಡಿ.

ಜೀತ ಖಚಿತ

ಈ ಗ್ರಾಮಗಳಲ್ಲಿ 10 ಸಾವಿರ ಟನ್ ರಾಗಿ, 2,000 ಟನ್ ದ್ರಾಕ್ಷಿ, 150 ಟನ್ ಮಾವು, ತರಕಾರಿ, ಹೂವು ಬೆಳೆಯುತ್ತಿದ್ದು, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ 6 ಸಾವಿರ ಜನರಿಗೆ ಉದ್ಯೋಗ ಒದಗಿಸಿದೆ. ಇವರಲ್ಲಿ ಬಡವರು, ರೈತರು, ಕೃಷಿಕರು, ಕೂಲಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರು ಭೂಮಿ ಕಳೆದುಕೊಂಡರೆ ಎಲ್ಲರೂ ಕಂಪನಿಗಳ ಜೀತದಾಳುಗಳಾಗುವುದು ಖಚಿತ

ಚೀಮಾಚನಹಳ್ಳಿ ರಮೇಶ್, ಹೋರಾಟಗಾರ

ದಲಿತರ ಹೋರಾಟ

ಈ ಭಾಗದ ಅನೇಕ ದಲಿತರು ಹಿಂದೆ ಭೂಮಿ ಮಂಜೂರಾತಿಗಾಗಿ ಸರ್ಕಾರದೊಂದಿಗೆ, ಭೂಮಾಲೀಕರೊಂದಿಗೆ ಹಲವು ರೀತಿಯ ಸಂಘರ್ಷ ನಡೆಸಿದ್ದರು. ಅಷ್ಟೆಲ್ಲ ಕಷ್ಟಪಟ್ಟು ಗಳಿಸಿದ್ದ ಭೂಮಿಯನ್ನು ಈಗ ಸರ್ಕಾರ ಸ್ವಾಧೀನ ಮಾಡಿಕೊಳ್ಳಲು ಹೊರಟಿರುವುದು ದಲಿತ ರೈತರನ್ನು ಕಂಗೆಡಿಸಿದೆ. ಅಂದು ಭೂಮಿ ಪಡೆಯಲು ಹೋರಾಟ ನಡೆಸಿದ್ದ ಅವರು ಈಗ ಭೂಮಿ ಉಳಿಸಿಕೊಳ್ಳಲು ಹೋರಾಟ ನಡೆಸುತ್ತಿದ್ದಾರೆ. ಹೋರಾಟದಲ್ಲಿ ವಿವಿಧ ಜಾತಿ, ಧರ್ಮಗಳ, ವಿವಿಧ ಹಿನ್ನೆಲೆಗಳ ಜನರು ಭಾಗವಹಿಸಿದ್ದಾರೆ. ಅವರ ಜತೆಗೆ ಮಹಿಳೆಯರು, ವಿದ್ಯಾರ್ಥಿಗಳು ಗಣನೀಯ ಸಂಖ್ಯೆಯಲ್ಲಿರುವುದು ವಿಶೇಷ.

> ಪೊಲೀಸರು ನಡೆಸಿದ ಹಲ್ಲೆಯಲ್ಲಿ ನನ್ನ ಎಡ ಕಣ್ಣಿಗೆ ಹಾನಿ ಆಯಿತು. ಈಗಾಗಲೇ ಎರಡು ಶಸ್ತ್ರ ಚಿಕಿತ್ಸೆ ಆಗಿದೆ. ನಮ್ಮ ಅಜ್ಜ, ಅಪ್ಪ ಕೊಟ್ಟ ಭೂಮಿಯನ್ನು ಮುಂದಿನ ತಲೆಮಾರಿಗೆ ಉಳಿಸಿಕೊಳ್ಳುತ್ತೇವೆ
>
> **ಪ್ರಮೋದ್,** ಯುವರೈತ

> ನಾನು ಎಂಜಿನಿಯರಿಂಗ್ ಪಧವೀಧರ, ಖಾಸಗಿ ಕಂಪನಿಯಲ್ಲಿ ಲಕ್ಷಾಂತರ ರೂಪಾಯಿ ಸಂಬಳ ನೀಡುತ್ತಾರೆ. ಆದರೆ, ನಮ್ಮ ಕೃಷಿ ಭೂಮಿಯಲ್ಲಿ ಅದಕ್ಕಿಂತ ಹೆಚ್ಚಿನ ಆದಾಯ ಗಳಿಸುತ್ತೇವೆ
>
> **ನಲ್ಲಪ್ಪನಹಳ್ಳಿ ನಂದನ್,** ಯುವರೈತ

> ಸಿದ್ದರಾಮಯ್ಯ, ಕೆ.ಎಚ್.ಮುನಿಯಪ್ಪ, ಎಂ.ಬಿ.ಪಾಟೀಲರಿಗೆ ಭೂ ದಾಹ ಹೆಚ್ಚಾಗಿದೆ. ನಮ್ಮ ರಕ್ತವನ್ನು ಹೀರಿ ಕುಡಿದು ಅದರ ಮೇಲೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಜೀವ ಇರುವವರೆಗೂ ಬಿಡುವುದಿಲ್ಲ
>
> **ನಂಜಪ್ಪ,** ಹಿರಿಯರೈತ

> ಎಲ್ಲ ಸರ್ಕಾರಗಳೂ ಕಾರ್ಪೊರೇಟ್ ಪೋಷಿತ ಹುಲಿಗಳು. ಭೂ ದಾಹಕ್ಕೆ ಸಿದ್ದರಾಮಯ್ಯ ಸರ್ಕಾರವೂ ಹೊರತಾಗಿಲ್ಲ, ಜಾತ್ಯತೀತವಾಗಿ ಕಟ್ಟಿರುವ ಜನಾಂದೋಲನ ಇನ್ನಷ್ಟು ತೀವ್ರವಾಗಲಿದೆ
>
> **ಕಾರಹಳ್ಳಿ ಶ್ರೀನಿವಾಸ್,** ದಸಂಸ ಮುಖಂಡ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2025ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿ ಜೊತೆಗೆ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ಕೋಡ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಅಥವಾ ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **ಶೈಕ್ಷಣಿಕ ನೆರವಿಗೆ ಅರ್ಜಿ** ಎಂದು ಸ್ಪಷ್ಟವಾಗಿ ಬರೆದಿರಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ನೀಡಬೇಕು.

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್- ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ವಾಸ್ತವ ಅರ್ಥೈಸಿಕೊಳ್ಳಿ, ಚಳವಳಿ ಕೈಬಿಡಿ

• ಎಂ.ಬಿ.ಪಾಟೀಲ

ಕೃಷಿ ಮತ್ತು ಕೈಗಾರಿಕೆ ಇವೆರಡೂ ಒಂದೇ ರಥದ ಎರಡು ಚಕ್ರಗಳಿದ್ದಂತೆ. ಕೃಷಿ ಮಾತ್ರವೇ ಸಾಕೆಂದಾಗಲಿ ಅಥವಾ ಕೈಗಾರಿಕೆಗಳೇ ಬೇಡ ಎಂದಾಗಲಿ ಹೇಳಲಾಗದು. ಕೈಗಾರಿಕಾ ಉದ್ದೇಶಕ್ಕಾಗಿ ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ 1,777 ಎಕರೆ ಭೂಸ್ವಾಧೀನ ವಿಷಯ ಈಗ ವಿವಾದಕ್ಕೀಡಾಗಿದೆ. ಕೃಷಿ ಕುಟುಂಬದಿಂದಲೇ ಬಂದಿರುವ ನನಗೂ ರೈತರ ನೋವು ಅರ್ಥವಾಗುತ್ತದೆ. ದೇವನಹಳ್ಳಿಯಲ್ಲಿ ಡಿಫೆನ್ಸ್ ಏರೋಸ್ಪೇಸ್ ಪಾರ್ಕ್ ಸ್ಥಾಪಿಸುವ ಉದ್ದೇಶ ಸರ್ಕಾರದ್ದು. ಇದಕ್ಕೆ ಜಮೀನು ಸ್ವಾಧೀನಕ್ಕೆ 2021ರಲ್ಲೇ ಅಧಿಸೂಚನೆ, 2022ರಲ್ಲೇ ಆದೇಶ ಹೊರಡಿಸಲಾಗಿತ್ತು. ಹೂಡಿಕೆ ಮಾಡುವವರು ತಮಗೆ ಸೂಕ್ತವೆನ್ನಿಸುವ ಪ್ರದೇಶದಲ್ಲಿ ಜಾಗ ಕೋರುತ್ತಾರೆ. ನಾವು ಅವರ ಅಹವಾಲುಗಳನ್ನೂ ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ನಿರುದ್ಯೋಗ ಹೆಚ್ಚಾಗುತ್ತದೆ.

ಚನ್ನರಾಯಪಟ್ಟಣ, ಶ್ರೋತ್ರೀಯ ತೆಲ್ಲೋಹಳ್ಳಿ, ಮಟ್ಟಬಾರ್ಲು- ಈ 3 ಗ್ರಾಮಗಳಲ್ಲಿ ನೀರಾವರಿ, ಕೃಷಿ ಹಾಗೂ ಜನವಸತಿ ಇರುವುದನ್ನು ಪರಿಗಣಿಸಿ 495 ಎಕರೆ ಜಮೀನಿನ ಸ್ವಾಧೀನವನ್ನು ಕೈಬಿಟ್ಟು ಜನಧ್ವನಿಗೆ ಸರ್ಕಾರ ಸ್ಪಂದಿಸಿದೆ. ಜೊತೆಗೆ ಇನ್ನು ಮುಂದೆ ಈ ಹೋಬಳಿಯಲ್ಲಿ ಕೈಗಾರಿಕಾ ಉದ್ದೇಶಕ್ಕೆ ಯಾವ ಜಮೀನನ್ನೂ ತೆಗೆದುಕೊಳ್ಳುವುದಿಲ್ಲ ಎಂದೂ ಸ್ಪಷ್ಟಪಡಿಸಲಾಗಿದೆ.

ಇಷ್ಟಾದರೂ 'ದೇವನಹಳ್ಳಿ ಚಲೋ' ನಡೆದಿದೆ. ಈಗ ನಾವು ಮತ್ತೊಮ್ಮೆ ಜುಲೈ 4ರಂದು ಸಿಎಂ ನೇತೃತ್ವದಲ್ಲಿ ಸಭೆ ನಡೆಸಲಿದ್ದೇವೆ.

ಇದು ತೀವ್ರ ಸ್ಪರ್ಧೆಯ ಯುಗ. ಇತ್ತೀಚೆಗೆ ಆಂಧ್ರ ಸರ್ಕಾರವು ಕೆಲವು ಕಂಪನಿಗಳಿಗೆ ಕೇವಲ 90 ಪೈಸೆಗೆ ಒಂದು ಎಕರೆಯಂತೆ ಜಮೀನು ಕೊಟ್ಟಿದೆ. ಉಚಿತವಾಗಿ ಕೊಡುವುದಾಗಿಯೂ ಹೇಳಿದೆ. ಡಿಫೆನ್ಸ್ ಕಾರಿಡಾರ್ ಸಲುವಾಗಿ ಗಡಿ ಭಾಗದ ಮಡಕಶಿರಾ ಸಮೀಪ 10 ಸಾವಿರ ಎಕರೆ ಮೀಸಲಿಟ್ಟಿದೆ. ನೆರೆಯ ತಮಿಳುನಾಡು, ತೆಲಂಗಾಣ, ಮಹಾರಾಷ್ಟ್ರ ರಾಜ್ಯಗಳಿಂದಲೂ ಸ್ಪರ್ಧೆ ಇದೆ. ಹಾಗೆಯೇ ಫಾಕ್ಸ್‌ಕಾನ್, ಆಕ್ಸೈಡ್ ಇತ್ಯಾದಿ ಪ್ರಮುಖ ಕಂಪನಿಗಳು ತಮ್ಮ ಹೂಡಿಕೆಯನ್ನು ಹೆಚ್ಚಿಸಿ, ವಿಸ್ತರಣೆ ಮಾಡುವ ಉದ್ದೇಶ ಹೊಂದಿವೆ. ಈ ಎಲ್ಲವನ್ನೂ ಗಮನದಲ್ಲಿಟ್ಟುಕೊಂಡು ರಾಜ್ಯ ಮುನ್ನಡೆಯಬೇಕಾಗಿದೆ.

ಸ್ವಾಧೀನಪಡಿಸಿಕೊಳ್ಳುವ ಜಮೀನಿಗೆ ವೈಜ್ಞಾನಿಕವಾಗಿ ಪರಿಹಾರ ಕೂಡ ನೀಡಲಾಗುತ್ತದೆ. ಪ್ರತಿ ಎಕರೆಗೆ 10,771 ಚದರ ಅಡಿ ಅಭಿವೃದ್ಧಿಪಡಿಸಿದ ಜಾಗ ಕೊಡಲು ಅವಕಾಶ ಕಲ್ಪಿಸುವ ನೀತಿಯೂ ನಮ್ಮಲ್ಲಿದೆ. ಸಂತ್ರಸ್ತ ರೈತರು ಇದನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಬಹುದು. ಈ ಅಭಿವೃದ್ಧಿಗೊಳಿಸಿದ ಜಾಗವನ್ನು ಅವರು ವಾಣಿಜ್ಯೋದ್ದೇಶಕ್ಕೆ ಬಳಸಿಕೊಳ್ಳಬಹುದು. ಹೀಗಾಗಿ, ಎಲ್ಲ ರೈತ ಮುಖಂಡರು ವಾಸ್ತವ ಪರಿಸ್ಥಿತಿ ಅರ್ಥ ಮಾಡಿಕೊಂಡು, ಚಳವಳಿ ಕೈಬಿಡಬೇಕೆಂದು ಮನವಿ ಮಾಡುತ್ತೇನೆ.

ಲೇಖಕ : ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

ನ್ಯಾಯವಾದಿಗಳಾಗುವ ಮುನ್ನ

ನುಡಿ ಬೆಳಗು — ದಯಾ ಗಂಗನಘಟ್ಟ

ಬಹಳ ಆತ್ಮೀಯರಾಗಿದ್ದ ಮೂವರು ಗೆಳೆಯರು ತಿಲಕನಗರದ ಬೀದಿಯೊಂದರ ಸಣ್ಣ ಕೋಣೆಯಲ್ಲಿ ಬಾಡಿಗೆಗೆ ಇದ್ದುಕೊಂಡು ಕೆಲಸಕ್ಕೆ ಹೋಗಿಕೊಂಡು ಖುಷಿಯಾಗಿರುತ್ತಾರೆ. ಒಮ್ಮೆ ಇವರಲ್ಲಿ ಇಬ್ಬರು ಗೆಳೆಯರು ಯಾವುದೋ ಸಣ್ಣ ವಿಷಯಕ್ಕೆ ಜಗಳ ಮಾಡಿಕೊಳ್ಳುತ್ತಾರೆ. ಇಬ್ಬರೂ ತಾವೇ ಸರಿ, ತಮ್ಮ ನಿಲುವೇ ಸರಿ ಎಂದು ವಾದ ಮಾಡಿಕೊಂಡು ನ್ಯಾಯ ಮಾಡಲು ತಮ್ಮ ಇನ್ನೊಬ್ಬ ಗೆಳೆಯನನ್ನು ಕರೆಯುತ್ತಾರೆ. ಆದರೆ, ಆ ಗೆಳೆಯ ಇವರ ಜಗಳದ ಕಡೆ ಗಮನ ಕೊಡದೆ ಸುಮ್ಮನಿರುತ್ತಾನೆ. ಇವರ ಯಾವ ಪ್ರಶ್ನೆಗಳಿಗಾಗಲಿ, ತಕರಾರುಗಳಿಗಾಗಲಿ ಉತ್ತರವನ್ನೇ ನೀಡುವುದಿಲ್ಲ. ಕೆಲವು ದಿನಗಳ ನಂತರ ಇಬ್ಬರೂ ಗೆಳೆಯರು ತಮ್ಮ ಜಗಳ ಮರೆತು ಒಂದಾಗುತ್ತಾರೆ. ಮತ್ತೆ ಮೂವರೂ ಮೊದಲಿನಂತೆ ಇರತೊಡಗುತ್ತಾರೆ.

ಇವರು ಕೆಲಸ ಮಾಡುತ್ತಿದ್ದ ಆಫೀಸಿನಲ್ಲಿ ಒಂದು ದಿನ ಹೊಸದಾಗಿ ಕೆಲಸಕ್ಕೆ ಸೇರಿದ್ದ ಇಬ್ಬರು ಯಾವುದೋ ವಿಷಯಕ್ಕೆ ಪರಸ್ಪರ ಕಿತ್ತಾಡತೊಡಗುತ್ತಾರೆ. ಇದನ್ನು ನೋಡಿದ ತಕ್ಷಣ ಈ ಮೂರನೇ ಗೆಳೆಯ ಮಧ್ಯ ಪ್ರವೇಶಿಸಿ ಅವರಿಬ್ಬರ ವಾದವನ್ನು ಆಸ್ಥೆ ಇಟ್ಟು ಕೇಳಿ ತಪ್ಪಿದ್ದವನಿಗೆ ಬುದ್ಧಿವಾದ ಹೇಳಿ, ಇನ್ನೊಬ್ಬನಿಗೆ ಸಮಾಧಾನ ಹೇಳುತ್ತಾನೆ. ಇದನ್ನು ನೋಡಿದ ಇಬ್ಬರೂ ಗೆಳೆಯರು ಕೋಪಗೊಂಡು, 'ನಾವಿಬ್ಬರೂ ಜಗಳವಾಡಿ ನಿನ್ನ ಮಧ್ಯಸ್ಥಿಕೆ ಬೇಡಿದಾಗ ಏಕೆ ಬರಲಿಲ್ಲ' ಎಂದು ಕೇಳುತ್ತಾರೆ. ಅವನು ನಗುತ್ತಾ, 'ನಿಜ ನಾನು ಬೇಕಂತಲೇ ನಿಮ್ಮ ನಡುವೆ ಬರಲಿಲ್ಲ. ಏಕೆಂದರೆ ನೀವಿಬ್ಬರೂ ನನ್ನ ಆತ್ಮೀಯ ಗೆಳೆಯರಾಗಿದ್ದಿರಿ. ನಾನು ಎಷ್ಟೇ ನಿಷ್ಪಕ್ಷಪಾತವಾಗಿ ತೀರ್ಮಾನ ಕೊಟ್ಟಿದ್ದರೂ ನಿಮ್ಮಿಬ್ಬರಲ್ಲಿ ಒಬ್ಬ ಸ್ನೇಹಿತನನ್ನು ಕಳೆದುಕೊಳ್ಳುತ್ತಿದ್ದೆ. ಇಬ್ಬರಲ್ಲಿ ಯಾರ ವಾದದ ಪರ ಇದ್ದರೂ ನೀವಿದ್ದ ಮನಃಸ್ಥಿತಿಯಲ್ಲಿ ನಿಮಗೆ ನನ್ನ ಮಾತುಗಳ ಬಗ್ಗೆ ನಂಬಿಕೆಗಿಂತ ಸಂಶಯವೇ ಹೆಚ್ಚಿರುತ್ತಿತ್ತು. ಹಾಗಾಗಿ ನಾನು ತಟಸ್ಥವಾಗಿದ್ದೆ. ಏಕೆಂದರೆ ಎರಡೂ ಸಂಬಂಧಗಳು ನನಗೆ ಮುಖ್ಯವಾಗಿದ್ದವು. ಹೀಗೆ ನಾನು ತಟಸ್ಥನಾದ ಕಾರಣ ನೀವು ಇಬ್ಬರೂ ನಿಮ್ಮೊಂದಿಗಿನ ಸಂಬಂಧವನ್ನು ಮರು ಮೌಲ್ಯಮಾಪನ ಮಾಡಲು ಸಮಯಾವಕಾಶ ಮಾಡಿಕೊಟ್ಟೆ. ನೀವು ಒಬ್ಬರನ್ನು ಕಂಡರೆ ಒಬ್ಬರು ಬೆಂಕಿ ಉಗುಳುತ್ತಿದ್ದಿರಿ. ಅದಕ್ಕೆ ನಾನು ತುಪ್ಪ ಸುರಿಯದ ಕಾರಣ ಶಾಂತರಾದಿರಿ. ಮತ್ತೀಗ ಮೊದಲಿನಂತೆ ಗೆಳೆಯರಾಗಿದ್ದೀರಿ. ಇವತ್ತಿನ ವಿಷಯಕ್ಕೆ ಬಂದರೆ, ಈ ಇಬ್ಬರೂ ನನಗೆ ಅಪರಿಚಿತರು. ಇವರಿಗೆ ನನ್ನ ಬಗ್ಗೆಯಾಗಲಿ, ನನಗೆ ಇವರ ಬಗ್ಗೆಯಾಗಲಿ ಯಾವುದೇ ಪೂರ್ವಗ್ರಹಗಳಿಲ್ಲ ಮತ್ತು ನ್ಯಾಯ ಮಾತನಾಡಲು ನನಗೆ ಯಾವ ಹಂಗೂ ಇಲ್ಲ' ಎಂದ.

ಸ್ನೇಹಿತರ ನಡುವೆ, ಸಂಬಂಧಿಕರ ನಡುವೆ, ದಾಂಪತ್ಯದಲ್ಲಿ, ಮಕ್ಕಳೊಂದಿಗೆ... ಹೀಗೆ ಯಾರೇ ಆತ್ಮೀಯರೊಂದಿಗೆ ವ್ಯವಹರಿಸುವಾಗ ನ್ಯಾಯದ ಪರ ಇರುವುದರ ಜೊತೆ ಜೊತೆಗೇ ನಮ್ಮ ಮಾತುಗಳು ಉಂಟುಮಾಡುವ ಪರಿಣಾಮದ ಕಡೆಗೂ ನಮಗೊಂದು ಗಮನ ಇರಬೇಕಾಗುತ್ತದೆ. ನೇರ, ದಿಟ್ಟ ನ್ಯಾಯವಾದಿಗಳಂತೆ ಕಡ್ಡಿ ಮುರಿದಂತಹ ನ್ಯಾಯ ತೀರ್ಮಾನ ಸಂಬಂಧಗಳಲ್ಲಿ ಸಾಧುವಲ್ಲ. ಕೆಲವೊಮ್ಮೆ ನಾವು ಮುರಿದ ಕಡ್ಡಿ ಗುಡ್ಡವಾಗಿ ಮತ್ತೆ ಸರಿಮಾಡಲಾಗದಷ್ಟು ಬಿರುಕು ಮೂಡಲು ನಾವೇ ದಾರಿ ಮಾಡಿಕೊಟ್ಟಂತಾಗುತ್ತದೆ. ನಮ್ಮ ತಾಳ್ಮೆಯ ನಡವಳಿಕೆ, ಬೇಕಂತಲೇ ತಂದುಕೊಂಡ ಮೌನ ದೊಡ್ಡ ಬದಲಾವಣೆಗೆ ನಾಂದಿ ಹಾಡಬಹುದು. ❖

ಪದಬಂಧ 6086

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
- 1.ಸರ ಧರಿಸಿ ಮಾಡುವ ವ್ಯಾಯಾಮ (4)
- 3.ಇದು ರಾಜನ ಗೃಹ (4)
- 5.ವನದಲ್ಲಿ ತೂರಿಸಿರುವ ಮುಖ (3)
- 7.ಉದಾರಿ ಹೋಗುತ್ತಿರುವ ರಸ್ತೆ (2)
- 8.ಮನ ಕೊನೆಗಿಟ್ಟು ಮಾಡಿದ ವಂದನೆ (3)
- 9.ವನದ ಹತ್ತಿರ ವಿದೇಶದವನು ನಿಂತಿದ್ದಾನೆ (3)
- 10.ಈ ಚನ್ನಿಗರಾಯನ ತೀವ್ರವಾದ ಆಸೆ! (3)
- 11.ಇದು ಕನ್ನಡಿಗ ಹಿಡಿದಿರುವ ಸ್ಪೂನು! (3)
- 13.ಮಾತುಲನಾಡುತ್ತಿರುವ ನುಡಿ (2)
- 14.ಕನ್ನ ಹಾಕಿದವನು ಕದ್ದೊಯ್ದ ಬಂಗಾರ (3)
- 15.ಸೆರೆಮನೆಯನ್ನು ಹೀಗೂ ಹೇಳುವರು (4)
- 16.ನಕ್ಷತ್ರಗಳ ಗುಂಪು (4)

ಮೇಲಿಂದ ಕೆಳಕ್ಕೆ
- 2.ನೆಮ್ಮದಿ ಹೀಗೆ ಬಂದಿದೆ (4)
- 4.ಓಂನ್ನು ನೀಡುವಿಕೆ (4)
- 5.ಪಲಾಯನ ಮಾಡುತ್ತಿಲ್ಲ ಈ ಅರಣ್ಯರಕ್ಷಕ! (5)
- 6.ಒಳ್ಳೆತನದ ಸೋಗಿನಲ್ಲಿ ಮೋಸಮಾಡುವವನು (5)
- 10.ನಾಲ್ಕು ಪಾದಗಳನ್ನುಳ್ಳದ್ದು (4)
- 12.ಕನ್ನಡಿಗನಾಡುತ್ತಿರುವ ಚೆಸ್ (4)



6085ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪ್ರಲೋಭನ 2.ಅನುಭವ 4.ಪರಿಹಾಸ 7.ವಿಮೋಚನೆ 8.ಗುಂಜು 9.ಗಹನ 10.ಪಣ 11.ವಾತಾಯನ 12.ಧನ್ವಂತರಿ 14.ನಡೆವೆಣ 15.ಉಪಕಾರಿ

ಮೇಲಿಂದ ಕೆಳಕ್ಕೆ:
1.ಪ್ರಲಾಪ 3.ವರ್ತನೆ 5.ರಿವಾಜು 6.ಸಹಗಮನ 7.ವಿಧಾನಸೌಧ 10.ಪರಾತ 11.ವಾಮನ 13.ರಿಪೇರಿ

ಸುಡೊಕು 6470

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

		1		7		6		2
		5	2		9			
2	8			1			9	5
	5		7			8		
	2			8		5		9
8		6		9				
6				5		9		7
		8					5	
5		3		6		1		8

6469 ಸುಡೊಕು

9	2	1	6	5	7	8	4	3
8	5	7	3	4	9	6	2	1
6	4	3	2	1	8	9	5	7
1	3	2	5	9	4	7	8	6
5	8	6	1	7	2	3	9	4
7	9	4	8	3	6	2	1	5
3	1	8	9	6	5	4	7	2
2	7	5	4	8	3	1	6	9
4	6	9	7	2	1	5	3	8

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

27 ಜೂನ್ 2025 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಆಷಾಢ ಶುಕ್ಲ ದ್ವಿತೀಯ ಗಂ. 11-20 **ನಕ್ಷತ್ರ:** ಪುನರ್ವಸು ಗಂ. 7-22 **ಯೋಗ:** ವ್ಯಾಘಾತ ಗಂ. 21-10 **ಕರಣ:** ಕೌಲವ ಗಂ. 11-20, ಮಿಥುನ ಮಾಸದ 13 ನೇ ದಿನ. **ಮಳೆ ನಕ್ಷತ್ರ :** ಆರ್ದ್ರಾ 2 ನೇ ಪಾದ. **ರಾಹುಕಾಲ :** ಬೆಳಿಗ್ಗೆ 10-30 – 12-00 **ಸೂರ್ಯೋದಯ :** 06-10 **ಸೂರ್ಯಾಸ್ತ :** 06-57. **ಮುಸ್ಲಿಂ ದಿನಾಂಕ :** 01 ಮೊಹರಮ್. **ದಿನ ವಿಶೇಷ :** ಆಷಾಢ ಶುಕ್ರವಾರ. **ಅದೃಷ್ಟ ಸಂಖ್ಯೆ :** 1, 3

ಮೇಷ: ಕೆಲವು ದಿನಗಳಿಂದ ಸಹೋದರರೊಂದಿಗಿನ ಮನಸ್ತಾಪ ಮುಕ್ತ ಮಾತುಕತೆಯಿಂದ ದೂರಾಗುವುದು. ನಿಲುವು ಸ್ಪಷ್ಟಪಡಿಸಿಕೊಂಡಲ್ಲಿ ಗೊಂದಲಕ್ಕೆ ಆಸ್ಪದವಿಲ್ಲ. ಸಂತೋಷ ನಿಮ್ಮದಾಗುವುದು.

ವೃಷಭ: ವಿವಾದಾಸ್ಪದ ವಿಷಯಗಳ ಕಡೆ ಅನಿಸಿಕೆ ಅಪ್ರಸ್ತುತ. ತಾಮ್ರ, ಹಿತ್ತಾಳೆ ವಸ್ತುಗಳ ಮಾರಾಟದಿಂದ ಲಾಭ ಇದೆ. ಮಾಡಿದ ಪಾಪ ಕರ್ಮಗಳಿಗಾಗಿ ಪ್ರಾಯಶ್ಚಿತ ಮಾಡಿ ಪಾಪ ತೊಳೆದುಕೊಳ್ಳುವ ಮನಸ್ಸಾಗಲಿದೆ.

ಮಿಥುನ: ಕೌಟುಂಬಿಕ ಸಮಸ್ಯೆಗಳಿಗೆ ಸಂಗಾತಿಯೊಂದಿಗೆ ಸಮಾಧಾನದಿಂದ ಸಮಾಲೋಚನೆ ಮಾಡಿದಲ್ಲಿ ಉತ್ತಮ ಪರಿಹಾರ ದೊರೆಯಲಿದೆ. ಯಾತ್ರೆ ಕೈಗೊಳ್ಳುವುದರ ಯೋಜನೆ ಕಾರ್ಯರೂಪಕ್ಕೆ ಬರಲಿದೆ.

ಕರ್ಕಾಟಕ: ನಿಧಾನವಾಗಿಯಾದರೂ ಕಾರ್ಯದ ಲಾಭ ಬಂದು ಕೈ ಸೇರಿದ ಸಂತಸ ಆಗುತ್ತದೆ. ಮಕ್ಕಳ ಯೋಗಕ್ಷೇಮದ ಬಗ್ಗೆ ಚಿಂತಿಸುವುದನ್ನು ಕಡಿಮೆ ಮಾಡುವುದು ಉತ್ತಮ. ಕ್ರೀಡಾಪಟುಗಳಿಗೆ ಪ್ರೋತ್ಸಾಹ ಲಭಿಸುವುದು.

ಸಿಂಹ: ಭೂಮಿಗೆ ಸಂಬಂಧಿಸಿದಂತೆ ಹಲವು ದಿನಗಳಿಂದ ಪ್ರಯತ್ನ ಪಟ್ಟ ಕೆಲಸಗಳು ದಿನದ ಅಂತ್ಯಕ್ಕೆ ಫಲ ನೀಡಲಿವೆ. ಕೌಟುಂಬಿಕ ಸಮಸ್ಯೆಗಳನ್ನು ಬಗೆಹರಿಸುವ ರೀತಿಗೆ ಎಲ್ಲರೂ ಮೆಚ್ಚುಗೆಯನ್ನು ಸೂಚಿಸುತ್ತಾರೆ.

ಕನ್ಯಾ: ಗಂಭೀರ ಹಾಗೂ ತಾಳ್ಮೆಯಿಂದ ಕಾರ್ಯನಿರ್ವಹಿಸಿದಲ್ಲಿ ಯಶಸ್ಸು ಖಂಡಿತವಾಗಿ ನಿಮ್ಮದಾಗಲಿದೆ. ಮಧ್ಯಮ ವರ್ಗದವರಿಗೆ ಬೆಲೆ ಹೆಚ್ಚಳವು ಹೊರೆಯಾಗಿ ಕಾಣುವುದು. ಶುಭಫಲಕ್ಕಾಗಿ ದೇವಾಲಯಕ್ಕೆ ಭೇಟಿ ನೀಡಿ.

ತುಲಾ: ಇನ್ನೊಬ್ಬರ ಮನೆಯ ವಿಚಾರವಾಗಿ ನೀವು ಯೋಚಿಸುವುದಾಗಲಿ ಅಥವಾ ಮಾತನಾಡಿಕೊಳ್ಳುವುದಾಗಲಿ ಮಾಡಿಕೊಂಡು ಗೌರವವನ್ನು ಕಡಿಮೆ ಮಾಡಿಕೊಳ್ಳದಿರಿ. ತೆಂಗು ಹಾಗು ಅಡಿಕೆ ಬೆಳೆಗಾರರಿಗೆ ಅಧಿಕ ಲಾಭ.

ವೃಶ್ಚಿಕ: ಉಚ್ಚ ಸ್ಥಾನದಲ್ಲಿರುವಂಥ ನೀವು ತಪ್ಪುಗಳನ್ನು ನಡೆಸಿದಲ್ಲಿ ನಿಮ್ಮನ್ನೇ ಅನುಸರಿಸುವ ಸಹೋದ್ಯೋಗಿಗಳಿಗೆ ನೀವು ಏನೂ ಹೇಳಲಾಗದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಕತ್ತಲೆಯಲ್ಲಿ ಸಂಚರಿಸದಿರಿ.

ಧನು: ಲೋಹ ವಸ್ತುಗಳ ವ್ಯಾಪಾರಿಗಳಿಗೆ ಸಂಪಾದನೆಯಲ್ಲಿ ಹೆಚ್ಚಳವಾಗುವುದರ ಜತೆಯಲ್ಲಿ ವ್ಯವಹಾರಿಕ ಪ್ರಚಾರಗಳು ಸಿಗಲಿವೆ. ಪ್ರಶಾಂತ ವಾತವರಣದ ಅಗತ್ಯ ಇರುವುದರಿಂದ ಸ್ನೇಹಿತರೊಂದಿಗಿನ ಒಡನಾಟ ಕಡಿಮೆಯಾಗುವುದು.

ಮಕರ: ಮೃದುನಡತೆ ಹಾಗೂ ಸುತ್ತಮುತ್ತಲಿನ ವ್ಯಕ್ತಿಗಳ ಜೊತೆ ಅನ್ಯೋನ್ಯ ನಡತೆಯಿಂದ ಮನ್ನಣೆ ಗಳಿಸುತ್ತೀರಿ. ಸಹೋದರರ ಜತೆ ಉತ್ತಮ ಬಾಂಧವ್ಯ ಇರಲಿ. ಸ್ನೇಹ ಸಂಬಂಧಗಳಿಗೆ ಪ್ರಾಮುಖ್ಯತೆ ನೀಡಿರಿ.

ಕುಂಭ: ಅನಿರೀಕ್ಷಿತವಾಗಿ ಪರಿಚಯವಾಗುವ ವ್ಯಕ್ತಿಯು ಮನಸ್ಸಿಗೆ ತುಂಬಾ ಹತ್ತಿರವಾಗುತ್ತಾರೆ. ಯೋಗ್ಯತೆಗೆ ಮೀರಿದ ಕಾರ್ಯವೊಂದು ನಿಮ್ಮನ್ನು ತಲುಪಲಿದೆ. ಹತ್ತಿ ಮಾರಾಟಗಾರರಿಗೆ ಲಾಭವಿದೆ.

ಮೀನ: ವ್ಯವಹಾರಗಳು ಮೋಸದ ಹಾದಿಯಲ್ಲಿ ಹೋಗುವಂತಿದ್ದಲ್ಲಿ ಅದನ್ನು ಈಗಲೇ ಕೈಬಿಡುವ ನಿರ್ಧಾರ ಸೂಕ್ತ. ಕಾರ್ಯವೈಖರಿ ಲಾಭಕರವಾಗಿ ಮೂಡಿ ಬರುತ್ತದೆ. ಮಾತೃ ಸಂಬಂಧಿ ವ್ಯಕ್ತಿಗಳ ಆಗಮನವಾಗಲಿದೆ.

ಗುಂಡಣ್ಣ



ವಿನಿಮಯ ದರ: ಡಾಲರ್ 85.72 | ಪೌಂಡ್ 117.78 | ಯೂರೊ 100.49 | ಯೆನ್ (100ಕ್ಕೆ) 59

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 25,244
ಇಂದಿನ ಅಂತ್ಯ: 25,549
ದಿನದ ಗರಿಷ್ಠ: 25,565
304

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು: 100 ಕ್ಕೆ ₹610; 12 ಕ್ಕೆ ₹80
ಮೈಸೂರು: 100 ಕ್ಕೆ ₹615

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹300-556
ದ್ವಿತಳಿ (ಬಿ.ವಿ) ₹388-690

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹196.50
ಆರ್‌ಎಸ್‌ಎಸ್-5 ₹190.50
ಗುಡ್ ಲಾಟ್ ₹179.50

ಮುದ್ರೆ-ಮನೆ ಕಾಫಿ (50 ಕೆಜಿಗೆ)
ಎಪಿ ₹25,900
ಎಸಿ ₹14,140
ಆರ್‌ಪಿ ₹18,250
ಆರ್‌ಸಿ ₹9,315

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)
ಶೇಂಗಾ (ರಿಫೈನ್ಡ್) ₹1380 (1390)
ಸೋಯಾ (ರಿಫೈನ್ಡ್) ₹1190 (1190)
ಸೂರ್ಯಕಾಂತಿ (ರಿಫೈನ್ಡ್) ₹1350 (1350)
ಪಾಮೋಲಿನ್ ₹1185 (1190)

ಅಡಿಕೆ ಧಾರಣೆ

ಮಾರುಕಟ್ಟೆ	ತಳಿ	ದರ
ಕುಮಟಾ	ಚಾಲಿ	35309-41899
	ಚಿಪ್ಪು	16100-28199
	ಕೋಕ	6100-25100
	ಹೊಸಚಾಲಿ	41598-42598
	ಸಿಪ್ಪೆಗೋಟು	7299-18030
ಪುತ್ತೂರು	ಕೋಕ	20000-30500
	ಹೊಸತು	26000-48500
ಸಾಗರ	ಬಿಳಿಗೋಟು	7777-25599
	ಚಾಲಿ	17999-36511
	ಕೋಕ	7989-19999
	ಕೆಂಪುಗೋಟು	15789-28499
	ರಾಶಿ	25099-56570
ಶಿವಮೊಗ್ಗ	ಬೆಟ್ಟೆ	52899-59520
	ಗೊರಬಲು	18010-30069
	ರಾಶಿ	45009-57599
	ಸರಕು	54159-90569
ಸಿದ್ದಾಪುರ	ಬಿಳಿಗೋಟು	23700-29519
	ಚಾಲಿ	34099-41099
	ಕೋಕ	17269-21699
	ಕೆಂಪುಗೋಟು	19600-23219
	ರಾಶಿ	40719-45099
	ತಟ್ಟಿಬೆಟ್ಟೆ	30099-30099
ಶಿರಸಿ	ಬೆಟ್ಟೆ	28899-37399
	ಬಿಳಿಗೋಟು	18699-32899
	ಚಾಲಿ	35218-42701
	ಕೆಂಪುಗೋಟು	17809-23400
	ಸರಕು	42519-46899
ಯಲ್ಲಾಪುರ	ಬಿಳಿಗೋಟು	16899-30896
	ಚಾಲಿ	32819-41780
	ಕೋಕ	8000-22899
	ಕೆಂಪುಗೋಟು	21509-26099
	ರಾಶಿ	40799-49689
	ತಟ್ಟಿಬೆಟ್ಟೆ	28206-37769

ಮನೆ ಬೆಲೆ ಶೇ 11ರಷ್ಟು ಏರಿಕೆ

ಬೆಂಗಳೂರಿನಲ್ಲಿ ಬೆಲೆ ಶೇ 12ರಷ್ಟು ಹೆಚ್ಚಳ ಅನರಾಕ್ ವರದಿಯಲ್ಲಿ ಉಲ್ಲೇಖ

ಮುಖ್ಯಾಂಶಗಳು
- ಬೆಂಗಳೂರಿನಲ್ಲಿ ಮನೆಗಳ ಮಾರಾಟ ಶೇ 8ರಷ್ಟು ಇಳಿಕೆ
- 7 ನಗರಗಳಲ್ಲಿ 96,285 ಮನೆ ಮಾರಾಟ
- ದೆಹಲಿ–ಎನ್‌ಸಿಆರ್‌ನಲ್ಲಿ ಮನೆಗಳ ಬೆಲೆಯಲ್ಲಿ ಶೇ 27ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಜೂನ್ ತ್ರೈಮಾಸಿಕದಲ್ಲಿ ಬೆಂಗಳೂರು ಸೇರಿದಂತೆ ದೇಶದ ಏಳು ಪ್ರಮುಖ ನಗರಗಳಲ್ಲಿ ಮನೆಗಳ ಸರಾಸರಿ ಬೆಲೆ ವಾರ್ಷಿಕ ಶೇ 11ರಷ್ಟು ಏರಿಕೆಯಾಗಿದೆ ಎಂದು ಆಸ್ತಿ ಸಲಹಾ ಸಂಸ್ಥೆ ಅನರಾಕ್ ಸಿದ್ಧಪಡಿಸಿರುವ ವರದಿ ತಿಳಿಸಿದೆ.

ಇದೇ ವೇಳೆ ಮನೆಗಳ ಮಾರಾಟದಲ್ಲಿ ಅಂದಾಜು ಶೇ 20ರಷ್ಟು ಇಳಿಕೆಯಾಗಿದೆ. ಕಳೆದ ವರ್ಷದ ಏಪ್ರಿಲ್–ಜೂನ್ ಅವಧಿಯಲ್ಲಿ 1.20 ಲಕ್ಷ ಮನೆ ಮಾರಾಟವಾಗಿದ್ದವು. ಈ ಬಾರಿ 96,285 ಮನೆ ಮಾರಾಟವಾಗಿವೆ ಎಂದು ತಿಳಿಸಿದೆ.

ಬೆಂಗಳೂರಲ್ಲಿ ಮನೆ ಬೆಲೆಯು ಶೇ 12ರಷ್ಟು ಹೆಚ್ಚಳವಾಗಿದೆ. ಕಳೆದ ವರ್ಷದ ಜೂನ್ ತ್ರೈಮಾಸಿಕದಲ್ಲಿ ಬೆಂಗಳೂರಲ್ಲಿ 16,355 ಮನೆಗಳು ಮಾರಾಟವಾಗಿದ್ದವು. ಈ ಬಾರಿ 15,120 ಮನೆಗಳು ಮಾರಾಟವಾಗಿವೆ. ಹಿಂದಿನ ವರ್ಷದ ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಮಾರಾಟ ಶೇ 8ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದೆ.

ಮನೆಗಳ ಬೆಲೆಯು ದೆಹಲಿ–ಎನ್‌ಸಿಆರ್‌ನಲ್ಲಿ ಅತಿ ಹೆಚ್ಚು ಏರಿಕೆಯಾಗಿದ್ದು, ಶೇ 27ರಷ್ಟಾಗಿದೆ. ಹೈದರಾಬಾದ್ ಶೇ 11ರಷ್ಟಿದೆ.

ಮನೆಗಳ ಮಾರಾಟವು ಹೈದರಾಬಾದ್ ಮತ್ತು ಪುಣೆ (ಶೇ 27), ಮುಂಬೈ ಮಹಾನಗರ ಪ್ರದೇಶ (ಶೇ 25), ಕೋಲ್ಕತ್ತ (ಶೇ 23) ಮತ್ತು ದೆಹಲಿ–ಎನ್‌ಸಿಆರ್‌ನಲ್ಲಿ ಶೇ 14ರಷ್ಟು ಇಳಿಕೆಯಾಗಿದೆ. ಚೆನ್ನೈನಲ್ಲಿ ಮಾತ್ರ ಶೇ 11ರಷ್ಟು ಹೆಚ್ಚಳವಾಗಿದೆ ಎಂದು ತಿಳಿಸಿದೆ.

‘ಪ್ರಸಕ್ತ ಕ್ಯಾಲೆಂಡರ್ ವರ್ಷದ ಎರಡನೇ ತ್ರೈಮಾಸಿಕವು ದೇಶದ ಮನೆಗಳ ಮಾರುಕಟ್ಟೆಗೆ ಮಹತ್ವದಾಗಿತ್ತು. ಆದರೆ, ದೇಶ ಮತ್ತು ವಿದೇಶ ಗಳಲ್ಲಿನ ಸೇನಾ ಕಾರ್ಯಾಚರಣೆಗಳು ಮಾರುಕಟ್ಟೆಯ ಮೇಲೆ ಪರಿಣಾಮ ಉಂಟುಮಾಡಿವೆ. ಯುದ್ಧದ ವಾತಾವರಣದಿಂದಾಗಿ ಖರೀದಿದಾರರು ಕಾದು ನೋಡುವ ತಂತ್ರ ಅನುಸರಿಸಿದರು. ಪರಿಣಾಮವಾಗಿ, ಮನೆಗಳ ಬೆಲೆಯು ಕಳೆದ ಎರಡು ವರ್ಷಗಳಲ್ಲಿ ಅತಿ ಹೆಚ್ಚು ಏರಿಕೆ ಕಂಡಿದೆ. ಇದು ಮನೆಗಳ ಬೇಡಿಕೆ ಇಳಿಕೆಗೆ ಕಾರಣವಾಗಿವೆ’ ಎಂದು ಅನರಾಕ್‌ನ ಅಧ್ಯಕ್ಷ ಅನುಜ್ ಪುರಿ ಹೇಳಿದ್ದಾರೆ.

ಆದರೆ, ದೇಶದಲ್ಲಿ ಬಿಕ್ಕಟ್ಟು ತಗ್ಗಿದೆ. ಆರ್‌ಬಿಐ ರೆಪೊ ದರವನ್ನು ಕಡಿತ ಮಾಡಿದೆ. ಇದು ಹೊಸ ಆಶಾವಾದವನ್ನು ಮೂಡಿಸಿದ್ದು, ಮನೆ ಖರೀದಿದಾರರಲ್ಲಿ ಖರೀದಿ ಮಾಡುವ ಉಮೇದನ್ನು ಹೆಚ್ಚಿಸುತ್ತಿದೆ ಎಂದು ಹೇಳಿದ್ದಾರೆ.

₹29 ಸಾವಿರ ದಾಟಿದ ಕೊಬ್ಬರಿ ಧಾರಣೆ

ಪ್ರಜಾವಾಣಿ ವಾರ್ತೆ

ತುಮಕೂರು: ಉಂಡೆ ಕೊಬ್ಬರಿ ಬೆಲೆ ಕ್ವಿಂಟಲ್‌ಗೆ ₹29 ಸಾವಿರ ದಾಟುವ ಮೂಲಕ ಮತ್ತೊಂದು ದಾಖಲೆ ಬರೆದಿದ್ದು, ಮೂರು ದಿನಗಳ ಅಂತರದಲ್ಲಿ ₹3 ಸಾವಿರ ಏರಿಕೆ ಕಂಡಿದೆ. ಸೋಮವಾರ ಕ್ವಿಂಟಲ್‌ಗೆ ₹26,167ಕ್ಕೆ ಹೆಚ್ಚಳವಾಗಿದ್ದೇ ದಾಖಲೆಯಾಗಿತ್ತು.

ಮೇ ಅಂತ್ಯದಲ್ಲಿ ಕ್ವಿಂಟಲ್ ಉಂಡೆ ಕೊಬ್ಬರಿ ಬೆಲೆ ₹20 ಸಾವಿರ ದಾಟಿತ್ತು. ಒಂದು ತಿಂಗಳ ಅಂತರದಲ್ಲಿ ₹9 ಸಾವಿರ ಏರಿಕೆಯಾಗಿದೆ. ಜೂನ್ ಮೊದಲ ವಾರ ₹22 ಸಾವಿರಕ್ಕೆ, ಜೂನ್ ಮಧ್ಯದಲ್ಲಿ ₹24 ಸಾವಿರಕ್ಕೆ ತಲುಪಿತ್ತು.

ತಿಪಟೂರು ಎಪಿಎಂಸಿ ಮಾರುಕಟ್ಟೆಯಲ್ಲಿ ಗುರುವಾರ ಕ್ವಿಂಟಲ್ ಕೊಬ್ಬರಿ ₹29,118ಕ್ಕೆ ಏರಿಕೆಯಾಗಿದ್ದು, ಸಾರ್ವಕಾಲಿಕ ದಾಖಲೆ ಬರೆದಿದೆ. ಮಾರುಕಟ್ಟೆಯಲ್ಲಿ 2,538 ಕ್ವಿಂಟಲ್ (5904 ಚೀಲ) ಆವಕವಾಗಿತ್ತು.

ದೀಪಾವಳಿ ವೇಳೆಗೆ ಕ್ವಿಂಟಲ್ ₹25 ಸಾವಿರ ದಾಟಬಹುದು ಎಂಬುದು ವರ್ತಕರು, ರೈತರ ನಿರೀಕ್ಷೆಯಾಗಿತ್ತು. ಎಲ್ಲರ ನಿರೀಕ್ಷೆ ಮೀರಿ ಜೂನ್ ತಿಂಗಳಲ್ಲೇ ₹30 ಸಾವಿರದ ಸಮೀಪಕ್ಕೆ ಬಂದಿದೆ. ಕೊಬ್ಬರಿ ಆವಕ ಇಲ್ಲದಿರುವುದರಿಂದ ಬೆಲೆ ಮತ್ತಷ್ಟು ಹೆಚ್ಚಳವಾಗಬಹುದು ಎಂದು ವರ್ತಕರು ಅಂದಾಜಿಸಿದ್ದಾರೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹16000-16000
ದಾವಣಗೆರೆ	₹19244-20000
ತಿಪಟೂರು	₹26000-29118

ಈರುಳ್ಳಿ ಧಾರಣೆ (ಪ್ರತಿ ಕ್ವಿಂಟಾಲ್) ಬೆಂಗಳೂರು

ದೊಡ್ಡ	₹1,400-1,800
ಮಧ್ಯಮ	₹800-1,400
ಸಣ್ಣ	₹400-800

ಸಂಪತ್ತು ₹9.70 ಲಕ್ಷ ಕೋಟಿ ವೃದ್ಧಿ

ನವದೆಹಲಿ / ಮುಂಬೈ (ಪಿಟಿಐ): ಮೂರು ದಿನಗಳ ವಹಿವಾಟಿನಲ್ಲಿ ಷೇರುಪೇಟೆ ಸೂಚ್ಯಂಕಗಳು ಏರಿಕೆ ಕಂಡ ಪರಿಣಾಮವಾಗಿ ಹೂಡಿಕೆದಾರರ ಸಂಪತ್ತು ₹9.70 ಲಕ್ಷ ಕೋಟಿಯಷ್ಟು ವೃದ್ಧಿಸಿದೆ.

ಸೂಚ್ಯಂಕಗಳ ಏರಿಕೆಯಿಂದಾಗಿ ಬಿಎಸ್‌ಇ ನೋಂದಾಯಿತ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯ (ಎಂ–ಕ್ಯಾಪ್) ₹457 ಲಕ್ಷ ಕೋಟಿಗೆ ಹೆಚ್ಚಳ ಆಗಿದೆ.

ಜಾಗತಿಕ ರಾಜಕೀಯ ಬಿಕ್ಕಟ್ಟಿನ ತೀವ್ರತೆ ತಗ್ಗುತ್ತಿದ್ದು, ಹೂಡಿಕೆದಾರರಲ್ಲಿ ಆಶಾವಾದ ಹೆಚ್ಚುತ್ತಿದೆ. ಇದು ಗುರುವಾರದ ವಹಿವಾಟಿನಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳ ಏರಿಕೆಗೆ ಕಾರಣವಾಗಿದೆ. ಅಲ್ಲದೆ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್ ಷೇರುಗಳ ಖರೀದಿಯ ಹೆಚ್ಚಳ ಸಹ ಸೂಚ್ಯಂಕಗಳ ಏರಿಕೆಗೆ ಕಾರಣವಾದವು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1 ಸಾವಿರ ಅಂಶ (ಶೇ 1.21) ಏರಿಕೆಯಾಗಿ, 83,755ಕ್ಕೆ ವಹಿವಾಟು ಅಂತ್ಯಗೊಂಡಿದೆ. ದಿನದ ವಹಿವಾಟಿನ ವೇಳೆ 1,056 ಅಂಶದವರೆಗೆ ಜಿಗಿತ ಕಂಡಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 304 ಅಂಶ ಹೆಚ್ಚಳವಾಗಿ, 25,549ಕ್ಕೆ ಕೊನೆಗೊಂಡಿದೆ.

ಟಾಟಾ ಸ್ಟೀಲ್, ಬಜಾಜ್ ಫೈನಾನ್ಸ್, ಭಾರ್ತಿ ಏರ್‌ಟೆಲ್, ಅದಾನಿ ಪೋರ್ಟ್ಸ್, ಎಟರ್ನಲ್, ಬಜಾಜ್ ಫಿನ್‌ಸರ್ವ್, ಎನ್‌ಟಿಪಿಸಿ, ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಎಕ್ಸಿಸ್ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಟ್ರೆಂಟ್, ಎಸ್‌ಬಿಐ, ಟೆಕ್ ಮಹೀಂದ್ರ, ಮಾರುತಿ ಸುಜುಕಿ ಮತ್ತು ಮಹೀಂದ್ರ ಆ್ಯಂಡ್ ಮಹೀಂದ್ರ ಕಂಪನಿಯ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲ ದರವು ಶೇ 0.18ರಷ್ಟು ಏರಿಕೆಯಾಗಿದೆ. ಪ್ರತೀ ಬ್ಯಾರೆಲ್ ಬೆಲೆ 67.80 ಡಾಲರ್ ಆಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬುಧವಾರದ ವಹಿವಾಟಿನಲ್ಲಿ ₹2,427 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹2,372 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ರಿಲಯನ್ಸ್ ಎಂ–ಕ್ಯಾಪ್ ಹೆಚ್ಚಳ: ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯ ಶೇ 2ರಷ್ಟು ಹೆಚ್ಚಳವಾಗಿದೆ. ಇದರಿಂದ ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯಕ್ಕೆ ₹37,837 ಕೋಟಿ ಸೇರ್ಪಡೆಯಾಗಿದೆ. ಕಂಪನಿಯ ಒಟ್ಟು ಮಾರುಕಟ್ಟೆ ಬಂಡವಾಳ ಮೌಲ್ಯ ಮತ್ತೆ ₹20 ಲಕ್ಷ ಕೋಟಿ ದಾಟಿದೆ. ಕಳೆದ ವರ್ಷದ ಫೆಬ್ರುವರಿ 13ರಂದು ಕಂಪನಿಯ ಮಾರುಕಟ್ಟೆ ಬಂಡವಾಳ ಮೌಲ್ಯವು ₹20 ಲಕ್ಷ ಕೋಟಿ ದಾಟಿತ್ತು.

ಮುಂಬೈ ಧಾರಣೆ (ಶೇಂಗಾ)

26-06-2025	
ಜಾವಾ 70/80(ಹೊಸ)	9500-9600
ಜಾವಾ 80/90(ಹೊಸ)	9000-9100
ದಪ್ಪ ಮಧ್ಯಪ್ರದೇಶ (ಹೊಸ)	7500-7600
ದಪ್ಪ ಗುಜರಾತ್ (ಹೊಸ)	7800-7900
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1395 (1400)
ಒಂದು ವಾರದ ಡೆಲಿವರಿ	1385 (1395)
ಪಾಮ್ ವಾರದ ಡೆಲಿವರಿ	1183 (1188)
ಸೂರ್ಯಕಾಂತಿ ಎಣ್ಣೆ ಕಚ್ಚಾ	1260 (1265)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	96,650 (96,600)
ಬೆಳ್ಳಿ ಕೆ.ಜಿಗೆ	1,07,100 (1,05,250)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುದ್ದಿ 2 ನಿಮಿಷ

ರೆಪೊ ಇಳಿಕೆ ಪ್ರಯೋಜನ ವರ್ಗಾಯಿಸಿ: ಆರ್‌ಬಿಐ

ಮುಂಬೈ (ಪಿಟಿಐ): ರೆಪೊ ದರದಲ್ಲಿ ಶೇಕಡ 0.50ರಷ್ಟು ಇಳಿಕೆ ಮಾಡುವ ಹಣಕಾಸು ನೀತಿ ಸಮಿತಿಯ (ಎಂಪಿಸಿ) ತೀರ್ಮಾನದ ಪ್ರಯೋಜನವು ಗ್ರಾಹಕರಿಗೆ ತ್ವರಿತವಾಗಿ ಲಭ್ಯವಾಗುವಂತೆ ಮಾಡಲು ಎಲ್ಲ ಬ್ಯಾಂಕ್‌ಗಳು ತಮ್ಮ ಸಾಲಗಳ ಮೇಲಿನ ಬಡ್ಡಿ ದರವನ್ನು ತಗ್ಗಿಸಬೇಕು ಎಂದು ಆರ್‌ಬಿಐ ವಾರ್ತಾಪತ್ರ ಹೇಳಿದೆ.

ಆರ್‌ಬಿಐನ ಜೂನ್ ತಿಂಗಳ ವಾರ್ತಾಪತ್ರದಲ್ಲಿ ಪ್ರಕಟವಾಗಿರುವ ಲೇಖನವೊಂದು, ರೆಪೊ ದರದಲ್ಲಿನ ಇಳಿಕೆಯನ್ನು ವರ್ಗಾವಣೆ ಮಾಡಲು ಹಣಕಾಸು ಪರಿಸ್ಥಿತಿಯು ಅನುಕೂಲಕರವಾಗಿ ಇದೆ ಎಂದು ಹೇಳಿದೆ. ಫೆಬ್ರುವರಿ ಹಾಗೂ ಏಪ್ರಿಲ್‌ನಲ್ಲಿ ಆದ ರೆಪೊ ಇಳಿಕೆಯ ನಿರ್ಧಾರದ ಪ್ರಯೋಜನವನ್ನು ಬಹುತೇಕ ಬ್ಯಾಂಕ್‌ಗಳು ಗ್ರಾಹಕರಿಗೆ ವರ್ಗಾವಣೆ ಮಾಡಿವೆ.

ಜೂನ್ 6ರಂದು ಆರ್‌ಬಿಐ ರೆಪೊ ದರವನ್ನು ಶೇ 0.50ರಷ್ಟು ಕಡಿಮೆ ಮಾಡಿದೆ. ಎಸ್‌ಬಿಐ, ಬ್ಯಾಂಕ್ ಆಫ್ ಬರೋಡ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನಂತಹ ಹಲವು ದೊಡ್ಡ ಬ್ಯಾಂಕ್‌ಗಳು ಈ ಇಳಿಕೆಯ ಪ್ರಯೋಜನವನ್ನು ಕೂಡ ತಮ್ಮ ಗ್ರಾಹಕರಿಗೆ ಕೆಲವೇ ದಿನಗಳಲ್ಲಿ ವರ್ಗಾವಣೆ ಮಾಡಿವೆ.

ರೆಪೊ ದರವನ್ನು ಶೇ 0.50ರಷ್ಟು ತಗ್ಗಿಸಿದ್ದಷ್ಟೇ ಅಲ್ಲದೆ, ನಗದು ಮೀಸಲು ಅನುಪಾತವನ್ನು (ಸಿಆರ್‌ಆರ್) ಶೇ 1ರಷ್ಟು ಕಡಿಮೆ ಮಾಡುವ ಘೋಷಣೆಯನ್ನು ಕೂಡ ಆರ್‌ಬಿಐ ಜೂನ್‌ನಲ್ಲಿ ಮಾಡಿದೆ.

ಸಿಆರ್‌ಆರ್ ಪ್ರಮಾಣ ಕಡಿಮೆ ಮಾಡಿರುವುದು ಬ್ಯಾಂಕಿಂಗ್ ವ್ಯವಸ್ಥೆಗೆ ಡಿಸೆಂಬರ್ ವೇಳೆಗೆ ಅಂದಾಜು ₹2.5 ಲಕ್ಷ ಕೋಟಿ ಸಿಗುವಂತೆ ಮಾಡುತ್ತದೆ.

‘ಇದು ನಗದು ಹರಿವನ್ನು ನೀಡುವು ದಲ್ಲದೆ, ಬ್ಯಾಂಕ್‌ಗಳು ತಾವು ಸಾಲ ನೀಡಲು ಅಗತ್ಯವಿರುವ ಹಣವನ್ನು ಕಡಿಮೆ ವೆಚ್ಚದಲ್ಲಿ ಸಂಗ್ರಹಿಸುವುದಕ್ಕೆ ನೆರವಾಗುತ್ತದೆ’ ಎಂದು ಲೇಖನವು ಹೇಳಿದೆ. ಈ ಲೇಖನದಲ್ಲಿ ವ್ಯಕ್ತವಾಗಿರುವ ಅಭಿಪ್ರಾಯವು ಲೇಖಕರದ್ದೇ ವಿನಾ ತನ್ನದಲ್ಲ ಎಂದು ಆರ್‌ಬಿಐ ಸ್ಪಷ್ಟಪಡಿಸಿದೆ.

ಬೇಹುಗಾರಿಕೆ ಆರೋಪ ನಾಲ್ವರ ಬಂಧನ

ಕರಾಚಿ (ಪಿಟಿಐ): ಭಾರತದ ಪರ ಬೇಹುಗಾರಿಕೆ ಚಟುವಟಿಕೆಯಲ್ಲಿ ಭಾಗಿಯಾಗಿದ್ದ ಆರೋಪದಡಿ ಕರಾಚಿಯಲ್ಲಿ ನಾಲ್ವರನ್ನು ಬಂಧಿಸಲಾಗಿದೆ ಎಂದು ಪಾಕಿಸ್ತಾನದ ಸಿಂಧ್ ಪೊಲೀಸರು ಗುರುವಾರ ತಿಳಿಸಿದ್ದಾರೆ.

ಶಂಕಿತರನ್ನು ಖೈದಾಬಾದ್ ಪ್ರದೇಶದಲ್ಲಿ ಬಂಧಿಸಲಾಗಿದೆ. ಆರೋಪಿಗಳು ದೇಶಕ್ಕೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಗಳ ವಿಡಿಯೊ ಮತ್ತು ಫೋಟೊಗಳನ್ನು ಸೆರೆಹಿಡಿದಿದ್ದರು. ಅವರ ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದು, ವಿಧಿವಿಜ್ಞಾನ ಪರೀಕ್ಷೆಗೆ ಕಳುಹಿಸಲಾಗಿದೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಶೊಯೆಬ್ ಮಹ್ಮೂದ್ ಮೆಮನ್ ತಿಳಿಸಿದ್ದಾರೆ.

‘ಶಂಕಿತರಿಂದ ಗ್ರೆನೇಡ್‌ಗಳು, ಒಂದು ಕಲಾಶ್ನಿಕೋವ್ ಬಂದೂಕು, ಒಂದು ರೈಫಲ್ ಮತ್ತು ಎರಡು ಪಿಸ್ತೂಲ್ ಮತ್ತು ಮೊಬೈಲ್ ಫೋನ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಶಂಕಿತರು ಭಾರತೀಯ ಗುಪ್ತಚರ ಇಲಾಖೆಯ ಪರ ಕೆಲಸ ಮಾಡುತ್ತಿದ್ದರು’ ಎಂದು ತಿಳಿಸಿದ್ದು, ಅದಕ್ಕೆ ಪೂರಕವಾದ ಯಾವುದೇ ಸಾಕ್ಷ್ಯವನ್ನು ಒದಗಿಸಿಲ್ಲ.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆ ಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-ರಿಂದ 20,000/-. ESI, PF, 10ಲಕ್ಷ ಇನ್ಸೂರೆನ್ಸ್ ಸೌಲಭ್ಯ ವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9606384001, 9606385001.

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ,ತಿಂಗಳಿಗೆ, 15,000.ರಿಂದ 20,000. ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಇತರೆ

Medical

ಉಚಿತ ಶಿಬಿರ 7 ದಿನಗಳು ಮಾತ್ರ. ದಿನಾಂಕ 28-06-2025 ರಿಂದ 04-07-2025 ವರೆಗೆ. ಸಮಯ ಮಧ್ಯಾಹ್ನ 2:00 ರಿಂದ ಸಂಜೆ 4 ರವರೆಗೆ. ಮಂಡಿ ನೋವು, ಬೆನ್ನು ನೋವು, ಕೀಲು ನೋವು, ವೆರಿಕೋಸ್ ವೇನ್ಸ್, ಮಾನಸಿಕ ಸಮಸ್ಯೆ, ತಲೆನೋವು, ಮೈಗ್ರೇನ್, ಭುಜದ ನೋವು,ಲಕ್ವಾ, ಸೊಂಟ ಮತ್ತು ಕಾಲುಗಳಲ್ಲಿ ಶಕ್ತಿ ಕಳೆದುಕೊಂಡವರಿಗೆ ಯಾವುದೇ ರೀತಿ ಔಷಧಿ ಅಥವಾ ಶಸ್ತ್ರ ಚಿಕಿತ್ಸೆ ಇಲ್ಲದೆ ACU ಥೆರಪಿಯಿಂದ ಚಿಕಿತ್ಸೆ ಪಡೆಯಿರಿ. ವಿಳಾಸ: ಸನ್ಮಾನ್ ಹೋಟೆಲ್ ಹತ್ತಿರ ಶೇಷಾದ್ರಿಪುರಂ, ಬೆಂಗಳೂರು. ಮೊಬೈಲ್: 7349494852

ವೈಯಕ್ತಿಕ

Change of Name

I, GEETHARANI A R W/O G P Jagadish born on 05/05/1987 residing at Gulooru Village Koppa Hobali Maddur TQ Mandya Dist 571425, have changed my name to Shivageetha vide affidavit dated 24 june 2025 at Maddur

ಪ್ರವಾಸ

Travel

11ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 7 ದಿನಗಳ ಲೇಲಡಾಕ್. 6 ದಿನಗಳ ಶ್ರೀಲಂಕಾ ಪ್ರವಾಸ. 18ದಿನಗಳ ಯುಕೆ ಮತ್ತು ಯುರೋಪ್ ಪ್ರವಾಸ. 11 ದಿನಗಳ ಕಾಂಬೋಡಿಯ ವಿಯೆಟ್ನಾಂ. 8ದಿನಗಳ ಮುಕ್ತಿನಾಥ ಪ್ರವಾಸ (ನೇಪಾಳ) 7 ದಿನಗಳ ನಾರ್ತ್ ಈಸ್ಟ್ ಸ್ಪೆಷಲ್ ಸಂಪರ್ಕಿಸಿ: ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್ 9900099252 9900080793

ರಾಮಕಮಲ್ ಟೂರ್ಸ್, ಜುಲೈ ತಿಂಗಳಲ್ಲಿ ಕಾಶಿ ಅಯೋಧ್ಯ ವಿಮಾನ ಪ್ರವಾಸ ಕೇವಲ 19500/-, ಶಿರಡಿ, ಮೂರುಜ್ಯೋತಿರ್ಲಿಂಗ ದರ್ಶನ, 9481226296, 9945476296

DH DECCAN HERALD Classifieds More value, more impact
ಪ್ರಜಾವಾಣಿ
EDUCATION
Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
*Conditions apply
For more details contact:
+91 9731810277 | +91 9886213331
080- 45557163/164

ಅಮೆರಿಕಕ್ಕೆ ತಾಕೀತು ಮಾಡಿದ ಇರಾನ್‌ನ ಸರ್ವೋಚ್ಚ ನಾಯಕ

ಇರಾನ್ ತಂಟೆಗೆ ಬಂದರೆ ಎಚ್ಚರ: ಖಮೇನಿ

ಅಯಾತೊಲ್ಲಾ ಅಲಿ ಖಮೇನಿ

ದುಬೈ (ಎಪಿ): ‘ಕತಾರ್‌ನಲ್ಲಿರುವ ಅಮೆರಿಕದ ನೆಲೆಯ ಮೇಲೆ ದಾಳಿ ನಡೆಸುವ ಮೂಲಕ ನಾವು ಅಮೆರಿಕಕ್ಕೆ ಕಪಾಳಮೋಕ್ಷ ಮಾಡಿದ್ದೇವೆ. ಇರಾನ್ ಮೇಲೆ ಮತ್ತೆ ದಾಳಿಗೆ ಮುಂದಾದರೆ ಅಮೆರಿಕ ದುಬಾರಿ ಬೆಲೆ ತೆರಬೇಕಾಗುತ್ತದೆ. ಭವಿಷ್ಯದಲ್ಲಿ ಇದು ಪುನರಾವರ್ತನೆ ಆಗದಂತೆ ಎಚ್ಚರಿಕೆ ವಹಿಸಿ’ ಎಂದು ಇರಾನ್‌ನ ಸರ್ವೋಚ್ಚ ನಾಯಕ ಅಯಾತೊಲ್ಲಾ ಅಲಿ ಖಮೇನಿ ಅಮೆರಿಕಕ್ಕೆ ತಾಕೀತು ಮಾಡಿದ್ದಾರೆ.

ಇಸ್ರೇಲ್ ಜತೆಗೆ ಕದನ ವಿರಾಮ ಘೋಷಣೆಯಾಗಿ ಎರಡು ದಿನಗಳ ಬಳಿಕ ಸಾರ್ವಜನಿಕ ಹೇಳಿಕೆ ನೀಡಿರುವ ಖಮೇನಿ, ಅಮೆರಿಕ ಮತ್ತು ಇಸ್ರೇಲ್‌ಗೆ ಕಟು ಶಬ್ದಗಳಲ್ಲಿ ಎಚ್ಚರಿಕೆ ಸಂದೇಶ ರವಾನಿಸಿದ್ದಾರೆ. ‘ಇರಾನ್ ತಂಟೆಗೆ ಬಂದರೆ ಭಾರಿ ಬೆಲೆ ತೆರಬೇಕಾಗುತ್ತದೆ’ ಎಂದು ಎಚ್ಚರಿಸಿದ್ದಾರೆ. ಖಮೇನಿ ಮಾತನಾಡುತ್ತಿರುವ 10 ನಿಮಿಷಗಳ ವಿಡಿಯೊ ತುಣುಕನ್ನು ಇರಾನ್ ರಾಷ್ಟ್ರೀಯ ಟಿವಿ ಪ್ರಸಾರ ಮಾಡಿದೆ.

ಜೂನ್ 22ರಂದು ಇರಾನ್‌ನ ಮೂರು ಪರಮಾಣು ಘಟಕಗಳನ್ನು ಗುರಿಯಾಗಿಸಿಕೊಂಡು ಅಮೆರಿಕ ನಡೆಸಿದ ದಾಳಿಯ ಬಗ್ಗೆ ಪ್ರತಿಕ್ರಿಯಿಸಿರುವ ಖಮೇನಿ, ‘ಈ ದಾಳಿಗೆ ಸಂಬಂಧಿಸಿದಂತೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಹೇಳಿಕೆ ಉತ್ಪ್ರೇಕ್ಷಿತ. ಅವರು ಮಹತ್ವದ್ದೇನನ್ನೂ ಸಾಧಿಸಿಲ್ಲ’ ಎಂದು ಹೇಳಿದ್ದಾರೆ.

‘ಕತಾರ್‌ನಲ್ಲಿನ ಅಮೆರಿಕದ ವಾಯುನೆಲೆಯ ಮೇಲೆ ಇರಾನ್ ನಡೆಸಿರುವ ದಾಳಿಯು ಈ ಪ್ರದೇಶದಲ್ಲಿ ಅಮೆರಿಕದ ನೆಲೆಗಳನ್ನು ಪ್ರವೇಶಿಸುವ ಸಾಮರ್ಥ್ಯ ನಮ್ಮ ರಾಷ್ಟ್ರಕ್ಕೆ ಇದೆ ಮತ್ತು ಅಗತ್ಯ ಸಂದರ್ಭದಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತೇವೆ ಎಂಬ ಸಂದೇಶವನ್ನು ರವಾನಿಸಿದೆ’ ಎಂದಿದ್ದಾರೆ.

‘ನಮ್ಮ ದಾಳಿಯಿಂದ ಇರಾನ್‌ನ ಪರಮಾಣು ಯೋಜನೆಯ ಪ್ರಗತಿಯನ್ನು ಹಲವು ದಶಕಗಳ ಹಿಂದಕ್ಕೆ ತಳ್ಳಿದ್ದೇವೆ. ಇರಾನ್‌ನ ಪರಮಾಣು ಘಟಕಗಳನ್ನು ಸಂಪೂರ್ಣವಾಗಿ ನಾಶ ಮಾಡಿದ್ದೇವೆ’ ಎಂದು ಟ್ರಂಪ್ ಹೇಳಿದ್ದರು.

‘ಇರಾನ್–ಇಸ್ರೇಲ್ ಯುದ್ಧದಲ್ಲಿ ತಾನು ಮಧ್ಯಪ್ರವೇಶ ಮಾಡದಿದ್ದರೆ ‘ಜಿಯೊನಿಸ್ಟ್ ಚಳವಳಿ’ ಸಂಪೂರ್ಣ ನಾಶವಾಗಲಿದೆ’ ಎಂದು ಅಮೆರಿಕ ಭಾವಿಸಿದೆ. ಈ ಕಾರಣಕ್ಕಾಗಿಯೇ ಅಮೆರಿಕ ಯುದ್ಧದಲ್ಲಿ ಮಧ್ಯಪ್ರವೇಶಿಸಿದೆ. ಆದರೆ, ಇದರಿಂದ ಅವರು ಸಾಧಿಸಿದ್ದೇನೂ ಇಲ್ಲ’ ಎಂದು ಖಮೇನಿ ಹೇಳಿದ್ದಾರೆ.

‘ಇರಾನ್‌ನ ಪರಮಾಣು ಘಟಕಗಳ ಮೇಲೆ ಅಮೆರಿಕ ನಡೆಸಿರುವ ದಾಳಿಯಿಂದ ದೊಡ್ಡ ಪ್ರಮಾಣದ ಹಾನಿಯಾಗಿದೆ’ ಎಂದು ಪರಮಾಣು ಯೋಜನೆಗಳ ಮೇಲೆ ನಿಗಾ ವಹಿಸುವ ವಿಶ್ವಸಂಸ್ಥೆಯ ಇಂಟರ್‌ನ್ಯಾಷನಲ್ ಆಟೊಮಿಕ್ ಎನರ್ಜಿ ಏಜೆನ್ಸಿಯ ನಿವೃತ್ತ ನಿರ್ದೇಶಕ ರಫೇಲ್ ಗ್ರೊಸಿ ಹೇಳಿದ್ದಾರೆ.

ಇರಾನ್‌ನ ಪರಮಾಣು ಘಟಕ, ಸೇನಾಧಿಕಾರಿಗಳು, ವಿಜ್ಞಾನಿಗಳನ್ನು ಗುರಿಯಾಗಿಸಿಕೊಂಡು ಇಸ್ರೇಲ್ ಜೂನ್ 13ರಂದು ದಾಳಿ ನಡೆಸಿತ್ತು. ಇದರ ಬೆನ್ನಲ್ಲೇ ಖಮೇನಿ ಅಜ್ಞಾತ ಸ್ಥಳದಲ್ಲಿ ತಲೆಮರೆಸಿಕೊಂಡಿದ್ದರು. ಜೂನ್ 19ರಂದು ಅವರು ಸಾರ್ವಜನಿಕವಾಗಿ ಕಾಣಿಸಿಕೊಂಡಿದ್ದರು.

ಶಾಂತಿ ಸ್ಥಾಪನೆ ಯತ್ನ: ಇರಾನ್ ಮತ್ತು ಅಮೆರಿಕದ ಅಧಿಕಾರಿಗಳು ಶೀಘ್ರದಲ್ಲೇ ಮಾತುಕತೆ ನಡೆಸಲಿದ್ದು, ಇರಾನ್‌ನಲ್ಲಿ ದೀರ್ಘಕಾಲಿಕ ಶಾಂತಿ ಸ್ಥಾಪನೆಗೆ ಪ್ರಯತ್ನಿಸುವುದಾಗಿ ಟ್ರಂಪ್ ಹೇಳಿದ್ದಾರೆ. ಆದರೆ, ಇಂತಹ ಯಾವುದೇ ಮಾತುಕತೆಯನ್ನು ಇರಾನ್ ಒಪ್ಪಿಕೊಂಡಿಲ್ಲ. ಇರಾನ್ ಮತ್ತು ಅಮೆರಿಕ ನಿಯೋಗದ ನಡುವಿನ ಮಾತುಕತೆ ಜೂನ್ ಆರಂಭದಲ್ಲಿ ಒಮಾನ್‌ನಲ್ಲಿ ನಿಗದಿಯಾಗಿತ್ತು. ಆದರೆ, ಜೂನ್ 13ರಂದು ಇಸ್ರೇಲ್, ಇರಾನ್ ಮೇಲೆ ದಾಳಿ ನಡೆಸಿದ ಬೆನ್ನಲ್ಲೇ ಈ ಮಾತುಕತೆಯನ್ನು ಮುಂದೂಡಲಾಗಿತ್ತು.

ಸಹಜ ಸ್ಥಿತಿಗೆ ಜನಜೀವನ

ಇಸ್ರೇಲ್ ಜತೆಗೆ ಕದನ ವಿರಾಮದ ಘೋಷಣೆಯಾದ ನಂತರ ಇರಾನ್‌ನಲ್ಲಿ ಜನಜೀವನ ಸಹಜ ಸ್ಥಿತಿಗೆ ಮರಳುತ್ತಿದೆ. ರಾಜಧಾನಿ ಟೆಹರಾನ್‌ನಲ್ಲಿ ಗುರುವಾರ ವಿಮಾನ ನಿಲ್ದಾಣವನ್ನು ಭಾಗಶಃ ತೆರೆಯಲಾಗಿತ್ತು. ಅಂಗಡಿ–ಮುಂಗಟ್ಟುಗಳು ತೆರೆದಿದ್ದವು. ವಾಹನ ಸಂಚಾರ ಪುನರಾರಂಭಗೊಂಡಿದೆ.

‘ವಿಮಾನ ನಿಲ್ದಾಣದ ಕಾರ್ಯಾಚರಣೆ ಪುನರಾರಂಭಗೊಂಡಿದೆ. ದೇಶೀಯ ಮತ್ತು ಅಂತರರಾಷ್ಟ್ರೀಯ ವಿಮಾನಗಳ ಹಾರಾಟ ನಿಧಾನವಾಗಿ ಆರಂಭಗೊಂಡಿದೆ’ ಎಂದು ಇರಾನ್‌ನ ರಸ್ತೆ ಮತ್ತು ನಗರಾಭಿವೃದ್ಧಿ ಸಚಿವ ಮಸ್ಜಿದ್ ಅಖ್ವಾನ್ ಹೇಳಿದ್ದಾರೆ.

ಅಪಾರ ಸಾವು–ನೋವು

ಇಸ್ರೇಲ್ ಜತೆಗಿನ ಸಂಘರ್ಷದಿಂದಾಗಿ ಕಳೆದ ಒಂದು ವಾರದಲ್ಲಿ 606 ಜನರು ಮೃತಪಟ್ಟಿದ್ದು, 5,332 ಮಂದಿ ಗಾಯಗೊಂಡಿದ್ದಾರೆ ಎಂದು ಟೆಹರಾನ್ ಹೇಳಿದೆ. ವಾಷಿಂಗ್ಟನ್ ಮೂಲದ ಮಾನವ ಹಕ್ಕುಗಳ ಸಂಘಟನೆ ಬಿಡುಗಡೆ ಮಾಡಿರುವ ಅಂಕಿ ಅಂಶದಂತೆ, ಇಸ್ರೇಲ್ ನಡೆಸಿದ ದಾಳಿಯಲ್ಲಿ ಇರಾನ್‌ನ 1,054 ಮಂದಿ ಮೃತಪಟ್ಟಿದ್ದು, 4,476 ಮಂದಿ ಗಾಯಗೊಂಡಿದ್ದಾರೆ. ಮೃತಪಟ್ಟವರಲ್ಲಿ 417 ಮಂದಿ ಸಾರ್ವಜನಿಕರು ಮತ್ತು 318 ಜನರು ಸೇನಾ ಸಿಬ್ಬಂದಿ ಸೇರಿದ್ದಾರೆ.

ಇರಾನ್‌ನ ಪ್ರತಿದಾಳಿಯಲ್ಲಿ ಇಸ್ರೇಲ್‌ನಲ್ಲಿ 28 ಜನರು ಮೃತಪಟ್ಟಿದ್ದು, 1 ಸಾವಿರಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಸೈಬರ್ ಅಪರಾಧಿಗಳಿಂದ 8.5 ಲಕ್ಷ ಖಾತೆಗಳ ಬಳಕೆ: ಸಿಬಿಐ

ನವದೆಹಲಿ (ಪಿಟಿಐ): ದೇಶದ ವಿವಿಧೆಡೆಗಳಲ್ಲಿ ಇರುವ 700ಕ್ಕೂ ಹೆಚ್ಚಿನ ಬ್ಯಾಂಕ್ ಶಾಖೆಗಳಲ್ಲಿ, ಅಕ್ರಮವಾಗಿ ಗಳಿಸಿದ ಹಣದ ವಹಿವಾಟಿಗೆ ಒಟ್ಟು 8.50 ಲಕ್ಷ ಖಾತೆಗಳನ್ನು ತೆರೆಯಲಾಗಿದೆ ಎಂಬುದನ್ನು ಸಿಬಿಐ ಪತ್ತೆ ಮಾಡಿದೆ.

ಡಿಜಿಟಲ್ ಕಳ್ಳತನ, ಹೂಡಿಕೆ ವಂಚನೆ, ಯುಪಿಐ ಆಧಾರಿತ ವಂಚನೆಗಳ ಮೂಲಕ ಗಳಿಸುವ ಹಣವನ್ನು ವರ್ಗಾವಣೆ ಮಾಡಲು ಸೈಬರ್ ಅಪರಾಧಿಗಳು ಈ ಖಾತೆಗಳನ್ನು ಬಳಸಿಕೊಳ್ಳುತ್ತಿದ್ದಾರೆ ಎಂದು ಸಿಬಿಐ ಹೇಳಿದೆ.

ಸಂತ್ರಸ್ತರ ಖಾತೆಗಳಿಂದ ಹಣ ಸೆಳೆಯುವ ಉದ್ದೇಶದಿಂದ ಅಪರಾಧಿಗಳು ಈ ಖಾತೆಗಳನ್ನು ನಕಲಿ ಗುರುತಿನ ಚೀಟಿ ನೀಡಿ ತೆರೆದಿದ್ದಾರೆ ಎಂಬುದು ತನಿಖೆಯಿಂದ ಗೊತ್ತಾಗಿದೆ. ರಾಜಸ್ಥಾನ, ದೆಹಲಿ, ಹರಿಯಾಣ, ಉತ್ತರಾಖಂಡ ಮತ್ತು ಉತ್ತರಪ್ರದೇಶದಲ್ಲಿ 42 ಸ್ಥಳಗಳಲ್ಲಿ ನಡೆಸಿದ ಶೋಧ ಕಾರ್ಯಾಚರಣೆ ವೇಳೆ ಈ ಖಾತೆಗಳ ಬಗ್ಗೆ ಮಾಹಿತಿ ಸಿಕ್ಕಿದೆ. ಈ ಕಾರ್ಯಾಚರಣೆ ಸಂದರ್ಭದಲ್ಲಿ ಒಂಬತ್ತು ಮಂದಿ ಶಂಕಿತರನ್ನು ವಶಕ್ಕೆ ಪಡೆಯಲಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

ಆಘಾತಕಾರಿ ಸಂಗತಿ ಎಂದರೆ, ಈ ಖಾತೆಗಳನ್ನು ತೆರೆಯಲು ಬ್ಯಾಂಕ್ ಅಧಿಕಾರಿಗಳು, ಇ-ಮಿತ್ರ

ಏಜೆಂಟರು ಕೂಡ ಅಪರಾಧಿಗಳ ಜೊತೆ ಕೈಜೋಡಿಸಿರುವ ಸಾಧ್ಯತೆ ಇದೆ ಎಂಬುದು ಸಿಬಿಐ ನಡೆಸಿರುವ ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

‘ಇಂತಹ ಖಾತೆಗಳನ್ನು ಬಹುತೇಕ ಪ್ರಕರಣಗಳಲ್ಲಿ ಒಂದು ಬಾರಿಗೆ ಮಾತ್ರವೇ ಬಳಕೆ ಮಾಡಲಾಗುತ್ತಿತ್ತು. ಈ ಖಾತೆಗೆ ಒಮ್ಮೆ ಹಣ ಬಂದ ನಂತರ, ಅದನ್ನು ಬೇರೆ ಬೇರೆ ಖಾತೆಗಳಿಗೆ ವರ್ಗಾವಣೆ ಮಾಡಲಾಗುತ್ತಿತ್ತು. ನಂತರ ಮೂಲ ಖಾತೆಯನ್ನು ಮುಚ್ಚಲಾಗುತ್ತಿತ್ತು. ಹೀಗಾಗಿ ಅಪರಾಧಿಗಳನ್ನು ಪತ್ತೆ ಮಾಡುವುದು ಕಷ್ಟವಾಗುತ್ತಿತ್ತು’ ಎಂದು ಅಧಿಕಾರಿಯೊಬ್ಬರು ಹೇಳಿದ್ದಾರೆ.

‘ಕೆವೈಸಿ ನಿಯಮಗಳನ್ನು ಸರಿಯಾಗಿ ಪಾಲನೆ ಮಾಡದೆಯೇ ಖಾತೆಗಳನ್ನು ತೆರೆಯಲಾಗಿದೆ. ಅನುಮಾನಾಸ್ಪದ ವಹಿವಾಟುಗಳ ಬಗ್ಗೆ ಸರಿಯಾಗಿ ಪರಿಶೀಲನೆ ನಡೆಸುವಲ್ಲಿ ಸಂಬಂಧಪಟ್ಟ ಬ್ಯಾಂಕ್ ಶಾಖೆಗಳ ಮುಖ್ಯಸ್ಥರು ಕೂಡ ವಿಫಲರಾಗಿದ್ದಾರೆ’ ಎಂದು ಸಿಬಿಐ ವಕ್ತಾರರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಸ್ಫೋಟ, ಕಾಲ್ತುಳಿತ 29 ವಿದ್ಯಾರ್ಥಿಗಳು ಸಾವು

ಬಾಂಗುಯಿ (ಎಪಿ): ಮಧ್ಯ ಆಫ್ರಿಕಾ ಗಣರಾಜ್ಯದ ರಾಜಧಾನಿಯ ಪ್ರೌಢಶಾಲೆಯೊಂದರಲ್ಲಿ ಸಂಭವಿಸಿದ ಸ್ಫೋಟ ಮತ್ತು ಕಾಲ್ತುಳಿತದಲ್ಲಿ ಕನಿಷ್ಠ 29 ವಿದ್ಯಾರ್ಥಿಗಳು ಮೃತಪಟ್ಟು, 260ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ.

ಬಾಂಗುಯಿ ನಗರದ ಬರ್ತೆಲೆಮಿ ಬೊಗಾಂಡ ಪ್ರೌಢಶಾಲೆ ಆವರಣದಲ್ಲಿದ್ದ ವಿದ್ಯುತ್ ಪರಿವರ್ತಕಕ್ಕೆ ಬುಧವಾರ ವಿದ್ಯುತ್ ಸಂಪರ್ಕ ಕಲ್ಪಿಸುವಾಗ ಸ್ಫೋಟಗೊಂಡಿತು ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

ಶಾಲೆಯಲ್ಲಿ ಅಂದಾಜು 5,000 ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾಗ ಸ್ಫೋಟ ಸಂಭವಿಸಿದೆ. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ದಿಕ್ಕೆಟ್ಟು ಓಡಿದಾಗ ಕಾಲ್ತುಳಿತ ಉಂಟಾಗಿದೆ. ಸತ್ತವರಲ್ಲಿ 16 ವಿದ್ಯಾರ್ಥಿನಿಯರು ಇದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮ್ಯಾನ್ಮಾರ್: ₹2,570 ಕೋಟಿ ಮೌಲ್ಯದ ಡ್ರಗ್ಸ್ ನಾಶ

ಯಾಂಗೋನ್ (ಮ್ಯಾನ್ಮಾರ್) (ಎಪಿ): ಅಂತರರಾಷ್ಟ್ರೀಯ ಮಾದಕ ವಸ್ತು ಸೇವನೆ ಮತ್ತು ಸಾಗಣೆ ವಿರೋಧಿ ದಿನಾಚರಣೆಯ ಅಂಗವಾಗಿ ಮ್ಯಾನ್ಮಾರ್‌ನ ಪ್ರಮುಖ ನಗರಗಳಲ್ಲಿ ₹2,570 ಕೋಟಿ ಮೌಲ್ಯದ ಮಾದಕವಸ್ತುಗಳನ್ನು ಗುರುವಾರ ನಾಶಪಡಿಸಲಾಗಿದೆ. ದೇಶದ ಬೃಹತ್ ನಗರ ಯಾಂಗೋನ್‌ನಲ್ಲಿ ₹ 1,000 ಕೋಟಿ ಮೌಲ್ಯದ ಮಾದಕವಸ್ತುಗಳನ್ನು ಸುಡಲಾಗಿದೆ. ಮಾದಕವಸ್ತುಗಳನ್ನು ಉತ್ಪಾದಿಸುವ ಪ್ರಮುಖ ಸ್ಥಳಗಳ ಬಳಿಯೇ ಅವುಗಳನ್ನು ನಾಶಪಡಿಸುವ ಪ್ರಕ್ರಿಯೆ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೌಕಾಪಡೆ ಕ್ಲರ್ಕ್ ಬಂಧನ

ಜೈಪುರ (ಪಿಟಿಐ): ಹಣಕಾಸಿನ ಆಮಿಷಕ್ಕೆ ಒಳಗಾಗಿ ದೇಶದ ಭದ್ರತೆ ಹಾಗೂ ಆಪರೇಷನ್ ಸಿಂಧೂರಕ್ಕೆ ಸಂಬಂಧಿಸಿದ ಸೂಕ್ಷ್ಮ ಮಾಹಿತಿಗಳನ್ನು ಪಾಕಿಸ್ತಾನದ ವ್ಯಕ್ತಿಯೊಂದಿಗೆ ಹಂಚಿಕೊಂಡಿರುವ ಆರೋಪದಲ್ಲಿ ನೌಕಾಪಡೆಯ ಕೇಂದ್ರ ಕಚೇರಿಯ ಸಿಬ್ಬಂದಿಯೊಬ್ಬರನ್ನು ಬಂಧಿಸಲಾಗಿದೆ.

ಪೊಲೀಸ್ ವರಿಷ್ಠಾಧಿಕಾರಿ (ಸಿಐಡಿ) ವಿಷ್ಣುಕಾಂತ ಗುಪ್ತಾ ಅವರು ಈ ಬಗ್ಗೆ ಗುರುವಾರ ಮಾಹಿತಿ ನೀಡಿದ್ದಾರೆ. ಬಂಧಿತ ವ್ಯಕ್ತಿಯನ್ನು ಹರಿಯಾಣದ ರೇವಾಡಿ ಜಿಲ್ಲೆಯ ವಿಶಾಲ್ ಯಾದವ್ ಎಂದು ಗುರುತಿಸಲಾಗಿದೆ. ನೌಕಾಪಡೆ ಕೇಂದ್ರ ಕಚೇರಿಯ ಡಾಕ್‌ಯಾರ್ಡ್ ನಿರ್ದೇಶನಾಲಯದಲ್ಲಿ ಯಾದವ್ ಹಿರಿಯ ಸಹಾಯಕ (ಯುಡಿಸಿ) ಆಗಿದ್ದರು ಎಂದು ತಿಳಿಸಿದ್ದಾರೆ.

ಪ್ರಿಯಾ ಶರ್ಮಾ ಎಂಬ ಹೆಸರಿನಲ್ಲಿ ಫೇಸ್‌ಬುಕ್ ಮೂಲಕ ಭಾರತೀಯಳ ಸೋಗಿನಲ್ಲಿ ಪರಿಚಯವಾಗಿದ್ದ ಪಾಕಿಸ್ತಾನಿ ಮಹಿಳೆಯೊಂದಿಗೆ ಯಾದವ್, ದೇಶದ ಭದ್ರತೆಗೆ ಸಂಬಂಧಿಸಿದ ವಿವಿಧ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಅವರ ಚಟುವಟಿಕೆಗಳನ್ನು ಗಮನಿಸಿ, ಪಾಕಿಸ್ತಾನಿ ವ್ಯಕ್ತಿಯೊಂದಿಗೆ ಅವರು ಸಂಪರ್ಕ ಹೊಂದಿದ್ದಾರೆಂಬುದು ಖಚಿತವಾದ ಬಳಿಕ ಬುಧವಾರ ಜೈಪುರದಲ್ಲಿ ಯಾದವ್‌ರನ್ನು ಬಂಧಿಸಲಾಗಿದೆ ಎಂದೂ ಹೇಳಿದ್ದಾರೆ.

ಮಾಹಿತಿಗಳನ್ನು ಒದಗಿಸಲು ಪಾಕಿಸ್ತಾನಿ ಮಹಿಳೆಯಿಂದ ₹2 ಲಕ್ಷ ಪಡೆದುಕೊಂಡಿರುವುದನ್ನು ಯಾದವ್ ಒಪ್ಪಿಕೊಂಡಿದ್ದಾರೆ. ಈ ಪೈಕಿ ₹50 ಸಾವಿರವನ್ನು ಆಪರೇಷನ್ ಸಿಂಧೂರಕ್ಕೆ ಸಂಬಂಧಿಸಿದ ಮಾಹಿತಿ ನೀಡಿ ಪಡೆದುಕೊಂಡಿದ್ದಾರೆ. ಕ್ರಿಪ್ಟೊ ಕರೆನ್ಸಿ ಮೂಲಕವೂ ವಹಿವಾಟು ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಲ್ಲದೇ, ಯಾದವ್ ಅವರ ಮೊಬೈಲ್ ಅನ್ನು ವಿಧಿವಿಜ್ಞಾನ ಪರೀಕ್ಷೆಗೆ ಒಳಪಡಿಸಿದಾಗ ಸೂಕ್ಷ್ಮ ಮಾಹಿತಿಗೆ ಸಂಬಂಧಿಸಿದ ದಾಖಲೆ, ಹಣಕಾಸು ವಹಿವಾಟಿನ ಮಾಹಿತಿ, ಕೆಲವು ಸಂದೇಶಗಳು ಪತ್ತೆಯಾಗಿವೆ. ಸದ್ಯಕ್ಕೆ ವಿವಿಧ ತನಿಖಾ ಸಂಸ್ಥೆಗಳು ಅವರನ್ನು ವಿಚಾರಣೆ ನಡೆಸುತ್ತಿವೆ ಎಂದು ಪೊಲೀಸರು ಹೇಳಿದ್ದಾರೆ.

ಶಾಂಘೈ ಸಹಕಾರ ಒಕ್ಕೂಟದ ಶೃಂಗಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್ ಭಾಗವಹಿಸಿದರು. ಇದೇ ವೇಳೆ ಒಕ್ಕೂಟದ ಸದಸ್ಯ ದೇಶಗಳ ರಕ್ಷಣಾ ಸಚಿವರು ಇದ್ದರು –ಎಎಫ್‌ಪಿ ಚಿತ್ರ

ಜಂಟಿ ಹೇಳಿಕೆಗೆ ಸಹಿ ಹಾಕದ ಭಾರತ

ಒಂದನೇ ಪುಟದಿಂದ...

ಜಂಟಿ ಹೇಳಿಕೆಯಲ್ಲಿ ಈ ಬಗ್ಗೆ ಒಂದು ಪ್ಯಾರಾ ಸೇರಿಸಬೇಕು ಎಂದು ಸಂಸ್ಥೆಯ ಸದಸ್ಯ ದೇಶ ಪಾಕಿಸ್ತಾನವು ಸಭೆಯಲ್ಲಿ ಒತ್ತಾಯಿಸಿತು’ ಎಂದು ಮೂಲಗಳು ಹೇಳಿವೆ.

‘ಆದರೆ, ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದನಾ ದಾಳಿಯ ಕುರಿತು, ಇದಕ್ಕೆ ಬೆಂಬಲ ನೀಡಿದ ಪಾಕಿಸ್ತಾನದ ಕುರಿತು, ಆ ದೇಶ ನಡೆಸುವ ಗಡಿಯಾಚೆಗಿನ ಭಯೋತ್ಪಾದನೆಯ ಕುರಿತು ಜಂಟಿ ಹೇಳಿಕೆಯಲ್ಲಿ ಉಲ್ಲೇಖ ಮಾಡುವಂತೆ ಭಾರತ ಒತ್ತಾಯಿಸಿತು. ಆದರೆ, ಒಂದು ದೇಶದ ಕಾರಣದಿಂದ ಇದಕ್ಕೆ ಒಪ್ಪಿಗೆ ದೊರೆಯಲಿಲ್ಲ’ ಎಂದು ತಿಳಿಸಿವೆ.

‘ಪಹಲ್ಗಾಮ್ ದಾಳಿಯ ವಿಚಾರವನ್ನೂ ಉಲ್ಲೇಖಿಸದೆ, ಭಯೋತ್ಪಾದನೆಯ ವಿರುದ್ಧ ಭಾರತದ ನಿಲುವನ್ನೂ ಹೇಳಿಕೆಯಲ್ಲಿ ಸೇರಿಸಲಿಲ್ಲ. ಆದರೆ, ಬಲೂಚಿಸ್ತಾನದಲ್ಲಿ ನಡೆದ ರೈಲು ಅಪಹರಣ ಮಾಡಿಸಿದ್ದು ಭಾರತ ಎಂದು ಆರೋಪಿಸಲಾಗಿದೆ. ಒಕ್ಕೂಟವು ಎಲ್ಲ ಸದಸ್ಯ ದೇಶಗಳ ಒಮ್ಮತದೊಂದಿಗೆ ನಡೆಯುತ್ತದೆ. ಆದರೆ ಪಾಕಿಸ್ತಾನದ ಕಾರಣದಿಂದ ಒಮ್ಮತಕ್ಕೆ ಬರಲಾಗಲಿಲ್ಲ’ ಎಂದಿವೆ. ‘ಶಾಂಘೈ ಸಹಕಾರ ಸಂಸ್ಥೆಯ ಅಧ್ಯಕ್ಷತೆ ವಹಿಸಿಕೊಂಡಿರುವ ಚೀನಾವು ಪಾಕಿಸ್ತಾನದ ಒತ್ತಡದ ಕಾರಣದಿಂದ ಭಾರತದ ಒತ್ತಾಯವನ್ನು ತಳ್ಳಿಹಾಕಿದೆ ಎಂದು ಮೂಲಗಳು ಹೇಳಿವೆ’ ಎಂದು ಎನ್‌ಡಿಟಿವಿ ವರದಿ ಮಾಡಿದೆ.

> ಜಂಟಿ ಹೇಳಿಕೆಯಲ್ಲಿ ಭಯೋತ್ಪಾದನೆಯ ಕುರಿತು ಭಾರತದ ಕಳವಳವನ್ನು ದಾಖಲಿಸಲು ಒಂದು ದೇಶ ಒಪ್ಪಿಕೊಳ್ಳಲಿಲ್ಲ. ಇದಕ್ಕಾಗಿಯೇ ಜಂಟಿ ಹೇಳಿಕೆ ಅಂತಿಮಗೊಳ್ಳಲಿಲ್ಲ
> **ರಣಧೀರ್ ಜೈಸ್ವಾಲ್,** ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ

ಒಕ್ಕೂಟದಲ್ಲಿರುವ ದೇಶಗಳು
ಭಾರತ,ಇರಾನ್,ಕಜಕಿಸ್ತಾನ, ಚೀನಾ,ಪಾಕಿಸ್ತಾನ,ರಷ್ಯಾ,ತಜಕಿಸ್ತಾನ, ಉಜ್ಬೆಕಿಸ್ತಾನ,ಕಿರ್ಗಿಸ್ತಾನ

ಕೆನಡಾ: ಭಾರತೀಯ ಯುವತಿಗೆ ಚಾಕು ಇರಿತ

ಒಟ್ಟಾವಾ (ಪಿಟಿಐ): ಕೆನಡಾದ ಮ್ಯಾನಿಟೋಬಾ ಪ್ರಾಂತ್ಯದಲ್ಲಿ ಭಾರತೀಯ ಯುವತಿಯೊಬ್ಬರ ಮೇಲೆ ದುಷ್ಕರ್ಮಿಗಳು ದಾಳಿ ನಡೆಸಿ, ಚಾಕು ಇರಿದು ಆಕೆಯ ವಸ್ತುಗಳನ್ನು ದೋಚಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ 17 ವರ್ಷದ ಮತ್ತೊಬ್ಬ ಯುವತಿಯನ್ನು ಬಂಧಿಸಿರುವುದಾಗಿ ಪೊಲೀಸರು ಮಾಹಿತಿ ನೀಡಿದ್ದಾರೆ.

ವಿನ್ನಿಪೆಗ್‌ನ ನಿವಾಸಿಯಾಗಿರುವ ತನ್‌ಪ್ರೀತ್ ಕೌರ್ ಸಂಜೆ ಪಾಳಿಯ ಕೆಲಸ ಮುಗಿಸಿ ಮನೆಗೆ ಹಿಂದಿರುಗುವಾಗ ಇಬ್ಬರು ದುಷ್ಕರ್ಮಿಗಳು ಅವರನ್ನು ಅಡ್ಡಗಟ್ಟಿ, ಹಲ್ಲೆ ನಡೆಸಿದ್ದಾರೆ. ಚಾಕುವಿನಿಂದ ಯುವತಿಗೆ ಇರಿದಿದ್ದಾರೆ. ಈ ವೇಳೆ ಯುವತಿ ಚಾಕು ಕಸಿದು, ತನ್ನ ರಕ್ಷಣೆಗೆ ಹೋರಾಡಿದ್ದಾರೆ. ಸ್ಥಳೀಯರು ಬರುತ್ತಿದ್ದಂತೆಯೇ ದುಷ್ಕರ್ಮಿಗಳು ಅವರ ಮೊಬೈಲ್ ಫೋನ್ ಸೇರಿ ವಿವಿಧ ವಸ್ತುಗಳನ್ನು ದೋಚಿ ಪರಾರಿಯಾಗಿದ್ದಾರೆ. ಕೌರ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅವರ ಪರಿಸ್ಥಿತಿ ಗಂಭೀರವಾಗಿದೆ ಎಂದೂ ಪೊಲೀಸರು ತಿಳಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧನಕ್ಕೀಡಾಗಿರುವ ಯುವತಿಯನ್ನು ವಿಚಾರಣೆ ನಡೆಸುತ್ತಿರುವುದಾಗಿಯೂ ಮಾಹಿತಿ ನೀಡಿದ್ದಾರೆ.

ಐಎಸ್‌ಎಸ್ ತಲುಪಿದ ಡ್ರ್ಯಾಗನ್

ದೇಶದಾದ್ಯಂತ ಸಂಭ್ರಮದ ಅಲೆ • ಮೊಳಗಿದ 'ಭಾರತ್ ಮಾತಾ ಕೀ ಜೈ' ಘೋಷಣೆ • ಶುಭಾಂಶು ಕುಟುಂಬದಲ್ಲಿ ಹರ್ಷ

ಲಖನೌ (ಪಿಟಿಐ): ಲಖನೌ ಮೂಲದ ಭಾರತೀಯ ಗಗನಯಾನಿ ಶುಭಾಂಶು ಶುಕ್ಲಾ ಸೇರಿ ನಾಲ್ವರು ಗಗನಯಾನಿಗಳಿದ್ದ 'ಡ್ರ್ಯಾಗನ್' ಬಾಹ್ಯಾಕಾಶ ನೌಕೆಯು ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ (ಐಎಸ್‌ಎಸ್) ನೆಲೆಯೂರುತ್ತಿದ್ದಂತೆ ಭಾರತದಲ್ಲಿ ಸಂಭ್ರಮ ಮನೆ ಮಾಡಿದೆ.

'ಭಾರತ್ ಮಾತಾ ಕೀ ಜೈ', 'ಇಂಡಿಯಾ, ಇಂಡಿಯಾ', 'ಹಿಪ್ ಹಿಪ್ ಹುರ್ರೆ...' ಘೋಷಣೆಗಳು ಮುಗಿಲುಮುಟ್ಟಿವೆ. ಬುಧವಾರ ಯಶಸ್ವಿಯಾಗಿ ಉಡ್ಡಯನವಾದ ನೌಕೆಯು, ಭೂಮಿಯ ಸುತ್ತಲೂ 28 ಗಂಟೆಗಳ ಪರಿಭ್ರಮಿಸಿ, ನಂತರ ಯಶಸ್ವಿಯಾಗಿ ನಿಗದಿತ ಕಕ್ಷೆಯನ್ನು ಗುರುವಾರ ಸೇರಿತು.

ನಾಲ್ವರು ಗಗನಯಾನಿಗಳು ಐಎಸ್‌ಎಸ್ ತಲುಪುತ್ತಿದ್ದಂತೆ ಭಾರತದ ಗಗನಯಾನಿ ಶುಭಾಂಶು ಶುಕ್ಲಾ ಅವರ ತಾಯಿ ಆಶಾ, ತಂದೆ ಶಂಭುಶುಕ್ಲಾ ಹಾಗೂ ಇತರರು ತ್ರಿವರ್ಣ ಧ್ವಜ ಹಿಡಿದು ಲಖನೌದಲ್ಲಿ ಸಂಭ್ರಮಿಸಿದರು —ಪಿಟಿಐ ಚಿತ್ರ

ಶುಭಾಂಶು ಶುಕ್ಲಾ ಅವರು ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದದಲ್ಲಿ ಸ್ಪರ್ಶ ಮಾಡುವುದರ ಹಿಂದೆಯೇ 41 ವರ್ಷದ ನಂತರ ಭಾರತೀಯನೊಬ್ಬ ಈ ಇತಿಹಾಸ ನಿರ್ಮಿಸಿದ ಹಿರಿಮೆಗೆ ಅವರು ಪಾತ್ರರಾದರು.

ಶುಕ್ಲಾ ಅವರ ತಂದೆ-ತಾಯಿ, ಬಂಧುಗಳು, ಶಿಕ್ಷಕರು, ಸ್ನೇಹಿತರು, ಅಸಂಖ್ಯ ವಿದ್ಯಾರ್ಥಿಗಳು ಮತ್ತು ಬಾಹ್ಯಾಕಾಶ ಕ್ಷೇತ್ರದ ಪ್ರೇಮಿಗಳು ಈ ಸಂದರ್ಭದಲ್ಲಿ ಶುಭ ಕೋರಿದರು. ಗಗನಯಾನಿಗಳು ಐಎಸ್‌ಎಸ್‌ನಲ್ಲಿ ನೆಲೆಯೂರುವ ಕ್ಷಣವನ್ನು, ತ್ರಿವರ್ಣಧ್ವಜ ಹಿಡಿದು ಶುಕ್ಲಾ ಅವರ ತಂದೆ-ತಾಯಿ ಕೂಡಾ ಆನಂದಿಸಿದರು.

'ಅವನು ಐಎಸ್‌ಎಸ್ ತಲುಪಿದ್ದಾನೆ, ನಾವು ಚಂದ್ರನ ಮೇಲೆ ಇದ್ದಂತೆ ಭಾಸವಾಗುತ್ತಿದೆ' ಎಂದು ಶುಭಾಂಶು ಅವರ ಸಹೋದರಿ ಸುಚಿ ಮಿಶ್ರಾ ಸಂತಸ ಹಂಚಿಕೊಂಡರು. ಇಡೀ ಭಾರತದಂತೆ, ನಮ್ಮ ಕುಟುಂಬ ಕೂಡಾ ಈ ಕ್ಷಣವನ್ನು ಸಂಭ್ರಮಿಸುತ್ತಿದೆ ಎಂದು ಹೇಳಿದರು.

ಬುಧವಾರದಂತೆ ಗುರುವಾರವೂ ಶುಕ್ಲಾ ಅವರ ತಂದೆ ಶಂಭು ಮತ್ತು ತಾಯಿ ಆಶಾ ಅವರು ಇಲ್ಲಿನ ವರ್ಲ್ಡ್ ಯೂನಿಟಿ ಕನ್ವೆನ್ಷನ್ ಸೆಂಟರ್ (ಡಬ್ಲ್ಯುಯುಸಿಸಿ) ಯಲ್ಲಿ ಈ ಸಂಭ್ರಮವನ್ನು ವೀಕ್ಷಿಸಿದರು. ಶುಕ್ಲಾ ಅವರು ಇಲ್ಲಿಯೇ 12ನೇ ತರಗತಿಯವರೆಗೂ ಶಿಕ್ಷಣ ಪೂರೈಸಿದ್ದರು.

ಆತ ನನ್ನ ಮಗ. ಆದರೆ, ಈ ಹೊತ್ತಿನಲ್ಲಿ ಅದನ್ನೂ ಮೀರಿದವನು. ನಮ್ಮ ಆಶೀರ್ವಾದದೊಂದಿಗೆ ಅಸಂಖ್ಯ ಭಾರತೀಯರ ಕನಸು ಮತ್ತು ಪ್ರಾರ್ಥನೆಯನ್ನು ಅಂತರಿಕ್ಷಕ್ಕೆ ಒಯ್ದಿದ್ದಾನೆ ಎಂದು ಶುಭಾಂಶು ಅವರ ತಂದೆ ಇಲ್ಲಿ ಪ್ರತಿಕ್ರಿಯಿಸಿದರು.

ಶೂನ್ಯ ಗುರುತ್ವದ ಸೂಚಕ 'ಜಾಯ್'

ನವದೆಹಲಿ: ಭಾರತದ ಗಗನಯಾನಿ ಶುಭಾಂಶು ಶುಕ್ಲಾ ಅವರು 'ಗ್ರೇಸ್'ನಲ್ಲಿದ್ದ ಹಂಸ ಪಕ್ಷಿ ಹೋಲುವ ಆಟಿಕೆ 'ಜಾಯ್' ಅನ್ನು ಪರಿಚಯಿಸಿದರು. ಶೂನ್ಯ ಗುರುತ್ವಾಕರ್ಷಣೆಯ ಸೂಚಕವಾಗಿ ಇದು ಕಾರ್ಯ ನಿರ್ವಹಿಸುತ್ತಿದೆ. ಅದು 'ಆಕ್ಸಿಯಂ-4' ಯೋಜನೆಯ 'ಐದನೇ ಸಿಬ್ಬಂದಿ ಸದಸ್ಯ' ಆಗಿದೆ ಎಂದು ಹೇಳಿದರು.

ಶುಕ್ಲಾ ಅವರ ಮಗ ಕಿಯಾಶ್‌ಗೆ ಪ್ರಾಣಿಗಳ ಮೇಲೆ ಅಪಾರ ಪ್ರೀತಿಯಿದೆ. ಈ ಕಾರಣಕ್ಕಾಗಿ ಹಂಸ ಪಕ್ಷಿಯ ಆಟಿಕೆಯನ್ನು ಶೂನ್ಯ ಗುರುತ್ವಾಕರ್ಷಣೆಯ ಸೂಚಕವಾಗಿ ಆಯ್ಕೆ ಮಾಡಲಾಗಿದೆ.

'ನಾವು ಇಲ್ಲಿರುವುದು ನಾಲ್ವರಷ್ಟೇ ಅಲ್ಲ. ನಮ್ಮ ಜತೆಗೆ ಜಾಯ್ ಕೂಡ ಇದೆ. ಅದೂ ನಮ್ಮೊಂದಿಗೆ ತೇಲುತ್ತದೆ. ಅದು ಕೋಶದಾದ್ಯಂತ ತೇಲಾಡುತ್ತಿರುತ್ತದೆ. ಕೆಲವೊಮ್ಮೆ ಅದನ್ನು ಹುಡುಕಬೇಕಾದ ಪ್ರಸಂಗವೂ ಬಂದಿದೆ' ಎಂದು ಪೋಲೆಂಡ್‌ನ ಸ್ವವೋಶ್ ಓಜ್ನೈನ್‌ಸ್ಕಿ ವೀಶ್ನೀವುಫ್‌ಸ್ಕಿ ಹೇಳಿದ್ದಾರೆ.

ಮೂರು ದೇಶಗಳ ಸಂಸ್ಕೃತಿಯ ಸಂಕೇತ: ಹಂಸ ಪಕ್ಷಿಯನ್ನು ಭಾರತದಲ್ಲಿ ಬುದ್ಧಿವಂತಿಕೆ ಮತ್ತು ಪರಿಶುದ್ಧತೆಯ ಸಂಕೇತಿಸುತ್ತದೆ. ಜತೆಗೆ ಅದು ಸತ್ಯದ ಅನ್ವೇಷಣೆಯನ್ನೂ ಪ್ರತಿನಿಧಿಸುತ್ತದೆ. ಅಲ್ಲದೆ ಇದನ್ನು ಸರಸ್ವತಿ ದೇವಿಯ ವಾಹನ ಎಂದೂ ಭಾವಿಸಲಾಗಿದೆ. ಪೋಲೆಂಡ್‌ನಲ್ಲಿ ಹಂಸವು ಶುದ್ಧತೆ, ನಿಷ್ಠೆಯನ್ನು ಪ್ರತಿನಿಧಿಸಿದರೆ, ಹಂಗರಿಯಲ್ಲಿ ಇದು ನಿಷ್ಠೆ ಮತ್ತು ಪ್ರಕೃತಿಯ ಸೌಂದರ್ಯವನ್ನು ಪ್ರತಿನಿಧಿಸುತ್ತದೆ. ಶೂನ್ಯ ಗುರುತ್ವಾಕರ್ಷಣೆಯ ಸೂಚಕವಾಗಿ ಹಂಸವನ್ನು ಆಯ್ಕೆ ಮಾಡುವ ಮೂಲಕ 'ಆಕ್ಸಿಯಂ-4'ನ ಗಗನಯಾನಿಗಳು ತಮ್ಮ ದೇಶಗಳ ಸಂಸ್ಕೃತಿ ವೈವಿಧ್ಯತೆಯನ್ನು ಪ್ರತಿಬಿಂಬಿಸಿದ್ದಾರೆ ಎಂದು 'ಆಕ್ಸಿಯಂ ಸ್ಪೇಸ್' ತಿಳಿಸಿದೆ.

'ಮಗುವಿನಂತೆ ಕಲಿಯುತ್ತಿದ್ದೇನೆ'

ನವದೆಹಲಿ (ಪಿಟಿಐ): 'ಸೂಕ್ಷ್ಮ ಗುರುತ್ವಾಕರ್ಷಣೆಯ ಪರಿಸ್ಥಿತಿಗಳಲ್ಲಿ ಬದುಕುವುದನ್ನು ಮಗುವಿನಂತೆ ಕಲಿಯುತ್ತಿದ್ದೇನೆ ಮತ್ತು ಅನುಭವಗಳನ್ನು ಆನಂದಿಸುತ್ತಿದ್ದೇನೆ' ಎಂದು ಗಗನಯಾನಿ ಶುಭಾಂಶು ಶುಕ್ಲಾ ಹೇಳಿದ್ದಾರೆ.

'ಡ್ರ್ಯಾಗನ್' ಬಾಹ್ಯಾಕಾಶ ನೌಕೆಯಿಂದ ವಿಡಿಯೊಲಿಂಕ್ ಮೂಲಕ ತಮ್ಮ ಅನುಭವ ಹಂಚಿಕೊಂಡಿರುವ ಅವರು, 'ನೌಕೆಯು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದ (ಐಎಸ್‌ಎಸ್) ಜತೆಗೆ ಜೋಡಿಸಲು (ಡಾಕಿಂಗ್) ಭೂಮಿಯನ್ನು ಸುತ್ತುತ್ತಿದೆ. ಈ ವೇಳೆ ನಿರ್ವಾತದಲ್ಲಿ ತೇಲುವುದು ನಿಜವಾಗಿಯೂ ಅದ್ಭುತವಾದ ಅನುಭವ' ಎಂದು ತಿಳಿಸಿದ್ದಾರೆ.

ಶುಕ್ಲಾ ಮತ್ತು ಇತರ ಮೂವರು ಗಗನಯಾನಿಗಳಿದ್ದ 'ಡ್ರ್ಯಾಗನ್' ಬಾಹ್ಯಾಕಾಶ ಕೋಶವನ್ನು ಹೊತ್ತ ಸ್ಪೇಸ್‌ಎಕ್ಸ್‌ನ 'ಫಾಲ್ಕನ್-9' ರಾಕೆಟ್ ಫ್ಲಾರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಬುಧವಾರ ನಭಕ್ಕೆ ಚಿಮ್ಮಿತ್ತು. ಈ ಗಗನಯಾನಿಗಳು 14 ದಿನಗಳವರೆಗೆ ಐಎಸ್‌ಎಸ್‌ನಲ್ಲಿ ವಿವಿಧ ಅಧ್ಯಯನ, ಸಂಶೋಧನೆಗಳನ್ನು ಕೈಗೊಳ್ಳಲಿದ್ದಾರೆ.

'ವಾವ್, ಇದು ಅದ್ಭುತ ಸವಾರಿಯಾಗಿತ್ತು. ಪ್ರಾಮಾಣಿಕವಾಗಿ ಹೇಳಬೇಕು ಎಂದರೆ, ಬುಧವಾರ 'ಗ್ರೇಸ್' ಕ್ಯಾಪ್ಸೂಲ್‌ನಲ್ಲಿ ಕುಳಿತಿದ್ದಾಗ ಸುಮ್ಮನೆ ಹೋಗೋಣ ಎಂಬ ಏಕೈಕ ಆಲೋಚನೆಯಷ್ಟೇ ಬಂದಿದ್ದು. 30 ದಿನಗಳ ಕ್ವಾರಂಟೈನ್ ಅವಧಿ ಬಳಿಕ ನಾನು ಹೋಗಲು ಬಯಸಿದ್ದೆ' ಎಂದು ಹೇಳಿದ್ದಾರೆ. 'ಡ್ರ್ಯಾಗನ್' ಬಾಹ್ಯಾಕಾಶ ಕೋಶಕ್ಕೆ ಗಗನಯಾನಿಗಳು 'ಗ್ರೇಸ್' ಎಂದು ಹೆಸರಿಟ್ಟಿದ್ದಾರೆ.

'ನಿರ್ವಾತದಲ್ಲಿ ತೇಲಿದೆವು'

ಶುಕ್ಲಾ ಅವರು ಗುರುತ್ವಾಕರ್ಷಣೆ ಬಲವನ್ನು ಎದುರಿಸಿದ ಅನುಭವವನ್ನೂ ಈ ವೇಳೆ ಹಂಚಿಕೊಂಡಿದ್ದಾರೆ. 'ಸವಾರಿ ಆರಂಭವಾಗುತ್ತಿದ್ದಂತೆ ಸೀಟನ್ನು ಹಿಂದಕ್ಕೆ ತಳ್ಳಿದಂತೆ ಭಾಸವಾಯಿತು. ಅದು ಅದ್ಭುತ ಸವಾರಿ. ಆ ನಂತರ ಇದ್ದಕ್ಕಿದ್ದಂತೆ ಎಲ್ಲವೂ ಮೌನವಾಯಿತು. ತೇಲುತ್ತಿದ್ದೇವೆ ಅನಿಸಿತು. ಸೀಟಿನೊಂದಿಗೆ ಜೋಡಣೆಯಾಗಿದ್ದ ಬಕಲ್ ಅನ್ನು ಬಿಚ್ಚಿ, ನಿರ್ವಾತದಲ್ಲಿ ತೇಲಿದೆವು' ಎಂದು ಅವರು ಆ ಕ್ಷಣಗಳನ್ನು ವಿವರಿಸಿದ್ದಾರೆ.

ನಿರ್ವಾತ ಪ್ರವೇಶಿಸಿದಾಗ ಆರಂಭದ ಕೆಲ ಕ್ಷಣ ಅಷ್ಟೇನು ಅದ್ಭುತ ಅನಿಸಲಿಲ್ಲ. ಆದರೆ ಶೀಘ್ರದಲ್ಲಿಯೇ ಅದು ಅತ್ಯದ್ಭುತ ಅನಿಸತೊಡಗಿತು ಎಂದು ಅವರು ಹೇಳಿದ್ದಾರೆ.

'ರೋಮಾಂಚಕಾರಿ ಅನುಭವ'

'ನಾನು ನಿರ್ವಾತ ವಾತಾವರಣಕ್ಕೆ ಒಗ್ಗಿಕೊಳ್ಳುತ್ತಿದ್ದೇನೆ. ಇಲ್ಲಿನ ದೃಶ್ಯಗಳು ಮತ್ತು ಅನುಭವಗಳನ್ನು ಆನಂದಿಸುತ್ತಿದ್ದೇನೆ. ಅಲ್ಲದೆ ಮಗುವಿನಂತೆ ಎಲ್ಲವನ್ನೂ ಕಲಿಯುತ್ತಿದ್ದೇನೆ. ಈ ವಾತಾವರಣದಲ್ಲಿ ಹೆಜ್ಜೆಯಿಡುವುದು, ನಡೆಯುವುದು, ನಮ್ಮನ್ನು ನಾವು ನಿಯಂತ್ರಿಸಿಕೊಳ್ಳುವುದು, ತಿನ್ನುವುದನ್ನು ಕಲಿಯುತ್ತಿದ್ದೇನೆ. ಇದು ತುಂಬ ರೋಮಾಂಚನಕಾರಿ ಅನುಭವವಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಇದು ಹೊಸ ಪರಿಸರ ಮತ್ತು ಹೊಸ ಸವಾಲು. ಸಹ ಗಗನ ಯಾತ್ರಿಗಳ ಜತೆಗೆ ಇಲ್ಲಿನ ಅನುಭವವನ್ನು ಆನಂದಿಸುತ್ತಿದ್ದೇನೆ. ತಪ್ಪುಗಳನ್ನು ಮಾಡುವುದು ಒಳ್ಳೆಯದು, ಅದನ್ನೇ ಬೇರೆಯವರೂ ಮಾಡಿದಾಗ ನೋಡುವುದು ಇನ್ನೂ ಮಜವಾಗಿರುತ್ತದೆ. ಈ ಮೋಜಿನ ಸಮಯವನ್ನು ನಾವು ಆನಂದಿಸುತ್ತಿದ್ದೇವೆ' ಎಂದೂ ಅವರು ವಿವರಿಸಿದ್ದಾರೆ.

ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ (ಐಎಸ್‌ಎಸ್) ಪ್ರವೇಶಿಸಿದ ಭಾರತದ ಗಗನಯಾನಿ ಶುಭಾಂಶು ಶುಕ್ಲಾ ಅವರು ತಮ್ಮ ಅನುಭವ ಹಂಚಿಕೊಂಡರು. ಶುಕ್ಲಾ ಅವರೊಂದಿಗೆ ಪ್ರಯಾಣಿಸಿದ ಸಹ ಗಗನಯಾನಿಗಳು ಮತ್ತು ಐಎಸ್‌ಎಸ್‌ನಲ್ಲಿರುವ ಗಗನಯಾನಿಗಳು — ಪಿಟಿಐ ಚಿತ್ರ

ಭಾರತೀಯರಿಗೆ ನಮಸ್ಕಾರ. ಉತ್ತಮ ಸವಾರಿ ಅದಾಗಿತ್ತು. ತೇಲುವುದು ನಿಜವಾಗಿಯೂ ಅದ್ಭುತ ಅನುಭವ. ಇದು ನನ್ನ ವೈಯಕ್ತಿಕ ಸಾಧನೆಯಲ್ಲ, ಬದಲಿಗೆ ನನ್ನ ಜತೆ ನಿಮ್ಮೆಲ್ಲರ ಸಾಮೂಹಿಕ ಶ್ರಮವಿದೆ
ಶುಭಾಂಶು ಶುಕ್ಲಾ

ಸಂಜೆ 4.01 (ಗುರುವಾರ)	ಸಂಜೆ 4.15	ಸಂಜೆ 5.44	ಸಂಜೆ 5.53
ಜೋಡಣಾ ಪ್ರಕ್ರಿಯೆ ಆರಂಭ	ಜೋಡಣಾ ಪ್ರಕ್ರಿಯೆ ಪೂರ್ಣ	ಐಎಸ್‌ಎಸ್ ದ್ವಾರ ತೆರವು	ಗಗನಯಾನಿಗಳಿಂದ ಐಎಸ್‌ಎಸ್ ಪ್ರವೇಶ

...ಭಾರತದ ಹೆಜ್ಜೆ

ಒಂದನೇ ಪುಟದಿಂದ...

'ಡ್ರ್ಯಾಗನ್' ಅನ್ನು ಹೊತ್ತ ಸ್ಪೇಸ್‌ಎಕ್ಸ್‌ನ 'ಫಾಲ್ಕನ್-9' ರಾಕೆಟ್ ಫ್ಲಾರಿಡಾದ ಕೆನಡಿ ಬಾಹ್ಯಾಕಾಶ ಕೇಂದ್ರದಿಂದ ಬುಧವಾರ ಮಧ್ಯಾಹ್ನ 12.01ಕ್ಕೆ ನಭಕ್ಕೆ ಚಿಮ್ಮಿತ್ತು.

ಐಎಸ್‌ಎಸ್ ಜತೆಗೆ ನೌಕೆಯು ಮೃದುವಾಗಿ ಸಂಪರ್ಕ ಸಾಧಿಸಿದ ಬಳಿಕ, ಇವೆರಡನ್ನೂ 12 ಸೆಟ್‌ಗಳ ಕೊಕ್ಕೆಗಳೊಂದಿಗೆ ಸಂಪರ್ಕಿಸುವ ಮೂಲಕ ಕಠಿಣ ಜೋಡಣಾ ಪ್ರಕ್ರಿಯೆಯನ್ನೂ ಪೂರ್ಣಗೊಳಿಸಲಾಯಿತು. ಆ ಬಳಿಕ ನೌಕೆಯೊಂದಿಗೆ ಸಂವಹನ ಮತ್ತು ವಿದ್ಯುತ್ ಸಂಪರ್ಕದ ಸ್ಥಾಪನೆಯಾಯಿತು ಎಂದು ನಾಸಾ ಹೇಳಿದೆ.

ಶುಕ್ಲಾ ಅವರೊಂದಿಗೆ, ಅಮೆರಿಕದ ಪೆಗ್ಗಿ ವಿಟ್ಸನ್, ಹಂಗರಿಯ ಟಿಬೊರ್ ಕಾಪು ಹಾಗೂ ಪೋಲೆಂಡ್‌ನ ಸ್ವವೋಶ್ ಓಜ್ನೈನ್‌ಸ್ಕಿ ವೀಶ್ನೀವುಫ್‌ಸ್ಕಿ ಅವರೂ ಯಶಸ್ವಿಯಾಗಿ ಐಎಸ್‌ಎಸ್ ಪ್ರವೇಶಿಸಿದರು. 14 ದಿನಗಳವರೆಗೆ ಐಎಸ್‌ಎಸ್‌ನಲ್ಲಿರುವ ಈ ಗಗನಯಾನಿಗಳು 60ಕ್ಕೂ ಹೆಚ್ಚು ಪ್ರಯೋಗಗಳನ್ನು ಕೈಗೊಳ್ಳಲಿದ್ದಾರೆ.

'ಆಕ್ಸಿಯಂ-4' ಕಾರ್ಯಕ್ರಮಕ್ಕೆ ಅನುಭವಿ ಗಗನಯಾತ್ರಿಯಾದ ಅಮೆರಿಕದ ಪೆಗ್ಗಿ ವಿಟ್ಸನ್ ಕಮಾಂಡರ್ ಆಗಿದ್ದರೆ, ಭಾರತೀಯ ವಾಯುಪಡೆಯಲ್ಲಿ ಪರೀಕ್ಷಾರ್ಥ ಪೈಲಟ್ ಆಗಿರುವ ಶುಕ್ಲಾ ಅವರು ಪೈಲಟ್ ಆಗಿದ್ದಾರೆ.

ಐಎಸ್‌ಎಸ್‌ನಲ್ಲಿ ಅಪ್ಪುಗೆಯ ಸ್ವಾಗತ

ಐಎಸ್‌ಎಸ್ ಪ್ರವೇಶಿಸಿದ ನಾಲ್ವರು ಗಗನಯಾನಿಗಳಿಗೆ ಅಲ್ಲಿದ್ದ ಗಗನಯಾನಿಗಳಿಂದ ಬೆಚ್ಚಗಿನ ಅಪ್ಪುಗೆಯ ಸ್ವಾಗತ ದೊರೆಯಿತು. ಜೋಡಣಾ ಪ್ರಕ್ರಿಯೆ ಆರಂಭವಾದ ಒಂದು ಗಂಟೆ 45 ನಿಮಿಷಗಳ ಬಳಿಕ (ಸಂಜೆ 5.44ಕ್ಕೆ) ಐಎಸ್‌ಎಸ್ ದ್ವಾರ ತೆರೆಯಿತು. ಆ ಬಳಿಕ 'ಗ್ರೇಸ್'ನಲ್ಲಿದ್ದ ಗಗನಯಾನಿಗಳು ತೇಲಿಕೊಂಡು ಐಎಸ್‌ಎಸ್ ಒಳಹೊಕ್ಕರು.

'ಆಕ್ಸಿಯಂ-4'ರ ಕಮಾಂಡರ್ ಪೆಗ್ಗಿ ವಿಟ್ಸನ್ ಅವರು ಸಂಜೆ 5.53ಕ್ಕೆ ಮೊದಲಿಗೆ ತೇಲಿಕೊಂಡು ನಿಲ್ದಾಣದ ಒಳಗೆ ಬರುತ್ತಿದ್ದಂತೆ ಅವರನ್ನು ಆತ್ಮೀಯವಾಗಿ ಬರಮಾಡಿಕೊಳ್ಳಲಾಯಿತು. ಅವರನ್ನು ಶುಕ್ಲಾ ಮತ್ತು ಇತರ ಇಬ್ಬರು ಗಗನಯಾನಿಗಳು ಹಿಂಬಾಲಿಸಿದರು. ನಾಲ್ವರಿಗೂ ಪಾನೀಯ ನೀಡುವ ಮೂಲಕ ಐಎಸ್‌ಎಸ್ ಸಿಬ್ಬಂದಿ ಸ್ವಾಗತಿಸಿದರು.

ಮಾವಿನ ರಸ, ಕ್ಯಾರೆಟ್ ಹಲ್ವಾ...

ಪ್ರಜಾವಾಣಿ ವಾರ್ತೆ

ಚೆನ್ನೈ: ಸಂಸ್ಕರಿಸಿದ ಮಾವಿನ ರಸ, ತಿನ್ನಲು ಸಿದ್ಧವಾಗಿರುವ ಹೆಸರು ಕಾಳು ಮತ್ತು ಕ್ಯಾರೆಟ್ ಹಲ್ವಾ ... ಇವು, ಭಾರತದ ಗಗನಯಾನಿ ಶುಭಾಂಶು ಶುಕ್ಲಾ ಅವರು ಬಾಹ್ಯಾಕಾಶಕ್ಕೆ ತೆಗೆದುಕೊಂಡು ಹೋಗಿರುವ ಭಾರತೀಯ ಸ್ವಾದಿಷ್ಟ ಖಾದ್ಯಗಳು.

ಅವರು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣದಲ್ಲಿ 14 ದಿನಗಳವರೆಗೆ ಇರಲಿದ್ದಾರೆ. ಈ ಅವಧಿಯಲ್ಲಿ ಈ ಆಹಾರವನ್ನು ಸೇವಿಸಲಿದ್ದಾರೆ. ಅಲ್ಲದೆ ಈ ಖಾದ್ಯಗಳನ್ನು ತನ್ನ ಸಹ ಗಗನಯಾನಿಗಳ ಜತೆಗೂ ಹಂಚಿಕೊಳ್ಳಲಿದ್ದಾರೆ.

'ಇಸ್ರೊ' ಜತೆ ಸಮಾಲೋಚಿಸಿ ಮೈಸೂರಿನ ಡಿಫೆನ್ಸ್ ಇನ್‌ಸ್ಟಿಟ್ಯೂಟ್ ಆಫ್ ಬಯೋ ಡಿಫೆನ್ಸ್ ಟೆಕ್ನಾಲಜೀಸ್ (ಡಿಐಬಿಟಿ) ಈ ಆಹಾರಗಳನ್ನು ಆಯ್ಕೆ ಮಾಡಿದೆ.

ದೇಶದ ಮೊದಲ ಮಾನವ ಸಹಿತ ಬಾಹ್ಯಾಕಾಶ ಯೋಜನೆ 'ಗಗನಯಾನ'ಕ್ಕಾಗಿ (2027) ಈ ಆಹಾರಗಳನ್ನು ಈಗಾಗಲೇ ಆಯ್ಕೆ ಮಾಡಲಾಗಿದೆ. ಅವನ್ನೇ ಶುಕ್ಲಾ ಅವರು ಬಾಹ್ಯಾಕಾಶಕ್ಕೆ ತೆಗೆದುಕೊಂಡು ಹೋಗಿದ್ದಾರೆ ಎಂದು ಡಿಐಬಿಟಿಯ ನಿರ್ದೇಶಕ ಆರ್. ಕುಮಾರ್ ತಿಳಿಸಿದ್ದಾರೆ.

ಸುಲಭವಾಗಿ ತೆಗೆದುಕೊಂಡು ಹೋಗಲು ಮತ್ತು ಸೇವಿಸಲು ಅನುಕೂಲವಾಗುವಂತೆ 100 ಗ್ರಾಂಗಳ ಪೌಚ್‌ಗಳಲ್ಲಿ ಈ ಆಹಾರವನ್ನು ಶೇಖರಿಸಲಾಗಿದೆ.

ಪೋಲೆಂಡ್‌ನ ಸ್ವವೋಶ್ ಓಜ್ನೈನ್‌ಸ್ಕಿ ವೀಶ್ನೀವುಫ್‌ಸ್ಕಿ ಅವರು ಯೋಜನಾ ತಜ್ಞರಾಗಿದ್ದಾರೆ. ಅವರು ಪೋಲೆಂಡ್‌ನಿಂದ ಬಾಹ್ಯಾಕಾಶಕ್ಕೆ ಪ್ರವೇಶಿಸಿದ ಎರಡನೇ ವ್ಯಕ್ತಿ ಎಂದು ಕೀರ್ತಿಗೆ ಪಾತ್ರರಾಗಿದ್ದಾರೆ. ಈ ದೇಶದ ಮೊದಲ ಗಗನಯಾನಿ 1978ರಲ್ಲಿ ಬಾಹ್ಯಾಕಾಶ ಪ್ರವೇಶಿಸಿದ್ದರು.

ಹಂಗರಿಯ ಟಿಬೊರ್ ಕಾಪು ಅವರೂ ಯೋಜನಾ ತಜ್ಞರಾಗಿದ್ದು, ಈ ದೇಶದಿಂದ ಬಾಹ್ಯಾಕಾಶ ಪ್ರವೇಶಿಸಿದ ಎರಡನೇ ಗಗನಯಾತ್ರಿ ಆಗಿದ್ದಾರೆ. 45 ವರ್ಷಗಳ ಹಿಂದೆ ಹಂಗರಿಯ ಮೊದಲ ಬಾಹ್ಯಾಕಾಶ ಯಾನ ನಡೆದಿತ್ತು. ಐಎಸ್‌ಎಸ್‌ನಲ್ಲಿ ಈಗಾಗಲೇ ಏಳು ಗಗನಯಾನಿಗಳು ಇದ್ದಾರೆ. ಈಗ ಹೊಸದಾಗಿ ನಾಲ್ವರ ಸೇರ್ಪಡೆಯಿಂದ ಅಲ್ಲಿರುವ ಗಗನಯಾನಿಗಳ ಸಂಖ್ಯೆ 11ಕ್ಕೆ ಏರಿದೆ.

ರೈಲು ಹಳಿ ಮೇಲೆ ಕಾರು ಓಡಿಸಿದ ಮಹಿಳೆ

ಹೈದರಾಬಾದ್ (ಪಿಟಿಐ): ಮಹಿಳೆಯೊಬ್ಬರು ಗುರುವಾರ ಬೆಳಿಗ್ಗೆ ನಗರದ ಹೊರವಲಯದಲ್ಲಿ ರೈಲು ಹಳಿಗಳ ಮೇಲೆ ಕಾರು ಚಾಲನೆ ಮಾಡಿದ್ದು, ಆತಂಕ ಮೂಡಿಸಿತು. ಇದರಿಂದಾಗಿ ರೈಲ್ವೆ ಸಂಚಾರದಲ್ಲಿಯೂ ವ್ಯತ್ಯಯವಾಯಿತು.

ಹೊರವಲಯದ ಶಂಕರಪಲ್ಲಿ ಬಳಿ ಸುಮಾರು ಎಂಟು ಕಿ.ಮೀ ದೂರದವರೆಗೆ ಮಹಿಳೆ ಕಾರು ಓಡಿಸಿದ್ದಾರೆ. ಕಾರು ನಿಲ್ಲಿಸಿದಾಗ ಪೊಲೀಸರ ಜೊತೆಗೂ ಸಂಘರ್ಷಕ್ಕೆ ಮುಂದಾಗಿದ್ದಾರೆ. ಮಹಿಳೆ ಮಾನಸಿಕ ಸ್ಥಿಮಿತ ಕಳೆದುಕೊಂಡವರು ಎನ್ನಲಾಗಿದೆ.

ಮಹಿಳೆಯನ್ನು ವಶಕ್ಕೆ ಪಡೆದ ಪೊಲೀಸರು ವೈದ್ಯಕೀಯ ತಪಾಸಣೆಗೆ ಕಳುಹಿಸಿದರು. ಮಹಿಳೆಯು ಸಾಫ್ಟ್‌ವೇರ್ ಕಂಪನಿಯೊಂದರ ಉದ್ಯೋಗಿ ಎನ್ನಲಾಗಿದೆ. ರೈಲ್ವೆ ಠಾಣೆ ಪೊಲೀಸರು ಈ ಕುರಿತು ಪ್ರಕರಣ ದಾಖಲಿಸಿದ್ದಾರೆ.

ಬ್ಲ್ಯಾಕ್‌ಬಾಕ್ಸ್ ಮಾಹಿತಿ ವಿಶ್ಲೇಷಣೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಹಮದಾಬಾದ್‌ನಲ್ಲಿ ಅಪಘಾತಕ್ಕೀಡಾಗಿದ್ದ ಏರ್ ಇಂಡಿಯಾದ ಬೋಯಿಂಗ್ 787-8 ಡ್ರೀಮ್‌ಲೈನರ್ ವಿಮಾನದ ಕಪ್ಪುಪೆಟ್ಟಿಗೆಯಲ್ಲಿ ದಾಖಲಾಗಿದ್ದ ಅಡಕಗಳನ್ನು ಇಲ್ಲಿನ ಅತ್ಯಾಧುನಿಕ ಪ್ರಯೋಗಾಲಯದಲ್ಲಿ ಡೌನ್‌ಲೋಡ್ ಮಾಡಲಾಗಿದೆ.

ನಾಗರಿಕ ವಿಮಾನಯಾನ ಸಚಿವಾಲಯ ಈ ಕುರಿತು ಹೇಳಿಕೆ ನೀಡಿದ್ದು, ವಿಮಾನದ ಕಾಕ್‌ಪಿಟ್ ಧ್ವನಿಗ್ರಾಹಕ (ಸಿವಿಆರ್) ಮತ್ತು ವಿಮಾನದ ಅಂಕಿಅಂಶ ಸಂಗ್ರಹಕಾರ (ಎಫ್‌ಡಿಆರ್)ನ ಮಾಹಿತಿ ವಿಶ್ಲೇಷಿಸುವ ಪ್ರಕ್ರಿಯೆ ಪ್ರಗತಿಯಲ್ಲಿ ಎಂದು ಹೇಳಿದೆ.ಅವಘಡಕ್ಕೆ ಕಾರಣವಾಗಿರಬಹುದಾದ ಕಾರಣಗಳನ್ನು ತಿಳಿಯಲು ಹಾಗೂ ಭವಿಷ್ಯದಲ್ಲಿ ಇಂತಹ ಅವಘಡಗಳು ಸಂಭವಿಸದಂತೆ ಎಚ್ಚರಿಕೆ ಕ್ರಮಗಳನ್ನು ವಹಿಸಲು ಈ ಮಾಹಿತಿಗಳು ಸಹಕಾರಿಯಾಗಲಿವೆ ಎಂದು ತಿಳಿಸಿದೆ.

ಜೂನ್ 13ರಂದು ಸಂಭವಿಸಿದ್ದ ಅಪಘಾತದಲ್ಲಿ ವಿಮಾನದಲ್ಲಿದ್ದ 241 ಜನರು ಮತ್ತು ವಿಮಾನ ಅಪ್ಪಳಿಸಿದ್ದ ವೈದ್ಯಕೀಯ ಕಾಲೇಜಿನ ಹಾಸ್ಟೆಲ್ ಸಂಕೀರ್ಣದಲ್ಲಿದ್ದ 34 ಜನರು ಅಸುನೀಗಿದ್ದರು. ಅವಶೇಷಗಳ ನಡುವೆ ಜೂನ್ 16ರಂದು ಬ್ಲ್ಯಾಕ್ ಬಾಕ್ಸ್ ಪತ್ತೆಯಾಗಿತ್ತು.

ಅಂತರರಾಷ್ಟ್ರೀಯ ಶಿಷ್ಟಾಚಾರದಂತೆ ವಿಮಾನ ಅಪಘಾತ ತನಿಖಾ ಮಂಡಳಿ (ಎಎಐಬಿ) ಪ್ರಧಾನ ನಿರ್ದೇಶಕರ ನೇತೃತ್ವದಲ್ಲಿ ತನಿಖಾ ತಂಡ ರಚಿಸಿದ್ದು, ಇದರಲ್ಲಿ ವೈಮಾನಿಕ ಔಷಧ ತಜ್ಞ, ಎಟಿಸಿ ಅಧಿಕಾರಿ, ರಾಷ್ಟ್ರೀಯ ಸಂಚಾರ ಸುರಕ್ಷತಾ ಮಂಡಳಿ (ಎನ್‌ಟಿಎಸ್‌ಬಿ) ಸದಸ್ಯರಿದ್ದಾರೆ.

ಹಿಮಾಚಲ: ಪ್ರವಾಹದಲ್ಲಿ ನಾಲ್ವರು ಸಾವು

ಶಿಮ್ಲಾ/ಧರ್ಮಶಾಲಾ (ಪಿಟಿಐ): ಹಿಮಾಚಲ ಪ್ರದೇಶದ ಕಂಗ್ರಾ ಜಿಲ್ಲೆಯಲ್ಲಿರುವ ಜಲವಿದ್ಯುತ್ ಯೋಜನಾ ಸ್ಥಳದಲ್ಲಿ ಸಂಭವಿಸಿದ ಹಠಾತ್ ಪ್ರವಾಹದಲ್ಲಿ ನಾಲ್ವರು ಸಾವಿಗೀಡಾಗಿದ್ದಾರೆ.

ಸ್ಥಳದಲ್ಲಿ ಇನ್ನೂ ಏಳು ಮಂದಿ ನಾಪತ್ತೆಯಾಗಿದ್ದು, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಹಾಗೂ ಇತರ ತಂಡಗಳು ಶೋಧ ಕಾರ್ಯಾಚರಣೆ ನಡೆಸುತ್ತಿವೆ. ಬುಧವಾರ ಹಾಗೂ ಗುರುವಾರ ತಲಾ ಇಬ್ಬರ ಮೃತದೇಹಗಳನ್ನು ಹೊರತೆಗೆಯಲಾಯಿತು ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಬುಧವಾರ ರಾತ್ರಿ, ಸ್ಥಳದಲ್ಲಿ 250ರಿಂದ 275 ಕಾರ್ಮಿಕರು ಇದ್ದರು. ಇವರಿಗೆಲ್ಲ ತಾತ್ಕಾಲಿಕ ಆಶ್ರಯ ತಾಣಗಳನ್ನು ಒದಗಿಸಲಾಗಿತ್ತು. ಮಳೆಯಿಂದಾಗಿ ಯೋಜನಾ ಕಾರ್ಯವನ್ನು ಸ್ಥಗಿತಗೊಳಿಸಲಾಗಿತ್ತು.

ಮೃತರನ್ನು ಜಮ್ಮು ಮತ್ತು ಕಾಶ್ಮೀರದ ಚಾಯಿನ್ ಸಿಂಗ್, ಚಂಬಾದ ಆದಿತ್ಯ ಠಾಕುರ್ ಹಾಗೂ ಉತ್ತರ ಪ್ರದೇಶದ ಪ್ರದೀಪ್ ವರ್ಮಾ ಹಾಗೂ ಚಂದನ್ ಎಂದು ಗುರುತಿಸಲಾಗಿದೆ.

'ಸೆಪ್ಟೆಂಬರ್ ನಂತರ ಕ್ರಾಂತಿ'

ಒಂದನೇ ಪುಟದಿಂದ...

'ಪವರ್ ಸೆಂಟರ್'ಗಳು ಜಾಸ್ತಿ ಆಗಿವೆ: 'ಕಾಂಗ್ರೆಸ್‌ನಲ್ಲಿ ಪವರ್ ಸೆಂಟರ್‌ಗಳು ಜಾಸ್ತಿ ಆಗಿವೆ. 2013-2018ರಲ್ಲಿ ಪವರ್ ಸೆಂಟರ್ ಒಂದೇ ಇದ್ದದ್ದು. ಈಗ ಎರಡು-ಮೂರು ಎಷ್ಟು ಬೇಕಿದ್ದರೂ ಹೇಳಿಕೊಳ್ಳಬಹುದು. ಪವರ್ ಸೆಂಟರ್ ಜಾಸ್ತಿ ಇದ್ದಾಗ ಜಂಜಾಟವೂ ಜಾಸ್ತಿ ಆಗುತ್ತದೆ. ಅದಕ್ಕೆ ಅನುಗುಣವಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸರ್ಕಾರವನ್ನು ನಡೆಸಬೇಕಾಗುತ್ತದೆ. 2013-18ರ ಸಿದ್ದರಾಮಯ್ಯ ಈಗ ಇಲ್ಲ ಎಂಬುದು ಜನರ ಅಭಿಪ್ರಾಯ. ಪವರ್ ಸೆಂಟರ್ ಬಹಳಷ್ಟು ಇರುವುದರಿಂದಲೇ ಹೀಗಾಗಿರುವುದು' ಎಂದರು.

'ತಿಂಗಳಲ್ಲಿ 15-20 ದಿನ ಬೇರೆ ಜಿಲ್ಲೆಗಳಿಗೆ ಹೋಗಿ ಅಭಿವೃದ್ಧಿ ಕಾರ್ಯಗಳಿಗೆ ಮುಖ್ಯಮಂತ್ರಿಯವರು ಶಂಕುಸ್ಥಾಪನೆ ಮಾಡುತ್ತಿದ್ದಾರೆ. ಅನುದಾನ ಇಲ್ಲದಿದ್ದರೆ ಇದನ್ನೆಲ್ಲ ಮಾಡಲಾಗುತ್ತದೆಯೇ? ನಿರೀಕ್ಷೆಗೆ ತಕ್ಕಂತೆ ಅನುದಾನ ಸಿಕ್ಕಿಲ್ಲ ಎನ್ನುವುದು ಬಹಳ ಶಾಸಕರು, ಕಾರ್ಯಕರ್ತರ ಭಾವನೆ ಇರಬಹುದು. ಗ್ಯಾರಂಟಿಗಳು ಸೇರಿ ಮತ್ತಿತರ ಯೋಜನೆಗಳ ಜಾರಿ ಸಂದರ್ಭದಲ್ಲಿ ಸರ್ಕಾರದ ಮೇಲೆ ಆರ್ಥಿಕ ಹೊರೆ ಹೆಚ್ಚಿದೆ. ಆದರೂ ಆಡಳಿತ- ವಿರೋಧ ಪಕ್ಷ ಎಂಬ ತಾರತಮ್ಯ ಇಲ್ಲದೆ ಅನುದಾನ ಒದಗಿಸಲಾಗುತ್ತಿದೆ. ಏನೂ ಕೊಡುತ್ತಿಲ್ಲ, ಅಭಿವೃದ್ಧಿ ಆಗುತ್ತಿಲ್ಲ ಎಂಬುದು ಸತ್ಯಕ್ಕೆ ದೂರವಾದ ಮಾತು' ಎಂದು ಪ್ರತಿಕ್ರಿಯಿಸಿದರು.

ಹಿಡಿತ ಕಳೆದುಕೊಂಡಿಲ್ಲ: ಡಿಕೆಶಿ

'ಆಡಳಿತದ ಮೇಲೆ ಮುಖ್ಯಮಂತ್ರಿ ಹಿಡಿತ ಕಳೆದುಕೊಂಡಿಲ್ಲ. ಇದು ಮಾಧ್ಯಮಗಳ ಸೃಷ್ಟಿ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಹಲವು ಶಾಸಕರು ಸರ್ಕಾರದ ವಿರುದ್ಧ ಧ್ವನಿ ಎತ್ತಿದ್ದು, ಆಡಳಿತದಲ್ಲಿ ಮುಖ್ಯಮಂತ್ರಿ ಹಿಡಿತ ಕಳೆದುಕೊಳ್ಳುತ್ತಿದ್ದಾರೆಯೇ' ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿ, 'ಈ ವಿಚಾರವಾಗಿ ನನಗೆ ಮಾಹಿತಿ ಇಲ್ಲ. ಏನಾದರೂ ಇದ್ದರೆ ವರಿಷ್ಠರ ಜೊತೆ ನಾನು ಮತ್ತು ಮುಖ್ಯಮಂತ್ರಿ ಮಾತನಾಡುತ್ತೇವೆ' ಎಂದರು.

ಅಧ್ಯಕ್ಷನಾಗಿ ಶಾಸಕರಿಂದ ಮಾಹಿತಿ ಸಂಗ್ರಹ: ಶಾಸಕ ಬಿ.ಆರ್. ಪಾಟೀಲ ಅವರು ಭೇಟಿ ಮಾಡಿದ್ದ ಬಗ್ಗೆ ಕೇಳಿದಾಗ, 'ಪಕ್ಷದ ಅಧ್ಯಕ್ಷನಾಗಿ ನಾನು ವಾಸ್ತವಾಂಶ ತಿಳಿಯಬೇಕಾಗಿತ್ತು. ಹೀಗಾಗಿ, ಅವರನ್ನು ಕರೆಸಿ ಮಾತನಾಡಿದೆ. ಅವರು ತಮ್ಮ ವಿಚಾರ ಹೇಳಿದ್ದಾರೆ. ನಾನು ಮುಖ್ಯಮಂತ್ರಿ ಜೊತೆ ಚರ್ಚೆ ಮಾಡುತ್ತೇನೆ. ಸಚಿವ ಜಮೀರ್ ಜೊತೆಗೂ ಮಾತನಾಡುತ್ತೇವೆ' ಎಂದರು.

ನಮ್ಮದು ಹೈಕಮಾಂಡ್ ಇರುವ ಪಕ್ಷ. ಹೈಕಮಾಂಡ್ ನಿರ್ಧಾರಕ್ಕೆ ನಾವೆಲ್ಲರೂ ಬದ್ಧರಾಗಿರಬೇಕು. ನಾನಿರಲಿ, ರಾಜಣ್ಣ ಇರಲಿ, ಮತ್ತೊಬ್ಬ ಇರಲಿ
ಬಿ.ಝಡ್. ಜಮೀರ್ ಅಹಮದ್ ಖಾನ್, ವಸತಿ ಸಚಿವ

'ವರ್ಷಾಂತ್ಯಕ್ಕೆ ಸಣ್ಣಪುಟ್ಟ ಬದಲಾವಣೆ'

'ಸರ್ಕಾರದಲ್ಲಿ ವರ್ಷಾಂತ್ಯದಲ್ಲಿ ಸಣ್ಣಪುಟ್ಟ ಬದಲಾವಣೆ ಆಗಲಿದೆ. ಯಾವುದೇ ದೊಡ್ಡ ಬದಲಾವಣೆ ಆಗುವುದಿಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಹೇಳಿದರು.

'ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ನಾನು ಪ್ರಯತ್ನ ನಡೆಸಿಲ್ಲ. ಪ್ರಯತ್ನ ನಡೆಸಿದರೆ ಮುಂದುವರಿಸಬಹುದು. ನಾನು ಎಲ್ಲಿ ಇದ್ದೇನೊ ಅಲ್ಲೇ ಇದ್ದೇನೆ. ನನ್ನನ್ನು ಹಿಂದಿನಿಂದ ಬೆಂಬಲಿಸುವವರು ಯಾರೂ ಇಲ್ಲವಲ್ಲ. ಹುಲಿ ಯಾವತ್ತಿದ್ದರೂ ಹುಲಿ, ವಯಸ್ಸಾದರೂ ಹುಲಿ, ಹುಲಿಯೇ' ಎಂದರು.

'ಜಲ ಸಂಪನ್ಮೂಲ ಇಲಾಖೆಯಿಂದ ಅನುದಾನ ಸಿಕ್ಕಿಲ್ಲ' ಎಂಬ ಶಾಸಕರ ಆರೋಪದ ಬಗ್ಗೆ ಪ್ರತಿಕ್ರಿಯಿಸಿ, 'ನೀರಾವರಿ ಸಮಸ್ಯೆ ಬಗ್ಗೆ ಶಾಸಕ ರಾಜು ಕಾಗೆ ಮೊದಲಿನಿಂದಲೂ ಹೇಳುತ್ತಿದ್ದಾರೆ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೂ ಬಂದಿದೆ. ಈ ಬಗ್ಗೆ ಡಿ.ಕೆ. ಶಿವಕುಮಾರ್ ಅವರನ್ನು ಕರೆದು ಮುಖ್ಯಮಂತ್ರಿ ಮಾತನಾಡುತ್ತಾರೆ' ಎಂದು ಹೇಳಿದರು.

ಹುಲಿ ಸಾವು; ವಿಷಪ್ರಾಶನ ಶಂಕೆ

ಒಂದನೇ ಪುಟದಿಂದ...

'ಮೃತದೇಹಗಳು ಪತ್ತೆಯಾಗಿರುವ 500 ಮೀಟರ್ ವ್ಯಾಪ್ತಿಯಲ್ಲಿ ಸಿಗುವ ಎಲ್ಲ ಸಾಕ್ಷ್ಯಗಳನ್ನು ಸಂಗ್ರಹಿಸಿ, ಮರಣೋತ್ತರ ಪರೀಕ್ಷೆ, ಡಿಎನ್‌ಎ, ವಿಧಿವಿಜ್ಞಾನ ವರದಿಯ ಆಧಾರದ ಮೇಲೆ ಕಾರಣ ಪತ್ತೆ ಹಚ್ಚಬೇಕು. ವಿಷಪ್ರಾಶನದಿಂದ ಮೃತಪಟ್ಟಿವೆಯೇ, ಸಾವಿಗೆ ಪ್ರತ್ಯಕ್ಷ ಹಾಗೂ ಪರೋಕ್ಷ ಕಾರಣಗಳೇನು, ಹೂಗ್ಯಂ ವಲಯದಲ್ಲಿ ಗಸ್ತು ಹಾಗೂ ಕಣ್ಗಾವಲು ವ್ಯವಸ್ಥೆ ಸಮರ್ಪಕವಾಗಿತ್ತೇ ಎಂಬ ಸಂಪೂರ್ಣ ಮಾಹಿತಿ ಸಂಗ್ರಹಿಸಿ 14 ದಿನಗಳೊಳಗೆ ವರದಿ ಸಲ್ಲಿಸಬೇಕು' ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ಆದೇಶಿಸಿದ್ದಾರೆ.

ಎನ್‌ಟಿಸಿಎ ಪ್ರಕಾರ ಮರಣೋತ್ತರ ಪರೀಕ್ಷೆ: ಎನ್‌ಟಿಸಿಎ (ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರ) ನಿಯಮಾವಳಿ ಪ್ರಕಾರ, ಮರಣೋತ್ತರ ಪರೀಕ್ಷೆಗೆ ಎಂಎಂ ಹಿಲ್ಸ್ ಡಿಸಿಎಫ್ ವೈ.ಚಕ್ರಪಾಣಿ, ಅರಣ್ಯ ಪಶು ವೈದ್ಯಾಧಿಕಾರಿ ಡಾ.ಮಿರ್ಜಾ ವಸೀಂ, ಎನ್‌ಟಿಸಿಎ ನಾಮನಿರ್ದೇಶಿತ ವನ್ಯಜೀವಿ ತಜ್ಞ ಮಲ್ಲೇಶಪ್ಪ, ಸಿಡಬ್ಲ್ಯುಎಲ್‌ಡಬ್ಲ್ಯು ನಾಮ ನಿರ್ದೇಶಿತ ಟಿ.ಜಾನ್ ಪೀಟರ್, ಹನೂರು ಸರ್ಕಾರಿ ಪಶುವೈದ್ಯಾಧಿಕಾರಿ ಡಾ.ಸಿದ್ದರಾಜು ಅವರನ್ನೊಳಗೊಂಡ ಸಮಿತಿ ರಚಿಸಲಾಗಿದೆ.

ಸಿಐಡಿ ತನಿಖೆಗೆ ಒತ್ತಾಯ: 'ಸಾವು ಅಸಹಜವಾಗಿದ್ದರೆ ಅರಣ್ಯದೊಳಗೆ ಅತಿಕ್ರಮ ಪ್ರವೇಶ ತಡೆಯಲು ವಿಫಲವಾಗಿರುವ ಅರಣ್ಯಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು. ಪ್ರವಾಸೋದ್ಯಮದ ಹೆಸರಿನಲ್ಲಿ ಹುಲಿಗಳ ಆವಾಸಸ್ಥಾನ ಅತಿಕ್ರಮಣ, ಅರಣ್ಯದೊಳಗೆ ನಿಯಮಬಾಹಿರ ಕಾಮಗಾರಿಗಳನ್ನು ತಡೆಯುವಲ್ಲಿ ವಿಫಲವಾಗಿರುವುದು ಸಾವಿಗೆ ಪರೋಕ್ಷ ಕಾರಣ. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಸಿಐಡಿ ತನಿಖೆಗೆ ಒಪ್ಪಿಸಬೇಕು' ಎಂದು ವನ್ಯಜೀವಿ ತಜ್ಞರು ಒತ್ತಾಯಿಸಿದ್ದಾರೆ.

ಡಿಸಿಎಫ್ ವಿರುದ್ಧ ಆಕ್ರೋಶ: 'ವಿರಾಜಪೇಟೆ ತಾಲ್ಲೂಕಿನಲ್ಲಿ ಕಾನೂನುಬಾಹಿರವಾಗಿ ಸಾಗುವಾನಿ ಮರಗಳನ್ನು ಕಡಿದ ಪ್ರಕರಣದಲ್ಲಿ ಅಮಾನತಾಗಿದ್ದ ಹಾಗೂ ಸರ್ಕಾರಿ ವಾಹನವನ್ನು ದುರುಪಯೋಗಪಡಿಸಿಕೊಂಡ ಆರೋಪ ಎದುರಿಸುತ್ತಿರುವ ವೈ.ಚಕ್ರಪಾಣಿ ಅವರನ್ನು ಮಲೆ ಮಹದೇಶ್ವರ ವನ್ಯಜೀವಿ ವಲಯಕ್ಕೆ ಡಿಸಿಎಫ್ ಆಗಿ ನೇಮಿಸಲಾಗಿದ್ದು, ಅರಣ್ಯ ಅತಿಕ್ರಮ ಪ್ರವೇಶ ತಡೆಯುವಲ್ಲಿ ವಿಫಲರಾಗಿದ್ದಾರೆ' ಎಂಬ ಆರೋಪವೂ ಇದೇ ವೇಳೆ ಕೇಳಿಬಂದಿದೆ.

ಹುಲಿ ಗಣತಿಯ ಪ್ರಕಾರ 2017ರಲ್ಲಿ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ 74 ಹುಲಿಗಳಿದ್ದವು. ಪ್ರಸ್ತುತ 40ರ ಆಸುಪಾಸಿಗೆ ಕುಸಿದಿರುವುದು ಆತಂಕಕಾರಿ ಬೆಳವಣಿಗೆ. ಹುಲಿಗಳ ಸಾವಿನ ಕುರಿತು ತನಿಖೆಯಾಗಬೇಕು
ಮಲ್ಲೇಶಪ್ಪ, ವನ್ಯಜೀವಿ ತಜ್ಞ

ಹುಲಿಗಳ ಸಾಂದ್ರತೆ ಕಡಿಮೆಯಿರುವ ಮಲೆ ಮಹದೇಶ್ವರದಲ್ಲಿ ಇಂತಹ ಘಟನೆ ನಡೆದಿರುವುದು ಖಂಡನೀಯ. ಸಾವಿಗೆ ಕಾರಣರಾದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು
ಸಂಜಯ್ ಗುಬ್ಬಿ, ವನ್ಯಜೀವಿ ತಜ್ಞ

'ಭಾರತೀಯ ಭಾಷೆಗಳಿಗೆ ಹಿಂದಿ ಶತ್ರುವಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಹಿಂದಿ ಭಾಷೆಯು ಯಾವುದೇ ಇತರೆ ಭಾರತೀಯ ಭಾಷೆಗೆ ಶತ್ರುವಾಗಲು ಸಾಧ್ಯವಿಲ್ಲ. ಬದಲಿಗೆ ಅದು ಎಲ್ಲ ಭಾರತೀಯ ಭಾಷೆಗಳಿಗೂ ಮಿತ್ರವಾಗಿರುವ ಭಾಷೆ ಎಂದು ನಾನು ನಂಬಿದ್ದೇನೆ. ಜೊತೆಗೆ, ಯಾವುದೇ ವಿದೇಶಿ ಭಾಷೆಗೆ ವಿರೋಧವಿಲ್ಲ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಗುರುವಾರ ಅಭಿಪ್ರಾಯ ವ್ಯಕ್ತಪಡಿಸಿದರು.

ಗೃಹ ಇಲಾಖೆ ಅಡಿಯಲ್ಲಿ ಬರುವ 'ಅಧಿಕೃತ ಭಾಷಾ ವಿಭಾಗ'ದ ಸುವರ್ಣ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಯಾವುದೇ ಭಾಷೆಗೂ ವಿರೋಧವಿರಬಾರದು. ಯಾವುದೇ ವಿದೇಶಿ ಭಾಷೆಗೂ ವಿರೋಧ ಬೇಡ. ಆದರೆ, ನಮ್ಮ ಭಾಷೆಯ ಬಗ್ಗೆ ಹೆಮ್ಮೆ ಇರಬೇಕು. ನಮ್ಮ ಭಾಷೆಯನ್ನೇ ಮಾತನಾಡುವ ಮತ್ತು ನಮ್ಮ ಭಾಷೆಯಲ್ಲಿಯೇ ಚಿಂತನೆ ನಡೆಸುಬೇಕು ಎನ್ನುವ ಒತ್ತಾಯ ಮಾಡಬೇಕು' ಎಂದರು.

'ಇಂಗ್ಲಿಷ್ ಮಾತನಾಡುವವರು ನಾಚಿಕೆ ಪಡುವ ಕಾಲ ಶೀಘ್ರದಲ್ಲಿಯೇ ಬರಲಿದೆ' ಎಂದು ಇತ್ತೀಚೆಗೆ ಅಮಿತ್ ಶಾ ಹೇಳಿದ್ದರು. ಇದು ವಿವಾದವನ್ನು ಸೃಷ್ಟಿಸಿತ್ತು.

'ಕೆಲವು ದಶಕಗಳ ಹಿಂದೆ, ಭಾರತವನ್ನು ವಿಭಜಿಸುವುದಕ್ಕೆ ಭಾಷೆಯನ್ನು ಬಳಸಿಕೊಳ್ಳಲಾಗಿತ್ತು. ಆದರೆ, ಅದು ಸಾಧ್ಯವಾಗಲಿಲ್ಲ. ಆದರೆ, ಪ್ರಯತ್ನವನ್ನಂತೂ ಮಾಡಿದರು. ಭಾರತವನ್ನು ಒಗ್ಗೂಡಿಸಲು ನಮ್ಮ ಭಾಷೆಯನ್ನು ಪ್ರಭಾವಶಾಲಿ ಮಾಧ್ಯಮವನ್ನಾಗಿ ನಾವು ಮಾಡುತ್ತೇವೆ' ಎಂದರು.

'ಕೇಂದ್ರ ಸರ್ಕಾರವಾಗಲಿ, ರಾಜ್ಯ ಸರ್ಕಾರವಾಗಲಿ ಭಾರತೀಯ ಭಾಷೆಯಲ್ಲಿಯೇ ಆಡಳಿತಾತ್ಮಕ ವ್ಯವಹಾರ ನಡೆಸಬೇಕು. ಈ ಬಗ್ಗೆ ರಾಜ್ಯ ಸರ್ಕಾರಗಳೊಂದಿಗೆ ಮಾತನಾಡುತ್ತೇವೆ. ಅವರಿಗೆ ಈ ಕುರಿತು ಅಗತ್ಯ ಸಹಕಾರ ನೀಡುತ್ತೇವೆ. ಭಾರತೀಯ ಭಾಷೆಯಲ್ಲಿಯೇ ವ್ಯವಹರಿಸುವಂತೆ ಮನವೊಲಿಸುತ್ತೇವೆ, ಒತ್ತಡ ಹೇರುತ್ತೇವೆ' ಎಂದರು.



ವಿವಿಧ ಸರ್ಕಾರಿ ನೇಮಕಾತಿಗಳಲ್ಲಿ ಶೇ 95ರಷ್ಟು ಅಭ್ಯರ್ಥಿಗಳು ಮಾತೃಭಾಷೆಯಲ್ಲಿಯೇ ಪರೀಕ್ಷೆ ಬರೆಯಲು ಮೋದಿ ಸರ್ಕಾರ ಅವಕಾಶ ನೀಡಿದೆ
ಅಮಿತ್ ಶಾ, ಕೇಂದ್ರ ಗೃಹ ಸಚಿವ

'ಭಾಷಾ ತುರ್ತು ಪರಿಸ್ಥಿತಿ ಹೇರಲು ಬಿಜೆಪಿ ಯತ್ನ': ಮುಂಬೈ (ಪಿಟಿಐ): ಬಿಜೆಪಿ ನೇತೃತ್ವದ ಸರ್ಕಾರವು ಮಹಾರಾಷ್ಟ್ರದಲ್ಲಿ 'ಭಾಷಾ ತುರ್ತು ಪರಿಸ್ಥಿತಿ' ಹೇರಿಕೆ ಮಾಡಲು ಪ್ರಯತ್ನಿಸುತ್ತಿದೆ. ಮಹಾರಾಷ್ಟ್ರದಲ್ಲಿ ಹಿಂದಿ ಹೇರಿಕೆಗೆ ಆಸ್ಪದ ನೀಡುವುದಿಲ್ಲ ಎಂದು ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಗುರುವಾರ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಈ ಬಗ್ಗೆ ಮಾತನಾಡಿ, 'ನಾವು ಯಾವುದೇ ಭಾಷೆಗಳ ವಿರೋಧಿಗಳಲ್ಲ. ಆದರೆ, ಯಾವುದೇ ಭಾಷೆಯ ಹೇರಿಕೆಯನ್ನು ಸಹಿಸುವುದಿಲ್ಲ. ನಾವು ಹಿಂದಿ ಹೇರಿಕೆಯನ್ನು ವಿರೋಧಿಸುತ್ತೇವೆ ಮತ್ತು ವಿರೋಧ ಮುಂದುವರಿಯಲಿದೆ' ಎಂದಿದ್ದಾರೆ.



ಧರ್ಮಪ್ರಭು ಕೆಂಪೇಗೌಡರು

• ನಿರ್ಮಲಾನಂದನಾಥ ಸ್ವಾಮೀಜಿ

ಇಂದು ಕೆಂಪೇಗೌಡ ಜಯಂತಿ

ಸ್ವಾಮಿ ವಿವೇಕಾನಂದರು 'if India lives who dies and if India dies who lives' ಎಂದು ಆಗಾಗ ಹೇಳುತ್ತಿದ್ದರು. ಇದು ಭಾರತೀಯ ಜ್ಞಾನ ಪರಂಪರೆಯ ಉಳಿವು ಮತ್ತು ಮುಂದುವರಿಕೆಯ ದೃಷ್ಟಿಯಿಂದ ಹೇಳಿದ ಮಾತು. ಈ ಮಾತು ತಮ್ಮ ಆಳ್ವಿಕೆಯ ನಾಡಿನ ಧರ್ಮ ಮತ್ತು ಸಂಸ್ಕೃತಿಯನ್ನು ಅರ್ಥ ಮಾಡಿಕೊಂಡು ನಾಡನ್ನು ಪ್ರವರ್ಧಮಾನಕ್ಕೆ ತಂದ ನಾಡಪ್ರಭು ಕೆಂಪೇಗೌಡರ ವ್ಯಕ್ತಿತ್ವಕ್ಕೆ ಸರಿ ಹೊಂದುತ್ತದೆ. ಅಪೂರ್ವ ಸಾಹಸಿ, ಕನಸುಗಾರ ಕೆಂಪೇಗೌಡರು ನಾಡಪ್ರಭು ಮಾತ್ರವಲ್ಲ ಧರ್ಮಪ್ರಭುಗಳೂ ಆಗಿದ್ದರು.

ಮಾನವ ಸಂಪನ್ಮೂಲವೇ ಒಂದು ನಾಡಿನ ಅತ್ಯಮೂಲ್ಯ ಸಂಪನ್ಮೂಲ ಎಂದು ಅರಿತಿದ್ದ ಕೆಂಪೇಗೌಡರು, ನಾಡಿನ ಕುಶಲಕರ್ಮಿಗಳ ಕೌಶಲವನ್ನು ದೇಶದ ಒಳಿತಿಗೆ ಹಾಗೂ ಪ್ರಗತಿಗೆ ಬಳಸಿದಾಗ ದೇಶವು ಪ್ರಗತಿಯ ಪಥದಲ್ಲಿ ಸಾಗುತ್ತದೆ ಎಂದು ಮನಗಂಡಿದ್ದರು. ಹೀಗಾಗಿಯೇ, ತಮ್ಮ ಕಾಲಮಾನದ ಎಲ್ಲ ಕ್ಷೇತ್ರದ ಅತ್ಯುತ್ತಮ ಪ್ರತಿಭೆಗಳನ್ನು ಗುರುತಿಸಿ, ಆಶ್ರಯ ನೀಡಿದರು. ಅವರ ದೂರದೃಷ್ಟಿಯ ಫಲದಿಂದಾಗಿಯೇ ಬೆಂಗಳೂರಿಗೆ ಜಾಗತಿಕ ಮಟ್ಟದಲ್ಲಿ 'ಸಿಲಿಕಾನ್ ಸಿಟಿ' ಎಂಬ ಅಭಿದಾನ ದಕ್ಕಿತು.

ಉತ್ತಮ ಆಡಳಿತಗಾರರೂ ಆಗಿದ್ದ ಕೆಂಪೇಗೌಡರು, ಬೆಂಗಳೂರು ಎಂಬ ನವನಗರ ನಿರ್ಮಾಣದ ಕನಸು ಕಂಡರು. ಅಪ್ರತಿಮ ಕರ್ತೃತ್ವಶಕ್ತಿಯಿದ್ದ ಧೀಮಂತ ನಾಯಕರಾದ ಅವರು, ಪ್ರಾಚೀನ ಕಾಲದಿಂದಲೂ ವಾಣಿಜ್ಯ ಪಥಗಳು ಸಾಗುತ್ತಿದ್ದ ಹಾಗೂ ಭೌಗೋಳಿಕವಾಗಿ ಆಯಕಟ್ಟಿನ ಪ್ರದೇಶದಲ್ಲಿ ಬೆಂಗಳೂರು ನಿರ್ಮಿಸಿದರು. ಕ್ರಿ.ಶ.1537ರಲ್ಲಿ ಕೆಂಪೇಗೌಡರು 'ದೇವರಾಯಪಟ್ಟಣ' ಎಂಬ ಹೆಸರಿನಲ್ಲಿ ತಮ್ಮ ಹೊಸ ರಾಜಧಾನಿ ಹಾಗೂ ಉತ್ಪಾದನೆ ಮತ್ತು ವಾಣಿಜ್ಯ ಕೇಂದ್ರವಾಗಿ ಬೆಂಗಳೂರು ನಗರವನ್ನು ಕಟ್ಟಿ, ಅದಕ್ಕೆ ನಾಲ್ಕು ದಿಕ್ಕಿನಲ್ಲಿ ನಾಲ್ಕು ಗಡಿ ಗೋಪುರಗಳನ್ನು ನಿರ್ಮಿಸಿದರು. ನಗರದ ಸುತ್ತ ಕಂದಕವುಳ್ಳ ಮಣ್ಣಿನ ಕೋಟೆ ನಿರ್ಮಿಸಿ, ಅದರ ಎಲ್ಲ ದಿಕ್ಕಿನಲ್ಲಿ ಕೆರೆಗಳನ್ನು ಕಟ್ಟಿಸಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸಿದರು. ತರಗುಪೇಟೆ, ಚಿಕ್ಕಪೇಟೆ, ಅಕ್ಕಿಪೇಟೆ, ಅರಳೆಪೇಟೆ, ಬಳೇಪೇಟೆ ಮುಂತಾದ ಹತ್ತಾರು ಪೇಟೆಗಳನ್ನು ನೆಲೆಗೊಳಿಸಿ, ಕುಶಲಕರ್ಮಿಗಳಿಗೆ ಅಗತ್ಯವಾದ ವೈವಿಧ್ಯಮಯ ವಸ್ತುಗಳ ಉತ್ಪಾದನೆ ಮತ್ತು ಮಾರಾಟಕ್ಕೆ ವ್ಯವಸ್ಥೆ ಮಾಡಿದ್ದು ನಗರದ ಅಭಿವೃದ್ಧಿಗೆ ಕಾರಣವಾಯಿತು. ಈ ನಗರದ ಶಿಸ್ತುಬದ್ಧ ನಿರ್ಮಾಣವನ್ನು ಕಂಡ ಬ್ರಿಟಿಷ್ ಅಧಿಕಾರಿಗಳು 'ಆಧುನಿಕ ನಗರ ನಿರ್ಮಾತೃಗಳು ನವನಗರಗಳನ್ನು ನಿರ್ಮಾಣ ಮಾಡುವ ರೀತಿಯಲ್ಲಿಯೇ ಕೆಂಪೇಗೌಡರು ಬೆಂಗಳೂರು ನಗರವನ್ನು ನಿರ್ಮಿಸಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು.

ಕೆಂಪೇಗೌಡರು ಸ್ವಭಾವತಃ ಧಾರ್ಮಿಕ ವ್ಯಕ್ತಿಯಾಗಿದ್ದರು ಹಾಗೂ ಎಲ್ಲ ಮತಧರ್ಮಗಳನ್ನು ಸಮಭಾವದಿಂದ ಕಂಡವರು. ಇಂತಹ ದೂರದೃಷ್ಟಿಯ ದೊರೆಯ ಆಶ್ರಯದಲ್ಲಿ ಬೆಂಗಳೂರು ನಗರವು ದಕ್ಷಿಣ ಭಾರತದ ಪ್ರಮುಖ ಮತ್ತು ಶ್ರೀಮಂತ ನಗರವಾಗಿ ಬೆಳೆಯಿತು. ಬೆಂಗಳೂರು ನಗರ ನಿರ್ಮಾಣವು ವಿಜಯನಗರ ಸಾಮ್ರಾಜ್ಯದ ಚರಿತ್ರೆಯಲ್ಲಿ ಒಂದು ಮಹತ್ವದ ಘಟನೆಯಾಯಿತು. ಅನೇಕ ಚಕ್ರವರ್ತಿಗಳು, ಸಾಮ್ರಾಟರು, ದೊಡ್ಡ ದೊಡ್ಡ ರಾಜ ಮನೆತನಗಳು ಕಟ್ಟಿದ ರಾಜಧಾನಿಗಳು, ಬೃಹತ್ ನಗರಗಳು ಇಂದು ಅಸ್ತಿತ್ವದಲ್ಲಿಲ್ಲ. ಆದರೆ ಕೆಂಪೇಗೌಡರು ಕಟ್ಟಿದ ಬೆಂಗಳೂರು ಈಗಲೂ ಉತ್ತರೋತ್ತರವಾಗಿ ಬೆಳೆಯುತ್ತಲೇ ಇದೆ.

ಕರ್ನಾಟಕದ ಇತಿಹಾಸದಲ್ಲಿ ಸ್ವತಂತ್ರ ರಾಜ ಮಹಾರಾಜರು ಪಡೆದಿರುವಷ್ಟೇ ಜನಪ್ರಿಯತೆ ಗಳಿಸಿದ ವ್ಯಕ್ತಿ ನಾಡಪ್ರಭು ಕೆಂಪೇಗೌಡರು. ಅವರು ವಿಜಯನಗರ ಸಾಮ್ರಾಜ್ಯದ ಉತ್ತುಂಗ ಸ್ಥಿತಿ, ಪತನ ಹಾಗೂ ಅವನತಿಗೆ ಸಾಕ್ಷಿಯಾಗಿದ್ದರು. ಕೃಷ್ಣದೇವರಾಯ, ಅಚ್ಯುತರಾಯ, ಸದಾಶಿವರಾಯ ಮತ್ತು ರಾಮರಾಯರ ಆಳ್ವಿಕೆಯ ಕಾಲದಲ್ಲಿ ಸುಮಾರು ಎಪ್ಪತ್ತು ವರ್ಷ ರಾಜ್ಯಭಾರ ಮಾಡಿದರು. ಶತಾಯುಷಿಗಳೂ ಹಾಗೂ ವಿಜಯನಗರ ಸಾಮ್ರಾಜ್ಯದ ನಾಡಪ್ರಭುಗಳಲ್ಲಿಯೇ ಅತ್ಯಂತ ಪ್ರಭಾವಶಾಲಿಗಳೂ ಜನಾನುರಾಗಿಯೂ ಆಗಿದ್ದರು. ತಮ್ಮ ಆಳ್ವಿಕೆಯ ಮೊರಸುನಾಡಿನಲ್ಲಿ ಮಹಿಳೆಯರು ದೇವರಿಗೆ ಕೈ ಬೆರಳನ್ನು ಅರ್ಪಿಸುತ್ತಿದ್ದ ಕ್ರೂರ ಆಚರಣೆಯನ್ನು ನಿಷೇಧಿಸಿದರು. ಇವರ ಲೌಕಿಕ ಮತ್ತು ಪಾರಮಾರ್ಥಿಕ ಸಾಧನೆಯನ್ನು ಕಂಡ ಪ್ರಜೆಗಳು ಇವರನ್ನು 'ಧರ್ಮಪ್ರಭು' ಎಂದು ಕೊಂಡಾಡುತ್ತಿದ್ದರು. ಇಂತಹ ದೊರೆಯನ್ನು ಐನೂರ ಹದಿನಾರನೆಯ ಜನ್ಮದಿನದ ಸಂದರ್ಭದಲ್ಲಿ ಜನರು ಕೃತಜ್ಞತೆಯಿಂದ ಸ್ಮರಿಸುತ್ತಿರುವುದು ಅರ್ಥಪೂರ್ಣ.

ಲೇಖಕರು: ಪೀಠಾಧ್ಯಕ್ಷರು, ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠ

ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

ರಾಷ್ಟ್ರೀಯ ಈಜು: ಅಂತಿಮ ದಿನ ಕೂಟ ದಾಖಲೆ ನಿರ್ಮಿಸಿದ ಶಾನ್ ಗಂಗೂಲಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರೀಕ್ಷೆಯಂತೆ ಕರ್ನಾಟಕ ತಂಡದ ಈಜುಪಟುಗಳು ಭುವನೇಶ್ವರದಲ್ಲಿ ಗುರುವಾರ ಮುಕ್ತಾಯಗೊಂಡ 78ನೇ ರಾಷ್ಟ್ರೀಯ ಸೀನಿಯರ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ, ಪುರುಷರ ಮತ್ತು ಮಹಿಳಾ ವಿಭಾಗದ ಪ್ರಶಸ್ತಿಗಳನ್ನು ಗೆದ್ದುಕೊಂಡರು. ಪುರುಷರ ವಿಭಾಗದ 400 ಮೀ. ಮೆಡ್ಲೆಯಲ್ಲಿ ಕರ್ನಾಟಕದ ಶಾನ್ ಗಂಗೂಲಿ ಹಳೆಯ ದಾಖಲೆ ಮುಳುಗಿಸಿದರು.

ಒಟ್ಟು ಎರಡು ಕೂಟ ದಾಖಲೆ ಸ್ಥಾಪಿಸಿದ ಗಂಗೂಲಿ ಪುರುಷರ ವಿಭಾಗದ ಶ್ರೇಷ್ಠ ಈಜುಪಟು ಗೌರವಕ್ಕೆ ಪಾತ್ರರಾದರು. ಕರ್ನಾಟಕದವರೇ ಆದ ದಿನಿಧಿ ದೇಸಿಂಗು ಮಹಿಳಾ ವಿಭಾಗದಲ್ಲಿ ಈ ಗೌರವ ಪಡೆದರು. ಅವರೂ ಎರಡು ಕೂಟ ದಾಖಲೆ ಸ್ಥಾಪಿಸಿದ್ದರು.

20 ವರ್ಷ ವಯಸ್ಸಿನ ಗಂಗೂಲಿ 400 ಮೀ. ಮೆಡ್ಲೆ ಸ್ಪರ್ಧೆಯನ್ನು 4ನಿಮಿಷ 24.64 ಸೆ.ಗಳಲ್ಲಿ ಕ್ರಮಿಸಿ, 2023ರಲ್ಲಿ ಗುಜರಾತ್‌ನ ಆರ್ಯನ್ ನೆಹ್ರಾ ಹೆಸರಿನಲ್ಲಿದ್ದ 4ನಿ.25.62 ಸೆ.ಗಳ ದಾಖಲೆ ಮುಳುಗಿಸಿ ಚಿನ್ನ ಗೆದ್ದರು. ಮಧ್ಯಪ್ರದೇಶದ ಅದ್ವೈತ್ ಪಾಗೆ 4ನಿ.26.90 ಸೆ.ಗಳೊಡನೆ ರಜತ ಪದಕ ಪಡೆದರೆ, ಆರ್ಯನ್ 4ನಿ.30.35 ಸೆಕೆಂಡುಗಳೊಡನೆ ಕಂಚಿನ ಪದಕ ಪಡೆದರು.

ಕೊನೆಯ ದಿನ ನಡೆದ ಏಳು ಸ್ಪರ್ಧೆಗಳಲ್ಲಿ ಕರ್ನಾಟಕ ಎರಡು ಚಿನ್ನ, ಎರಡು ಬೆಳ್ಳಿ, ಒಂದು ಕಂಚಿನ ಪದಕ ಪಡೆಯಿತು. ಮಹಿಳೆಯರ 100 ಮೀ. ಬ್ಯಾಕ್‌ಸ್ಟ್ರೋಕ್ ಸ್ಪರ್ಧೆಯಲ್ಲಿ ವಿಹಿತಾ ನಯನಾ ಲೋಕನಾಥನ್ 1ನಿ.05.18 ಸೆ.ಗಳೊಡನೆ ಮೊದಲಿಗರಾದರು.

ಕರ್ನಾಟಕವು ಒಟ್ಟು 311 ಪಾಯಿಂಟ್ ಕಲೆಹಾಕಿ ಸಮಗ್ರ ಚಾಂಪಿಯನ್ ಪಟ್ಟ ಉಳಿಸಿಕೊಂಡಿತು. ಪುರುಷರ ವಿಭಾಗದಲ್ಲಿ 158 ಮತ್ತು ಮಹಿಳಾ ವಿಭಾಗದಲ್ಲಿ 153 ಪಾಯಿಂಟ್ಸ್ ಸಂಗ್ರಹಿಸಿ ದೇಶದ ಪ್ರಮುಖ ಈಜು ಶಕ್ತಿಯಾಗಿ ಮುಂದುವರಿಯಿತು.

ಫಲಿತಾಂಶಗಳು: ಪುರುಷರು: 100 ಮೀ. ಫ್ರೀಸ್ಟೈಲ್: ಹೀರ್ ಗೀತೇಶ್ ಶಾ (ಮಹಾರಾಷ್ಟ್ರ)–1, ತನಿಶ್ ಜಾರ್ಜ್ ಮ್ಯಾಥ್ಯೂ (ಕರ್ನಾಟಕ)–2, ರಿಷಭ್ ಅನುಪಮ್ ದಾಸ್ (ಮಹಾರಾಷ್ಟ್ರ)–3, ಕಾಲ: 51.29 ಸೆ.; 400 ಮೀ. ಮೆಡ್ಲೆ: ಶಾನ್ ಗಂಗೂಲಿ (ಕರ್ನಾಟಕ)–1, ಅದ್ವೈತ್ ಪಾಗೆ (ಮಧ್ಯ ಪ್ರದೇಶ)–2, ಆರ್ಯನ್ ನೆಹ್ರಾ (ಗುಜರಾತ್)–3, ಕಾಲ: 4ನಿ.24.64 ಸೆ., ನೂತನ ದಾಖಲೆ, ಹಳೆಯದು: 4ನಿ.25.62ಸೆ. (ಆರ್ಯನ್ ನೆಹ್ರಾ); 100 ಮೀ. ಬ್ಯಾಕ್‌ಸ್ಟ್ರೋಕ್: ರಿಷಭ್ ಅನುಪಮ್ ದಾಸ್ (ಮಹಾರಾಷ್ಟ್ರ)–1, ಉತ್ಕರ್ಷ್ ಸಂತೋಷ್ ಪಾಟೀಲ್ (ಕರ್ನಾಟಕ)–2, ಆಕಾಶ್ ಮಣಿ (ಕರ್ನಾಟಕ)–3, ಕಾಲ: 56.13 ಸೆ.; 100 ಮೀ. ಬ್ರೆಸ್ಟ್‌ಸ್ಟ್ರೋಕ್: ಲಿಕಿತ್ ಸೆಲ್ವರಾಜ್ ಪ್ರೇಮ (ಸರ್ವಿಸಸ್)–1, ಧನುಷ್ ಸುರೇಶ್ (ತಮಿಳುನಾಡು)–2, ಎಂ.ಎಸ್. ಯದೇಶ್ ಬಾಬು (ತಮಿಳುನಾಡು)–3, ಕಾಲ: 1ನಿ.03.06 ಸೆ.; **ಮಹಿಳೆಯರು:** 800 ಮೀ. ಫ್ರೀಸ್ಟೈಲ್: ಭವ್ಯಾ ಸಚದೇವ್ (ದೆಹಲಿ)–1, ವೃತ್ತಿ ಅಗರವಾಲ್ (ತೆಲಂಗಾಣ)–2, ಅದಿತಿ ಸತೀಶ್ ಹೆಗ್ಡೆ (ಮಹಾರಾಷ್ಟ್ರ)–3, ಕಾಲ: 9ನಿ.09.67 ಸೆ.; 100 ಮೀ. ಬ್ಯಾಕ್‌ಸ್ಟ್ರೋಕ್: ವಿಹಿತಾ ನಯನಾ ಲೋಕನಾಥನ್ (ಕರ್ನಾಟಕ)–1, ಸೌಭ್ರತಿ ಮಂಡಲ್ (ಬಂಗಾಳ)–2 ಪ್ರತ್ಯಾಸಾ ರೇ (ಒಡಿಶಾ)–3, ಕಾಲ: 1ನಿ.05.18 ಸೆ.; 100 ಮೀ. ಬ್ರೆಸ್ಟ್‌ಸ್ಟ್ರೋಕ್: ಹರ್ಷಿತಾ ಜಯ ರಾಮ್ (ರೈಲ್ವೇಸ್)–1, ಮನ್ನತಾ ಮಿಶ್ರಾ (ಒಡಿಶಾ)–2, ಸಾನ್ವಿ ದೇಶ್ವಾಲ್ (ಮಹಾರಾಷ್ಟ್ರ)–3, ಕಾಲ: 1ನಿ.13.24 ಸೆ.

ಭುವನೇಶ್ವರದಲ್ಲಿ ನಡೆದ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಕರ್ನಾಟಕದ ಈಜುಪಟುಗಳು

ದಿನಿಧಿ ದೇಸಿಂಗು

ರ‍್ಯಾಂಕ್	ರಾಜ್ಯ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಕರ್ನಾಟಕ	16	11	14	41
2	ತಮಿಳುನಾಡು	8	5	3	16
3	ಮಹಾರಾಷ್ಟ್ರ	5	6	6	17
4	ರೈಲ್ವೇಸ್	4	5	4	13
5	ದೆಹಲಿ	4	3	-	7
6	ಗುಜರಾತ್	2	1	1	4

ಟೆಸ್ಟ್ ಕ್ರಿಕೆಟ್‌ನಲ್ಲಿ ಸ್ಟಾಪ್ ವಾಚ್

ದುಬೈ (ಪಿಟಿಐ): ಟೆಸ್ಟ್ ಕ್ರಿಕೆಟ್ ಪಂದ್ಯಗಳಲ್ಲಿ ನಿಗದಿ ಅವಧಿಯಲ್ಲಿ ಓವರ್‌ಗಳನ್ನು ಮುಗಿಸುವ ನಿಟ್ಟಿನಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಸ್ಟಾಪ್ ವಾಚ್ ನಿಯಮವನ್ನು ಜಾರಿಗೆ ತಂದಿದೆ. ಪ್ರಸ್ತುತ ಆರಂಭವಾಗಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಆವೃತ್ತಿಯಲ್ಲಿ ಈ ನಿಯಮವನ್ನು ಜಾರಿ ಮಾಡಿದೆ.

ಈ ನಿಯಮದಿಂದಾಗಿ ಶಾರ್ಟ್ ರನ್ ಸಂದರ್ಭದಲ್ಲಿ ಯಾವ ಬ್ಯಾಟರ್‌ಗೆ ಸ್ಟ್ರೈಕ್ ಸಿಗಬೇಕು ಎಂಬ ನಿರ್ಧಾರ ತೆಗೆದುಕೊಳ್ಳಲು ಫೀಲ್ಡಿಂಗ್ ನಡೆಸುವ ತಂಡಕ್ಕೆ ಸಾಧ್ಯವಾಗಲಿದೆ. ಗಾಲೆಯಲ್ಲಿ ನಡೆಯುತ್ತಿರುವ ಶ್ರೀಲಂಕಾ ಮತ್ತು ಬಾಂಗ್ಲಾದೇಶ ಟೆಸ್ಟ್ ಸರಣಿಯಲ್ಲಿ ಈ ನಿಯಮ ಜಾರಿಗೊಳಿಸಲಾಗಿದೆ.

ನಿಗದಿತ ಓವರ್‌ಗಳ ಕ್ರಿಕೆಟ್ ಮಾದರಿಗಳಲ್ಲಿ ಈಗಾಗಲೇ ಈ ಸ್ಟಾಪ್ ವಾಚ್ ಬಳಕೆ ಮಾಡಲಾಗುತ್ತಿದೆ.

ಒಂದು ಓವರ್ ಮುಗಿದಾಗ ನಂತರದ ಓವರ್ ಆರಂಭಿಸಲು ಶೂನ್ಯದಿಂದ 60 ಸೆಕೆಂಡುಗಳವರೆಗೆ ವೇಳೆಯನ್ನು ಪ್ರದರ್ಶಿಸುವ ಎಲೆಕ್ಟ್ರಾನಿಕ್ ಗಡಿಯಾರವನ್ನು ಮೈದಾನದಲ್ಲಿ ಅಳವಡಿಸಲಾಗುತ್ತದೆ. ಈ ಅವಧಿಯನ್ನು ಉಲ್ಲಂಘಿಸಿದರೆ ಎಚ್ಚರಿಕೆ ನೀಡಲಾಗುತ್ತದೆ. ಎರಡು ಬಾರಿ ಎಚ್ಚರಿಕೆ ಮತ್ತು ಮೂರನೇ ಬಾರಿ ಬೌಲಿಂಗ್ ಮಾಡುವ ತಂಡಕ್ಕೆ ಐದು ರನ್ ಪೆನಾಲ್ಟಿ ಹಾಕಲಾಗುತ್ತದೆ. 80 ಓವರ್‌ಗಳು ಪೂರ್ಣಗೊಂಡಾಗ ವಾಚ್ ಅನ್ನು ಶೂನ್ಯಕ್ಕೆ ಮರು ಹೊಂದಾಣಿಕೆ ಮಾಡಲಾಗುತ್ತದೆ ಎಂದು ಐಸಿಸಿ ತಿಳಿಸಿದೆ.



ಆಕ್ಸಿಯಾನ್ ಮಿಷನ್ 4 (Ax-4) ನ ಭಾಗವಾಗಿರುವ ಐಎಎಫ್ ಗ್ರೂಪ್ ಕ್ಯಾಪ್ಟನ್ ಭಾರತೀಯ ಗಗನಯಾತ್ರಿಯಾಗಿದ್ದಾರೆ!

ಸ್ಕ್ವಾಷ್: ಮೂರೂ ಪ್ರಶಸ್ತಿ ಗೆದ್ದ ಭಾರತ

ಕ್ವಾಲಾಲಂಪುರ (ಪಿಟಿಐ): ಅಮೋಘ ಸಾಧನೆ ತೋರಿದ ಭಾರತ ತಂಡದವರು, ಎರಡನೇ ಏಷ್ಯನ್ ಸ್ಕ್ವಾಷ್ ಡಬಲ್ಸ್ ಚಾಂಪಿಯನ್‌ಷಿಪ್‌ನಲ್ಲಿ ಗುರುವಾರ ಮೂರೂ ಪ್ರಶಸ್ತಿಗಳನ್ನು (ಪುರುಷರ, ಮಹಿಳೆಯರ ಮತ್ತು ಮಿಶ್ರ ವಿಭಾಗ) ಕಬಳಿಸಿದರು.

ಪುರುಷರ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕ ಪಡೆದಿದ್ದ ಅಭಯ್ ಸಿಂಗ್– ವೆಲವನ್ ಸೆಂಥಿಲ್‌ಕುಮಾರ್ ಅವರು ಮೊದಲ ಸೆಟ್ ಕಳೆದುಕೊಂಡರೂ ಚೇತರಿಸಿ 2–1 ರಿಂದ (9–11, 11–5, 11–5) ಪಾಕಿಸ್ತಾನದ ಎದುರಾಳಿಗಳಾದ ನೂರ್ ಜಮಾನ್– ನಾಸಿರ್ ಇಕ್ಬಾಲ್ ಅವರನ್ನು ಮಣಿಸಿದರು. ಭಾರತದ ಜೋಡಿ ಸೆಮಿಫೈನಲ್‌ನಲ್ಲಿ ಹಾಂಗ್‌ಕಾಂಗ್‌ನ ಎದುರಾಳಿಗಳನ್ನು ಮಣಿಸಿತ್ತು.

ಮಹಿಳೆಯರ ಡಬಲ್ಸ್ ಫೈನಲ್‌ನಲ್ಲಿ ಅನುಭವಿ ಜೋಷ್ನಾ ಚಿಣ್ಣಪ್ಪ– ಅನಾಹತ್ ಸಿಂಗ್ 2–1 ರಿಂದ (8–11, 11–9, 11–10) ರಿಂದ ಮಲೇಷ್ಯಾದ ಐನಾ ಅಮಾನಿ– ಷಿನ್ ಯಿಂಗ್ ಯೀ ಜೋಡಿಯನ್ನು 35 ನಿಮಿಷಗಳಲ್ಲಿ ಸೋಲಿಸಿದರು. ಈ ವಿಭಾಗದಲ್ಲಿ ಭಾರತದ ಜೋಡಿ ಎರಡನೇ ಶ್ರೇಯಾಂಕ ಪಡೆದಿತ್ತು.

ಮಿಶ್ರ ಡಬಲ್ಸ್‌ನಲ್ಲಿ ಅಗ್ರ ಶ್ರೇಯಾಂಕ ಪಡೆದಿದ್ದ ಅಭಯ್– ಅನಾಹತ್ ಜೋಡಿ, 28 ನಿಮಿಷಗಳವರೆಗೆ ನಡೆದ ಫೈನಲ್ ಪಂದ್ಯದಲ್ಲಿ 2–0 ಯಿಂದ (11-9, 11-7) ಮಲೇಷ್ಯಾದ ರಚೆಲ್ ಅರ್ನಾಲ್ಡ್– ಅಮೀಶನ್‌ರಾಜ್ ಚಂದ್ರನ್ ಜೋಡಿಯನ್ನು ಹಿಮ್ಮೆಟ್ಟಿಸಿತು. ಈ ಮೂಲಕ, ಅಭಯ್ ಮತ್ತು ಅನಾಹತ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಜೋಷ್ನಾ ಚಿಣ್ಣಪ್ಪ– ಅನಾಹತ್ ಸಿಂಗ್

ಟಿಟಿ: ಯಶವಂತ್, ಹಿಮಾಂಶಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹಿಮಾಂಶಿ ಚೌಧರಿ ಹಾಗೂ ಯಶವಂತ್ ಪಿ. ಅವರು ಕೆಜಿಎಸ್ ಕ್ಲಬ್ ಆಯೋಜಿಸಿರುವ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದುಕೊಂಡರು.

ನಗರದ ಕೆಜಿಎಸ್ ಕ್ಲಬ್‌ನಲ್ಲಿ ಹಮ್ಮಿಕೊಂಡಿರುವ ಟೂರ್ನಿಯ ಎರಡನೇ ದಿನವಾದ ಗುರುವಾರ ನಡೆದ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಯಶವಂತ್ 11–6, 11–8, 11–7, 11–3 ರಿಂದ ವಿಭಾಸ್ ವಿ.ಜಿ. ಅವರನ್ನು ಸೋಲಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಯಶವಂತ್ 12–14, 11–5, 11–8, 11–9, 3–11, 11–7 ರಿಂದ ಅಥರ್ವ ನವರಂಗೆ ಅವರನ್ನು, ವಿಭಾಸ್ 7–11, 11–6, 8–11, 11–7, 11–6, 11–7 ರಿಂದ ಅಕ್ಷಯ್ ಮಹಾಂತ ಅವರನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್ ಫೈನಲ್‌ನಲ್ಲಿ ಹಿಮಾಂಶಿ ಚೌಧರಿ 13–11, 11–5, 7–11, 11–6, 6–11, 11–8ರಿಂದ ತೃಪ್ತಿ ಪುರೋಹಿತ್ ಎದುರು ಗೆಲುವು ಸಾಧಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಹಿಮಾಂಶಿ 12–10, 11–6, 11–7, 11–7 ರಿಂದ ಪ್ರೇಕ್ಷಾ ಟಿ. ತಿಲಾವತ್ ವಿರುದ್ಧ; ತೃಪ್ತಿ 11–8, 11–7, 11–6, 8–11, 10–12, 11–3ರಿಂದ ತನಿಷ್ಕಾ ಕಪಿಲ್ ಕಾಲಭೈರವ ವಿರುದ್ಧ ಜಯ ಪಡೆದಿದ್ದರು.

ಹಿಮಾಂಶಿ ಚೌಧರಿ, ಯಶವಂತ್ ಪಿ.

ಯೂಟ್ಯೂಬ್ ವಾಹಿನಿಯ 'ಆ್ಯಷ್ ಕಿ ಬಾತ್' ಕಾರ್ಯಕ್ರಮದಲ್ಲಿ ಮಾಜಿ ಆಫ್‌ಸ್ಪಿನ್ನರ್

ದ್ವಿಶತಕ ಗಳಿಸಲು ಪಂತ್‌ಗೆ ಅಶ್ವಿನ್ ಸಲಹೆ

ನವದೆಹಲಿ (ಪಿಟಿಐ): ರಿಷಭ್ ಪಂತ್ ಅವರು ತಮ್ಮ ಶತಕಗಳನ್ನು ದ್ವಿಶತಕಗಳನ್ನಾಗಿ ಪರಿವರ್ತಿಸುವತ್ತ ಹೆಚ್ಚು ಗಮನ ಕೊಡಬೇಕು. ಭಾರತದ ಬ್ಯಾಟರ್‌ಗಳು ಕ್ರೀಸ್‌ನಲ್ಲಿ ಹೆಚ್ಚು ಸಮಯ ಆಡಬೇಕು ಎಂದು ಮಾಜಿ ಆಫ್‌ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ ಸಲಹೆ ನೀಡಿದ್ದಾರೆ.

ಲೀಡ್ಸ್‌ನಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಮೊದಲ ಟೆಸ್ಟ್‌ನಲ್ಲಿ ಶುಭಮನ್ ಗಿಲ್ ನಾಯಕತ್ವದ ಭಾರತ ತಂಡವು 5 ವಿಕೆಟ್‌ಗಳಿಂದ ಸೋತಿತ್ತು. ಈ ಕುರಿತು ತಮ್ಮ ಯೂಟ್ಯೂಬ್ ವಾಹಿನಿಯ 'ಆ್ಯಷ್ ಕಿ ಬಾತ್' ಕಾರ್ಯಕ್ರಮದಲ್ಲಿ ಅವರು ಮಾತನಾಡಿದ್ದಾರೆ.

'ಯಾವುದೇ ಹಂತದಲ್ಲಿಯೂ ಆತಂಕಕ್ಕೆ ಒಳಗಾಗಬೇಡಿ. ತಂತ್ರಗಾರಿಕೆಯನ್ನು ಹೆಚ್ಚು ಬದಲಿಸಬೇಡಿ. ಮುಂದಿನ ಟೆಸ್ಟ್‌ನಲ್ಲಿ ಗೆದ್ದು ಸರಣಿಯಲ್ಲಿ ಸಮಬಲ ಮಾಡುವ ಅವಕಾಶ ಭಾರತಕ್ಕೆ ಇದೆ. ಇಂಗ್ಲೆಂಡ್ ತಂಡದವರ ತಂತ್ರಗಾರಿಕೆಯನ್ನು ಪೂರ್ಣವಾಗಿ ಅರಿತರೆ ಮಾತ್ರ ಸರಣಿಯಲ್ಲಿ ಹಿಡಿತ ಸಾಧಿಸಲು ಸಾಧ್ಯವಿದೆ. ಇಲ್ಲದಿದ್ದರೆ ಗೆಲುವು ಕೈಜಾರುವುದು ಖಚಿತ' ಎಂದು ಅಶ್ವಿನ್ ಹೇಳಿದ್ದಾರೆ.

'ಭಾರತ ತಂಡವು ಐದನೇ ದಿನದವರೆಗೂ ಬ್ಯಾಟಿಂಗ್ ಮುಂದುವರಿಸಬೇಕಿತ್ತು. ಇಂಗ್ಲೆಂಡ್ ತಂಡವು ಎಷ್ಟೇ ಮೊತ್ತದ ಗುರಿ ಸಿಕ್ಕರೂ ತಾವು ಗೆಲ್ಲುವುದು ಖಚಿತ ಎಂದು ಹೇಳಿಕೊಂಡಿತ್ತು. ಇದನ್ನು ಭಾರತ ಗಂಭೀರವಾಗಿ ಪರಿಗಣಿಸಿ, ಎಷ್ಟು ಸಾಧ್ಯವೋ ಅಷ್ಟು ಬ್ಯಾಟಿಂಗ್‌ನಲ್ಲಿ ಸಮಯ ಹೆಚ್ಚು ಕಳೆಯಬೇಕಿತ್ತು. ಎದುರಾಳಿಗೆ ದೊಡ್ಡ ಗುರಿ ಮತ್ತು ಕಡಿಮೆ ಸಮಯ ಕೊಟ್ಟಾಗ ಮಾತ್ರ ನಾವು ನಿಯಂತ್ರಣ ಸಾಧಿಸಬಹುದಿತ್ತು. 400 ರಿಂದ 450 ರನ್‌ಗಳ ಗುರಿ ಕೊಟ್ಟಿದ್ದರೆ ಸೂಕ್ತವಾಗುತ್ತಿತ್ತು' ಎಂದು ವಿಶ್ಲೇಷಿಸಿದರು.

'ರಿಷಭ್ ಪಂತ್ ಅವರನ್ನು ವಿರಾಟ್ ಕೊಹ್ಲಿ ಅವರೊಂದಿಗೆ ಹೋಲಿಕೆ ಮಾಡುವುದರಲ್ಲಿ ತಪ್ಪಿಲ್ಲ. ಆದರೆ ಮಹೇಂದ್ರಸಿಂಗ್ ಧೋನಿ ಅವರೊಂದಿಗೆ ಹೋಲಿಕೆ ಸಮಂಜಸವಲ್ಲ. ಏಕೆಂದರೆ ಅವರು ಐದನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುತ್ತಿರಲಿಲ್ಲ. ಪಂತ್ ಅವರು ತಂಡದ ಮುಖ್ಯ ಬ್ಯಾಟರ್ ಆಗಿದ್ದಾರೆ. ಅವರ ಟೈಮಿಂಗ್ ಅಮೋಘವಾಗಿದೆ. ಚೆಂಡಿನ ಚಲನೆ, ಲೈನ್ ಮತ್ತು ಲೆಂಗ್ತ್ ಗುರುತಿಸುವಲ್ಲಿ ಚುರುಕಾಗಿದ್ದಾರೆ. ಇದೊಂದು ಅಪರೂಪದ ಗುಣ. ಪಾಕಿಸ್ತಾನ ದಿಗ್ಗಜ ಇಂಜಮಾಮ್ ಉಲ್ ಹಕ್ ಅವರಿಗೂ ಆ ಗುಣವಿತ್ತು. ರಿಷಭ್ ಅವರು ಅಮೋಘವಾಗಿ ಆಡಿದ್ದಾರೆ. ಅವರು ತಮ್ಮ ಶತಕಗಳನ್ನು ದ್ವಿಶತಕಗಳನ್ನಾಗಿ ಪರಿವರ್ತಿಸುವತ್ತ ಚಿತ್ತ ಹರಿಸಬೇಕು. ಏಕೆಂದರೆ; ಕೆಳಕ್ರಮಾಂಕದಿಂದ ಯಾವಾಗಲೂ ಹೆಚ್ಚಿನ ಕಾಣಿಕೆ ನಿರೀಕ್ಷಿಸಲು ಸಾಧ್ಯವಿಲ್ಲ. ಆದ್ದರಿಂದ ರಿಷಭ್ ತಮ್ಮ ಇನಿಂಗ್ಸ್ ಅನ್ನು ಇನ್ನಷ್ಟು ಬೆಳೆಸಿದರೆ ತಂಡಕ್ಕೆ ಹೆಚ್ಚು ಲಾಭ' ಎಂದು ಅಶ್ವಿನ್ ಅಭಿಪ್ರಾಯಪಟ್ಟಿದ್ದಾರೆ.

ಪಂತ್ ಅವರು ಲೀಡ್ಸ್ ಟೆಸ್ಟ್ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಗಳಿಸಿ ದಾಖಲೆ ಬರೆದಿದ್ದರು.

ಅಶ್ವಿನ್ ಮತ್ತು ರಿಷಭ್ ಪಂತ್

ಎರಡನೇ ಟೆಸ್ಟ್: ಇಂಗ್ಲೆಂಡ್ ತಂಡದಲ್ಲಿ ವೇಗಿ ಜೋಫ್ರಾ ಆರ್ಚರ್‌ಗೆ ಸ್ಥಾನ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ವಿರುದ್ಧ ಜುಲೈ 2ರಿಂದ ಇಲ್ಲಿ ನಡೆಯಲಿರುವ ಎರಡನೇ ಕ್ರಿಕೆಟ್ ಟೆಸ್ಟ್‌ನಲ್ಲಿ ಆಡುವ ಇಂಗ್ಲೆಂಡ್ ತಂಡಕ್ಕೆ ವೇಗದ ಬೌಲರ್ ಜೋಫ್ರಾ ಆರ್ಚರ್ ಸೇರ್ಪಡೆ ಆಗಿದ್ದಾರೆ.

ಕೆಲ ವರ್ಷಗಳಿಂದ ಆರ್ಚರ್ ಅವರು ಬೌಲಿಂಗ್ ಮಾಡುವ ಕೈಯ ಮೊಣಗಂಟಿನ ಭಾಗದ ನೋವಿನಿಂದ ಬಳಲುತ್ತಿದ್ದಾರೆ. ಅವರು ನಾಲ್ಕು ವರ್ಷ ಹಿಂದೆ ಅಹಮದಾಬಾದಿನಲ್ಲಿ ಭಾರತ ವಿರುದ್ಧ ಕೊನೆಯ ಬಾರಿ ಟೆಸ್ಟ್ ಪಂದ್ಯ ಆಡಿದ್ದರು.

2021ರ ನಂತರ ಇದೇ ಮೊದಲ ಬಾರಿ 30 ವರ್ಷ ವಯಸ್ಸಿನ ಬಲಗೈ ವೇಗಿ ಇಂಗ್ಲೆಂಡ್ ತಂಡಕ್ಕೆ ಮರಳುತ್ತಿದ್ದಾರೆ. ಮುಂದಿನ ವಾರ ಎಜ್‌ಬಾಸ್ಟನ್‌ನಲ್ಲಿ 13ನೇ ಟೆಸ್ಟ್ ಆಡಲು ಸಜ್ಜಾಗಿದ್ದಾರೆ' ಎಂದು ಇಸಿಬಿ ಹೇಳಿಕೆಯಲ್ಲಿ ತಿಳಿಸಿದೆ.

ಲೀಡ್ಸ್‌ನಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯ ಗೆದ್ದಿರುವ ಇಂಗ್ಲೆಂಡ್ ಐದು ಪಂದ್ಯಗಳ ಸರಣಿಯಲ್ಲಿ 1–0 ಮುನ್ನಡೆ ಗಳಿಸಿದೆ.

ತಂಡ ಹೀಗಿದೆ: ಬೆನ್ ಸ್ಟೋಕ್ಸ್ (ನಾಯಕ), ಓಲಿ ಪೋಪ್ (ಉಪ ನಾಯಕ), ಹ್ಯಾರಿ ಬ್ರೂಕ್, ಜೋ ರೂಟ್, ಬೆನ್ ಸ್ಟೋಕ್ಸ್, ಜಾಕ್ ಕ್ರಾಲಿ, ಜೇಮಿ ಸ್ಮಿತ್ (ವಿಕೆಟ್ ಕೀಪರ್), ಸ್ಯಾಮ್ ಕುಕ್, ಜೇಕಬ್ ಬೆಥೆಲ್, ಜೋಫ್ರಾ ಆರ್ಚರ್, ಶೋಯೆಬ್ ಬಶೀರ್, ಬ್ರೈಡನ್ ಕಾರ್ಸ್, ಜೇಮಿ ಓವರ್ಟನ್, ಜೋಶ್ ಟಂಗ್ ಮತ್ತು ಕ್ರಿಸ್ ವೋಕ್ಸ್.


ಜೋಫ್ರಾ ಆರ್ಚರ್

ಈವರೆಗಿನ ಪ್ರಕ್ರಿಯೆಗೆ ಐಒಸಿ ತಡೆ

ನವದೆಹಲಿ (ಪಿಟಿಐ): 2036ರ ಒಲಿಂಪಿಕ್ಸ್ ಆತಿಥ್ಯಕ್ಕೆ ಸಂಬಂಧಿಸಿದ ಬಿಡ್ ಬಗ್ಗೆ ನಿರ್ಧಾರ ಇನ್ನಷ್ಟು ವಿಳಂಬವಾಗುವ ನಿರೀಕ್ಷೆಯಿದೆ. ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿಯ ನೂತನ ಅಧ್ಯಕ್ಷೆ ಕ್ರಿಸ್ಟಿ ಕೊವೆಂಟ್ರಿ ಅವರು ಈವರೆಗಿನ ಪ್ರಕ್ರಿಯೆಗೆ ಗುರುವಾರ ತಡೆಹಾಕಿದ್ದಾರೆ.

ಭವಿಷ್ಯದ ಆತಿಥೇಯ ರಾಷ್ಟ್ರವನ್ನು 'ಸೂಕ್ತ ಸಮಯ'ದೊಳಗೆ ಕಂಡುಕೊಳ್ಳಲು ಹೊಸ ಕಾರ್ಯತಂಡ ರಚಿಸಲು ಐಒಸಿ ಅಧ್ಯಕ್ಷೆ ಮುಂದಾಗಿದ್ದಾರೆ.

ಒಲಿಂಪಿಕ್ ಸಮಿತಿಯ (ಐಒಸಿ) ಅಧ್ಯಕ್ಷ ಸ್ಥಾನ ವಹಿಸಿಕೊಂಡ ಮೊದಲ ಮಹಿಳೆ ಹಾಗೂ ಆಫ್ರಿಕಾದ ಮೊದಲ ಅಧ್ಯಕ್ಷೆ ಎನಿಸಿರುವ ಕೊವೆಂಟ್ರಿ ಆನ್‌ಲೈನ್ ಮಾಧ್ಯಮಗೋಷ್ಠಿಯಲ್ಲಿ ಈ ನಿರ್ಧಾರ ಪ್ರಕಟಿಸಿದರು.

2036ರ ಬೇಸಿಗೆ ಒಲಿಂಪಿಕ್ಸ್‌ಗೆ ಬಿಡ್ ಸಲ್ಲಿಸಿರುವ ದೇಶಗಳಲ್ಲಿ ಭಾರತವೂ ಒಳಗೊಂಡಿದ್ದು, ಮೊದಲ ಬಾರಿ ಈ ಪ್ರತಿಷ್ಠಿತ ಕ್ರೀಡೆಗಳನ್ನು ಆಯೋಜಿಸಲು ಉತ್ಸುಕತೆ ತೋರಿದೆ.

ಈ ಮೊದಲು, ಬಿಡ್ ಬಗ್ಗೆ ನಿರ್ಧಾರ ಮುಂದಿನ ವರ್ಷ ನಡೆಯಬಹುದೆಂಬ ನಿರೀಕ್ಷೆಯಿತ್ತು.

'ಈಗಿನ ಪ್ರಕ್ರಿಯೆಗೆ ತಡೆ ನೀಡಲು ಮತ್ತು ಭವಿಷ್ಯದ ಆತಿಥ್ಯಕ್ಕೆ ಆಯ್ಕೆ ಪ್ರಕ್ರಿಯೆಯನ್ನು ಪರಾಮರ್ಶೆಗೆ ಒಳಪಡಿಸುವ ಸಂಬಂಧ ಐಒಸಿ ಸದಸ್ಯರಿಂದ ಭಾರಿ ಬೆಂಬಲ ವ್ಯಕ್ತವಾಯಿತು. ನಾವು ಈ ಬಗ್ಗೆ ಅವಲೋಕನ ನಡೆಸಲು ಕಾರ್ಯತಂಡವೊಂದನ್ನು ರಚಿಸಲಿದ್ದೇವೆ' ಎಂದು 41 ವರ್ಷ ವಯಸ್ಸಿನ ಕ್ರಿಸ್ಟಿ ತಿಳಿಸಿದರು.

ಲುಸಾನ್‌ನಲ್ಲಿ ನಡೆದ ಐಒಸಿಯ ಮೊದಲ ಕಾರ್ಯನಿರ್ವಾಹಕ ಮಂಡಳಿ ಸಭೆಯ ಅಧ್ಯಕ್ಷತೆ ವಹಿಸಿ ಕ್ರಿಸ್ಟಿ ಮಾತನಾಡಿದರು.

ಎರಡು ಕಾರಣಗಳಿಗಾಗಿ ಈ (ತಡೆಯೊಡ್ಡುವ) ನಿರ್ಧಾರ ಕೈಗೊಳ್ಳಲಾಗಿದೆ. 'ಮೊದಲನೆಯದಾಗಿ, ಸಮಿತಿ ಸದಸ್ಯರು ಈ ಪ್ರಕ್ರಿಯೆಯಲ್ಲಿ ತಮ್ಮನ್ನು ತೊಡಗಿಕೊಳ್ಳಲು ಆಸಕ್ತರಾಗಿದ್ದಾರೆ. ಎರಡನೆಯದಾಗಿ, ಮುಂದಿನ ಆತಿಥೇಯರನ್ನು ಯಾವಾಗ ಘೋಷಿಸಬೇಕು ಎಂಬ ಬಗ್ಗೆ ಸುದೀರ್ಘ ಚರ್ಚೆಯಾಯಿತು' ಎಂದು ಜಿಂಬಾಬ್ವೆಯ ಮಾಜಿ ಕ್ರೀಡಾ ಸಚಿವೆ ತಿಳಿಸಿದರು.

ಕ್ರಿಸ್ಟಿ ಕೊವೆಂಟ್ರಿ

ಶುಭ್ ಚೌಧರಿಗೆ ಚಿನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶುಭ್ ಚೌಧರಿ ಅವರು, ಕರ್ನಾಟಕ ರಾಜ್ಯ ಈಕ್ವೆಸ್ಟ್ರಿಯನ್ ಸ್ಪರ್ಧೆಯಲ್ಲಿ ಒಂದು ಚಿನ್ನ ಮತ್ತು ಎರಡು ಬೆಳ್ಳಿ ಪದಕಗಳನ್ನು ಗಳಿಸಿದರು. ಈ ಸ್ಪರ್ಧೆಯಲ್ಲಿ 20ಕ್ಕೂ ಹೆಚ್ಚು ಈಕ್ವೆಸ್ಟ್ರಿಯನ್ ಕ್ಲಬ್‌ಗಳಿಂದ 70 ಸ್ಪರ್ಧಿಗಳು ಭಾಗವಹಿಸಿದ್ದರು.

ಗೆಲುವಿನ ಬಗ್ಗೆ ಮಾತನಾಡಿದ ಶುಭ್ ಚೌಧರಿ, 'ಈಕ್ವೆಸ್ಟ್ರಿಯನ್ ನನಗೆ ತಾಳ್ಮೆ ಮತ್ತು ಸವಾರ ಹಾಗೂ ಕುದುರೆಯ ನಡುವಿನ ಬಾಂಧವ್ಯದ ಮಹತ್ವವನ್ನು ಕಲಿಸಿದೆ. ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಗೆಲುವು ಸಾಧಿಸಿರುವುದು ಅದ್ಭುತ ಭಾವನೆ' ಎಂದರು.

ಪದಕ ಸ್ವೀಕರಿಸಿದ ಶುಭ್ ಚೌಧರಿ

ಆಸ್ಟ್ರೇಲಿಯಾದಲ್ಲಿ ಟಿ20, ಏಕದಿನ ಸರಣಿ 4 ತಿಂಗಳ ಮೊದಲೇ ಟಿಕೆಟ್‌ಗೆ ಭಾರಿ ಬೇಡಿಕೆ

ಮೆಲ್ಬರ್ನ್ (ಪಿಟಿಐ): ಸೀಮಿತ ಓವರುಗಳ (ವೈಟ್ ಬಾಲ್) ಕ್ರಿಕೆಟ್ ಸರಣಿ ಆಡಲು ಭಾರತ ತಂಡವು, ಆಸ್ಟ್ರೇಲಿಯಾಕ್ಕೆ ತೆರಳಲು ಇನ್ನೂ ನಾಲ್ಕು ತಿಂಗಳು ಇವೆ. ಆದರೆ ಸಿಡ್ನಿಯಲ್ಲಿ ನಡೆಯುವ ಮೂರನೇ ಏಕದಿನ ಪಂದ್ಯದ ಮತ್ತು ಕೆನ್‌ಬೆರಾದಲ್ಲಿ ನಡೆಯಲಿರುವ ಮೊದಲ ಟಿ20 ಪಂದ್ಯದ ಟಿಕೆಟ್‌ಗಳು ಈಗಾಗಲೇ ಸೋಲ್ಡ್‌ಔಟ್ ಆಗಿವೆ.

ಭಾರತ ತಂಡವು, ಅಕ್ಟೋಬರ್ 19 ರಿಂದ ನವೆಂಬರ್ 8ವರೆಗಿನ ಅವಧಿಯಲ್ಲಿ ಕಾಂಗರೂ ನಾಡಿನಲ್ಲಿ ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳನ್ನು ಆಡಲಿದೆ. ಎರಡು ವಾರಗಳ ಅವಧಿಯಲ್ಲಿ 90 ಸಾವಿರಕ್ಕೂ ಹೆಚ್ಚು ಟಿಕೆಟ್‌ಗಳು ಮಾರಾಟವಾಗಿವೆ ಎಂದು ಕ್ರಿಕೆಟ್ ಆಸ್ಟ್ರೇಲಿಯಾ ತಿಳಿಸಿದೆ.

'ಸಿಡ್ನಿಯ ಏಕದಿನ ಪಂದ್ಯಕ್ಕೆ ಮತ್ತು ಮನುಕಾ ಓವಲ್‌ನ (ಕೆನ್‌ಬೆರಾ) ಟಿ20 ಪಂದ್ಯಕ್ಕೆ ಸಾರ್ವಜನಿಕರಿಗಾಗಿ ಮೀಸಲಿಟ್ಟ ಟಿಕೆಟ್‌ಗಳೆಲ್ಲಾ ಬಿಕರಿಯಾಗಿವೆ. ಕ್ರಿಕೆಟ್ ಉತ್ಸಾಹಿಗಳು, ಅದರಲ್ಲೂ ಭಾರತೀಯ ಮೂಲದವರೆಲ್ಲಾ ಈ ಪಂದ್ಯಗಳಿಗೆ ಕಾತರದಿಂದ ಇದ್ದಾರೆ' ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಎಂಸಿಜಿಯಲ್ಲಿ ಮತ್ತು ಬ್ರಿಸ್ಬೇನ್‌ನಲ್ಲಿ ನಡೆಯಲಿರುವ ಟಿ20 ಪಂದ್ಯಗಳ ಟಿಕೆಟ್‌ಗಳಿಗೂ ಬೇಡಿಕೆಯಿದೆ ಎಂದೂ ಅದು ಹೇಳಿದೆ.

ಮಾರಾಟವಾದ ಟಿಕೆಟ್‌ಗಳಲ್ಲಿ ಶೇ 16ರಷ್ಟನ್ನು ಭಾರತೀಯ ಕ್ರಿಕೆಟ್ ಅಭಿಮಾನಿಗಳ ಕ್ಲಬ್‌ಗಳು ಖರೀದಿಸಿವೆ. ಭಾರತ್ ಆರ್ಮಿ ಹೆಸರಿನ ಜನಪ್ರಿಯ ಕ್ಲಬ್ 2,400 ಟಿಕೆಟ್‌ಗಳನ್ನು ಕೊಂಡಿದೆ.

ಸ್ನೂಕರ್: ಭಾರತ ಶುಭಾರಂಭ

ಕೊಲಂಬೊ: ಭಾರತ ತಂಡವು ಎಸಿಬಿಎಸ್ ಏಷ್ಯನ್ ಸ್ನೂಕರ್ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿತು.

ಗುರುವಾರ ಆರಂಭವಾದ ಚಾಂಪಿಯನ್‌ಷಿಪ್‌ನಲ್ಲಿ ಭಾರತ ತಂಡವು ಸಿ ಗುಂಪಿನಲ್ಲಿ 3–0ಯಿಂದ ಬಾಂಗ್ಲಾದೇಶದ ವಿರುದ್ಧ ಜಯಿಸಿತು. ಪಂಕಜ್ ಅದ್ವಾನಿ, ಆದಿತ್ಯ ಮೆಹ್ತಾ ಮತ್ತು ಬ್ರಿಜೇಶ್ ಧಮಾನಿ ಅವರಿದ್ದ ತಂಡವು ಪಾರಮ್ಯ ಮೆರೆಯಿತು. ಇದೇ ತಂಡವು ಎರಡು ವರ್ಷಗಳ ಹಿಂದೆ ಚಿನ್ನದ ಪದಕವನ್ನು ಜಯಿಸಿತ್ತು.

ಮೊದಲ ಸಿಂಗಲ್ಸ್‌ನಲ್ಲಿ ಪಂಕಜ್ ಅವರು 73–31ರಿಂದ ಬಾಂಗ್ಲಾದ ಮುಂತಾಸಿರ್ ಸಿದ್ದೀಕಿ ಅವರನ್ನು ಮಣಿಸಿದರು. ಎರಡನೇ ಫ್ರೇಮ್‌ನಲ್ಲಿ ದಮಾನಿ ಅವರು ಝಿಯಾವುರ್ ರೆಹಮಾನ್ ಆಝಾದ್ ವಿರುದ್ಧ ಮೇಲುಗೈ ಸಾಧಿಸಿದರು.

ಡಬಲ್ಸ್‌ನಲ್ಲಿ ಪಂಕಜ್ ಮತ್ತು ಆದಿತ್ಯ ಮೆಹ್ತಾ ಜೊತೆಗೂಡಿ ಬಾಂಗ್ಲಾದ ಸಿದ್ದೀಕಿ ಮತ್ತು ರೆಹಮಾನ್ ಜೋಡಿಯನ್ನು ಸೋಲಿಸಿದರು.


ಪಂಕಜ್ ಅದ್ವಾನಿ

ಎರಡನೇ ಟೆಸ್ಟ್ ಪಂದ್ಯ: ಶತಕದಂಚಿನಲ್ಲಿ ಎಡವಿದ ದಿನೇಶ್ ಚಾಂಡಿಮಲ್

ಪಥುಮ್ ಶತಕ; ಶ್ರೀಲಂಕಾ ಮುನ್ನಡೆ

ಕೊಲಂಬೊ (ಎಪಿ): ಸತತ ಎರಡನೇ ಟೆಸ್ಟ್ ಶತಕ ದಾಖಲಿಸಿದ ಪಥುಮ್ ನಿಸಾಂಕಾ ಅವರ ಬ್ಯಾಟಿಂಗ್‌ನಿಂದಾಗಿ ಶ್ರೀಲಂಕಾ ತಂಡವು ಇಲ್ಲಿ ಬಾಂಗ್ಲಾದೇಶ ಎದುರು ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತು.

ಸಿಂಹಳೀಸ್ ಸ್ಪೋರ್ಟ್ಸ್ ಕ್ಲಬ್ ಕ್ರೀಡಾಂಗಣದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ್ದ ಬಾಂಗ್ಲಾ ತಂಡವು 247 ರನ್ ಗಳಿಸಿತ್ತು ಅದಕ್ಕುತ್ತರವಾಗಿ ಪಂದ್ಯದ ಎರಡನೇ ದಿನದಾಟದ ಮುಕ್ತಾಯಕ್ಕೆ ಆತಿಥೇಯ ತಂಡವು 78 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 290 ರನ್ ಗಳಿಸಿತು. ಇದರೊಂದಿಗೆ 43 ರನ್‌ಗಳ ಮುನ್ನಡೆ ಸಾಧಿಸಿದೆ.

ಶತಕ ಗಳಿಸಿರುವ ನಿಸಾಂಕ (ಬ್ಯಾಟಿಂಗ್ 146, 238ಎ, 4X18) ಮತ್ತು ಪ್ರಭಾತ್ ಜಯಸೂರ್ಯ (ಬ್ಯಾಟಿಂಗ್ 5) ಕ್ರೀಸ್‌ನಲ್ಲಿದ್ದಾರೆ.

ನಿಸಾಂಕ ಮತ್ತು ಲಹಿರು ಉದಾರ ಮೊದಲ ವಿಕೆಟ್ ಜೊತೆಯಾಟದಲ್ಲಿ 88 ರನ್ ಸೇರಿಸಿದರು. ತೈಜುಲ್ ಇಸ್ಲಾಂ ಅವರ ಬೌಲಿಂಗ್‌ನಲ್ಲಿ ಲಹೀರು ಔಟಾದ ನಂತರ ಕ್ರೀಸ್‌ಗೆ ಬಂದ ದಿನೇಶ್ ಚಾಂಡಿಮಲ್ (93; 153ಎ, 4X10, 6X1) ಕೇವಲ ಏಳು ರನ್‌ಗಳ ಅಂತರದಿಂದ ಶತಕ ಕೈತಪ್ಪಿಸಿಕೊಂಡರು. ಆದರೆ ಅವರು ನಿಸಾಂಕ ಜೊತೆಗೆ ಎರಡನೇ ವಿಕೆಟ್ ಪಾಲುದಾರಿಕೆಯಲ್ಲಿ 194 ರನ್ ಸೇರಿಸಿದರು. ಇದರಿಂದಾಗಿ ತಂಡವು ಈಗ ದೊಡ್ಡ ಮೊತ್ತದತ್ತ ದಾಪುಗಾಲಿಟ್ಟಿದೆ.

ಹೋದ ವಾರ ನಡೆದಿದ್ದ ಸರಣಿಯ ಮೊದಲ ಟೆಸ್ಟ್‌ನಲ್ಲಿ ಪಥುಮ್ ಅವರು ತಮ್ಮ ವೈಯಕ್ತಿಕ ಶ್ರೇಷ್ಠ 187 ರನ್‌ಗಳ ಮೊತ್ತ ಗಳಿಸಿದ್ದರು. ಆ ಪಂದ್ಯ ಗಾಲೆಯಲ್ಲಿ ನಡೆದಿತ್ತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಬಾಂಗ್ಲಾದೇಶ: 79.3 ಓವರ್‌ಗಳಲ್ಲಿ 247. ಶ್ರೀಲಂಕಾ: 78 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 290 (ಪಥುಮ್ ನಿಸಾಂಕಾ ಬ್ಯಾಟಿಂಗ್ 146, ಲಹೀರು ಉದಾರಾ 40, ದಿನೇಶ್ ಚಾಂಡಿಮಲ್ 93, ತೈಜುಲ್ ಇಸ್ಲಾಂ 90ಕ್ಕೆ1, ನಯೀಮ್ ಹಸನ್ 45ಕ್ಕೆ1)

ಶತಕ ದಾಖಲಿಸಿದ ಪಥುಮ್ ನಿಸಾಂಕಾ

ಸೂರ್ಯಕುಮಾರ್‌ಗೆ ಶಸ್ತ್ರಚಿಕಿತ್ಸೆ

ನವದೆಹಲಿ (ಪಿಟಿಐ): ಭಾರತ ಟಿ20 ಕ್ರಿಕೆಟ್ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಜರ್ಮನಿಯ ಮ್ಯೂನಿಕ್‌ನಲ್ಲಿ ಮಂಗಳವಾರ ಸ್ಪೋರ್ಟ್ಸ್ ಹರ್ನಿಯಾ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದಾರೆ.

'ಲೈಫ್ ಅಪ್ಡೇಟ್: ಹೊಟ್ಟೆಯ ಬಲಭಾಗದ ಕೆಳಗೆ ಸ್ಪೋರ್ಟ್ಸ್ ಹರ್ನಿಯಾ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದೇನೆ. ಶಸ್ತ್ರಚಿಕಿತ್ಸೆ ಸುಗಮವಾಗಿ ಆಗಿದ್ದು ಚೇತರಿಕೆಯ ಹಾದಿಯಲ್ಲಿದ್ದೇನೆ' ಎಂದು 34 ವರ್ಷದ ಸೂರ್ಯ ಅವರು ಬುಧವಾರ ಸಾಮಾಜಿಕ ಜಾಲತಾಣಗಳಲ್ಲಿ ಬರೆದಿದ್ದಾರೆ.

ಹರ್ನಿಯಾಕ್ಕೂ ಸ್ಪೋರ್ಟ್ಸ್ ಹರ್ನಿಯಾಕ್ಕೂ ವ್ಯತ್ಯಾಸವಿದೆ. ಸ್ಪೋರ್ಟ್ಸ್ ಹರ್ನಿಯಾ ಎಂದರೆ ತೊಡೆ ಅಥವಾ ಹೊಟ್ಟೆಯ ಕೆಳಭಾಗದ ಅಂಗಾಂಶಕ್ಕೆ (ಸಾಫ್ಟ್ ಟಿಶ್ಯೂ) ಆಗುವ ಗಾಯ. ಇದು ಸ್ನಾಯು, ಲಿಗಮೆಂಟ್ (ಅಸ್ಥಿರಜ್ಜು), ಟೆಂಡನ್‌ಗೆ (ಸ್ನಾಯುರಜ್ಜು) ಸಂಬಂಧಿಸಿರುತ್ತದೆ.

ಜರ್ಮನಿಯಿಂದ ಬಂದ ನಂತರ ಅವರು ಬೆಂಗಳೂರಿನ ಬಿಸಿಸಿಐ ಉತ್ಕೃಷ್ಟತಾ ಕೇಂದ್ರದಲ್ಲಿ ಎರಡು ವಾರಗಳ ಪುನಶ್ಚೇತನ ಶಿಬಿರದಲ್ಲಿ ಭಾಗಿಯಾಗುವ ನಿರೀಕ್ಷೆ ಇದೆ.

ಭಾರತ ತಂಡ ಆಗಸ್ಟ್ ತಿಂಗಳಲ್ಲಿ ಬಾಂಗ್ಲಾದೇಶ ಪ್ರವಾಸ ಕೈಗೊಳ್ಳಲಿದ್ದು ಮೂರು ಏಕದಿನ ಮತ್ತು ಮೂರು ಟಿ20 ಪಂದ್ಯಗಳನ್ನು ಆಡಲಿದ್ದು ಆ ವೇಳೆಗೆ ಅವರು ತಂಡವನ್ನು ಸೇರಿಕೊಳ್ಳುವ ನಿರೀಕ್ಷೆಯಿದೆ.

ಇದು ಸೂರ್ಯ ಅವರಿಗೆ ಮೂರು ವರ್ಷಗಳಲ್ಲಿ ಮೂರನೇ ಶಸ್ತ್ರಚಿಕಿತ್ಸೆಯಾಗಿದೆ. 2023ರಲ್ಲಿ ಅವರು ಪಾದದ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. 2024ರಲ್ಲಿ ಮೊದಲ ಬಾರಿ ಅವರಿಗೆ ಕ್ರೀಡಾ ಹರ್ನಿಯಾಕ್ಕೆ ಶಸ್ತ್ರಚಿಕಿತ್ಸೆ ಆಗಿತ್ತು.

2025ರ ಐಪಿಎಲ್‌ನಲ್ಲಿ ಅಮೋಘ ಲಯದಲ್ಲಿದ್ದ ಅವರು ಟೂರ್ನಿಯ ಆಟಗಾರ ಎನಿಸಿದ್ದರು. ಅವರು 717 ರನ್ ಗಳಿಸಿದ್ದು, ಸಾಯಿ ಸುದರ್ಶನ್ (759) ನಂತರ ಎರಡನೇ ಸ್ಥಾನದಲ್ಲಿದ್ದರು. ಮುಂಬೈ ಇಂಡಿಯನ್ಸ್ ತಂಡ ಐಪಿಎಲ್ ಪ್ಲೇ ಆಫ್‌ನಲ್ಲಿ ಪಂಜಾಬ್ ಕಿಂಗ್ಸ್‌ಗೆ ಶರಣಾಗಿತ್ತು.

ಸೂರ್ಯಕುಮಾರ್